ARS 15.APP.90

1907

1907ನೇ ಸಂಪುಟವು ಶಿಥಿಲ
ಸ್ಥಿತಿಯಲ್ಲಿದ್ದ ಕಾರಣ ಸ್ಕ್ಯಾನ್
ಮಾಡಲು ಸಾಧ್ಯವಾಗಿಲ್ಲ.

ಸ್ಥಾಪನೆ : ೧೮೫೭

೧೯೮೩

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ಸವ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೩

ಸಂಸ್ಥಾಪಕರು

ಶತಮಾನೋತ್ಸವದ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೩ ರಂದು)

ವರ್ಷ / ೧೯೮೩

ಡೆ. ಚೆನ್ನಬಸಪ್ಪನವರ
(೧೮೩೩-೧೮೮೧)
ನೆನಪು ಸಂಪುಟ

ಕನ್ನಡ
ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯುಟಿ ಚನ್ನಬಸಪ್ಪ ವೃತ್ತ, ರೋಡ್ಡರಸ್ತೆ, ಧಾರವಾಡ - ೮

KANARESE

CHOOL PAPER.

ಳ.ಳ] ಜಾನೇವಾರಿ ೧೯೦೮ [ಸಂಚಿಕೆ ೧

ಅನುಕ್ರಮಣಿಕೆ. ಪುಟ.

ಶಿಕ್ಷಣ ಸಂಬಂಧದ ವೃತ್ತಾಂತಗಳು ೧-೩
ಂಗಕಾಲೇಜದ ಹಾಗೂ ಪ್ರಥಮಿಕ ಶಾಲೆಗಳ
ಯಿಂಗದ ತರಗತಿಯು ೪-೧೯
ಸ್ಥಾನದ ಇತಿಹಾಸವು ೧೯-೨೧
ಪ್ರಾಯಿಜ ಪರೀಕ್ಷೆಯು. ೨೧-೨೪

CONTENTS.

tional Intelligence and Useful Notes 1-3
ng College & Primar Schools Drawing
es. 4-19
History of Rajasthan 19-21
on Paper of Wurth Prize Examination. 21-24

DHARWAR:
ED AT THE KARNATIC BOOK DEPOT PRESS
1908.

REGISTERED No. B.

ಶಾಲಾಪತ್ರ.

KANARESE

CHOOL PAPER.

೪] ಜಾನೇವಾರಿ ೧೯೦೮ ಸಂಖ್ಯೆ ೧

ಅನುಕ್ರಮಣಿಕೆ. ಪುಟ.

ಸಾಧಾರಣ ಸಂಬಂಧದ ವೃತ್ತಾಂತಗಳು ೧-೩

ಂಗ ಕಾಲೇಜದ ಹಾಗೂ ಪ್ರಥಮ ಶಾಲೆಗಳ

ಯಿಂಗದ ತರಗತಿಯು ೪-೧೯

ಸ್ಥಾನದ ಇತಿಹಾಸವು ೧೯-೨೧

ಪ್ರಶ್ನೆಯ ಪರೀಕ್ಷೆಯು. ೨೧-೨೪

CONTENTS.

ational Intelligence and General Notes 1-3

ing College & Primar Schools Drawing

les. ... ... 4—19

History of Rajasthan 19-21

tion Paper of Wurth Prize Examination. 21-24

DHARWAR:

ED AT THE KARNATIC BOOK DEPOT PRESS.

1908.

REGISTERED No. B.

ಜಾಹೀರಾತು.

——(೦)——

ಮೆ॥ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ ಸಾಹೇ ಬಹದ್ದೂರ ಇವರ ಅಪ್ಪಣೆಯ ಮೇಲಿಂದ ತಿಳಿಸುವದೇನಂದ ೧೯೦೩ನೇ ಇಸ್ವಿಯ ಡಿಶಂಬರ ೧ನೇ ತಾರೀಖಿನಿಂದ ಕೆಳಗೆ ಬ ಪುಸ್ತಕ ಮತ್ತು ನಕಾಶಗಳ ವಿಕ್ರಿಯು ಗವ್ಹರ್ನಮೆಂಟ ಸೆಂ ಲ ಬುಕ್ ಡಿಪೋದಲ್ಲಿ ಬಂದಾಗುವದು. ಮತ್ತು ಸನ್ ೧೯೦ ಇಸ್ವಿಯ ಜಾನ್ಯುವರಿ ತಿಂಗಳ ೧ನೇ ತಾರೀಖಿನಿಂದ ಅವುಗಳ ಕ್ರಿಯು ಕೆಳಗೆ ಬರೆದಂತೆ ಆಗುವದು.

ಮರಾಠಿ ಪುಸ್ತಕಗಳು:—	ಚಿತ್ರಶಾಲಾ ಪ್ರೆಸ್ಸ ಪುಣೆ ಸ ಶಿವಪೇಠ
ಗುಜರಾಥಿ ಪುಸ್ತಕಗಳು:—	ಮೆಸರ್ಸ ಜಿವಣಲಾಲ ಅ ಲಾಲ ಅಂಡ ಕಂ. ಅಹಮ್ಮದಾಬಾ
ಕನ್ನಡ ಮತ್ತು ಸಂಸ್ಕೃತ ಕನ್ನಡ ಪುಸ್ತಕಗಳು:—	ಬಾಸೆಲ ಮಿಶನ ಬುಕ್ಕ ಅಂಡ ಕ್ಟಡಿಪೋ [illegible] ಮಂಗಳ
ಮರಾಠಿ, ಗುಜರಾಥಿ ಮತ್ತು ಕನ್ನಡ ನಕಾಶಗಳು:—	ಮಿ. ನರಹರ ನಾರಾಯಣ ಶಾರ ವ್ಯಾಪ ಕಂಟ್ರಾಕ್ಟರ ದಾಶಿವಪೇಠ ಪುಣೆ.
ಸರಕಾರೀ ಆಕ್ಟ ಮತ್ತು ಪುಸ್ತಕಗಳು.—	ಗವ್ಹರ್ನಮೆಂಟ ಸೆಂಟ್ರಲ ಪ್ರೆ ಫೋರ್ಟ ಬಾಂಬೆ.
ಮುಂಬಯಿ ಸಂಸ್ಕೃತ ಸೇರಿಜದ ಪುಸ್ತಕಗಳು:—	ಸದರ.

ಮುಂಬಯಿ:
ತಾ॥ ೨೬—೧೧—೦೩

G. J. AGASHE
ಕ್ಯೂರೇಟರ.

ಶಾಲಾಪತ್ರಿಕೆ.

ಪದ್ಯ

ಕ್ರಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸಂತೃಪ್ತಿಯಂ
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಿಕಾಂ ಮುದ್ರಿಸಿ ॥
ನಯದಿಂದಿತ್ತಪೆವಸ್ಮದೀಯವರ್ಗಸುಗುಣ್ಯಂ ತೋರಲ್ಕೈಕೊಂಡುಯ್ಯ ।
ದಯದಿಂದೋದುವ ಪಠಿಸಿದ್ದೇಳ್ವ ಬುಧರಿಷ್ಟಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೪೨.] ಜಾನೇವಾರಿ—೧೯೦೮ [ಸಂಚಿಕೆ ೧

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಇಲಾಖೆಯ ಡಿರೆಕ್ಟರ ದೊರೆಗಳಾದ ಮೆಹರ್ಬಾನ್ ಸೆಲ್ಬೀ ಸಾಹೇಬರು ಪತ್ನೀಸಮೇತರಾಗಿ ಗೆರಸೊಪ್ಪೆಯ ತಡಸಲವನ್ನು ನೋಡುವ ಕುತೂಹಲದಿಂದ ದಕ್ಷಿಣಭಾಗವನ್ನು ಪ್ರವೇಶಿಸಿದವರು ಹಾಗೆಯೇ ಬರುವಾಗ ಧಾರವಾಡಕ್ಕೆ ಜನವರಿ ೪ನೇ ತಾರೀಖಿನ ದಿವಸ ಬಂದು ಇಲ್ಲಿ ಮೂರು ದಿವಸ ಕಳೆದು ಮಂಗಳವಾರ ಬೆಳಗಾವಿಗೆ ಹೋದರು.

ಸಾಹೇಬರವರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ಕಾರ್ಯದಲ್ಲಿ ಮುವ್ವತ್ತು ವರ್ಷವನ್ನು ಕಳೆದ ಅನುಭವಿಕರಾದ ವಿದ್ವಾಂಸರು. ಇವರ ಶಿಕ್ಷಣಕೌಶಲ್ಯವೂ ವ್ಯವಸ್ಥಾದಕ್ಷತೆಯೂ ಅವರ್ಣನೀಯವೆಂಬುದು ಸರ್ವಶ್ರುತವು. ಇವರ ಈ ಗುಣಗಳನ್ನು ಸರಕಾರದವರು ಪೂರ್ಣವಾಗಿ ಮನಂದಂದು ಇವರಿಗೆ ಸಿ. ಆಯ್. ಇ. ಎಂಬ ಗೌರವದ ಬಿರು

ದನ್ನು ವಯಪಾಲಿಸಿರುವರು. ದೊರೆಗಳು ಬಹುಮಾನದ ಈ ಬಿರುದನ್ನು ಬಹುಕಾಲ ಅನುಭವಿಸಲೆಂದು ದೇವರನ್ನು ಬೇಡಿಕೊಳ್ಳುವೆವು.

ಇವರು ಧಾರವಾಡದಲ್ಲಿ ರವಿವಾರದ ದಿವಸ ಟ್ರೇನಿಂಗ ಕಾಲೇಜವನ್ನೂ ಪ್ರಾಕ್ಟಿಸಿಂಗಸ್ಕೂಲನ್ನೂ ನೋಡಿ ಅಲ್ಲಿ ನಡೆದ ಕೆಲಸಗಳಿಂದ ತುಷ್ಟರಾದರು. ಹಾಗೂ ಅದೇದಿವಸ ಹೆಣ್ಣುಮಕ್ಕಳ ಕಾಲೇಜದ ಹೊಸ ಇಮಾರತನ್ನು ನೋಡಿ, ಮರುದಿವಸ ಮೆಹರ್ಬಾನ ಇನಸ್ಪೇಕ್ಟರ ಸಾಹೇಬರಿಂದಲೂ, ಪ್ರಿನ್ಸಿಪಾಲರಿಂದಲೂ ಕೂಡಿಕೊಂಡು ಹಾಯಸ್ಕೂಲ, ಫೀಮೇಲ ನಾರ್ಮಲ'ಸ್ಕೂಲ, ಕನ್ನಡ ಹುಡುಗರ ಶಾಲೆ, ಹುಡಿಗೆಯರ ಶಾಲೆ, ಮರಾಠೀ ಬಾಲಬಾಲಿಕೆಯರ ಶಾಲೆ, ವ್ಹಿಕ್ಟೋರಿಯಾ ಹೈಸ್ಕೂಲ ಮುಂತಾದ ಸಂಸ್ಥೆಗಳನ್ನು ನೋಡಿಕೊಂಡು ಹೋದರು. ಮರುದಿವಸ ಮಂಗಳವಾರ ಧಾರವಾಡ ಮ್ಯುನಿಸಿಪಾಲಿಟಿಯುವರು ಮಾಡಿದ ಮಚ್ಚುಗೊಡುವ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿ ಸಮಾರಂಭವನ್ನು ಸಾಂಗಗೊಳಿಸಿದರು. ಈಪ್ರಸಂಗದಲ್ಲಿ ಮ್ಯುನಿಸಿಪಾಲಿಟಿಯುವರು ತಮ್ಮ ರಿಪೋರ್ಟನ್ನು ಓದಿದ ಬಳಿಕ ಸಾಹೇಬರವರು ಉತ್ತರರೂಪವಾಗಿ ನುಡಿದದ್ದರ ಸಾರವು—

ಆರಂಭದಲ್ಲಿ ಮ್ಯುನಿಸಿಪಾಲಿಟಿಯುವರ ಆಭಾರವನ್ನು ಮನ್ನಿಸಿದ ಬಳಿಕ, ರಿಪೋರ್ಟನಲ್ಲಿ ಕಾಣಿಸಿದ ವಿದ್ಯಾಸುಧಾರಣೆಯನ್ನು ಕುರಿತು ಆನಂದವನ್ನು ವ್ಯಕ್ತಪಡಿಸಿ, ನಾನು ಕೆಲವು ಶಾಲೆಗಳನ್ನು ಪ್ರತ್ಯಕ್ಷ ನೋಡಿರುವೆನೆಂದು ಹೇಳಿ, ದೈವಯೋಗದಿಂದ ನಿಮಗೆ, ಮಿ. ಕರಂದೀಕರರಂಥ ರಾ. ಸಾ-ರೊಡ್ಡ ಶ್ರೀನಿವಾಸರಾಯರಂಥ ಅನುಭವಿಕರೂ, ವಿದ್ಯಾಸುಧಾರಣಾಪ್ರಿಯರೂ ಆದ ಅಧಿಕಾರಿಗಳು ದೊರೆತಿರುವದರಿಂದ ನೀವು ಅವರ ಅನುಭವ ಸಿದ್ಧವಾದ ಅಭಿಪ್ರಾಯದಂತೆ ವಿದ್ಯಾದಾನದ ಕಾರ್ಯವನ್ನು ನಡಿಸಬೇಕೆಂದು ಸೂಚಿಸಿದರು. ಈಗಿರುವ ಫೀಮೇಲ ನಾರ್ಮಲ'ಸ್ಕೂಲಿನ ಇಮಾರತನ್ನು

ವ್ಯುನಿಸಿಪಾಲಿಟಿಯವರಿಗೆ ಕೊಡುವ ಕುರಿತು ಸರಕಾರಕ್ಕೆ ಬರೆಯುವೆವೆಂದು ಆದಿ ತೋರಿಸಿದರು. ನೀವು ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆಯಾಗಿ ಕೊಡಬೇಕೆಂದೂ ಅದಕ್ಕಾಗಿ ಸರಕಾರದಿಂದ ಸಹಾಯದೊರೆಯಬೇಕೆಂದೂ ಅನ್ನುತ್ತೀರಿ; ಇದನ್ನಾದರೂ ಸರಕಾರಕ್ಕೆಬರೆದು ತಿಳಿಸುವೆನು.

ಹೆಣ್ಣುಮಕ್ಕಳ ಟ್ರೇನಿಂಗಸ್ಕೂಲಿನಲ್ಲಿ ಹತ್ತು ಮಂದಿಯನ್ನು ಸಂಬಳದೊಂದಿಗೆಯೂ ಮುವ್ವರು ಮಿಶನ್ ವಿದ್ಯಾರ್ಥಿನಿಯರನ್ನು ಸಂಬಳವಿಲ್ಲದೆಯೂ ಸೇರಿಸಿಕೊಂಡರು.

ಕೇಂಬ್ರಿಜದಲ್ಲಿ ಕಲಿಯುತ್ತಿರುವ ಹಿಂದೂ ವಿದ್ಯಾರ್ಥಿಗಳು ಹಿಂದುಸ್ತಾನದೊಳಗಿನ ವಿದ್ಯಾಪೀಠದ ಅಧಿಕಾರಿಗಳಿಗೆ ಈ ಮೇರೆಗೆ ಬಿನ್ನವಿಸಿಕೊಂಡಿರುವರು. "ಪ್ರಸ್ತುತದ ಶತಕವು ಆಧಿಭೌತಿಕ ಶೋಧಗಳಲ್ಲಿ ಅಗ್ರೇಸರತ್ವವನ್ನು ಪಡೆದಿರುವದು. ನಿನ್ನಿನ ಶೋಧವು ಇಂದಿನ ಶೋಧಕ್ಕೆ ಹಳೆಯದಾಗುವದು. ಹಿಂದುಸ್ತಾನದ ವಿದ್ಯಾಪೀಠದಲ್ಲಿ ನಡೆಯುತ್ತಿರುವ ಭೌತಿಕ ಶಾಸ್ತ್ರದ ಅಧ್ಯಯನವು ಕೇವಲ ಅಪೂರ್ಣವೂ, ಹರಕಪರಕವೂ ಆಗಿರುವದು. ಇದರಿಂದ ಕಲಿತವರಲ್ಲಿ ಪಾರಂಗತೆಯು ತಲೆದೋರುವದಿಲ್ಲ, ಅವರ ಅಧ್ಯಯನದಿಂದ ಅವರ ಪ್ರಪಂಚಕ್ಕೂ ದೇಶಕ್ಕೂ ಹಿತವಾಗುವದಿಲ್ಲ. ಆದ್ದರಿಂದ ಭೌತಿಕ ಶಾಸ್ತ್ರದ ಅಧ್ಯಯನಕ್ಕಾಗಿಯೇ ಇಲಾಖೆಗೊಂದರಂತೆಯಾದರೂ ಒಂದೊಂದು ಸ್ವತಂತ್ರ ಶಾಲೆಯನ್ನು ಸ್ಥಾಪಿಸಬೇಕು; ಹಾಗೂ ಆ ಶಾಲೆಯಲ್ಲಿ ಅಧ್ಯಯನಕ್ಕೆ ಅನುಕೂಲವಾಗುವಷ್ಟು ಯಂತ್ರಸಾಮುಗ್ರಿಯೂ ಪ್ರಯೋಗ ಪದಾರ್ಥಗಳೂ, ರಸಾಯನ ದ್ರವ್ಯಗಳೂ ವಿಪುಲವಾಗಿ ಒದಗಿಸಿ ಕೊಡಬೇಕು."

ಸದ್ಯಕ್ಕೆ ವಿದ್ಯಾಪೀಠದವರು ಈ ಮಾತಿನ ವಿಚಾರವನ್ನು ನಡಿಸಿರುವರು.

DRAWING STANDARD FOR TRAINING COLLEGE.

ಪ್ರಾಥಮಿಕಶಿಕ್ಷಕ ಶಿಕ್ಷಣಾಲಯ (ಟ್ರೇ. ಕಾ.)ದ ಸಲುವಾಗಿ ಚಿತ್ರಕಲೆಯ (ಡ್ರಾಯಿಂಗದ) ತರಗತಿಯ ಕ್ರಮವು.

ಮೇ ತಿಂಗಳ ೨೯ ತಾರೀಖಿನ ದಿವಸ ನೆರೆದ ಆಲೋಚನಾ ಸಭೆಯಲ್ಲಿ ಮುಂಬಯಿ ಇಲಾಖೆಯ ಡಿರೆಕ್ಟರರೂ, ಮಧ್ಯಭಾಗದ ಇನಸ್ಪೆಕ್ಟರರಾದ ಪ್ರಾಯರ ಸಾಹೇಬರೂ, ಜೇಮಸೆಟ್ಟಿ ಜಿಜೀಭಾಯಿಯವರ ಚಿತ್ರಶಾಲೆಯ ಪ್ರಿನ್ಸಿಪಾಲರಾದ ಬರ್ನ್ಸಸಾಹೇಬರೂ, ವ್ಹರ್ನಾಕ್ಯೂಲರ ಟೆಕ್ಸ್ಟಬುಕ್ ರಿವ್ಹಿಜನ್ ಕಮಿಟಿಯ ಅಧ್ಯಕ್ಷರಾದ ಜೆ. ಜಿ. ಕವ್ಹರಂಟನ್ ಸಾಹೇಬರೂ ವಿರಾಜಮಾನರಾಗಿ ಕೆಳಗೆ ಕಾಣಿಸಿದ ಚಿತ್ರಕಲೆಯ ಅನುಕ್ರಮವನ್ನು ಪ್ರಾಥಮಿಕ ಶಿಕ್ಷಕ ಶಿಕ್ಷಣಶಾಲೆಗಳಿಗೋಸ್ಕರ ನಿಯಮಿಸಲೇಕೆಂದು ತಮ್ಮ ಒಪ್ಪಿಗೆಯನ್ನುಕೊಟ್ಟಿದ್ದಾರೆ.

ಮೊದಲನೆಯ ವರ್ಷ.

೧. ಕರೇಹಲಿಗೆಯ ಮೇಲೆ ತೆಗೆಯತಕ್ಕ ಚಿತ್ರಗಳು —ವಸ್ತುಪಾಠ ಕ್ರಮದಲ್ಲಿ ವಿವರಿಸಿದ ಸ್ವಾಭಾವಿಕ ಹಾಗೂ ಸಾಮಾನ್ಯ ವಸ್ತುಗಳ ಚಿತ್ರಗಳನ್ನು ಕರೇ ಹಲಿಗೆಯ ಮೇಲೆ ತೆಗೆಯುವದು

೨. ಪೆನ್ಸಲ್ಲು ಮತ್ತು ಪೆನ್ನುಗಳಿಂದ ತೆಗೆಯತಕ್ಕ ಚಿತ್ರಗಳು.—ಮೇಲೆ ಬರೆದ ವಸ್ತುಗಳ ಚಿತ್ರಗಳನ್ನು ಪೇನ್ಸಿಲಿನಿಂದಲೂ ಪೆನ್ನಿನಿಂದಲೂ ಕಾಗದದ ಮೇಲೆ ತೆಗೆಯುವದು.

N. B. ಪೆನ್ನಿನಿಂದ ತೆಗೆಯಲಿಕ್ಕೆ ಕಲಿಯುವ ಪೂರ್ವದಲ್ಲಿ ಪೆನ್ಸಿಲಿನಿಂದ ತೆಗೆಯುವ ರೂಢಿಯನ್ನು ಮಾಡುವದು ಅವಶ್ಯವಿದೆ.

೩. ನಕಾಶತೆಗೆಯುವದು.—ಇತಿಹಾಸ ಭೂಗೋಲದೊಳಗಿನ ಪಾಠಗಳನ್ನು ಕಲಿಸುವದಕ್ಕೆ ಬೇಕಾಗುವ ನಕಾಶಗಳನ್ನು ತಗೆಯುವದು.

೪. ಚಿತ್ರಕಲೆಯ ಆಯುಧ (Instruments) ಗಳನ್ನು ಉಪಯೋಗಿಸಲಿಕ್ಕೆ ಕಲಿಸುವದು—ರೂಲಕಟ್ಟಿಗೆ, ತ್ರಿಕೋನ, ಅಳತೆಯ ಕಟ್ಟಿಗೆ, ಸಣ್ಣ (ಕಂಪಾಸ) ಕೈವಾರ ಮುಂತಾದ ಚಿತ್ರಕಲೆಯ ಆಯುಧಗಳ ಉಪಯೋಗವನ್ನು ಮಾಡಲಿಕ್ಕೂ, ದೂರದಲ್ಲಿರುವ ವಸ್ತುಗಳ ಉದ್ದಳತೆ ಪ್ರಮಾಣಗಳನ್ನು ತಿಳಿದ ಕೊಳ್ಳಲಿಕ್ಕೂ, ಬಾಗಿಲ, ಪೆಟ್ಟಿಗೆ, ಕಿಡಕಿ, ಮೇಜು ಇತ್ಯಾದಿ ಪದಾರ್ಥಗಳ ಸರಿಯಾದ ಅಳತೆಗಳನ್ನು ಹೇಳಲಿಕ್ಕೂ ಕಲಿಸುವದು.

ಟೀಪು.—೧ನೇ ೨ನೇ, ೩ನೇ ವಿಷಯಗಳಲ್ಲಿ ಹೇಳಿದ ಪದಾರ್ಥಗಳ ಸಂಬಂಧದ (ಮೆಮರಿಡ್ರಾಯಿಂಗದ) ಚಿತ್ರಗಳನ್ನು ಸ್ಮರಣದಿಂದ ತೆಗೆಯುವ ರೂಢಿಯನ್ನು ವಿಶೇಷವಾಗಿ ಮಾಡಬೇಕು.

೨ನೇ ವರ್ಷ.

೧. ಮೇಲಿನ ವಿಷಯಗಳನ್ನು ಹೆಚ್ಚು ಕಠಿಣವಾದ ಉದಾಹರಣೆಗಳೊಡನೆ, ಮುಂದಕ್ಕೆ ಸಾಗಿಸುವದು.

ಬಣ್ಣ (ಕಲರ ಡ್ರಾಯಿಂಗ)

೨. ೧ನೇ ವರ್ಷದ ಅಭ್ಯಾಸ ಕ್ರಮದಲ್ಲಿ ಸೂಚಿಸಿದ ವಸ್ತುಗಳ ಚಿತ್ರಗಳನ್ನು ಖಡು, ಕುಂಚ ಇವುಗಳಿಂದ ತೆಗೆಯುವದು.

೩. ಸಾಧಾ ಸಿದ್ಧಾಂತದ ಆಕೃತಿಗಳು.—ಸಿ. ಎಲ್. ಬರ್ನಸಾಹೇಬರು ರಚಿಸಿರುವ ಚಿತ್ರಗಳಲ್ಲಿ ಆರಂಭದ ಪಟಗಳೊಳಗಿನ ಆಕೃತಿಗಳನ್ನು (ಸಿದ್ಧಾಂತದ ಆಕೃತಿಗಳನ್ನು) ತೆಗೆಗೆಯುವದು, ಹಾಗೂ ಸ್ಕೇಲಿನಿಂದ ಚಿತ್ರಗಳನ್ನು ತೆಗೆಯುವದು.

ಟೀಪು.—ನೆನಪಿನಿಂದ ತೆಗೆಯತಕ್ಕ ಚಿತ್ರಗಳು (ಮೆಮರಿ ಡ್ರಾಯಿಂಗ) ಮೊದಲನೇ ವರ್ಷದಂತೆ.

೩ನೇ ವರ್ಷ.

೧. ಕರೇಹಲಿಗೆಯ ಮೇಲೆ ಚಿತ್ರತೆಗೆಯುವದು, ಹಾಗೂ ಪೆನ್ಸಿಲ್, ಪೆನ್, ಬಣ್ಣ ಇವುಗಳಿಂದ ತೆಗೆಯುವ ಚಿತ್ರಗಳು. ಇವುಗಳನ್ನು ಹೆಚ್ಚು ಕಠಿಣವಾದ ಉದಾಹರಣೆಗಳಿಂದ ಮುಂದೆ ಸಾಗಿಸುವದು.

೨. ಸಿ. ಎಲ್. ಬರ್ನ್ಸ್‌ರವರ ಮಧ್ಯಮತರದ ಚಿತ್ರಪಟಗಳಲ್ಲಿ ತೋರಿಸಿದ ಸಿದ್ಧಾಂತದ ಆಕೃತಿಗಳನ್ನು ತೆಗೆಯುವದೂ ಹೊಸ ಆಕೃತಿಗಳನ್ನು ರಚಿಸುವ ಕಲ್ಪನೆಯನ್ನು ಉಂಟುಮಾಡುವದೂ.

೩. ಪಾಠಗಳನ್ನು ಕಲಿಸುವಾಗ ಬಂದ ವಿಷಯಗಳ ಸಂಬಂಧದ ಭಾವಚಿತ್ರಗಳನ್ನು* ತೆಗೆಯುವದು.

N. B.—ಸೃಷ್ಟಿಜ್ಞಾನದ ಪಾಠಗಳಿಗೂ ವಸ್ತುಪಾಠಗಳಿಗೂ ಸಂಬಂಧಿಸಿದಂಥ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ತೆಗಿಸಲಿಕ್ಕೆ ಯೋಗ್ಯವಾದಂಥ ಮತ್ತು ಕಾಠಿಣ್ಯದ ಮೇಲಿಂದ ತರಗತಿಯ ಕ್ರಮಕ್ಕನುಸರಿಸಿ ಗೊತ್ತುಮಾಡಿದಂಥ ಚಿತ್ರಗಳ ಪಟ್ಟಿಯು ಇದಕ್ಕೆ ಜೋಡಿಸಲ್ಪಟ್ಟಿದೆ.

DRAWING-STANDARD FOR PRIMERY SCHOOLS.

ದೇಶಭಾಷೆಯ ಪ್ರಾಥಮಿಕ ಶಾಲೆಗಳ ಗೋಸ್ಕರ ಚಿತ್ರಕಲೆಯು.

೧. ಬಾಲಕರವರ್ಗ.—

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಕಾಣಿಸಿರ ವಸ್ತು ಮರ್ಯಾದಾರೇಖೆಯ (ಬರೇ ರೇಷೆಗಳಿಂದ ಆದ) ಚಿತ್ರಗಳನ್ನು ಅದರಲ್ಲಿ ವಿವರಿಸಿದ ಸೂಚನೆಯ ಪ್ರಕಾರ ಪಾಟಿ, ಕಾಗದ, ಇಲ್ಲವೆ ಕರೇ ಹಲಿಗೆಯ ಮೇಲೆ ತೆಗೆಯುವದು.

---

* ಚಿತ್ರಕಲೆಯಲ್ಲಿ ನೈಪುಣ್ಯವನ್ನು ಹೊಂದಿದವರು, ಮಾತ್ರ ಈ ವಿಷಯವನ್ನು ತೆಗೆದುಕೊಳ್ಳತಕ್ಕದ್ದು ಎಲ್ಲರಿಗೂ ಈ ವಿಷಯವು ಅವಶ್ಯವಿಲ್ಲ.

ಟೀಪು.—ನೆನಪಿನಿಂದ ತೆಗೆಯುವ (ಮೆಮರಿ ಡ್ರಾಯಿಂಗ) ಚಿತ್ರಗಳು ಮೊದಲಿನಂತೆ.

೨ ೧ನೇ ಇಯತ್ತೆ.—

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಕಾಣಿಸಿದ ವಸ್ತುಗಳ ಚಿತ್ರಗಳ ಬರೇ ರೇಷೆಗಳಿಂದ ಅದರಲ್ಲಿ ವಿವರಿಸಿದ ಪ್ರಕಾರ ಪಾಟಿ, ಕಾಗದ ಇಲ್ಲವೆ ಕರೇ ಹಲಿಗೆಯ ಮೇಲೆ ತೆಗೆಯುವದು.

೩. ೨ನೇ ಇಯತ್ತೆ.

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಕಾಣಿಸಿದ ವಸ್ತುಗಳ ಚಿತ್ರಗಳನ್ನು, ಬರೇ ರೇಷೆಗಳಿಂದ, ಅದರಲ್ಲಿ ವಿವರಿಸಿದ ಸೂಚನೆಯ ಪ್ರಕಾರ ಪಾಟಿ, ಕಾಗದ ಇಲ್ಲವೆ ಕರೇ ಹಲಿಗೆಯ ಮೇಲೆ ತೆಗೆಯುವದು.

(ಬ) ರೂಲಕಟ್ಟಿಗೆ, ಮತ್ತು ಅಳತೆಯ ಕಟ್ಟಿಗೆ, ಮುಂತಾದ ಸಾಧನಗಳ ಉಪಯೋಗವನ್ನು ಕಲಿಸುವದು.

(ಕ) ವ್ಯವಹಾರದೊಳಗಿನ ಸಾಧಾ ವಸ್ತುಗಳ ಸರಿಯಾದ ಅಳತೆ ಪರಿಮಾಣಗಳನ್ನು ತೆಗೆಯುವ ರೂಢಿಯನ್ನು ಇಡುವದು.

೪. ೩ನೇ ಇಯತ್ತೆ.

ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ವಿವರಿಸಿದ ವಸ್ತುಗಳ ಸಾದಾ ಮರ್ಯಾದೆ ರೇಖೆಗಳನ್ನು ಸ್ಲೇಟು, ಕಾಗದ, ಇಲ್ಲವೇ ಕರೇ ಹಲಿಗೆಯ ಮೇಲೆ ಆ ಪಟ್ಟಿಯಲ್ಲಿ ವಿವರಿಸಿದ ಸೂಚನೆಗಳ ಮೇರೆಗೆ ತೆಗೆಯುವದು.

(ಬ) ರೂಲಕಟ್ಟಿಗೆ, ಅಳತೆಯ ಕಟ್ಟಿಗೆ, ತ್ರಿಕೋನಪಟ್ಟಿ ಸಾದಾ ಉಪಕರಣಗಳ (ಸಾಧನಗಳ) ಉಪಯೋಗವನ್ನು ಕಲಿಸುವದು.

(ಕ) ಸಾದಾವಡವೆಗಳ ಅಳತೆ ಪರಿಮಾಣಗಳನ್ನು ಸರಿಯಾಗಿ ಹೇಳುವಂತೆ ಮಾಡಿಸುವದು.

೫. ೪ನೇ ಇಯತ್ತೆ.

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಬರೆದ ವಿಷಯಗಳ ಮರ್ಯಾದಾರೇಖೆಯನ್ನು ಅದರಲ್ಲಿ ಹೇಳಿದ ಸೂಚನೆಯ ಪ್ರಕಾರ ಸ್ಲೇಟು, ಕಾಗದ ಇಲ್ಲವೆ ಕರೇ ಹಲಿಗೆಯ ಮೇಲೆ ತೆಗೆಯುವದು.

(ಬ) ಸಾಧಾರಣ ಸ್ಕೇಲಿಗೆ ಅನುಸಾರವಾಗಿ ಚಿತ್ರತೆಗೆಯುವದು.

(ಕ) ಈ ಇಯತ್ತೆಗೆ ಹಚ್ಚಿರುವ ಭೂಗೋಲದೊಳಗಿನ ನಕಾಶಗಳನ್ನು ತೆಗೆಯುವದು.

೬. ೫ನೇ ಇಯತ್ತೆ.

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ ಮರ್ಯಾದಾ ರೇಖೆಗಳನ್ನು ಅದರಲ್ಲಿ ಮಾಡಲ್ಪಟ್ಟ ಸೂಚನೆಯ ಮೇರೆಗೆ ಸ್ಲೇಟು, ಕಾಗದಾ ಇಲ್ಲವೆ ಕರೇ ಹಲಿಗೆಯ ಮೇಲೆ ತೆಗೆಯುವದು.

(ಬ) ಸಾಧಾ ಸ್ಕೇಲಿನಿಂದ ಚಿತ್ರ (ನಕಾಶ) ತೆಗೆಯುವದು.

(ಕ) ಈ ಇಯತ್ತೆಗೆ ಹಚ್ಚಿರುವ ಭೂಗೋಲದೊಳಗಿನ ನಕಾಶಗಳನ್ನು ತೆಗೆಯುವದು.

೭, ೬ನೇ ಇಯತ್ತೆ,

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ ಮರ್ಯಾರೇಖೆಗಳನ್ನು ಅದಲ್ಲಿ ಮಾಡಲ್ಪಟ್ಟ ಸೂಚನೆಯ ಮೇರೆಗೆ ಸ್ಲೇಟು, ಕಾಗದ ಇಲ್ಲವೆ ಕರೇ ಹಲಿಗೆಯ ಮೇಲೆ ತಗಿಸುವದು.

(ಬ) ಭೂಮಿತಿಯೊಳಗಿರುವ ಸುಲಭವಾದ ಆಕೃತಿಗಳನ್ನು ತೆಗೆಯುವದು.

(ಕ) ಇಯತ್ತೆಗೆ ಹಚ್ಚಿರುವ ಭೂಗೋಲದೊಳಗಿನ ನಕಾಶಗಳನ್ನು ತೆಗೆಯುವದು.

೮. ೭ನೇ ಇಯತ್ತೆ.

(ಅ) ಇದಕ್ಕೆ ಹಚ್ಚಿರುವ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ ಮರ್ಯಾದಾರೇಖೆಗಳನ್ನು ಅದರಲ್ಲಿ ಮಾಡಲ್ಪಟ್ಟ ಸೂಚನೆಯ ಮೇರೆಗೆ ಸ್ಲೇಟು, ಕಾಗದ, ಇಲ್ಲವೇ ಕರೇ ಹಲಿಗೆಯ ಮೇಲೆ ತಗೆಯುವದು.

(ಬ) ಭೂಮಿತಿಯೊಳಗಿನ ಆಕೃತಿಗಳನ್ನು ತೆಗೆಯುವದು.

(ಕ) ಈ ಯತ್ತೆಗೆ ಹಚ್ಚಿದ ಭೂಗೋಲದೊಳಗಿನ ನಕಾಶವನ್ನು ತೆಗೆಯುವದು.

ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ ಕೆಳಗೆ ಬರೆದ ಎಲ್ಲ ಸಾಮಾನುಗಳೂ ಆಯುಧಗಳೂ ಇರತಕ್ಕದ್ದು.

ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ H ಈ ಗುರುತಿನದೊಂದು ಹಾಗೂ HHH ಈ ಗುರುತುಗಳದೊಂದು, ಹೀಗೆ ಕನಿಷ್ಟ ಪಕ್ಷಕ್ಕೆ, ಎರಡು ಪೆನ್ಸಿಲುಗಳಾದರೂ ಇರತಕ್ಕದ್ದು. ಎಸೆಯುದನ್ನು ಚಿತ್ರ ತೆಗೆಯುವದಕ್ಕೂ ಮೊದಲನೆಯದನ್ನು ತೆಗೆದಂಥ ಗೆರೆಗಳನ್ನು ಕಪ್ಪು ಮಾಡುವದಕ್ಕೂ ಉಪಯೋಗಿಸತಕ್ಕದ್ದು. ಉತ್ತಮವಾದ ಪೆನ್ಸಿಲುಗಳಿದ್ದಷ್ಟು ಹೆಚ್ಚು ಲಾಭವೆಂದು ಕಟ್ಟ ಕಡೆಗೆ ಕಂಡು ಬರುವದು. ಭೂಮಿತಿಯ ಆಕೃತಿಗಳನ್ನು ತೆಗೆಯುವಾಗ್ಗೆ, ಪೆನ್ಸಿಲುಗಳ ತುದಿಯನ್ನು ಸೂಜಿಯಂತೆ ಚೂಪಾಗಿ ಮಾಡದೆ ಉಳಿಯಂತೆ ಹಲಚಿಯಾಗಿ ಮಾಡತಕ್ಕದ್ದು. ಪೆನ್ಸಿಲುಗಳನ್ನು ಕೆತ್ತುವಾಗ್ಗೆ ಶೀಸು ಬಹಳ ಬರುವಂತೆ ಯತ್ನಿಸಬೇಕು.

ರೂಲಪಟ್ಟಿಗಳು— ಇಂಚುಗಳ ಗುರುತು ಮಾಡಿದಂಥ ೬ ಇಂಚಿನ ಅಲ್ಲಿವೆ ೧ ಫೂಟಿನ ಸರಳವಾದ ರೂಲುಪಟ್ಟಿಯನ್ನು, ಉಪಯೋಗಿಸತಕ್ಕದ್ದು. ಸಮಾಂತರ ರೇಷೆಗಳನ್ನು ತೆಗೆಯುವದಕ್ಕೆ ಕೆಳಗೆ ತೋರಿಸಿದ ಪ್ರಕಾರ, ಸೆಟ್ ಸ್ಕ್ವೇಯರ (ತ್ರಿಕೋನಪಟ್ಟಿ) ಗಳನ್ನೂ ರೂಲಪಟ್ಟಿಯನ್ನೂ ಉಪಯೋಗಿಸತಕ್ಕದ್ದು.

ಸೆಟ್‌ಸ್ಕ್ವೇಯರಗಳೆಂದರೆ ತೆಳುವಾದ ಕಟ್ಟಿಗೆಯ ತ್ರಿಕೋಣಾಕೃತಿಯ ತುಂಡುಗಳು. ಈಗ ವಾಡಿಕೆಯಾಗಿ ಉಪಯೋಗದಲ್ಲಿರುವಂಥ ತ್ರಿಕೋನ ಪಟ್ಟಿಗಳು ೨ ಪ್ರಕಾರದವು ಇರುತ್ತವೆ. ಮೊದಲನೇದು ೪೫ (ಅಂಶದ) ೧ನೇ (ಅ) ಆಕೃತಿಯಲ್ಲಿ ತೋರಿಸಿದಂಥ ತ್ರಿಕೋನವು ಇದರ 'ಕ' ಕೋನವು ಕಾಟಕೋನ ವಿರುತ್ತದೆ ಉಳಿದವೆರಡು " ಡ, ಈ " ಕೋನಗಳು ೪೫ (ಅಂಶದ) ವಿರುತ್ತವೆ.

೧ನೇ ಆಕೃತಿ



ಎರಡನೇದು— ಇದರಲ್ಲಿ 'ಫ' ಎಂಬ ಕೋನವು ಕಾಟಕೋನವಾಗಿಯೂ 'ಹ' ಎಂಬುವದು ೩೦ ಅಂಶದ್ದಾಗಿಯೂ, 'ಗ' ಎಂಬುವದು ೬೦ ಅಂಶದ್ದಾಗಿಯೂ ಇರುತ್ತವೆ.

೨ನೇ ಆಕೃತಿ (ಬ)



ಈ ತ್ರಿಕೋನ ಪಟ್ಟಿಗಳ ಉಪಯೋಗವು ಕೆಳಗೆ ಬರೆದಂತೆ ಇರುತ್ತದೆ.

೪೫° (ಅಂಶದ) ತ್ರಿಕೋನವನ್ನು ೨ನೇ ಆಕೃತಿಯಲ್ಲಿ ತೋರಿಸಿದಂತೆ 'ಕ್ಷಯ' ಸರಳರೇಷೆಯ ಮೇಲಿಡಿರಿ. ಹೀಗಾಯಿತೆಂದರೆ 'ಡ ಈ' ಅಂಚಿನ ಗುಂಟ ಬೇಕಾದಷ್ಟು ರೇಷೆಗಳನ್ನು ತೆಗೆದಾಗ್ಯೂ ಆ ರೇಷೆಗಳು 'ಕ್ಷಯ' ರೇಷೆಗೆ ೪೫° ಕೋನವನ್ನು ಮಾಡುತ್ತವೆ. ಈ ತ್ರಿಕೋನವನ್ನು ಎಡಕ್ಕಾಗಲಿ, ಬಲಕ್ಕಾಗಲಿ, ಸರಿಸು; ಬೇಕಾದ ಎರಡನೇ 'ಡ

ಈ॥ ರೇಷೆಯು ಸಹ ‘ಕ್ಷ’ಯು, ರೇಷೆಗೆ ೪೫° ಕೋನವನ್ನು ಮಾಡುತ್ತದೆ. ಇವೆರಡೂ (ಸಣ್ಣ ‘ಡ ಈ, ದೊಡ್ಡ ‘ಡ ಈ,) ರೇಷೆಗಳು ಒಂದಕ್ಕೊಂದು ಸಮಾಂತರ ವಿರುತ್ತವೆ. ಅದೇ ಪ್ರಕಾರವಾಗಿ ‘ಈಕ, ರೇಷೆಯು ‘ಕ್ಷ’ಯು, ರೇಷೆಗೆ ಕಾಟಕೋನವಾಗಿರುತ್ತದೆ. ಹಾಗೆಯೇ (ಸಣ್ಣ) ‘ಕ ಈ, ರೇಷೆಯು ಕೂಡ ‘ಕ್ಷ’ಯು, ರೇಷೆಗೆ ಕಾಟಕೋನವಾಗಿರುವದು. ಹಾಗೆಯೇ (ಸಣ್ಣ) ‘ಕ ಈ, ರೇಷೆಯು ಕೂಡ ‘ಕ್ಷ’ಯು, ರೇಷೆಗೆ ಕಾಟಕೋನವಾಗಿರುವದು ಆದ್ದರಿಂದಲೇ ಇವೆರಡು ರೇಷೆಗಳು ಒಂದಕ್ಕೊಂದು ಸಮಾಂತರವಾಗಿರುವವು.

೩ನೇ ಆಕೃತಿಯನ್ನು ನೋಡು.

ಇಲ್ಲಿ ೬೦° ತ್ರಿಕೋಣವನ್ನು ಉಪಯೋಗಿಸಿದೆ (ದೊಡ್ಡ) ಗಹ (ಸಣ್ಣ) ಗಹ ರೇಷೆಗಳು ‘ಕ್ಷ’ಯು, ರೇಷೆಗೆ ೬೦° (ಅಂಶದ) ಕೋನವನ್ನು ಮಾಡುತ್ತವೆ. ಇವೆರಡೂ ರೇಷೆಗಳು ಒಂದಕ್ಕೊಂದು ಸಮಾಂತರವಾಗುವವು. ಇವು ಅದೇ ‘ಕ್ಷ’ಯು ರೇಷೆಗೆ ಕಾಟಕೋಟವನ್ನು ಮಾಡುವದರಿಂದ ಲಂಬವಾಗಿರುತ್ತದೆ, ೬೦° (ಅಂಶದ ತ್ರಿಕೋಣ ಪಟ್ಟಿಯನ್ನು ೪ನೇ ಆಕೃತಿಯಲ್ಲಿಯು ಹಾಗೆ ‘ಹ, ಬಿಂದುವಿನಲ್ಲಿ ೩೦° (ಅಂಶದ) ಕೋನವನ್ನು ಮಾಡುವಂತೆ ಇಟ್ಟರೆ ಹ ಗ॥ ಖ ಲ॥ ಮ ನ, ರೇಷೆಗಳು ‘ಕ್ಷ’ಯುಕ್ಕೆ ೩೦° (ಅಂಶದ) ಕೋನವನ್ನು ಮಾಡುತ್ತದೆ.

೪ನೇ ಆಕೃತಿ.

ಮೇಲೆ ಹೇಳಿದ ಎಲ್ಲ ಕೃತಿಗಳಲ್ಲಿ ‘ಕ್ಷ’ಯು, ಪಟ್ಟಿಯನ್ನು ಸರಿದಾಡದಂತೆ ಇರುವದು ಅವಶ್ಯಕವದೆ. ‘ಕ್ಷ’ಯು ರೇಷೆಯು ಮೇಲಿನ ಆಕೃತಿಯಲ್ಲಿ ತೆಗೆದಂತೆ ಕ್ಷಿತಿಜ ಸಮಾಂತರವಿರಬೇಕೆಂಬ ಅವಶ್ಯವೇನೂ ಇಲ್ಲ. ಅದನ್ನು ಬೇಕಾದಸ್ಥ

ತ್ತಿಯಲ್ಲಿಡಬಹುದು. ಮತ್ತು ಮೇಲೆ ಹೇಳಿದಂತೆ ತ್ರಿಕೋನದ ಪಟ್ಟಿಗಳನ್ನು ಉಪಯೋಗಿಸಬಹುದು.

೫ನೇ ಆಕೃತಿ

೫ನೇ ಆಕೃತಿಯಲ್ಲಿದ್ದಂತ ಅಬ ರೇಷೆಗೆ ಸಮಾಂತರವಾದ ಕೆಲವು ರೇಷೆಗಳನ್ನು ತೆಗೆಯಬೇಕೆಂದು ಕಲ್ಪಿಸು. ಯಾವದಾದರೂ ತ್ರಿಕೋನ ಪಟ್ಟಿಯ ಅಂಚನ್ನು ಅಬ ರೇಷೆಗೆ ಹೊಂದಿಸಿಡು. ಆ ಮೇಲೆ ಸರಲ ಪಟ್ಟಿಯನ್ನು ಅಡ ಅಂಚಿಗೆ ಸರಿಯಾಗಿ ಜೋಡಿಸು. 'ಅಡ, ಪಟ್ಟಿಯು ಸ್ವಲ್ಪವಾದರೂ ಅಲ್ಲಾಡದಂತೆ ಗಟ್ಟಿಯಾಗಿ ಹಿಡಿ. ತ್ರಿಕೋನ ಪಟ್ಟಿಯನ್ನು ಸರಿಸಿದರಾಯಿತು. 'ಈ ಫ, 'ಗ ಹ, ರೇಷೆಗಳು 'ಅ ಬ,'ರೇಷೆಗೆ ಸಮಾಂತರವಾಗುವವು.

೬ನೇ ಆಕೃತಿ

ತ್ರಿಕೋನಗಳ ಉಪಯೋಗವು ಇಷ್ಟೇ ಅಲ್ಲದೆ ಇನ್ನೂ ಮಹತ್ವದ್ದಾಗಿರುತ್ತದೆ: ಇದರಿಂದ ನೀವು ಲಂಬ ರೇಷೆಗಳನ್ನು ತೆಗೆಯ ಬಹುದು. ೬ನೇ ಆಕೃತಿಯಲ್ಲಿದ್ದಂತ ಕಲ, ಮನ, ವಪ ಎಂಬಾನೇಕ ಸಮಾಂತರ ರೇಷೆಗಳಿಗೆ ಲಂಬ ರೇಷೆಗಳನ್ನು ತೆಗೆಯಬೇಕೆಂದು ಕಲ್ಪಿಸು. ತ್ರಿಕೋನ ಪಟ್ಟಿಯ ಒಂದು ಅಂಚನ್ನು ಕಲ ರೇಷೆಗೆ ಹೊಂದಿಸಿಡು, ಆಕೃತಿಯಲ್ಲಿ ತೋರಿಸಿದಂತೆ 'ಕ್ಷ ಯ, ಪಟ್ಟಿಯನ್ನು ಗಟ್ಟಿಯಾಗಿ ಹಿಡಿ. (ಹೇಳಿದಂತೆ) ತ್ರಿಕೋನ ಪಟ್ಟಿಯನ್ನು ತಿರುಗಿಸು. ಹೀಗಾಯಿತೆಂದರೆ ಕ ರ, ಸವ, ನ್ಹವ ರೇಷೆಗಳು ಕಲ, ಮನ, ವಪ ರೇಷೆಗಳಿಗೆ ಲಂಬವಾಗುವವು. 'ಲ, ಬಿಂದುವಿನಲ್ಲಿ ೬೦° ಕೋನವು ಬರುವಂತೆ ತ್ರಿಕೋನ ಪಟ್ಟಿಯನ್ನು ಇಟ್ಟಿದ್ದರೆ ಖ ಎಂಬಲ್ಲಿ ೩೦° ಕೋನವು ಬರುವಂತೆ ಆ ತ್ರಿಕೋನ ಪಟ್ಟಿಯನ್ನಿಡಿರಿ. ಇದೇ ಪ್ರಕಾರ ೪೫° ತ್ರಿಕೋನ ಪಟ್ಟಿಯನ್ನು ಸಹಾ ಉಪಯೋಗಿಸಬಹುದು.



P.P.D.

ఆకృతి ౧.



ఆకృతి ౨.



೩ನೇ ಆಕೃತಿ

ಈ ಆಕೃತಿಯು ಪಟ್ಟಿಯು (ಇದಕ್ಕೆ ಟಿಸ್ಕ್ವೇಯರವೆನ್ನು ತ್ತಾರ.)

ಭೂಮಿಯ ಆಕೃತಿಗಳನ್ನು ತಗೆಯುವಾಗ್ಯೆ ಬಹಳ ಸಹ ಕಾರಿಯಾಗುವದು. ಇದರ ಆಕಾರವು ಹೀಗೆ ಇ ರುತ್ತದೆ. (೩ನೇ ಆಕೃತಿಯನ್ನು ನೋಡು) ಇದಕ್ಕೆ ‹ಅಬ, ಎಂಬುವದೇ ಹಿಡಿಕೆ. ‘ಡಕ, ಎಂಬುವದೇ ಅಲಗು, ‘ಈ ಫ ಗ ಹ, ಎಂಬುವದು ಚಿತ್ರಕಲೆಯ ಹಲಿಗೆ. ಈ ಹಲಿಗೆಯ ಒಂದು ಅಂಚಿನ ಗುಂಟ ಈ ಟಿಸ್ಕ್ವೇಯರವನ್ನು ಉಪ ಯೋಗಿಸತಕ್ಕದ್ದು. ‘ಡಕ, ಅಲಗಿನ ತುದಿಯು ಅಬ ಹಿಡಿ ಕೆಗೆ ಲಂಬವಾಗಿರುತ್ತಾದೆ. ಡಕ, ಗುಂಟ ತೆಗೆದ ಎಲ್ಲ ರೇಷೆ ಗಳು ಸಮಾಂತರವಾಗಿರುತ್ತವೆ. ಲಂಬ ರೇಷೆಗಳನ್ನು ತೆಗೆ ಯಬೇಕಾದರೆ ತ್ರಿಕೋನ ಪಟ್ಟಿಯ ಕ ಲ ಅಂಚನ್ನು ಡ ಕ ಅಂಚಿನ ಮೇಲೆ ಹೊಂದಿಕೆಯಾಗಿ ಕೂಡುವಂತೆ ಇಡು. ಒಂ ದೇ ಆಕೃತಿಯನ್ನು ಟಿಸ್ಕ್ವೇಯರ ಸಹಾಯದಿಂದ ತೆಗೆಯು ವ ಕಾಲಕ್ಕೆ ಹಲಿಗೆಯ ಒಂದೇ ಅಂಚನ್ನು ಉಪಯೋಗಿಸು. ಯಾಕಂದರೆ ಹಲಿಗೆಯು ಸರಿಯಾಗಿ ಇಲ್ಲದಿದ್ದರೆ ಆಕೃತಿಯೆ ಲ್ಲ ಕೆಟ್ಟು ಹೋಗುವ ಸಂಭವವಿರುತ್ತದೆ. ಬೇಕಾದ ಅಂಚ ನ್ನು ಉಪಯೋಗಿಸಿದರೂ ಚಿಂತೆ ಇಲ್ಲ. ಆದರೆ ಆಕೃತಿಯೆ ಲ್ಲ ಮುಗಿಯುವ ತನಕ ಅದೇ ಅಂಚನ್ನು ಉಪಯೋಗಿಸು. ಒಳ್ಳೇ ಉತ್ತಮವಾದ ಟಿಸ್ಕ್ವೇಯರಿಗೆ Euglish Pottern ಎಂದೆನ್ನುತ್ತಾರೆ. ಇದು ‘ಫ್ರೆಂಚಕ್ಷೇಪ, ಎಂಬ ಎರಡನೇ ಟಿಸ್ಕ್ವೇಯರಗಿಂತ ಅನೇಕ ಪಾಲು ಉತ್ತಮವಾದದ್ದು. English ಟಿಸ್ಕ್ವೇಯರದ ಅಲಗು ೩ನೇ ಆಕೃತಿಯಲ್ಲಿ ತೋ ರಿಸಿದಂತೆ ಹಿಡಿಕೆಯ ಮೇಲೆ ಹಚ್ಚಿರುತ್ತದೆ. ಹೀಗಿರುವದ ರಿಂದ ತ್ರಿಕೋನ ಪಟ್ಟಿಗಳನ್ನು ಆತಂಕ ವಿಲ್ಲದೆ ಉಪಯೋ ಗಿಸಲು ಅನುಕೂಲವಾಗಿರುತ್ತದೆ.

ದೇಶಭಾಷೆಯ ಶಾಲೆಗಳಿಗೋಸ್ಕರ ಚಿತ್ರಕಲೆಯ (Course) ತರಗತಿಯ ಸಲುವಾಗಿ ನಿಯಮಿಸಲ್ಪಟ್ಟ ವಿಷಯಗಳ ಪಟ್ಟಿಯು.

(ಟೀಪು) (೧) ವಿಷಯಗಳಲ್ಲಿ ಕೆಳಗೆ ವಿವರಿಸಿದಂತೆ ಭಾಗಗಳನ್ನು ಮಾಡಿರುತ್ತದೆ.

(ಅ) ಸರಳ ರೇಖೆಗಳೇ ಹೆಚ್ಚಾಗಿ ಇರುವ ಅಚೇತನ ಪದಾರ್ಥಗಳು.

(ಬ) ವಕ್ರರೇಷೆಗಳೇ ಹೆಚ್ಚು ಇರುವ ಅಚೇತನ ಪದಾರ್ಥಗಳು

(ಕ) ಉದ್ಭಿಜ್ಜ ಕೋಟಿಯೊಳಗಿನ ಕೆಲವು ಮಾದರಿಗಳು

(ಡ) ಪ್ರಾಣಿಕೋಟಿಯೊಳಗಿನ ಕೆಲವು ಮಾದರಿಗಳು

೨ ಯಾವದೇ ಇಯತ್ತೆಯಲ್ಲಾಗಲಿ ವರ್ಷದೊಳಗೆ ವಾಡಿಕೆಯಾಗಿ ೧೦ಕ್ಕಿಂತ ಹೆಚ್ಚು ವಿಷಯಗಳನ್ನು ಕಲಿಸಕೂಡದು.

೩ ವಿಷಯಗಳನ್ನು ಆರಿಸುವಾಗ್ಗೆ ಶಿಕ್ಷಕನು ಆದಷ್ಟು ಹೆಚ್ಚು ಭಾಗಗಳೊಳಗಿನ ವಿಷಯಗಳು ಬರುವಂತೆಯತ್ನಿಸತಕ್ಕದ್ದು

೪ ೪ನೆಯ ಇಯತ್ತೆಯಲ್ಲಿಯೂ ಮೇಲಿನ ಇಯತ್ತೆಗಳಲ್ಲಿಯೂ ಸ್ವಾಭಾವಿಕ ವಸ್ತುಗಳನ್ನು ನೋಡಿ ತೆಗೆದಂಥ ಚಿತ್ರಗಳು ಅರ್ಧಕ್ಕಿಂತ ಕಡಿಮೆ ಇರಲಾಗದು. ಎಲ್ಲ ಇಯತ್ತೆಗಳಲ್ಲಿಯೂ ಚಿತ್ರಗಳನ್ನು ನೋಡಿ ತೆಗೆಯುವಾಗ್ಗೆ, ಸ್ವಾಭಾವಿಕ ವಸ್ತುವಿನ ಮಾದರಿಯನ್ನು ಹುಡುಗರಿಗೆ ಸಾಧ್ಯವಿದ್ದಲ್ಲಿ ತೋರಿಸತಕ್ಕದ್ದು. ಸ್ವಾಭಾವಿಕ ವಸ್ತುಗಳನ್ನೇ ನೋಡಿ ತೆಗೆಯುವ ಪ್ರಯತ್ನಗಳಿಗೆ ಹೆಚ್ಚಿಗೆ ಉತ್ತೇಜನ ಕೊಡತಕ್ಕದ್ದು.

೫ ಚಿತ್ರಗಳನ್ನು ಪಾಟಿ, ಕಾಗದ ಇಲ್ಲವೆ ಕರೆ ಹಲಿಗೆಯ ಮೇಲೆ ತೆಗೆಯಬಹುದು. ಆದರೆ ಅವು ಕೇವಲ ಬಾಹ್ಯ ರೇಷೆಗಳಲ್ಲಿಯೇ ಇರತಕ್ಕದ್ದು.

೨ ಒಂದು ವರ್ಷದ ಅಭ್ಯಾಸ ಕ್ರಮಕ್ಕೋಸ್ಕರ ಆರಿಸಿದ ಒಡವೆಗಳ ಚಿತ್ರಗಳನ್ನು ನೆನಪಿನಶಕ್ತಿಯಿಂದ ತೆಗೆಯುವದು.

೩ ಶಾಲೆಗಳ ಚಾಲಕರು ವಿಷಯವನ್ನು ಉತ್ತಮವಾಗಿ ಕಲಿಸುವದಕ್ಕೆ ತಕ್ಕ ಸಾಧನಗಳನ್ನು ಒದಗಿಸಿಕೊಟ್ಟರೆ, ಇಯತ್ತೆಗೆ ಆರಿಸಲ್ಪಟ್ಟ ಎಲ್ಲ ಅಥವಾ ಕೆಲವು ಒಡವೆಗಳ ಚಿತ್ರಗಳನ್ನು ಕುಂಚೆದಿಂದ ಬಣ್ಣದಲ್ಲಿ (ಇಲ್ಲವೆ ಬಣ್ಣದ ಖಡುಗಳಿಂದ) ತೆಗೆಯಲಿಕ್ಕೆ ಹಚ್ಚಬಹುದು.

ಬಾಲಕರ ವರ್ಗವು.

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಕೋಲು	೧ ಚಂಡು (ಗುಂಡು)	೧ ಕಿತ್ತಳೀಹಣ್ಣು
೨ ಪೇನ್ಸಿಲು	೨ ತತ್ತಿ	೨ ಅಂಜೂರಿ
೩ ಪಾಟಿ (ಸ್ಲೇಟು)	೩ ಗಾಳೀಪಟ	೩ ಮಾವಿನಹಣ್ಣು
೪ ಟಪಾಲಪಾಕೀಟನ ಹಿಂಭಾಗ	೪ ಬೊಗರಿ	೪ ಮಾವಿನ ಎಲೆ

೪ನೆಯ ಭಾಗ. (ಡ)

(೧) ಹುಡುಗನ ಚಿತ್ರ. (ಅಗ್ಸಬರ್ಗದ ಡ್ರಾಯಿಂಗ ಪುಸ್ತಕದ ಮೊದಲನೆಯ ಭಗದ ೨೨ ನೆಯ ಪುಟದಲ್ಲಿರುವಂಥ ಅಂದರೆ ಬರೇ ರೇಷೆಯಿಂದ ತೆಗೆದಂಥ)

(೨) ಕೋಳಿಯ ಮರಿ (ಆಗ್ಸಬರ್ಗ ಡ್ರಾಯಿಂಗದ ಮೊದಲನೇ ಪುಸ್ತಕದ ೪೪ನೇ ಪುಟದಲ್ಲಿ ತೋರಿಸಿದಂತೆ)

೧ನೆಯ ಇಯತ್ತೆ.

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
(೧)ಲೆಕ್ಕಣಿಕೆ,	(೧)ಹಲಿಗೆ (ಬಾರಿಸುವ)	(೧)ಕಲ್ಲಂಗಡಿಹಣ್ಣು
(೨) ಪುಸ್ತಕ	(೨) ಗಂಟೆ	(೨) ಪೇರಲ

(೩) ಬಿದರಿನ ಕೋಲು (೩) ಟೊಪ್ಪಿಗೆ (೩) (ದೇಶದ ಹುಡು

(೪) ಬಾರಕೋಲು (ಚಾಬೂಕ) ಗರು ಉಪ ಯೋಗಿಸು ವ) (೪) ಆಲದ ಎಲೆ

(೫) (ದೇಶೀ) ತಕ್ಕಡಿ (೪) ದೀರ್ಘ ವರ್ತು ಳಾಕಾರದ ತ ಬಕ

(೫) ಕಾಜಿನ ಪಾತ್ರೆ (ಟಂಬ್ಲರ)

ಡ

೧ ಚಿಗರೆಯ ಚಿತ್ರ (ಮೇಲೆ ಬರೆದ ಪುಸ್ತಕದೊಳಗಿನ ೨೮ ನೆಯ ಪುಟದಲ್ಲಿರುವಂತೆ)

೨ ಹುಡುಗನಚಿತ್ರ (ಮೇಲೆ ಬರೆದ ಪುಸ್ತಕದ ೧ನೇಭಾಗದ ೨೩ ನೆಯ ಪಾನಿನಲ್ಲಿರುವಂತೆ)

೨ನೆಯ ಇಯತ್ತೆ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಪೀಪಿ (ಸಿಟಿ)	೧ ಚಹಾ ಕುಡಿಯು ವ ಪಾತ್ರೆ (ಕಪ್ಪು)	೧ ಆಳ್ಳೀಗಿಡದ ಎಲೆ
೨ ಚೌರಸಾಕಾರದ ಕನ್ನಡಿ	೨ ನಗಾರಿ (ದೇಶಿ)	೨ ಸೂರ್ಯಪಾನದ ಹೂ
೩ ನಿಶಾನಿ	೩ ಕಬ್ಬಿಣದ ಹಂಚು (ರೊಟ್ಟಿಯ ಹಂಚು)	೩ ಉಳ್ಳೀಗಡ್ಡಿ
೪ ಈದೇಶದಲ್ಲಿಉಪ ಯೋಗಿಸುವಹಣಿಗಿ	೪ ಬೀಸುವಕಲ್ಲು	೪ ನವಿಲುಗರಿ
	೫ ತಂಬಿಗೆ	
	೬ ಗಿರ್ದಿ	

ಡ

೪ನೆಯ ಭಾಗವು.

೧ ವಿಮಾನ ೨ ಕೂತ ಮೊಲವು (ಮೇಲೆಬರೆದ ಪುಸ್ತಕ ದೊಳಗಿನ ೭೩ನೆಯ ಪಾನಿನಲ್ಲಿರುವಂತೆ)

೩ನೆಯ ಇಯತ್ತೆ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಕೀಲಿಕೈ	೧ ಶೀಶೆ (ಬಾಟ್ಲಿ)	೧ ಮೂಲಂಗಿ
೨ ಚಾಕು	೨ ಚೀಲ	೨ ಬಾಳೀಹಣ್ಣು
೩ ಕಸಬರಿಗೆ	೩ ಪೀಪಾಯಿ	೩ ಔಡ್ಲಗಿಡದ ಎಲೆ
	೪ ಕೀಲಿ	೪ ಕಮಲದ ಎಲೆ
		೫ ಕಮಲದಹೂವು

ಡ

೪ನೆಯ ಭಾಗ.

(೧) ಜೇನ್ನೊಣ (೪೪ನೆಯ ಪುಟದಲ್ಲಿರುವಂತೆ)
(೨) ಚಿಪ್ಪು
(೩) ಗುಬ್ಬಿ (೧೨ ನೆಯಪಾನಿನಲ್ಲಿರುವಂತೆ ಕೂತದ್ದು)
(೪) ಕೂತ ಅಥವಾ ಮಲಗಿರುವ ಬೆಕ್ಕು,

೪ನೆಯ ಇಯತ್ತೆ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಕ್ರಿಕೇಟ ಬ್ಯಾಟು	೧ ಚಕ್ರ (ಗಾಲಿ)	೧ ಬದ್ನೀ ಹೂ
೨ ಪೆಟ್ಟಿಗೆ	೨ ಬಕೀಟು	೨ ಬದನೀಕಾಯಿ
೩ ಬುಟ್ಟಿ	೩ ಅಳಿಗೆ (ನಳ)	೩ ದಾಳಿಂಬ
	೪ ಊದಗೊಳವೆ	೪ ಹುಣಸೀ ಎಲೆ
		೫ ಶಜ್ಜೀತೆನೆ (ದೇಟು ಎಲೆಗಳಿಂದ ಸಹಿತವಾದದ್ದು.)

ಡ

೪ನೆಯ ಭಾಗ

(೧) ಪಾತರಗಿತ್ತಿಯು ಹುಳ (೪೪ನೆಯ ಪಾನಿನಲ್ಲಿದ್ದಂತೆ)
(೨) ನೊಣ (೩) ನಿಂತ ಕಾಗೆ (೪) ನಾಯಿ

೫ನೆಯ ಇಯತ್ತೆ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಇಕ್ಕಳ	೧ ಚಮಚೆ	೧ ತೆಂಗಿನಕಾಯಿ
೨ ಕೈವಾರ (ಕಂಪಾಸ)	೨ ಮೊಚ್ಚೆ	೨ ಗುಲಾಬಿ ಎಲೆ
೩ ಬೀಸಣಿಕೆ	೩ ಸಕ್ಕ್ರಿಯುಂಚೆರ	೩ ಬೇವಿನ ಎಲೆ
೪ ಮನೆ ಅಥವಾ (ಗುಡಿಸಲು)	೪ ಹಂಡೆ	೪ ತಾಳದಗರಿ
		೫

ಡ

೪ನೆಯ ಭಾಗ

೧ ಹಾವು ೨(ಪಟಹಾರಿಸುವಂತೆ) ೩ ಒಂಟೆ

೬ನೆಯ ಇಯತ್ತೆ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಸುತ್ತಿಗೆ	೧ ಹೂವಿನ ಕುಂಡ	೧ ಫರ್ನ
೨ ನಿಚ್ಚಣಿಕೆ	೨ ಕೊಡ್ಲೆ	೨ ಗುಲಾಬಿಹೂ
೩ ಕರಗಸ	೩ ಒರಳು ಒನಿಕೆ	೩ ಎಲೆಯುಳ್ಳ ತಾಳವೃಕ್ಷ
೪ ಸ್ಟೂಲು	೪ ತುಳಿಕೆ	
೫ ಕತ್ತರಿ		

ಡ

೧ ನರಿ ೨ ಹುಲಿ ೩ ಕುದುರೆ

೬ನೆಯ ಚಿತ್ರ

ಅ	ಬ	ಕ
೧ನೆಯ ಭಾಗ	೨ನೆಯ ಭಾಗ	೩ನೆಯ ಭಾಗ
೧ ಪ್ರವಾಸದ ಪೆಟ್ಟಿಗೆ ಟ್ರಂಕ	೧ ಬಿಲ್ಲುಬಾಣಗಳು	೧ ಮಾವಿನಗಿಡ ಬೊಡ್ಡಿ ಟೊಂಗೆಎಲೆ, ಕಾಯಿ ಜಡಿ
೨ ಮೇಜು	೨ ಹಣದ ಚೀಲ (ಪಾಕೀಟು)	೨ ಆಲದಗಿಡ (ಮೇಲಿನಂತೆ)
೩ ಕುರ್ಚಿ	೩ ಕೊಯತಾ	೩ ಮುಳಗಳ್ಳಿ
೪ ಸಲಿಕಿ ಅಥವಾ ಗುದ್ದಲಿ	೪ ಗುಡಗುಡಿ	೪ ಕಳ್ಳಿ
	೫ ಕೊಡೆ	
	೬ ಚಕ್ಕಡಿ (ಬಂಡಿ)	

ಡ

೪ನೆಯ ಭಾಗ

೧ ಆಕಳು ೨ ಹೊನಿಗ ೩ ಮೊಸಳೆ ೪ ಆನೆ

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

—◁(+)▷—

ಸಂಗರಾಣಾನು ರಾಜ್ಯಾಭಿಷಿಕ್ತನಾದ ಬಳಿಕ ಸ್ವಲ್ಪ ದಿವಸದಲ್ಲಿಯೇ ಕುಟುಂಬದೊಳಗಿನ ಮನಸ್ತಾಪವನ್ನೂ, ರಾಜ್ಯದೊಳಗಿನ ಅಂತಃಕಲಹಗಳನ್ನೂ ಹೋಗಲಾಡಿಸಿ ಶಾಂತತೆಯನ್ನು ನೆಲೆಗೊಳಿಸಿದನು. ದಿಲ್ಲಿ, ಮಾಳವಾ ಪ್ರಾಂತಗಳ ಮುಸಲ್ಮಾನರೊಡನೆ ಹದಿನೆಂಟು ಸಾರೆ ಹೋರಾಡಿ, ಆ ಪ್ರಾಂತಗಳಲ್ಲಿ ನುಗ್ಗಿ ಸ್ವರಾಜ್ಯದ ಮರ್ಯಾದೆಯನ್ನು ಬೆಳೆ

ಸಿದನು. ಬಾಕರೋಣಾ, ಘಾಟೋಲಿ ಎಂಬೆರಡು ಕಾಳಗ
ಗಳಲ್ಲಿ ದಿಲ್ಲಿಯ ಲೋದೀ ಮನೆತನದ ಬಾದಶಹನಾದ ಇಬ್ರಾ
ಹಿಮಶಹನು ಸ್ವತಃ ಕಾದಿದನು. ಆದರೂ ಅವನ ದಂಡೆಲ್ಲ
ಭಂಗ ಬಟ್ಟು ಓಡಿ ಹೋಯಿತು. ಬಾದಶಹನು ಪರಾಜ
ಯ ಪಟ್ಟದ್ದಲ್ಲದೆ ತನ್ನ ಹೊಟ್ಟೇ ಮಗನನ್ನು ಶತ್ರುಗಳ ಸೆ
ರೆಯಲ್ಲಿ ಬಿಟ್ಟು ಪಲಾಯನ ಹೇಳಿಸಬೇಕಾಯಿತು. ಈ ಜ
ಯದಿಂದ ಮೇವಾಡದ ರಾಜ್ಯವಿಸ್ತಾರವು ಉತ್ತರಕ್ಕೆ ಬಿಯಾ
ನದಿಯ ವರೆಗೂ ದಕ್ಷಿಣ ಪೂರ್ವಕ್ಕೆ ಮಾಳವಾ ಪ್ರಾಂತದ
ವರೆಗೂ, ಪಶ್ಚಿಮಕ್ಕೆ ಮೇವಾಡ ಪ್ರಾಂತದ ಗುಡ್ಡಗಳ ವರೆ
ಗೂ ಹಬ್ಬಿತು. ಈ ಪ್ರದೇಶದ ವಿಸ್ತಾರದಿಂದ ಸಂಗ ರಾ
ಣಾನು ಚಕ್ರವರ್ತಿಯೆನಿಸಿಕೊಳ್ಳಲು ಅರ್ಹನಾದನು. ಪಾಂ
ಡವರ ಕಾಲದಲ್ಲಿ ಇಂದ್ರ ಪ್ರಸ್ಥವು ಸಾರ್ವಭೌಮರ ರಾಜ
ಧಾನಿಯಾಗಿದ್ದಂತೆ ಈಗ ಸಕಲೈಶ್ವರ್ಯ ಯುಕ್ತವಾದ ಚಿ
ತೋಡವು ಭರತ ಖಂಡದ ಸಾರ್ವಭೌಮರ ರಾಜಧಾನಿಯೆಂ
ದು ಹೊಗಳಿಸಿ ಕೊಳ್ಳಲಿಕ್ಕೆ ತಕ್ಕದ್ದಾಗಿತ್ತು. ಆದರೆ ಈಶ ಸಂ
ಕಲ್ಪವು ಹಾಗಿದ್ದಿಲ್ಲವಾಗಿ ತೋರಿತು. ಚಿತೋಡ ನಗರದ
ಇಚ್ಛೆಯನ್ನೂ ಸಂಗರಾಣಾನ ಮಹತ್ವಾಕಾಂಕ್ಷೆಯನ್ನೂ ನಿ
ರ್ಮೂಲ ಮಾಡುವ ಉದ್ದೇಶದಿಂದಲೂ ಮರಳಿ ಮುಸಲ್ಮಾನ
ರನ್ನು ಉತ್ಕರ್ಷಗೊಳಿಸುವ ನಿಮಿತ್ತದಿಂದಲೂ ದೇವರು ತಾ
ರ್ತರೀ ದೇಶದಿಂದ ಬೇರೊಬ್ಬ ಪರಾಕ್ರಮ ಶಾಲಿಯನ್ನು ಹಿಂ
ದುಸ್ಥಾನಕ್ಕೆ ಬರಮಾಡಿದನು. ಇವನ ಹೆಸರು ಬಾಬರನು.
ಇವನ ಆಗಮನದಿಂದ ಹಿಂದುಸ್ತಾನದ ಕ್ಷತ್ರಿಯರ ತೇಜ
ವು ಕಳೆಗುಂದ ತೊಡಗಿತು.

ಹಿಂದಿನ ಇತಿಹಾಸವನ್ನು ಅವಲೋಕಿಸಲು, ಕಾಲ ಕಾಲ
ಕ್ಕೆ ಮಧ್ಯ ಏಸಿಯದ ಬಲಿಷ್ಠ ಜನರು ಈ ದೇಶವನ್ನೊಳ
ನುಗ್ಗಿ, ಜನ್ಮತ: ಶಾಂತತಾಪ್ರಿಯರಾದ ಹಿಂದೂ ಜನರನ್ನು
ಸುಲಿಕೊಂಡು ಹೋಗುತ್ತಿದ್ದಂತೆ ತಿಳಿದು ಬರುವದು. ಇ
ದೇನು ಹಿಂದೂ ಜನರ ದುರ್ದೈವವೋ! ಅಥವಾ ಆರ್ಯ
ಜಾತಿಯ ಭೋಗವೋ! ದೇವರೇ ಬಲ್ಲ. ಕೇವಲ ಬಾಬ

ರನಿಂದಲೇ ಈ ಕಾರ್ಯಕ್ಕೆ ಆರಂಭವಾಯಿತೆನ್ನುವಂತೆ ಇಲ್ಲ. ಗಜನಿ, ಘೋರಿ, ಮೊದಲಾದ ಮುಸಲ್ಮಾನರಷ್ಟೇ, ಅಲ್ಲ; ಗ್ರೀಕ, ಸೀಥಿಯನ್ ಮೊದಲಾದವರು ಸಹ ಈ ಕಾರ್ಯವನ್ನು ನಡಿಸಿದರು. ಇವರ ಪೂರ್ವದಲ್ಲಿ ಸಹ ಮಧ್ಯ ಏಸಿಯಾದಿಂದ ಬಂದ ಬೇರೆ ಬೇರೆ ತಂಡಗಳ ಉಪಟಳವು ಭರತ ಖಂಡಕ್ಕೆ ತಟ್ಟಿದ ಪ್ರಮಾಣಗಳು ಹೇರಳವಾಗಿ ದೊರೆಯುವವು. ಹೀಗಾಗಲು ಕಾರಣಗಳ್ಯಾವವೆಂಬದನ್ನು ಅನೇಕ ಜನ ಶೋಧಕರು ಹುಡುಕಿರುವರು. ಅವುಗಳಲ್ಲಿ ಪ್ರಾಮುಖ್ಯವಾಗಿ, ನೈಸರ್ಗಿಕವಾದ ವಿಪುಲ ಸಂಪತ್ತಿಯಿಂದ ಜನರಲ್ಲುಂಟಾಗುವ ಆಲಸ್ಯವತ್ತಿಯೂ, ಸಂಪತ್‌ಸಮೃದ್ಧಿತೆಯಿಂದುಂಟಾಗುವ ಆತ್ಮಾನಾತ್ಮ ವಿಚಾರವೂ ಐಕ್ಯದ ಅಭಾವವೂ ಬರುವವೆಂದು ಅವರು ಅನ್ನುತ್ತಾರೆ.

ಇತಿಹಾಸದ ಆರಂಭಕಾಲದಿಂದ ಇಂದಿನ ವರೆಗೆ ಹಿಂದುಸ್ಥಾನವು ಮಧ್ಯ ಏಶಿಯದಿಂದ ಹೊರಬಿದ್ದ ಪುಂಡ ಜನರ ದಾಳಿಗೂ ಕೊಲೆ ಸುಲಿಗೆಗಳಿಗೂ ಈಡಾಗಿರುವದೆಂಬದು ಇತಿಹಾಸದಿಂದ ಸ್ಪಷ್ಟವಾಗಿ ತಿಳಿಯುತ್ತದೆ, ಈ ಮಧ್ಯ ಏಶಿಯದ ಜನರು ಕಾಲ ಕಾಲಕ್ಕೆ ಗುಂಪು ಗುಂಪಾಗಿ ಹಿಂದುಸ್ಥಾನವನ್ನು ಅಭಿಗಮಿಸಿ ಅಲ್ಲಿಯ ನಿರುಪದ್ರವಿಗಳಾದ ನಿವಾಸಿಗಳನ್ನು ಕಾಡಿದ ಕಥೆಯು ಇತಿಹಾಸಡಲ್ಲಿ ಸಿಗುವದು. ಸಶೇಷ.

QUESTION PAPER OF WURTH PRIZE EXAMINATION.

ವರ್ಥಪ್ರೈಜ್ ಪರೀಕ್ಷೆ.

ಗದ್ಯ ಪದ್ಯ ಕಾವ್ಯಗಳು.

(೧) ಅ ಪ್ರಾಕ್ಕಾವ್ಯ ಮಾಲೆಯ ಗ್ರೀಷ್ಮರ್ತು ಹಿಮಂತರ್ತು ವರ್ಣನೆಯಲ್ಲಿರುವ ಅತ್ಯುಕ್ತಿಯನ್ನೂ ಶರದೃತು ವರ್ಣನೆಯಲ್ಲಿರುವ ಕವಿಸಮಯವನ್ನೂ, ವರ್ಷರ್ತು ವರ್ಣನೆಯಲ್ಲಿರುವ ಆನುಪೂರ್ವಿವ್ಯತಿಕ್ರಮವನ್ನೂ ಹೇಳಿರಿ.

ಇ ಚಂಪಕ ಮತ್ತು ಭ್ರಮರಗಳ ದ್ವೇಷನಿಮಿತ್ತವನ್ನೂ ಮೇಘಕ್ಕೆ ನೀರದ ನಾಮ ಬರಲು ಕಾರಣವನ್ನೂ ಕವಿಯು ಹೇಗೆ ವರ್ಣಿಸಿರುವನು.

(೨) ಆ ಲೀಲೆಯಿಂಚೋದಿಸ, ತೆರೆಗಳಮಾಲೆಯು, ನನೆದೋರಿ ತಿಂದೊಳದೆಸೂನ್ನದ, ಜಳಧಿಯು ನೀರನದೊಂದಾಂ ಗೊಳಗಿನ, ಜಳಧಿ ದ್ವೀಪಾಂತರಾಳಂಗಳಂ, ಪುಗಿಂ ಪೋಗಿ ಮುಗ್ರಾಗಳ್, ಎರ್ದೆಯಾಣ್ಮನೆಲ್ಲದನೊ ಲ ಲಿತಾಂಗವಲ್ಲಭಂ, ಅಂಜಲಿ ಮೆಂದರಿವ ಮರ್ವಿಸ ಮಂಜಮೊಗೊಟ್ಟಂ, ಈ ಪ್ರಯೋಗಗಳನ್ನು ದರ್ಪಣ ದಲ್ಲಿ ಯಾವಸಂದರ್ಭದಲ್ಲಿ ಉದಾಹರಿಸಬಹುದು.

(೩) ಅ ಪಿಡಿದಿರ್ದಳ್ ನಲ್ಮೆಯಿಂದೀಳೆಯು ಮೆನಗೆಕರಂ ಕೂ
ರ್ಪಳೆಂಬೀವಿವೇಕಂ
ಗಿಡೆಜನ್ಮಾವಾಸಮಂ ಪೀಡಿಸಿ ನಳನಿಗೆ ನಿಷ್ಕಾರಣಂ
ಕಾಯ್ದುನೋವಂ ।
ಪಡೆದಂ ಚಂಡಪ್ರಭಂ ವಾರುಣಿಯನನುದಿನಂ ಸೇವಿ
ಸುತ್ತಿರ್ದ್ದರಾಗ
ಕ್ಕೆಡೆಗೊಟ್ಟುನ್ಮಾರ್ಗದೊಳ್ವರ್ತಿಸುವ ಕುವಲಯ
ದ್ರೋಹನೇಗೈಯದ್ದು ತೋರಂ ॥
ಈ ಪದ್ಯದ (ಅರ್ಥಾಂತರದೊಡನೆ) ವಾಚ್ಯಾರ್ಥವ ನ್ನು ಬರೆಯಿರಿ.

ಆ ಕ್ರಮಮಂ ಕೆಯ್ಕೊಳಲೆಂದು ಪುಟ್ಟರಣದೋಳ್ ಸಾವ
ನ್ನಿಗಂ ಮಾಣ್ದೊಡ
ಕ್ರಮುಕಕ್ಕುಂ ಕ್ರಮುಕಕ್ಕುಮೇ ಕ್ರಮಮು ನಾನೇ
ಗೆಯ್ದಪೆಂ ವಿಕ್ರಮ |
ಕ್ರಮಮಾಂ ವಿಕ್ರಮದಾತನೇಂ ಕ್ರಮದ ಮಾತಂತಿ
ರ್ಕೆ ಮಾಣ್ದಿರ್ದೊಡಾಂ
ಕ್ರಮುಕೆಂದಿರ್ದೆನೆ ಬಿಟ್ಟೊಡಂ ಬಿಡಗೊಡಂ ಬೀ
ಳ್ಕೊಂಡೆ ನಿಮ್ಮಾಣ್ಬನೇ ॥
ಇದರ ವ್ಯಾಖ್ಯಾನವನ್ನು ಬರೆಯಿರಿ.

(೪) ಅ ಸರ್ವಜ್ಞ ಕವಿಯು ಶ್ಲಾಘಿಸಿದ ಮತ ವಿಷಯದಲ್ಲಿ ಶಾ ಸ್ತ್ರಸಾರಕರ್ತನು ಏನು ಅಭಿಪ್ರಾಯ ಪಟ್ಟಿರುವನು

ಈ ಸರ್ವಜ್ಞ ಪದಗಳಿಗೂ ಧರ್ಮಪರೀಕ್ಷೆಗೂ ಭಾಷಾಶೈಲಿ ಮುಂತಾದವುಗಳಲ್ಲಿರುವ ಹೋಲಿಕೆ ಮತ್ತು ತಾರತಮ್ಯಗಳನ್ನು ವ್ಯಕ್ತವಾಗುವಂತೆ ತೋರಿಸಿರಿ

(೫) ಆ ತಂದೆಯ ರೂಪೆ ತಂದೆಯ ವಿಳಾಸಮೆ ತಂದೆಯುಕ್ತಿ
ತಂದೆಯೊಂ | ದಂದಮೆ ತಂದೆಯೊಂದು ನುಡಿ
ಯೋಜೆಯೆ ತನ್ನೊಳಮರ್ಕೆವೆತ್ತುವಾ|
ಬಗೆದುಂ ನಿನ್ನನ್ವವಾಯೋನ್ನತಿಯು ನಿವಳತಿಸ್ನೇಹ
ಸಂಬಂಧಮಂ ನೀಂ |
ಬಗೆದುಂ ಸಂದೆಮ್ಮನಣ್ಪಂ ಬಗೆದು ಮರೆಯದೇ
ನಾನುಮೊ ||

ಹರಜಟಾಜೂಟಕ್ಕೆ ಚಂದ್ರಲೇಖೆಯಪ್ಪಂತೆ; ದಿಕ್ಕರಿ
ಕರಟ ತಟಕ್ಕೆ ಮದಲೇಖೆಯಂತೆ
ಕೈಟಭಾರಾತಿಯ ವಿಶಾಲೋರಸ್ಥಲಕ್ಕೆ ಕೌಸ್ತುಭ
ಮಿರ್ಪಂತೆ

ಇವು ಯಾವ ಯಾವ ಸಂಸ್ಕೃತ ಶ್ಲೋಕಗಳ ಭಾಷಾಂತರವೆಂದು ಹೇಳಬಹುದು.

(೬) ಘನಮಾರ್ಗ ಸುಭಗಸತ್ಕಾ | ರ್ಯನಿಯುಕ್ತಂ ವಿಗತ
ದೋಷಮಮೃತರುಚಿಸ್ಪರ್ಧಿ ನವಕವಿಕಾವ್ಯರವಿದು
ರ್ಜನ ಘೂಕ ಪ್ರಜಕಸತ್ಯಮಂ ಪುಟ್ಟಿಸುಗುಂ—
ಬೆರ್ಚಿಸೆತನ್ನಂ ಕೃಷ್ಣಂ | ಬೆರ್ಚಿಸಿದಂ ಕೃಷ್ಣತನ
ಯನಂ ಜಿನರೂಪಿಂ ಕೆಚ್ಚೇರಿದ ವೈರಾಗ್ಯದ ಬಿಡೆಕೆ
ಮ್ಮನೆ ಗರ್ಜಿಸಿತ | ಕೈದೆತಗಂಡೆಯುನ್ಮದೆರ್ಗುವ
ಸ್ಥಿರನವಪ್ಪ ಜಡನಚಿರಪ್ರಭೆ ನಿವಿಷದೋಳ ಡಂ
ಗುಗುಂ ಬೆಳಗಳೆಂತು ಮದುಸತ್ಪಥಮಂ ||

ಸ್ಥಿತಿಯೊಳ್ ಸುಜನಂ ಸುಖದಂ| ಮೃತಿಯೊಳ್ದುರ್ಜನಂ
ಜಗಜ್ಜನಾಘಶ್ಲಾಘ್ಯಂ | ಮೃತಿಯೊಳ್ದುಃಖದನಂ
ತ್ಯಂ| ಸ್ಥಿತಿಯೊಳ್ಶಂಕಿಪ್ಪೊಡೀರ್ವರುಂಸರಿಯುಲ್ತೆ

(೭) ಆ ಒಡನಿಲಿವಿತ್ತುದಿಲ್ಲ ವಿಧಿನಮ್ಮನಳಲ್ದಳವೇಡನೀಂ
ಮನಂ |

ಬಿಡೆನಡೆಯೆಂದು ಕೇಳ್ದನಿಸನಾಂ ಮಗುಳ್ದಾಗಳೆ ಸೂ
ಸಿ ಕಣ್ಣನೀ
ರೊಡನೊಡನುಣ್ಮೆ ಕುಂಕುಮದೊಳರ್ದಿದ ಬಾಳೆ ಗ
ಳನ್ನವಾಗಿಕೇ
ಪಡೆದರಲರ್ಗಣ್ಗಳಿಂದುಗಳ್ದು ನೋಡಿದುದಂ ನೆನೆ
ವೇಂ ಮೃಗಾಕ್ಷಿಯಾ

ಇದರಲ್ಲಿ ತೋರುವ ನಾಯಕನಾಯಿಕೆಯರ ಲಕ್ಷಣವ
ನ್ನೂ ಶೃಂಗಾರಚೇಷ್ಟಾದಿಗಳನ್ನೂ ಹೇಳಿರಿ

(೭) ತಾಂಗಡ ನಾಳೆ ಪೋಗಿ ದಿವಿಜಾಂಗನೆಯೊಳ್ನೊಡ
ರ್ದಿರ್ಪರ್ಗಿಲ್ಲಿವಾ
ಣ್ಡಾಂಗಡ ಬಿರ್ದನಂತನಿತು ಬೇಳನೆ ಮುನ್ನಮೆ ಪೋ
ಗಿ ನಲ್ಕೆಗೆ
ಲ್ಲಂಗೊಳೆ ದೇವಲೋಕದೊಳಧೀಶನ ನಾಸಿದಿಗೂರ್
ಳ್ವೆ ಸೋಪ್ರೊಷ
ಗ್ಗಂಗಳೊಳಿರ್ಪ ದೇವದಿವೆತ್ತೊಳ್ತಿರೊಳಳ್ತಿಯನಾ ಗ
ಳೀವನೋ ॥

ಇದರ ರಸಭಾವಾದಿಗಳನ್ನು ವ್ಯಕ್ತಗೊಳಿಸಿರಿ.

(೮) ಅ ಉಪಮೇಯೋಪಮೆ, ಅನನ್ವಯಗಳಿಗೂ; ಅರ್ಥಾ
ವೃತ್ತಿದೀಪಕ, ಪ್ರತಿವಸ್ತೂ
ಪಮೆಗಳಿಗೂ ಪ್ರಕೃತಾಪ್ರಕೃತ ಶ್ಲೇಷೆ ಸಮಾಸೋ
ಕ್ತಿಗಳಿಗೂ ವ್ಯತ್ಯಾಸವೇನು
ಆ ಮಾಧುರ್ಯ; ನಾರಿಕೇಳಪಾಕ, ಸಾತ್ವತೀವೃತ್ತಿ ಗ್ರಾ
ಮ್ಯ ದೋಷ ಇವುಗಳ ಲಕ್ಷಣವನ್ನು ಸಾಧ್ಯವಾದರೆ
ಉದಾಹರಣೆಯನ್ನು ಹೇಳಿರಿ

(೯) ಅ ನಾಂದಿ, ಚೂಳಿಕಾ, ಆಮುಖ, ಪ್ರವೇಶಕಗಳೆಂದರೇ
ನು? ಚಂಡಕೌಶಿಕ ನಾಟಕದಲ್ಲಿ ಇವನ್ನು ತೋರಿಸಿರಿ
ಆ ಚಂಡಕೌಶಿಕದಲ್ಲಿ ಇತಿವೃತ್ತವೆಂಥಾದ್ದು? ಏಕೆ? ಅದರ
ಲ್ಲಿ ಪತಾಕಾನಾಯಕನಾರು? ಬೀಜವಾವುದು? ಇನ್ನೆತಿ
ವೃತ್ತದ ಮುಖ್ಯ ಪ್ರಯೋಜನವೇನು ?

ಕೆಳಗೆ ಬರೆದ ಶಾಲಾಖಾತೆಯಿಂದ ಇನಾಮಿಗೂ, ಲಾಯಬ್ರರಿಗೂ ಮಂಜೂರಾದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು.

ಮೂಲ ಬೆಲೆ. ರೂ. ಆ.		ಕಡಿಮೆ ಮಾಡಿದ ಬೆಲೆ. ರೂ. ಆ.
೦—೩	ಕವಿತೆಯ ೨ನೇ ಪುಸ್ತಕ (2 nd Book of Poetry)	೦—೨
೦—೮	ಕರ್ತವ್ಯಭೂಮಿತಿ (Practical Geometry)	೦—೪
೦—೧॥	〃 ಪ್ರದೇಶಿಕಾ (Geometrical figures)	೦—೧
೦—೭	ಯಂತ್ರಶಾಸ್ತ್ರ (Mechanics)	೦—೩
೨—೦	ಅರ್ಥಶಾಸ್ತ್ರ (Political Economy)	೧—೦
೦—೨	ಜಗತ್ತಿನ ಇತಿಹಾಸ (Universal History)	೦—೧
೩—೫॥		೧—೧೧
	ಪೋ. ಪಿ. ಕಮೀಶನ	೦—೧
		೧—೧೨

ಮೇಲೆ ಹೇಳಿದ ಎಲ್ಲ ಪುಸ್ತಕಗಳನ್ನು ಒಮ್ಮೆಲೆ ತಕ್ಕೊಂಡರೆ ಪಕ್ತ ರೂ. ೧।೧೨ ಮಾತ್ರ) ಬೇಕಾಗುವದು. ಟಪಾಲ ಹಾಸಲು ಬೇಕಾಗಿಲ್ಲ. ೧೦ ರೂ. ಯಿಂದ ೨೫ ರೂಪಾಯಿ ಬೆಲೆಯ ಪುಸ್ತಕ ತಕ್ಕೊಳ್ಳುವವರಿಗೆ ನೂರಕ್ಕೆ ೧೦ ರಂತೆ ಮತ್ತು ೨೫ಕ್ಕಿಂತ ಹೆಚ್ಚಿಗೆ ಬೆಲೆಯ ಪುಸ್ತಕ ತಕ್ಕೊಳ್ಳುವವರಿಗೆ ನೂರಕ್ಕೆ ೨೦ ರಂತೆ ಕಮಿಶನ್ನು ದೊರೆಯುವದು.

ಪುಸ್ತಕಗಳು ಕೆಳಗೆ ಬರೆದವರಲ್ಲಿ ದೊರೆಯುವವು.

೧. ಮೆಸರ್ಸ ಎಸ್. ಎಮ್. ತ್ರಿಪಾಠಿ ಆ್ಯಂಡ ಕಂಪನಿ ಪ್ರಿನ್ಸೆಸ ಸ್ಟ್ರೀಟ ಮುಂಬಯಿ.

೨. ಧಿ. ಗುಜರಾಥ ಪ್ರಿಂಟಿಂಗ ಪ್ರೆಸ. ಕೋಟ ಸರ್ಕಲ ಮುಂಬಯಿ

೩. ರಾ. ಕರಸನದಾಸ ನಾರಾಯಣದಾಸ ಬುಕ್ಕಸೆಲ್ಲರ ಸುರತ.

೪. ಮೆಸರ್ಸ ಹರಿಶ್ಚಂದ್ರ ಆ್ಯಂಡ ಕಂಪನಿ ಪುಸ್ತಕವ್ಯಾಪಾರಿ ಕಾಳಬಾದೇವಿ ರೋಡ ಮುಂಬಯಿ.

REGISTERED No. B. 19.

ಹೊಸಪದ್ಧತಿಯ ಭೂಮಿತಿಯು.

ಎ. ಕಾನ್ಫರನ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯ
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ. ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ್ರಯ—೧೨ ಆ.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮೀಶನ್ ಕೊಡಲಾದೀತು.

ಪಿ. ಎಸ್. ಚಂದಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ. ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆದಂತಾಯಿತು.

ಎಮ್. ಹಿರಿಯಣ್ಣ ಎಮ್ ಪಿ ಎಲ್. ಟಿ ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ-ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾಸ್ಟರ್ ಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣಿತ ಗಣಿತಉಪಪತ್ತಿ ವಗೈರೆ ಪುಸ್ತಕಗಳೂ ಅವೆ. ಶೋಭೆಯುಳ್ಳ ಮಿಾಸಿಗಳ ಬೆಳವಣಿಗೆಯ ತೈಲು. ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್
ಹಮೀದ ಸಾಹೆ ಸೌದಾಗರ.

ಪ್ರಕಟನೆ.

ನಮ್ಮ ಬುಕ್ ಡಿಪೋದಲ್ಲಿ ಸರಕಾರಿ ಮೊದಲಿನ ಕನ್ನಡ ಆಂಕಲಿಪಿ. ಹಾಂಗು ೧ರಿಂದ ೬ರವರೆಗೆ ಮೊದಲಿನ ಕನ್ನಡ ಬುಕ್ಕುಗಳು ಮತ್ತು ಸರಕಾರಿ ನೂತನ ಕ್ರಮಿಕ ಪುಸ್ತಕಗಳು ಪುರಾಣ, ಇತಿಹಾಸ, ಕಾವ್ಯ, ಕಾದಂಬರಿ, ವೇದಾಂತ ಮುಂತಾದ ಅನೇಕ ವಿಧದ ಪುಸ್ತಕಗಳು ಮಾರಲಿಕ್ಕೆ ಸಿಗುತ್ತವೆ. ಸರಕಾರಿ ಮೊದಲಿನ ಬುಕ್ಕುಗಳಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ನೂತನ ಕ್ರಮಿಕ ಪುಸ್ತಕಗಳಿಗೆ ೧½ ಆಣೆಯಂತೆಯೂ ಕಮಿಶನ್ ಸಿಗುವದು

ಹುಬ್ಬಳ್ಳಿ } ವಿರೂಪಾಕ್ಷಯ್ಯ ತೇಗೂರ ಮಠದ

ಕನ್ನಡ ಶಾಲಾಪತ್ರ.

KANARESE SCHOOL PAPER.

ಪುಸ್ತಕ ೪೪] ಫೆಬ್ರುವರಿ ೧೯೦೮. [ಸಂಚಿಕೆ ೨.

ಅನುಕ್ರಮಣಿಕೆ ಪುಟ.

೧ ವಿದ್ಯಾಖಾತೆಯ ಸಂಬಂಧದ ವೃತ್ತಾಂತಗಳು ೨೫-೩೧
೨. ಕೃಷಿಕರ್ಮಶಾಸ್ತ್ರದ ಒಂದು ಅಪೂರ್ವ ಶೋಧವು ೩೨-೩೫
೩. ರಾಜಸ್ಥಾನದ ಇತಿಹಾಸವು ೩೫-೩೮
೪. ಸತ್ ಶಿಕ್ಷಣ ೩೮-೪೨
೫. ನೋಟೀಸು ೪೨-೪೪
೬. ಮುಲ್ಕೀ ಪರೀಕ್ಷೆ ೪೫
೭. ವರ್ಥ ಪ್ರೈಜ್ ಪರೀಕ್ಷೆ ವ್ಯಾಕರಣ ಛಂದಸ್ಸು... ೪೬-೪೮

CONTENTS.

1. Educational Intelligence and Useful Notes 25-31
2. A New Invencion in Agriculture ... 32-35
3. The History of Rajasthan 35-38
4 Valuable Education 38-42
5. Departmental Notice 42-44
6, Mulki Examination 45
7. Question Paper of Worth Prize Examination. 46-48

DHARWAR:
PRINTED AT THE KARNATIC BOOK DEPOT PRESS,
1908.

REGISTERED No. B.

ಪ್ರಕಟನೆ.

"ಮರಾಠಿ ಶಿಕ್ಷಕ" ಎಂಬ ಪುಸ್ತಕವನ್ನು ನಾನು ಕನ್ನಡಿಗರಿಗಾಗಿ ರಚಿಸಿರುತ್ತೇನೆ. ಇದರಿಂದ ಸ್ವಲ್ಪ ದಿವಸಗಳಲ್ಲಿ ಮರಾಠಿ ಭಾಷೆಯನ್ನು ಕಲಿಯಬಹುದು. ಬೇಕಾದವರು ಬೇಗ ಹೆಸರು ತಿಳಿಸಬೇಕು. ನಿಯಮಿತ ಸಂಖ್ಯೆಯಷ್ಟು ಹೆಸರು ತಿಳಿದ ಕೂಡಲೆ ಮುದ್ರಿಸಿ ವ್ಹಿ. ಪಿ. ಯಿಂದ ಕಳಿಸುವೆನು. ಬೆಲೆ ೧ ಪ್ರತಿಗೆ ೧೦ ಆಣೆ ಟ. ಖ. ಬೇರೆ.

ನ. ಸು. ಬಾಗಲಕೋಟ್ಕರ, ಮಾಸ್ತರ ಕಡಕೋಳ
ತಾ. ಸಿರಹಟ್ಟಿ ಜಿ. ಧಾರವಾಡ.

ಸವಣೂರ ಪಂಚಾಂಗಗಳು.

ಕೀಲಕನಾಮ ಸಂವತ್ಸರದ ಕನ್ನಡ ಮರಾಠಿ ಪಂಚಾಂಗಗಳು ಮಾರಾಟಕ್ಕೆ ಸಿದ್ಧವಾಗಿವೆ. ದರ ಸಾವಿರಕ್ಕೆ ೨೦ ರೂ. ೫೦೦ ಕ್ಕೆ ೧೩॥ ರೂ. ೧೦೦ ಕ್ಕೆ ೪ ರೂ. ೧ ಕ್ಕೆ ೧ ಆಣೆ.

ದಾನೋಳೀಕರ ಮತ್ತು ಕಂಪನಿ
ಧಾರವಾಡ.

ಸನ್ ೧೯೦೮ನೇ ಇಸ್ವಿಯ ಡಾಯರಿಗಳು

ಮಾರಾಟಕ್ಕೆ ಸಿದ್ಧವಾಗಿವೆ. ಕ್ಯಾಲೆಂಡರು ೪ ಆಣೆ. ಪೂರಾ ಕಟ್ಟಲ್ಪಟ್ಟದ್ದು ೮ ಆಣೆ. ಜೋರವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಸಿಗುವದು.

ಶಾಲಾಪತ್ರಿಕೆ.

ಪದ್ಯಂ

ಪ್ರಿಯವಿದ್ಯಾಗುರುವರ್ಯರನ್ನತಿಶಯಂ ಸಚ್ಛಿಷ್ಯಸೋತ್ಕರ್ಷದಿಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರದಿಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವ ತಿದ್ದಲ್ವೇಳ್ವುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೪೫.] ಫೆಬ್ರುವಾರಿ-೧೯೦೮. [ಸಂಚಿಕೆ ೨

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಒಂದು ವರ್ತುಲಾಕಾರವಾದ ಕಾಜಿನ ಗೋಲವನ್ನು ತಕ್ಕೊಂಡು ಸರಳಮೇಲ್ಮೈಯುಳ್ಳದ್ದೊಂದು ಕಾಜಿನ ಹಾಳೆಯ ಮೇಲೆ ಇಟ್ಟು ಒತ್ತಲು ಆ ಎರಡೂ ಕಾಜಿನ ಪದಾರ್ಥಗಳು ಸ್ಪರ್ಶಮಾಡಿದ ಸ್ಥಳದಲ್ಲಿ ಅದರ ಸುತ್ತುಮುತ್ತು ಅನೇಕವರ್ಣಯುಕ್ತವರ್ತುಲಗಳು ಕಾಣುವವೆಂದು ಮೊದಲಿನ ಪಾಶ್ಚಾತ್ಯರ ಸಿದ್ಧಾಂತವಿತ್ತು. ಈ ವರ್ತುಲಗಳಿಗೆ ನ್ಯೂಟನನ ಉಂಗುರಗಳೆಂದು ಅನ್ನುತ್ತಿದ್ದರು. ಈ ವರ್ತುಲ (ರಿಂಗ್ಸ) ಗಳನ್ನು ಒಂದು ವಿಶಿಷ್ಟಪ್ರಕಾರದ ಧ್ರುವೀಭವನ ಹೊಂದಿದ ಪ್ರಕಾಶದಲ್ಲಿ ನೋಡಲು ಅವುಗಳ ಮಧ್ಯಬಿಂದುವು ಪ್ರಕಾಶಿತವಿರುತ್ತದೆಂದು ಇಂದಿನವರೆಗಾದ ಪದಾರ್ಥ ವಿಜ್ಞಾನ ಶಾಸ್ತ್ರಜ್ಞರ ಮತವಿತ್ತು. ಇಷ್ಟೇ ಅಲ್ಲ ಈ ಸಂಗತಿಯನ್ನು ಬಲಪಡಿಸುವಂಥ ಎಷ್ಟೋ ಗ್ರಂಥಗಳು ಕೂಡ ಉದಯಹೊಂದಿದವು. ಆದರೆ ಒಳಗಡೆಯಲ್ಲಿ ತುಸು ದಿವಸಗಳ ಪೂರ್ವದಲ್ಲಿ ಕಲಕತ್ತೆಯ ಸಿ. ವ್ಹಿ. ರಾಮನ್ ಎಂಬವನೊಬ್ಬ ಶೋಧಕನು (ಇವನು ಹಿಂದೂ ನಿವಾಸಿಯು)

ಇದು ತಕ್ಕೆಂದು ಪ್ರಯೋಗದಿಂದ ಜಗಕ್ಕೆಲ್ಲ ಮನದಟ್ಟು ಮಾಡಿಕೊಟ್ಟಿರುವನು ಈ ಮಾತಿಗೆ ಕ್ರೈಷ್ಟನ್ ಮೊದಲಾದ ಯುರೋಪಿಯನ್ ಶೋಧಕರು ಒಡಂಬಟ್ಟಿದ್ದಾರೆ. ಈ ಮೇರೆಗೆ ಹಿಂದುಸ್ಥಾನದಲ್ಲಿಯೂ ಆದಿಭೌತಿಕ ಶಾಸ್ತ್ರದಲ್ಲಿ ಹೊಸ ಶೋಧಗಳನ್ನು ಮಾಡುವಷ್ಟು ಸಾಮರ್ಥ್ಯವುಂಟಾದದ್ದನ್ನು ಕಂಡು ಪರಮಾವಧಿ ಸಂತೋಷವಾಗುವದು. ಬೋಸ, ರಾಯ, ರಾಯನ್ ಮುಂತಾದ ಭೌತಿಕ ಶಾಸ್ತ್ರಜ್ಞರು ಮುಂದಾಗಿ ಹೊಸ ಹೊಸ ಶೋಧಗಳನ್ನು ಬೈಲಿಗೆ ತಂದರೆ ಹಿಂದುಸ್ಥಾನದ ಕಲ್ಯಾಣವಾಗುವದೆಂದು ನಂಬಲು ಆಸ್ಪದವಾಗುವದು.

ಮೊಹರ್ಬಾನ್ ಎಜ್ಯುಕೇಶನಲ್ ಇನಸ್ಪೆಕ್ಟರವರ ಸ್ವಾರಿಯು ಮುಂಬಯಿ ಕಡೆಗೆ ಹೋಗಿರುವದು,

---

ಅಮೇರಿಕೆಯೊಳಗಿನ ಸಂಯುಕ್ತ ಸಂಸ್ಥಾನಗಳಲ್ಲಿ ನಡೆಯುವ ಶಿಕ್ಷಣವು— ಈ ಸಂಯುಕ್ತ ಸಂಸ್ಥಾನವು ಜಗದೊಳಗಿನ ಸುಧಾರಣೆಯ ಶಿಖರಕ್ಕೆ ಮುಟ್ಟಿದ ರಾಷ್ಟ್ರಗಳಲ್ಲಿ ಎಣಿಸಲ್ಪಡುತ್ತದೆ. ಸಂಪತ್ತಿನಿಂದಲೂ ಅಧಿಕಾರದಿಂದಲೂ ಇದು ಅಗ್ರಸ್ಥಾನದಲ್ಲಿ ವಿರಾಜಿಸುತ್ತದೆಂಬದನ್ನು ಹೇಳಲಿಕ್ಕೆ ಬೇಡ. ಇಂಥ ರಾಷ್ಟ್ರದಲ್ಲಿ ಶಿಕ್ಷಣವಾದರೂ ಉತ್ತಮತರದಿಂದಲೇ ನಡಿಯುತ್ತಿರಬೇಕೆಂಬದು ನಿರ್ವಿವಾದವು. ಚಿಕ್ಕಮಕ್ಕಳೇ ಭಾವೀ ರಾಷ್ಟ್ರವು. ಆದ್ದರಿಂದ ಆ ಚಿಕ್ಕಮಕ್ಕಳಿಗೆ ದೊರೆಯುತ್ತಿದ್ದ ಶಿಕ್ಷಣವನ್ನು ಇಲ್ಲಿ ಬಣ್ಣಿಸುವದು ತಕ್ಕದ್ದೆಂದು ತಿಳಿದು ಹಾಗೆ ಮಾಡುತ್ತೇವೆ.

ಈ ಸಂಯುಕ್ತ ಸಂಸ್ಥಾನವು ಅನೇಕ ಸಂಸ್ಥಾನಗಳಿಂದ ಕೂಡಿ ಒಂದೇಯಾಗಿದ್ದರೂ, ಪ್ರತ್ಯೇಕ ಸಂಸ್ಥಾನವು ತನ್ನ ಅಂತಸ್ಥ ಕಾರ್ಯಭಾರ ನಡಿಸುವದಕ್ಕೆ ತಾನು ಸ್ವತಂತ್ರವಾಗಿರುತ್ತದೆ. ಕೇವಲ ಪರರಾಷ್ಟ್ರ ಸಂಬಂಧದ ವಿಚಾರದಲ್ಲಿ

ಮಾತ್ರ ಮುಖ್ಯ ಅಧಿಕಾರಿಯು ಮಾತಿನಿಂದ ಬದ್ಧವಾಗಿರುವವು.

ಈ ಸಂಸ್ಥಾನದ ಪ್ರಜೆಗಳು, ತಮ್ಮ ಮಕ್ಕಳು ಹೆಣ್ಣೇ ಆಗಲಿ, ಗಂಡೇ ಆಗಲಿ, ಅವು ಜಗದಲ್ಲಿ ನೀತಿಮಾರ್ಗದಿಂದ ನಡೆಯುತ್ತ ಕೆಲವೊಂದು ಕಾರ್ಯವನ್ನು ಕೈಕೊಂಡು ಅದನ್ನು ಸರಿಯಾಗಿ ನಡಿಸುತ್ತ ತಮ್ಮ ನಿರ್ವಾಹವನ್ನು ಸುಖದಿಂದ ಸಾಧಿಸಿಕೊಳ್ಳಬೇಕೆಂಬದೇ ತಮ್ಮ ಉದ್ದಿಷ್ಟವಾದ ಅಂತಿಮ ಹೇತುವೆಂದು ನಿರ್ಧರಿಸಿಕೊಂಡು ಅದಕ್ಕನುಗುಣವಾದ ಶಿಕ್ಷಣವು ತಮ್ಮ ಮಕ್ಕಳಿಗೆ ದೊರೆಯುವಂತೆ ಮಾಡಿದ್ದಾರೆ. ಈ ರಾಷ್ಟ್ರದಲ್ಲಿ ಫಲವತ್ತಾದ ಭೂಮಿಯು ನಿಪ್ರುಲವಾಗಿರುವದು. ಬೆಲೆಯುಳ್ಳ ಖನಿಜ ಸಂಪತ್ತಿಯಿಂದ ಭೂಗರ್ಭವು ತುಂಬಿರುವದು, ಕಲಾಕೌಶಲ್ಯವೂ, ವ್ಯವಹಾರೋದ್ಯಮವೂ ವಿಶೇಷವಾಗಿ ಬೆಳೆದಿರುವದು. ಇಂಥ ಅನುಕೂಲ ಸಾಧನಗಳು ಸಮೃದ್ಧಿಯಾಗಿ ಇರುವದರಿಂದ ಅವರು ತಮ್ಮ ಮಕ್ಕಳು, ಇವುಗಳೊಳಗಿನ ಬೇಕಾದದ್ದೊಂದು ಅಂದರೆ ತಮಗೆ ಸೇರುವಂಥ ತಮ್ಮ ಕೈಯಿಂದ ನೀಗುವಂಥ ಯಾವದೊಂದು ಕಲೆಯನ್ನು ಪೂರ್ಣವಾಗಿ ಕಲಿತುಕೊಂಡರೆ, ಮುಂದೆ ಸೃಷ್ಟಿಯಲ್ಲಿ ತಮಗೂ ತಮ್ಮ ಕುಟುಂಬಕ್ಕೂ ಚರಿತಾರ್ಥತಾಪತ್ರಯವು ಬರಲಿಕ್ಕಿಲ್ಲೆಂದು ಅವರು ಮನಗಂಡು, ಆ ಮಾರ್ಗಕ್ಕೆ ಹತ್ತುವರು. ವಾಸ್ತವಿಕವಾಗಿ ಶಿಕ್ಷಣದ ಯಥಾರ್ಥ ವ್ಯಾಖ್ಯೆಯಲ್ಲಿ ಇದೇ ಪೂರ್ಣವಾದದ್ದು ಎಂದು ಹೇಳಬಹುದು. ಎಲ್ಲರ ಬುದ್ಧಿವಂತಿಕೆಯು ಸಮನಾಗಿರುವದಿಲ್ಲ. ಗೃಹಸ್ಥಿತಿಯೂ, ಅನುವಂಶಿಕ ಆಚರಣೆಗಳೂ ಒಂದೇ ಇರುವದು ದುರ್ಲಭವು. ಇಂಥ ಪ್ರಸಂಗದಲ್ಲಿ ಮಕ್ಕಳ ಮಾನಸಿಕ ಶಾರೀರಕ, ಸಾಂಪತ್ತಿಕ ಮೊದಲಾದ ಶಕ್ತಿಗಳನ್ನು ಅನುಲಕ್ಷಿಸದೆ, ಎಲ್ಲರನ್ನು ಒಂದೇ ವರ್ಗದಲ್ಲಿ ಸೇರಿಸುವದು ಹಿತವಲ್ಲ. ಈ ಮಾದರಿಯ ಶಿಕ್ಷಣವು ಹಿಂದುಸ್ತಾನದಲ್ಲಿ ನಡೆಯುವದಿಲ್ಲ. ಕೆಲವು ವಿಶೇಷ ತರದ ಉದ್ಯೋಗಗಳನ್ನು

ಕಲಿಸುವ ಶಾಲೆಗಳಿದ್ದರೂ ಅವುಗಳ [illegible]

ಲ್ಲ. ಆದರೆ ಸಂಯುಕ್ತ ಸಂಸ್ಥಾನದಲ್ಲಿ ದೇಶದೊಳಗಿನ ಯಾವತ್ತೂ ಬಾಲಬಾಲಕಿಯರ ಬುದ್ಧಿ ಸಾಮರ್ಥ್ಯಕ್ಕೂ ಶರೀರ ಸಾಮರ್ಥ್ಯಕ್ಕೂ ಅನುಗುಣವಾದ ಶಿಕ್ಷಣವು ಅಲ್ಪಕಾಲದಲ್ಲಿ, ಅಲ್ಪ ಆಯಾಸದಿಂದ ಅಲ್ಪವ್ಯಯದಿಂದ ದೊರೆಯುವಂತೆ ಏರ್ಪಾಟು ಮಾಡಿದ್ದಾರೆ. ಇದೇ ನಿಜವಾದ ವಿದ್ಯಾಭ್ಯಾಸದ ಅನುಕೂಲತೆಯು.

ಇವರು ಪ್ರಾಥಮಿಕ ಶಿಕ್ಷಣದಲ್ಲಿ ಮೂರು ತರಗತಿಗಳನ್ನು ಮಾಡಿರುವರು. ಒಂದನೇ ತರಗತಿಯಲ್ಲಿ ಕೇವಲ ಓದು ಬರಹ ಇಷ್ಟೇವುಂಟು. ಎರಡನೇದರಲ್ಲಿ ಭಾಷೆಯ ಸಂಬಂಧವಾಗಿ ವಿಶೇಷಜ್ಞಾನ ಅಂದರೆ ವ್ಯಾಕರಣ ಪರಿಶೀಲನ. ಮೂರನೇದು ಮೇಲ್ತರದ್ದು. ಇದರಲ್ಲಿ ಇತಿಹಾಸ, ಭೂಗೋಲ, ಗಣಿತ ಹಾಗೂ ಈ ವಿಷಯಗಳಿಗೆ ಸಂಬಂಧಿಸಿದ ಆನುಷಂಗಿಕ ವಿಷಯಗಳೂ ಸಮಾವೇಶವಾಗಿರುತ್ತವೆ.

ಪ್ರಾಥಮಿಕ ಶಿಕ್ಷಣಕ್ಕೆ ಫೀ ಇಲ್ಲ. ಇಷ್ಟೇ ಅಲ್ಲ, ಕೆಲಕೆಲವು ಕಡೆಯಲ್ಲಿ ಹುಡುಗರಿಗೆ ಪಾಟಿ, ಪುಸ್ತಕ ಮುಂತಾದವುಗಳನ್ನು ಕೂಡ ಕೊಡುವರು. ಇದಲ್ಲದೆ ಎಲ್ಲರೂ ಇಷ್ಟು ವಿದ್ಯೆಯನ್ನು ಕಲಿಯಲಿಕ್ಕೆ ಬೇಕೆಂದು ನಿರ್ಬಂಧವುಂಟು. ಗಂಡುಮಕ್ಕಳು ಇಷ್ಟು ವರ್ಷದಿಂದ ಇಷ್ಟು ವರ್ಷಗಳವರೆಗೆ ಹೆಣ್ಣುಮಕ್ಕಳೂ ಇಷ್ಟು ವಯಸ್ಸಿನಿಂದ ಇಷ್ಟು ವಯಸ್ಸಿನವರೆಗೆ ಶಾಲೆಯಲ್ಲಿ ಅಭ್ಯಾಸ ಮಾಡಲಿಕ್ಕೇ ಬೇಕೆಂದು ಕಾಯದೆಯುಂಟು. ಇದರಿಂದ ಪ್ರಾಥಮಿಕ ಶಿಕ್ಷಣವು ಸರಿಯಾಗಿ ದೊರೆತು, ಆ ವಿದ್ಯಾರ್ಥಿಗಳು ಮುಂದೆ ವ್ಯವಹಾರೋಪಯುಕ್ತವಾದ ವಿದ್ಯೆಯನ್ನು ಕಲಿಸುವ ಕಾಲೇಜಗಳಲ್ಲಿ ಸೇರಲು ತಕ್ಕವರಾಗುತ್ತಾರೆ.

ಉಚ್ಚ ಶಿಕ್ಷಣವು ಅಥವಾ ಕಾಲೇಜದಲ್ಲಿ ದೊರೆಯುವ ಶಿಕ್ಷಣವು ಸಾರ್ವತ್ರಿಕದಲ್ಲಿ ಪುಕ್ಕಟೆಯಾಗಿ ಶಿಗುವದಿಲ್ಲ. ಆದರೂ ಎಷ್ಟೋ ಸಂಸ್ಥಾನಗಳಲ್ಲಿ ಎಷ್ಟೋ ವಿಷಯಗಳು ಪುಕ್ಕಟೆಯಾಗಿ ಕಲಿಸಲ್ಪಡುತ್ತವೆ. ಫೀಯಾದರೂ ತೀರ ತುಸು. ಇದಾದರೂ ಕಾಲೇಜವನ್ನವಲಂಬಿಸಿರದೆ ವಿಷಯವ

ನ್ನವಲಂಬಿಸಿರುವದು. ಆದರೂ ಹುಡುಗನು ಬಡವನಿದ್ದರೆ ತೀರ ಕಡಿಮೆ ಫೀ ತಕ್ಕೊಂಡು ಕಲಿಸುವರು. ಮಾಫಿಯನ್ನಾದರೂ ಮಾಡುವರು. ಇದರಿಂದ ರಾಷ್ಟ್ರದೊಳಗಿನ ಎಂಥ ಬಡವನ ಮಗನಿಗೂ ಕೂಡ ಕಾಲೇಜ ಶಿಕ್ಷಣವು ಸುಲಭವಾಗಿ ದೊರೆಯುವದು. ಬಡವರು ನಮ್ಮಿಂದ ಮೇಲ್ತರದ ಶಿಕ್ಷಣವು ಹ್ಯಾಗೆ ಸಂಪಾದಿಸುವದಾದೀತು! ಎಂದು ನಿರಾಶರಾಗುವಂತಿಲ್ಲ. ತನ್ನ ಬುದ್ಧಿ ಶಕ್ತಿಗೆ ಅನುಗುಣವಾದ ಉಚ್ಚಪ್ರತಿಯ ಶಿಕ್ಷಣವನ್ನು ಪಡೆಯಲಿಕ್ಕೆ ಆ ರಾಷ್ಟ್ರದ ಪ್ರತಿ ಒಬ್ಬ ಹುಡುಗನಿಗೆ ಅನುಕೂಲವುಂಟು

ಕೆಲವರಿಗೆ, ಹೊಟ್ಟೆಯ ಕಾಳಜಿಯು ಬೇಗನೆ ಹತ್ತುವದು. ಇಂಥ ಹುಡುಗರು ತಮ್ಮ ತಮ್ಮ ಉದ್ಯೋಗಕ್ಕೆ ಬೇಕಾಗುವ ಮೇಲ್ತರದ ಶಿಕ್ಷಣವನ್ನು ಉದರ ನಿರ್ವಾಹವೆಂಬ ಅಪರಿಹಾರ್ಯ ಕಾರಣದಿಂದ ಬಿಡಬೇಕಾಗುತ್ತದೆ. ಆದಕೆ ಇಂಥವರಿಗೆ ಸಹ ಮೇಲ್ತರದ ಶಿಕ್ಷಣವು ಸಿಗುವಂತೆ ಅನುಕೂಲತೆಯನ್ನು ಮಾಡಿರುವರು. ಕೂಲಿಕಾರರು ತಮ್ಮ ಹೋರೆಯನ್ನು ಮಾಡಿ ಬಂದ ಬಳಿಕ ಅವರವರ ಉದ್ಯೋಗದ ಸಂಬಂಧದ ವಿಶೇಷ ಶಿಕ್ಷಣವನ್ನು ಕೊಡಲಿಕ್ಕೆ ಅನೇಕ ರಾತ್ರೀ ಶಾಲೆಗಳನ್ನು ಸ್ಥಾಪಿಸಿದ್ದಾರೆ ಇವುಗಳ ಪ್ರಯೋಜನವು ಬಹಳವುಂಟು. ಇದಲ್ಲದೆ, ಯುನಿವ್ಹರ್ಸಿಟಿಯ ಪ್ರೊಫೆಸರರು ಇಂಥವರಿಗಾಗಿಯೇ ವ್ಯಾಖ್ಯಾನ ಕೊಡಲಿಕ್ಕೆಂದು ಕಳಿಸಲ್ಪಟ್ಟಿರುತ್ತಾರೆ. ಇಂಥ ವ್ಯಾಖ್ಯಾನಗಳು ರಾತ್ರಿಯಲ್ಲಾಗುತ್ತವೆ. ಇವುಗಳಿಂದಲೂ, ಕೂಲಿಕಾರರಿಗೆ ಬಹು ಹಿತವಾಗುತ್ತದೆ.

ಇಷ್ಟು ಬಗೆಯ ಶಿಕ್ಷಣ ಸಂಸ್ಥೆಗಳಲ್ಲದೆ ಸೂಟಿಯಲ್ಲಿ ನಡೆಯುವ ಶಾಲೆಗಳು ಬೇರೆ ಇರುವವು. ಅಲ್ಲಿಯ ಕಾಲೇಜುಗಳಿಗೆ ವರ್ಷದೊಳಗೆ ಎರಡು ಮೂರು ದೊಡ್ಡ ಸೂಟಿಗಳು ಇರುತ್ತವೆ ಇಂಥ ಸೂಟಿಯಲ್ಲಿ ಆಯಾ ಕಾಲೇಜದ ಅಧ್ಯಾಪಕರು ಕೆಲವೊಂದು ನಿಯಮಿತವಾದ ಮಧ್ಯಸ್ಥಾನದಲ್ಲಿ ತಮ್ಮ ವ್ಯಾಖ್ಯಾನ ಮಾಲಿಕೆಯನ್ನು ಪ್ರಾರಂಭಿಸುತ್ತಾರೆ. ಇ

ಷ್ಟೇ ಅಲ್ಲ, ಆ ದೇಶದ ಮುಂದಾಳುಗಳು ಜರ್ಮನಿ, ಜಪಾನ ಇಂಗ್ಲಂಡ ಮುಂತಾದ ದೇಶದೊಳಗಿದ್ದ ಒಂದೊಂದು ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆದ ದೊಡ್ಡ ದೊಡ್ಡ ಪಂಡಿತರನ್ನು ರೊಕ್ಕ ಕೊಟ್ಟು ಕರಿಸಿಕೊಂಡು ಇಂಥ ವ್ಯಾಖ್ಯಾನಗಳನ್ನು ಕೊಡ ಹಚ್ಚುತ್ತಾರೆ. ಇಂಥ ವ್ಯಾಖ್ಯಾನಗಳು ಸಪ್ರಯೋಗವಾಗಿ ನಡೆಯುವದರಿಂದ ಬಹಳ ಪ್ರಯೋಜನಕರವಾಗಿರುತ್ತವೆ. ಅಧ್ಯಾಪಕರು ಅಥವಾ ಪಂಡಿತರಾದರೂ ತಮ್ಮ ಕೀರ್ತಿಯು ಹಬ್ಬಬೇಕೆಂಬ ಲವಲವಿಕೆಯಿಂದ ವ್ಯಾಖ್ಯಾನಗಳನ್ನು ಮೊದಲೇ ಸಿದ್ಧ ಮಾಡಿಟ್ಟುಕೊಂಡಿರುತ್ತಾರೆ. ಆದ್ದರಿಂದ ಈ ಸುಶ್ರಾವ್ಯವೂ ಪ್ರಯೋಜನಕರವೂ ಆದ ವ್ಯಾಖ್ಯಾನಗಳಿಗೆ ದೂರ ದೂರದ ಜನರು (ವಿದ್ಯಾರ್ಥಿಗಳು) ಬರುವರು. ಚಿಕಾಗೋ ಪಟ್ಟಣದಲ್ಲಿ ಇಂಥ ವ್ಯಾಖ್ಯಾನ ಮಾಲಿಕೆಯು ಪ್ರಾರಂಭವಾಗಲು, ಹತ್ತು ಸಾವಿರ ವಿದ್ಯಾರ್ಥಿಗಳು ಬಂದಿದ್ದರು. ಅಲ್ಲಿಯ ಕಾಲೇಜದ ಅಧಿಕಾರಿಗಳು ಈ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಅನುಕೂಲ ಮಾಡಿ ಕೊಟ್ಟರು. ಇದೊಂದೇ ಮಾತಿನಿಂದ ಈ ಸಂಸ್ಥೆಯು ಎಷ್ಟು ಗೌರವದ್ದೆಂಬದು ವ್ಯಕ್ತವಾಗುವದು.

ಈ ಸಾಟೆಯ ಶಾಲೆಗಳಂತೆಯೇ ಯುನಿವ್ಹರ್ಸಿಟಿಯವರು ಎಕ್ಸಟೆನಶನ್ ಸ್ಕೂಲ್ ಎಂಬ ಬೇರೊಂದು ಬಗೆಯ ವಿದ್ಯಾದಾನದ ಸಂಸ್ಥೆಯನ್ನು ಸಿದ್ಧ ಮಾಡಿರುವರು. ಅಂದರೆ ಕಾಲೇಜದಲ್ಲಿ ಕಲಿತ ಬಳಿಕ ಆಯಾ ವಿಷಯದಲ್ಲಿ ನೈಪುಣ್ಯವನ್ನು ಪಡೆಯಲೋಸುಗ ಹಾಕಿದ ಸ್ಕೂಲುಗಳು. ಕಾಲೇಜದಲ್ಲಿ ಆಯಾ ವಿಷಯಗಳ ಅಧ್ಯಯನವು ಯಥಾತಥಾ ಆಗುವದು. ಅದರಿಂದ ಪ್ರಪಂಚದಲ್ಲಿ ಸುಖ ಪಡೆಯಲಿಕ್ಕೆ ಸಾಕಷ್ಟು ಸಹಾಯವಾಗುವದಿಲ್ಲ. ಆದ್ದರಿಂದ ಇಂಥ ಶಾಲೆಗಳನ್ನು ಉಂಟು ಮಾಡಿ ಇದರಲ್ಲಿ ಆಯಾ ವಿಷಯಗಳನ್ನು ಆ ಮೂಲಾಗ್ರವಾಗಿ ಕಲಿಸುವರು.

ಇವೆಲ್ಲ ಸಂಸ್ಥೆಗಳು ನಡಿಯಲಿಕ್ಕೆ ಹಣವು ಎರಡು ವಿಧವಾ

ಗಿ ಕೂಡಿಸಲ್ಪಟ್ಟಿರುವದು ಪ್ರಾಥಮಿಕ ಮಾಧ್ಯಮಿಕ ಶಿಕ್ಷಣಕ್ಕೆ ಸಂಸ್ಥಾನಿಕರಿಂದ ಹಣವು ದೊರೆಯುವದು. ಕಾಲೇಜದಂಥ ಮೇಲ್ತರದ ಸಂಸ್ಥೆಗಳು, ಜನರಿಂದ ಧರ್ಮಾರ್ಥಕ್ಕಾಗಿ ಕೂಡಿಸಿದ ಹಣದಿಂದ ನಡೆಯುವವು.

ಇವಲ್ಲದೆ ಧಾರ್ಮಿಕ ಶಿಕ್ಷಣದ ಶಾಲೆಗಳಾದರೂ ದೇಶದ ತುಂಬಾ ತಂಗೊಳಿಸುತ್ತವೆ. ಇವುಗಳ ವೆಚ್ಚವಾದರೂ ಪರೋಪಕಾರಿಗಳಾದ ಸದ್ಗೃಹಸ್ಥರು ಕೂಡಿಸಿದ ಹಣದಿಂದಲೇ ಸಾಗುತ್ತದೆ. ಈ ದೇಶದಲ್ಲಿ ಇಂಗ್ಲಿಷ, ಡಚ್ಚ, ಫ್ರೆಂಚ, ಐಯುರಿಶ್, ಮೊದಲಾದ ಅನೇಕ ಭಾಷೆಯ ಅನೇಕ ಧರ್ಮದ ಜನರಿದ್ದರೂ, ಅವರವರ ಧರ್ಮಕ್ಕೂ ಭಾಷೆಗಳಿಗೂ ಬಾಧೆ ಬರದಂತೆ ಶಿಕ್ಷಣವು ನಡೆಯುತ್ತದೆ. ಇಷ್ಟೇ ಅಲ್ಲ ಇಂದಿಯನ್ನರೂ ನಿಗ್ರೋ ಜಾತಿಯವರೂ ಮೊದಲು ಕೇವಲ ಗುಲಾಮರೊಳಗೆ ಎಣಿಸಲ್ಪಡುತ್ತಿದ್ದವರು ಕೂಡ ಈಗ ದೇಶದ ಇತರ ಜನರಂತೆ ವಿದ್ಯಾರ್ಜನೆಯನ್ನು ಮಾಡಿಕೊಂಡು ಘನವಾದ ನಾಗರಿಕರಾಗಿರುತ್ತಾರೆ. ಮತ್ತು ಸರಕಾರದ ದೊಡ್ಡದೊಡ ಉದ್ಯೋಗಗಳನ್ನು ನಡಿಸುತ್ತಾರೆ.

ಈ ವೃತ್ತಾಂತದಿಂದ ನಾವು ಕೋರಬೇಕಾಗಿದ್ದ ಸಂಗತಿಗಳು ಅನೇಕವಾಗಿದ್ದರೂ, ಪ್ರತಿ ಒಬ್ಬ ಮನುಷ್ಯನಿಗೆ ತನ್ನ ಪ್ರಪಂಚವನ್ನು ಸುಸೂತ್ರವಾಗಿ ನಡಿಸಿಕೊಳ್ಳುವಷ್ಟು ಬುದ್ಧಿ ಸಾಮರ್ಥ್ಯವನ್ನೂ ಶರೀರ ಸಾಮರ್ಥ್ಯವನ್ನೂ ಪಡೆಯುವಷ್ಟು ಅನುಕೂಲತೆಯನ್ನು ಒದಗಿಸಿ ಕೊಡುವದು ಮೊದಲನೇದೆಂದು ಬಗೆಯುತ್ತೇವೆ. ಇದರಿಂದ ದೇಶದ ಕಂಗಾಲ ಸ್ಥಿತಿಯು ದೂರಾಗಿ ಭಿಕ್ಷೆ ಬೇಡುವವರ ಸಂಖ್ಯೆಯು ಇಲ್ಲದಂತಾಗುವದು ಇದೇ ದೇಶದ ಅಭ್ಯುದಯದ ಮೊದಲನೇ ಲಕ್ಷಣವು. ದಯಾಳು ಸರಕಾರದವರು ಈ ತತ್ವದಿಂದ ಶಿಕ್ಷಣದ ಸಾರ ಕಾರ್ಯವನ್ನು ಕೈಕೊಂಡರೆ ಪ್ರಜಾಕ್ಷೇಮವೂ ಪರ್ಯಾಯದಿಂದ ರಾಜಕ್ಷೇಮವೂ ಆಗುವದೆಂದು ನಮ್ಮ ನಂಬುಗೆಯುಂಟು.

A NEW INVENCION IN AGRICULTURE

ಕೃಷಿಕರ್ಮಶಾಸ್ತ್ರದ ಒಂದ ಅಪೂರ್ವ ಶೋಧವು.

ಮೈಲಿ ಏಳಬಾರದೆಂದು ಮನುಷ್ಯರಿಗೆ ಮೈಲೀ ತೆಗೆಯುವದು ಎಲ್ಲರಿಗೂ ಗೊತ್ತುಂಟು. ಗುಳ್ಳೀ ಬೇನೆಯು ಬರಬಾರದೆಂದು ಮನುಷ್ಯರ ಮೈಯಲ್ಲಿ ಆ ಬೇನೆಯ ಜಂತುಗಳನ್ನು ಮೈಲೀ ಚುಚ್ಚಿ ಹಾಕುವದು ಪ್ರಚಾರದಲ್ಲಿ ಬರಹತ್ತಿದೆ ಅದಕ್ಕಾಗಿ ಮುಂಬಯಿ ಸರಕಾರದವರು ಅನೇಕ ಪ್ರಯತ್ನಗಳನ್ನು ಮಾಡಿರುವರು; ಇಷ್ಟೇ ಅಲ್ಲ. ಪ್ಲೇಗ ಸಂಬಂಧವಾದ ಮೈಲೀ ಚುಚ್ಚುವ ವಿಧಾನವನ್ನು ಎಲ್ಲ ಜನರಿಗೆ ತಿಳಿಸಿ ಕೊಟ್ಟು ಅದರ ಪ್ರಸಾರ ಮಾಡಬೇಕೆಂಬ ಉದ್ದೇಶದಿಂದ ಮುಂಬಯಿ ಇಲಾಖೆಯೊಳಗಿನ ಎಲ್ಲ ವರ್ತಮಾನ ಪತ್ರಕರ್ತರನ್ನು ಸರಕಾರದ ಖರ್ಚಿನಿಂದ ಕರಿಸಿ ಅದರ ವಿಧಾನವನ್ನು ಸಪ್ರಯೋಗವಾಗಿ ತಿಳಿಸಿ ಕೊಟ್ಟಿರುವರು. ಇದರಲ್ಲೇನು ಆಶ್ಚರ್ಯವಿಲ್ಲ. ಆದರೆ ಇತ್ತಿತ್ತಲಾಗಿ ಅಮೇರಿಕಾಖಂಡದ ಒಬ್ಬ ಕೃಷಿಕರ್ಮಶಾಸ್ತ್ರಜ್ಞನು ಗಿಡಗಳಿಗೆ ಮೈಲೀ ತೆಗೆಯುವ ಹೊಸ ಹಂಚಿಕೆಯನ್ನು ಕಂಡು ಹಿಡಿದಿರುತ್ತಾನೆ. ಇಷ್ಟೇ ಅಲ್ಲ ಅದು ಆ ದೇಶದಲ್ಲಿಯೂ ಯುರೋಪಖಂಡದಲ್ಲಿಯೂ ಅನುಭವಕ್ಕೆ ಸಹ ಬರಹತ್ತಿದೆ. ಆ ಹಂಚಿಕೆಯು ಯಾವದು? ಅದು ಹೇಗೆ ಹೊರಟಿತು? ಅದರಿಂದ ಯಾವ ಪ್ರಕಾರದ ಲಾಭವಾಗುತ್ತಿರುವದು? ಇತ್ಯಾದಿ ಸಂಗತಿಗಳು ಇಲ್ಲಿ ಸ್ವಲ್ಪದರಲ್ಲಿ ಹೇಳಿವೆ.

ಉದ್ಭಿಜ್ಜಗಳು ಭೂಮಿಯೊಳಗಿಂದ ಶೋಷಿಸಿಕೊಳ್ಳುವ ಪದಾರ್ಥಗಳಲ್ಲಿ ನೈಟ್ರೋಜನಯುಕ್ತ ಪದಾರ್ಥಗಳೇ ಹೆಚ್ಚು ಮಹತ್ವವಾದವುಗಳು. ಭೂಮಿಯು ಕಸುವನ್ನು ಬೆಳಿಸಬೇಕಾದರೆ ಭೂಮಿಯಲ್ಲಿ ನೈಟ್ರೋಜನ ವಾಯುವಿನಿಂದ ಕೂಡಿದ ಗೊಬ್ಬರವನ್ನು ಹಾಕುವರು. ದಕ್ಷಿಣ ಅಮೇರಿಕಾ ಖಂ

ಹದಲ್ಲಿ ಚಿಲೀ ಎಂಬದೊಂದು ದೇಶವುಂಟು; ಆ ದೇಶದ ಬಂದು ಪ್ರದೇಶವೆಲ್ಲ ಒಂದು ಜಾತಿಯ ಪಕ್ಷಿಗಳ ಮಲದ ಥರಗಳಿಂದ ತುಂಬಿ ಹೋಗಿರುತ್ತದೆ. ಅದರಲ್ಲಿ ನೈಟ್ರೋಜನ ವಾಯುವು ಬಹಳ; ಅದರಿಂದ ಸುಧಾರಿಸಿದ ಎಲ್ಲ ದೇಶಗಳ ಜನರು ಅದನ್ನೇ ತರಿಸಿ ಭೂಮಿಗೆ ಹಾಕುವರು. ಅದು ತುಸು ದಿವಸಗಳಲ್ಲಿ ತೀರಿ ಹೋಗುವ ಅಂಜಿಕೆಯುಂಟಾಗಿದೆ. ಆದರಿಂದ ಅದನ್ನು ಉಪಯೋಗಿಸುವ ದೇಶದೊಳಗಿನ ಕೃಷಿಕರ್ಮಜ್ಞರು ಮುಂದೆ ಏನು ಮಾಡಬೇಕೆಂದು ವಿಚಾರಮಾಡತೊಡಗಲು, ಅವರ ಮನಸ್ಸಿನಲ್ಲಿ, ನಮ್ಮ ಸುತ್ತುಮುತ್ತು ವ್ಯಾಪಿಸಿಕೊಂಡಿರುವ ಹವೆಯಲ್ಲಿ ೧೦೦ಕ್ಕೆ ೮೦ ಭಾಗ ನೈಟ್ರೋಜನವಾಯುವುಂಟು; ಇದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಯಾಕೆ ಬರಬಾರದು! ಎಂಬ ವಿಚಾರವು ಬಂದು ಅದರಂತೆ ಶೋಧ ಮಾಡಲಾಗಿ ಅವರಿಗೆ ಯಶ ದೊರೆಯಿತು.

ಹವೆಯೊಳಗಿನ ನೈಟ್ರೋಜನ ವಾಯುವನ್ನು ಹ್ಯಾಗೆ ಉಪಯೋಗಿಸಿಕೊಳ್ಳಬೇಕೆಂಬದನ್ನು ಹೇಲರಿಫನನೆಂಬ ಶಾಸಜ್ಞನು ಇ. ಸ. ೧೮೮೬ನೇ ವರ್ಷ ಗೊತ್ತು ಹಚ್ಚಿದನು. ಆವನ ವಿಲಕ್ಷಣ ಶೋಧ ದೃಷ್ಟಿಯಿಂದ ಅವನಿಗೆ ಅನುಭವಕ್ಕೆ ಬಂದದ್ದೇನೆಂದರೆ:—"ಅವರೆ, ಬಟಗಡ್ಲೆ ಮೊದಲಾದ ದ್ವಿದಲ ಧಾನ್ಯಗಳ ಗಿಡಗಳ ಬೇರುಗಳ ಮೇಲೆ ಕಜ್ಜೀ ಕಾಳಷ್ಟು ಬೊಕ್ಕೆಗಳು ಏಳುತ್ತಿರುವವು. ಅವು ದೊಡ್ಡವಾಗಿದ್ದಂತೆ, ಬಹಳವಾಗಿದ್ದಂತೆ ಬೆಳೆಯು ಚೆನ್ನಾಗಿರುವದೆಂದು ಹೇಳಬಹುದು ಮತ್ತು ಇವೇ ಬೊಕ್ಕೆಗಳಿಂದ ಭೂಮಿಯು ಮೊದಲಿಗಿಂತ ಬೆಳೆಯುಳ್ಳದ್ದಾಗುತ್ತದೆ." ಈ ಬೊಕ್ಕೆಗಳನ್ನು ಸೂಕ್ಷ್ಮದರ್ಶಕ ಯಂತ್ರಗಳೊಳಗಿಂದ ಪರೀಕ್ಷಿಸಲು, ಇವುಗಳಲ್ಲಿ ಒಂದು ಪ್ರಕಾರದ ಸೂಕ್ಷ್ಮ ಜಂತುಗಳು ಇರುತ್ತವೆಂದು ಕಂಡು ಬರುವದು. ಈ ಜಾತಿಯ ೨೪೦೦೦ ಜಂತುಗಳನ್ನು ಒಂದಕ್ಕೊಂದು ಹಚ್ಚಿ ಸಾಲಾಗಿ

ಟ್ಟರೆ ಒಂದು ಇಂಚು ಉದ್ದವಾಗುವದು. ಈ ಜಂತುಗಳ ಹಗಲಿರುಳು ಹವೆಯೊಳಗಿನ ನೈಟ್ರೋಜನ ವಾಯುವನ್ನು ಹೊಟ್ಟೆಬಕರಂತೆ ತಿನ್ನುತ್ತಿರುತ್ತವೆ. ಅವುಗಳಿಂದ ಆ ಗಿಡಗಳಿಗೆ ನೈಟ್ರೋಜನ ವಾಯುವು ದೊರೆತು ಆ ಬೊಕ್ಕೆಗಳಲ್ಲಿ ನೈಟ್ರೋಜನ ಯುಕ್ತವಾದ ಪದಾರ್ಥವು ಜಮೆಯಾಗುತ್ತದೆ. ಇದೇ ಮುಂದೆ ಭೂಮಿಯ ಕಸವು ಹೆಚ್ಚು ಮಾಡುಲಿಕ್ಕೆ ಕಾರಣವಾಗುತ್ತದೆ. ಸಾರಾಂಶ, ಈ ಜಂತುಗಳು ಹವೆಯೊಳಗಿನ ನೈಟ್ರೋಜನ ವಾಯುವನ್ನು ತಿಂದು ಅದಕ್ಕೆ ಗಿಡಗಳಿಗೆ ಉಪಯೋಗ ಬೀಳುವ ಸ್ವರೂಪ ಕೊಡುವ ಒಂದು ತರದ ಕಾರಖಾನೆಗಳೆಂತಲೇ ಹೇಳಬಹುದು.

ಈ ಜಂತುಗಳ ಉಪಯೋಗವನ್ನು ಹೇಗೆ ಮಾಡಿಕೊಳ್ಳಬೇಕೆಂಬ ಅನೇಕ ಜನ ಶಾಸ್ತ್ರಜ್ಞರು ಅನೇಕ ಪ್ರಯೋಗಗಳನ್ನು ಮಾಡಿದರು. ಕಡೆಗೆ ಆರಂಭದಲ್ಲಿ ಹೇಳಿದಂತೆ ಮೆಲೀ ಅಥವಾ ಪ್ಲೇಗ ಚುಚ್ಚುವಂತೆ ಈ ಜಂತುಗಳಿಂದ ಕೂಡಿದ ಪದಾರ್ಥಗಳನ್ನು ಬಟಗಡ್ಲೆ ಮೊದಲಾದ ಬೀಜಗಳಲ್ಲಿ ತುಂಬಿ ಆ ಬೀಜಗಳನ್ನು ಬಿತ್ತಿದರೆ ಬೆಳೆಯು ಚೆನ್ನಾಗಿ ಬರುವದಲ್ಲದೆ ಭೂಮಿಯ ಕಸವೂ ಹೆಚ್ಚಾಗುವದೆಂದು ಗೊತ್ತಾಯಿತು. ಅಮೇರಿಕಾ ಸರಕಾರದವರು ಈ ವಿಷಯುಲ್ಲಿ ಬಹಳ ಮನಸು ಹಾಕಿರುವರು. ಅವರು ಆ ಜಂತುಯುಕ್ತವಾದ ಪದಾರ್ಥವನ್ನು ಸಿದ್ಧ ಮಾಡುವ ಕಾರಖಾನೆಗಳನ್ನು ಇಡಿಸಿ ಆ ಕಾರಖಾನೆಗಳಲ್ಲಿ ಸಿದ್ಧವಾದ ಆ ಪದಾರ್ಥಗಳ ಪುಡಿಕೆಗಳನ್ನು ಒಕ್ಕಲಿಗರಿಗೆ ಕೊಡಹತ್ತಿರುವರು. ಈ ಪುಡಿಕೆಗಳ ಸಂಗಡ ಒಂದು ಸೂಚನಾ ಪತ್ರಿಕೆಯೂ ಕೊಡಲ್ಪಡುವದು ಅದರಲ್ಲಿ ಅದನ್ನು ಉಪಯೋಗಿಸುವ ಕ್ರಮವು ಹೇಳಲ್ಪಟ್ಟಿರುವದು. ಇಸವಿ ಸನ್ ೧೯೦೫ ರಲ್ಲಿ ಇಂಥ ೧೨೦೦೦ ಪುಡಿಕೆಗಳು ಬೇರೆ ಬೇರೆ ಸ್ಥಳದ ಒಕ್ಕಲಿಗರಿಗೆ ಕಳಿಸಲ್ಪಟ್ಟಿದ್ದವು. ೧೦೦ ಕ್ಕೆ ೭೫ ಸ್ಥಳಗಳಲ್ಲಿ ಅವುಗಳ ವಿಲಕ್ಷಣ ಉಪಯೋಗವಾಗಿರುತ್ತದೆ. ಕ್ಷೀರ ಕಾಡುಭೂಮಿಯಲ್ಲಿ ಸಹ ಸಾಧಾರಣ ಭೂಮಿಯ ನಾಲ್ಕು ಪಟ್ಟು ಬೆಳೆ

ಟಕರುತ್ತಿದೆಂದು ಅನುಭವಕ್ಕೆ ಬಂದಿರುತ್ತದೆ. ಇಂಗ್ಲಂಡದ ಲ್ಲಿ ಈ ಕ್ರಮದ ಪ್ರಯೋಗಗಳು ಆರಂಭವಾಗಿರುತ್ತವೆ.

ಈ ಶೋಧದಿಂದ ಮನುಷ್ಯ ಜಾತಿಗೆ ಬಹಳೇ ಲಾಭವಾಗುವದು. ನಮ್ಮ ದೇಶದಲ್ಲಿಯೂ, ಆ ಜಂತುಯುಕ್ತವಾದ ಪದಾರ್ಥವನ್ನು ಉಪಯೋಗಿಸಿ ನೋಡತಕ್ಕದ್ದು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

ಈ ಕ್ರಮವು ಇಂದಿನಿಂದಲ್ಲ, ಈಗ ೫೦೦ ವರ್ಷಗಳ ಹಿಂದಿನಿಂದಲ್ಲ, ಅದಕ್ಕೂ ಕೆಲವು ಶತಕಗಳ ಹಿಂದಿನಿಂದಲ್ಲ, ಇತಿಹಾಸವು ಪ್ರಾರಂಭವಾದಂದಿನಿಂದ ಅಂದರೆ ಸುಮಾರು ನಾಲ್ಕೈದು ಸಾವಿರವರ್ಷಗಳ ಕಾಲದಿಂದ ಅಬಾಧಿತವಾಗಿ ನಡೆದುಬಂದದೆ. ಈ ಅಸ್ಮದ್ದೇಶದ ದಾಳಿಗಾರರ ಪುಂಡಾಟವು ಹಿಂದುಸ್ಥಾನದಲ್ಲಿ ಸಾತೋದ್ಧಾರವಾಗಿ ನಡೆಯುವ ಕಾರಣವನ್ನು ಕುರಿತು ಅನೇಕ ಜನ ವಿದ್ವಾಂಸರು ಶೋಧ ನಡಿಸಿ ಗೊತ್ತುಹಚ್ಚಿರುವದೇನಂದರೆ; ಈ ದೇಶದಲ್ಲಿ ಏಕಛತ್ರಾಧಿಪತ್ಯದ ರಾಜ್ಯವು ಎಂದೂ ನೆಲೆಗೊಳ್ಳಲಿಲ್ಲ. ಅಲ್ಲಲ್ಲಿ ಚಿಕ್ಕಚಿಕ್ಕ ರಾಜಮಂಡಲಗಳು ನೆಲೆಗೊಂಡಿದ್ದವು. ಇವುಗಳಲ್ಲಿ ಎಂದೂ ಒಕ್ಕಟ್ಟು ಇದ್ದಿಲ್ಲ. ಇಷ್ಟೇ ಅಲ್ಲ; ಇವು ಸ್ವಾಭಿಮಾನಕ್ಕಾಗಿ ತಮ್ಮ ತಮ್ಮೊಳಗೆ ಬಡಿದಾಡುತ್ತಿದ್ದವು. ಇದು ಪ್ರಧಾನ ಕಾರಣವು. ಇದಲ್ಲದೆ ಭಾರತೀಯರಲ್ಲಿ ಅನೇಕ ಜಾತಿಗಳೂ, ಕುಲಗಳೂ ಉಂಟಾಗಿ ಅವರ ಧರ್ಮದಲ್ಲಿ ಅನೇಕ ಅವಾಂತರ ಶಾಖೆಗಳು ಉತ್ಪನ್ನವಾಗಿ ಒಬ್ಬರಿಗೊಬ್ಬರು ಆಪತ್ಕಾಲದಲ್ಲಿ ಅಂದರೆ ಪರಚಕ್ರಗಳ ಅಭಿಯೋಗ ಸಮಯದಲ್ಲಿ ನೆರವಾಗುವದನ್ನು ಉಳಿದು ಇಂಥ ಸಂಧಿಯಲ್ಲಿ ಒಬ್ಬರೊಬ್ಬರ ಸೇಡು ತೀರಿಸಿಕೊಳ್ಳುವಂಥ ನೀಚ ವೃತ್ತಿಯನ್ನು ಅವಲಂಬಿಸಿರುವರು. ಇದು ಎರಡನೆಯ ಕಾರಣವು. ಎರಡು ಸಾವಿರ ವರುಷಗಳ ಪೂರ್ವದಲ್ಲಿ

ಯವನರ ಅಧಿಪತಿಯಾದ ಶಿಕಂದರನು ಹಿಂದುಸ್ಥಾನವನ್ನು ಪ್ರವೇಶಿಸಿದಾಗ ಅವನು ಈ ಜನರ ವರ್ತನವನು ನಿರೀಕ್ಷಿಸಿ ಅನುಭವದಿಂದ ಇವರಲ್ಲಿ ಐಕ್ಯವೂ ರಾಷ್ಟ್ರಾಭಿಮಾನವೂ ಇಲ್ಲೆಂದು ಅರಿತುಕೊಂಡನು. ಇವನು ಪಂಜಾಬದ ವರೆಗೆ ಬಂದಿದ್ದನು. ಇಷ್ಟೇ ಪ್ರದೇಶದಲ್ಲಿ ನೂರಾರು ಅರಸರು, ನೂರಾರು ಜನ ಪಾಳೇಗಾರರು ಸ್ವತಂತ್ರರಾಗಿ ಆಳುತ್ತಿದ್ದ ದ್ದು ಅವನಿಗೆ ತೋರಿಬಂತು. ಅವರಲ್ಲಿ ಎಷ್ಟೋ ಜನರನ್ನು ಆ ಶಿಕಂದರನು ಕಾಣಿಸಿಕೊಂಡು ಅವರೊಡನೆ ಸಂಭಾಷಣೆ ಮಾಡಿ ಈ ಅರಸರು ಒಬ್ಬೊಬ್ಬರೇ ಬೇರೆ ಇರುವರು; ಇವರು ಒಬ್ಬರನ್ನೊಬ್ಬರು ನಂಬುವದಿಲ್ಲ. ಎಂಬದನ್ನು ಮನಗಂಡನು. ಇದರಿಂದಲೇ ಅವರ ದಿಗ್ವಿಜಯವು ಸುಲಭವಾಯಿತು. ಮುಸಲ್ಮಾನ ಸರದಾರರಿಗಂತೂ ಹಿಂದುಸ್ಥಾನವು ಕಾಮಧೇನು ಕಲ್ಪವೃಕ್ಷದಂತೆ ತೋರಿತು. ಯಾವನೊಬ್ಬ ಮುಸಲ್ಮಾನ ಸರದಾರನು ಸ್ವದೇಶದಲ್ಲಿ ಮಾನಧನ ಗೌರವನ್ನು ಪಡೆಯಲು ಅಶಕ್ಯವಾಗಿ ತೋರಲು, ಅವನು ತಕ್ಕಷ್ಟು ದಂಡು ಕೂಡಿಸಿಕೊಂಡು ಇಚ್ಛಿತ ಸುಖವನ್ನು ಭೋಗಿಸಲಿಕ್ಕೂ ಐಶ್ವರ್ಯಾಧಿಕಾರದ ಶಿಖರವನ್ನು ಹೊಂದಲಿಕ್ಕೂ ಹಿಂದುಸ್ಥಾನವನ್ನು ಅಭಿಗಮಿಸುವನು. ಈ ಕ್ರಮವು ಏಳನೇ ಶತಕದಿಂದ ಪ್ರಾರಂಭವಾಯಿತು. ಪರಶತ್ರುಗಳಾದ ಮುಸಲ್ಮಾನರ ಪ್ರವಾಹವು ಒಂದೇ ಸವನೆ ಹಿಂದುಸ್ಥಾನವನ್ನು ಸೇರಿ ಅಲ್ಲಿಯ ಸಂಪತ್ತನ್ನು ಕೊಳ್ಳೆ ಕೊಂಡು ಹೋಗ ತೊಡಗಿದನು. ಒಬ್ಬ ಕಂಗಾಲ ಸರದಾರನು ಹಿಂದುಸ್ಥಾನವನ್ನು ಅಭಿಗಮಿಸಿ ಜಯಶಾಲಿಯಾಗಿ ಐಶ್ವರ್ಯವಂತನಾದದ್ದನ್ನು ಕೇಳಿ ಬೇರೊಬ್ಬ ಮುಸಲ್ಮಾನ ಸರದಾರನು ಆಶಾಗ್ರಸ್ತನಾಗಿ ತಾನೂ ಹಿಂದುಸ್ಥಾನವನ್ನು ಒಳಸಾಗುವನು. ಹಿಂದೂ ಜನರ ನೈಸರ್ಗಿಕ ಸ್ವಭಾವದಿಂದ ಈ ಹೊಸ ಸರದಾರನು ಅಲ್ಪಾಯಾಸದಿಂದ ಬಾದಶಹನಾಗಲಿ ಸುಲ್ತಾನನಾಗಲಿ ಆಗುವನು. ಈ ಎರಡನೆಯವನ ಘನತೆಯನ್ನು ಕೇಳಿ ಮೂರನೆಯವನೂ

ಮೂರನೆಯವನ ಧೀನತೆಯನ್ನು ಕೇಳಿ ನಾಲ್ಕನೆಯವನೂ ಇದರಂತೆ ಒಬ್ಬರಿಂದೊಬ್ಬರು ಹಿಂದುಸ್ತಾನವನ್ನು ಒಳನುಗ್ಗಿದರು. ಇವರಲ್ಲಿ ಬುಖಾರಾ, ಇರಾಣ, ಕಾಬೂಲ, ಗಿಝ್ನಿ ಮುಂತಾದ ಸ್ಥಳಗಳಿಂದ ಬಂದವರು ಮುಖ್ಯರಾಗಿದ್ದರು. ಇಂಥ ಕಂಟಕ ಕಾಲದಲ್ಲಿ ಹಿಂದೂ ಜನರು ಈ ಪರಚಕ್ರದವರ ಸಂಬಂಧದ ಕಿಂಚಿತ್ ವೃತ್ತಾಂತವಾದರೂ ಗೊತ್ತಿಲ್ಲದ್ದರಿಂದ ಕೇವಲ ಕ್ಷಾತ್ರಧರ್ಮಕ್ಕನುಸರಿಸಿ ಅವರೊಡನೆ ಹೋರಾಡುವರು. ಆದರೆ ಅವರ ಹೊಸ ಹುರುಪಿನ ಮುಂದೆ ಈ ಸುಖಸಂಪರ್ಕದಿಂದ ಆಲಸ್ಯವು ಮೈಯುಂಡಂಥ ಸರಳ ಮನಸಿನವರಾದಂಥ ರಜಪೂತರ ಆಟವು ನಡೆಯಲಿಲ್ಲ. ಕ್ಷತ್ರಿಯರು ಶತ್ರುಗಳೊಡನೆ ಹೋರಾಡಿ ಸೋತ ಬಳಿಕ ಆ ಸ್ಥಾನವನ್ನೇ ತ್ಯಾಗ ಮಾಡಿ ಹೋಗುವರು. ಶಿಕಂದರನಿಂದ ಇಂದಿನವರೆಗೆ ಪರಚಕ್ರದ ಅಭಿಯೋಗವೂ ಹಿಂದುಸ್ತಾನದ ಸುಲಿಗೆಯೂ ಅಪ್ರತಿಹತವಾಗಿ ನಡೆದಿರುವವು. ಶಿಕಂದರನಿಗಿಂತ ಮೊದಲು ಇರಾಣದ ಬಾದಶಹನಾದ ದರಾಯಸನು ಹಿಂದುಸ್ತಾನವನ್ನು ಅಭಿಗಮಿಸಿ ಕೆಲವು ಪ್ರದೇಶವನ್ನು ಗೆದ್ದುಕೊಂಡಿದ್ದನು. ಇವನು ಒಂದು ಲೇಖದಲ್ಲಿ ನಾನು ಗೆದ್ದುಕೊಂಡ ಭೂಪ್ರದೇಶದಲ್ಲಿ ಹಿಂದುಸ್ಥಾನದಂಥ ಧನಕನಕ ಸಂಪನ್ನವಾದಂಥ ಸರ್ವಗುಣದಿಂದ ಅಲಂಕೃತವಾದಂಥ ಬೇರೊಂದು ಪ್ರದೇಶವನ್ನು ಕಾಣಲಿಲ್ಲ ಎಂದು ಬರೆದಿರುವನು. ಈ ಮೇರೆಗೆ ಮಧ್ಯಏಶಿಯದ ಮಂಗೋಲರು ದಂಡುಕೂಡಿಸಿಕೊಂಡು ಬಂದು ಹಿಂದುಸ್ತಾನವನ್ನು ಸುಲಿದುಕೊಂಡು ಹೋಗುವದನ್ನು ನೋಡಿದರೆ ದೇವರೇ ಇವರಿಗೆ ಹಿಂದುಸ್ಥಾನವನ್ನು ಸುಲಿಯಲಿಕ್ಕೆ ಒಟ್ಟ ಅಪ್ಪಣೆಯನ್ನು ಕೊಟ್ಟವನೋ ಎಂಬ ಅನುಮಾನವು ಮನದಲ್ಲಿ ಉದ್ಭವಿಸುತ್ತದೆ. ಸಾರಾಂಶ ಇತಿಹಾಸದ ಆರಂಭಕಾಲದಿಂದ ಇಂದಿನವರೆಗೆ ನಡೆದ ಹಿಂದುಸ್ಥಾನದ ಸುಲಿಗೆಯು ಅಬಾಧಿತವಾಗಿ ನಡೆದಿರುವದೆಂಬುದು ಸ್ಪಷ್ಟವದೆ

ಶ್ಯಾಬುದ್ದೀನ ಘೋರಿ— ಶ್ಯಾಬುದ್ದೀನ ಘೋರಿಯಿಂದ ಬಾ

ಬರನ ವರೆಗೆ ಗತಿಸಿದ ಮುನ್ನೂರು ವರ್ಷಗಳಲ್ಲಿ ಮುಸಲ್ಮಾನರು ಹೆಬ್ಬಲದೊಂದಿಗೆ ಐದು ಸಾರೆ ಹಿಂದುಸ್ಥಾನವನ್ನು ಆಕ್ರಮಿಸಿದರೆಂಬುದು ಇತಿಹಾಸದಿಂದ ತಿಳಿಯಬರುತ್ತದೆ. ಇದಲ್ಲದೆ ಈ ಪ್ರತಿಬಂದು ದಾಳಿಯಲ್ಲಿ ತಪ್ಪದೆ ರಾಜ್ಯಕ್ರಾಂತಿಯು ಆಗಿರುವದೆಂಬದಾದರೂ ಅದೇ ಇತಿಹಾಸದಿಂದ ತಿಳಿಯುತ್ತದೆ. ಸಂಗ್ರಾಣನಿಗೂ ಬಾಬರನಿಗೂ ಆದ ಯುದ್ಧವೇ ಹಿಂದೂ ಮುಸಲ್ಮಾನರ ನಡುವೆ ಆದ ಸಂಗ್ರಾಮಗಳ ಕಡೆಯದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಸಂಗನ ತರುವಾಯ ಆದ ಹಿಂದೂ ರಾಜರು ಪರಚಕ್ರವನ್ನು ನಿವಾರಿಸಲಿಕ್ಕೂ ಸ್ವರಾಜ್ಯವನ್ನು ರಕ್ಷಿಸಿಕೊಳ್ಳಲಿಕ್ಕೂ ಅಸಮರ್ಥರಾಗಿದ್ದರೆಂಬುದು ಅವರ ಕಾಲದಲ್ಲೊದಗಿದ ಮುಸಲ್ಮಾನರ ವಿಜಯಗಳಿಂದ ಒಡೆದು ಕಾಣುತ್ತದೆ.

(ಸಕೀಷ.)

VALUABLE EDUCATION.

ಸತ್ ಶಿಕ್ಷಣ

—◁(+)▷—

ಶಿಕ್ಷಣವೆಂದರೆ ಕಲಿಯುವವರಲ್ಲಿ ಏನಾದರೊಂದು ಕೆಲಸ ಮಾಡುವ ಸಾಮರ್ಥ್ಯವನ್ನುಂಟು ಮಾಡೋಣ ಮುಂತಾದ ಹಲವು ವ್ಯಾಖ್ಯೆಗಳನ್ನು ಬಲ್ಲವರು ಹೇಳುತ್ತಾರೆ. ಆದರೆ ಕಲಿಯುವ ಕೆಲಸವು ಶಾಲೆಯಲ್ಲಿಯೇ ನಡೆಯುತ್ತದೆಂಬಂತಿಲ್ಲ. ವಿದ್ಯಾರ್ಥಿಯು ತನ್ನ ಜೊತೆಗಾರರಿಂದ ಹಲವು ಸಂಗತಿಗಳನ್ನೂ, ಹಿರಿಯರ ಉಪದೇಶಗಳಿಂದ ಕೆಲವನ್ನೂ, ಸೃಷ್ಟಿಯ ಅವಲೋಕನದಿಂದ ಕೆಲವನ್ನೂ, ಗ್ರಂಥಗಳನ್ನೋದಿ ಹಲವು ಸಂಗತಿಗಳನ್ನು ಓದಿ ತಿಳಕೊಂಡು ತನ್ನ ಜ್ಞಾನಭಾಂಡಾರವನ್ನು ಬೆಳಿಸಿಕೊಳ್ಳುವನು. ಈ ಬಗೆಯ ಅರ್ಥವನ್ನೇ ಸೋಮೇಶ್ವರ ಕವಿಯು- ಕೆಲವಂಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳುತ | ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತ | ಕೆಲವಂ ಸಜ್ಜನ

ಸಂಗದಿಂದ ಅರಿಯಲು ಸರ್ವಜ್ಞನಪ್ಪಂತೆ ಕೇಳು | ಪೇವ್ರಂ ಪೆಳ್ಳ ಸಮುದ್ರವೈ ಹರಹರಾ ಶ್ರೀಚೆನ್ನ ಸೋಮೇಶ್ವರಾ॥ ಈ ಶ್ಲೋಕದಲ್ಲಿ ಸಂಗ್ರಹಿಸಿ ಹೇಳಿದ್ದಾನೆ. ಆದ್ದರಿಂದ ವಿದ್ಯಾರ್ಥಿಯು ತಾನು ಕಲಿಯುವ ಮಾರ್ಗಗಳನ್ನು ಕಂಡುಕೊಂಡು ಅದರಂತೆ ವರ್ತಿಸಬೇಕು.

ಆದರೆ ಮಾನವ ಪ್ರಾಣಿಯು ಆಮರಣ ವಿದ್ಯಾರ್ಥಿಯಾಗಿರುತ್ತಾನೆ ಅವನು ಸಾಲೆಯಲ್ಲಿ ಅಧ್ಯಯನ ಮಾಡುವದನ್ನು ಬಿಟ್ಟ ಕೂಡಲೆ ವಿದ್ಯಾರ್ಥಿಯೆಂಬ ತನ್ನ ಗೌರವದ ಬಿರುದನ್ನು ತ್ಯಜಿಸಿದನೆಂದು ತಿಳಿಯಲಾಗದು. ಅವನು ಮನೆಯನ್ನು ಸೇರಿದ ಬಳಿಕ ತನ್ನ ಉದ್ಯೋಗದ ಸಂಬಂಧದಿಂದಲೂ ಪ್ರಪಂಚದಲ್ಲಿ ತನ್ನ ಆಯುಷ್ಯವನ್ನೂ ಕಳೆಯುವ ತರದ ಸಂಬಂಧದಿಂದಲೂ ಅನೇಕ ಹೊಸ ಹೊಸ ಸಂಗತಿಗಳನ್ನೂ ಶಿಕ್ಷಕರಿಂದ ಸಂಗ್ರಹಿಸಿಕೊಳ್ಳಬೇಕಾಗುವದು. ಆದ್ದರಿಂಧ ಅವನು ವಸ್ತುತಃ ಶಾಲಾಗ್ರಹದಲ್ಲಿ ಅಧ್ಯಯನ ಮಾಡುವದನು ಬಿಟ್ಟಿದ್ದರೂ ಪ್ರಪಂಚವೆಂಬ ಅಗಾಧವಾದ ಮಠದಲ್ಲಿ ಅನೇಕ ವಿಷಯದಲ್ಲಿ ವಿಶಾರದರಾದ ಮಹಾನ್ ಮಹಾನ್ ಗುರುಗಳ ಬಳಿಯಲ್ಲಿ ಅಧ್ಯಯನ ಮಾಡುತ್ತಿರುತ್ತಾನೆಂತಲೇ ಹೇಳತಕ್ಕದ್ದು. ನಮ್ಮ ಪ್ರಸ್ತುತದ ವಿಷಯುವು ಯಾವತ್ತೂ ಆಬಾಲವೃದ್ಧರಿಗೆ ಅವಶ್ಯವಿರುತ್ತದೆಂದು ಹೇಳಲು ಬಾಧವಿಲ್ಲ

ನಮ್ಮ ಪೂರ್ವಜರು ಜ್ಞಾನಾರ್ಜನೆಯ ಮಾರ್ಗದಲ್ಲಿ ಮೂರು ಮೆಟ್ಟಗಳನ್ನು ಕಲ್ಪಿಸಿರುವರು ಅವುಗಳು (೧) ಶ್ರವಣ ಅಂದರೆ ಕೇಳೋಣ ಇದರಲ್ಲಿ ವಾಚನ ಅವಲೋಕನ ಮೊದಲಾದ ಇಂದ್ರಿಯ ದ್ವಾರದಿಂದಾಗುವ ವಿಷಯ ಜ್ಞಾನವು ಸಮಾವೇಶವಾಗುವದು. (೨) ಮನನ (೩) ನಿದಿಧ್ಯಾಸ ಈ ಮೂರು ಮೆಟ್ಟುಗಳನ್ನು ಕ್ರಮವಾಗಿ ಏರಬೇಕೆಂಬದು ಸ್ಪಷ್ಟವೇ ಒಂದು ಮೆಟ್ಟನ್ನು ಬಿಟ್ಟು ಮೇಲಿನ ಮೆಟ್ಟಿಗೆ ಏರಬಯಸುವವನು ಕಷ್ಟಪಡುವನೆಂಬದಕ್ಕೆ ಸಂಶಯವಿಲ್ಲ ಕ್ರಮವಾಗಿ ಮೆಟ್ಟುಗಳನ್ನೇರುತ್ತ ಮೂರನೇ ಮೆಟ್ಟನ್ನು ಏರಿದವ

ನು ನಿಜವಾದ ಜ್ಞಾನ ಘನಸಂಪನ್ನನಾಗುವನೆಂದು ಹೇಳಬ ಹುದು. ಆದರೆ ಪ್ರಸ್ತುತದ ವಿದ್ಯಾರ್ಥಿಯು ಪ್ರಥಮ ಸೋಪಾನವನ್ನು ಹತ್ತಿದ ಕೂಡಲೆ ದಣಿದು ಕುಳಿತುಕೊಳ್ಳುತ್ತಾನೆ. ಇಲ್ಲಿಗೇ ತನ್ನ ಇತಿ ಕರ್ತವ್ಯವು ಮುಗಿಯಿತೆಂದು ಭಾವಿಸುತ್ತಾನೆ. ಮತ್ತು ತಾನು ಜ್ಞಾನ ಘನಸಂಪನ್ನನಾದೆನೆಂದು ನಂಬುತ್ತಾನೆ. ಈ ಬಗೆಯ ಭ್ರಾಂತಿಗಳಿಂದ ಉನ್ಮತ್ತನಾದ ಮನುಷ್ಯನು ತಾನು ಕೇವಲ ಭಾರವಾಹಕ ಅವಸ್ಥೆಯಲ್ಲಿದ್ದೇನೆಂಬುದನ್ನು ಮರೆತು ಜನರಲ್ಲಿ ತನ್ನ ಪಾಂಡಿತ್ಯವನ್ನು ಮೆರೆಯಲಾರಂಭಿಸುತ್ತಾನೆ. ಇಂಥವನ ವ್ಯಾಖ್ಯಾನಗಳಿಂದ ಸತ್ಯಜ್ಞಾನ ಸಂಸ್ಕಾರದಿಂದುಂಟಾಗುವ ಸುಪಕ್ವ ವಿಚಾರ ಪರಂಪರೆಯೂ, ಆ ಪರಂಪರೆಗೆ ಅನುಗುಣವಾದ ಅವನ ಆಚಾರ ವಿಚಾರಗಳೂ, ಸುಸಂಸ್ಕೃತವಾದ ಬುದ್ಧಿ ಪ್ರಾಗಲ್ಭ್ಯವೂ ಅವನಲ್ಲಿ ತೋರಿಕೆಯವುಗಳಾಗಿ ಕಾಣಿಸಿಕೊಂಡು ಅವನನ್ನು ನಿಂದೆಗೆ ಗುರಿಮಾಡುತ್ತವೆ. ಇದಲ್ಲದೆ ಜನರಲ್ಲಿ ಅವನ ವರ್ಚಸ್ಸು ನೆಲೆಗೊಳ್ಳುವದಿಲ್ಲ. ಅವನ ಶಿಕ್ಷಣದ ಪರಿಣಾಮವು ಜನ ಮನದಲ್ಲಿ ಉಂಟಾಗುವದಿಲ್ಲ. ಇಷ್ಟೇ ಅಲ್ಲ. ನಿಜವಾದ ವಿದ್ಯೆಯಿಂದ ಅವನ ಸ್ವಂತದ ಐಹಿಕಾಮುಷ್ಮಿಕ ಕಾರ್ಯಗಳಾದರೂ ಕೈಗೂಡುವದಿಲ್ಲ ಹೀಗಾಗಿ ಇವನ ವಿದ್ಯೆಯು ಒಟ್ಟಿಗೆ ಜನ್ಮವು ಇತ್ತ ಪರೋಪಕಾರಕ್ಕೂ ಅತ್ತ ಸ್ವಾರ್ಥ ಸಾಧನೆಗೂ ಅರ್ಹವಾಗದೆ ನಿರರ್ಥಕವಾಗುತ್ತದೆ. ಆದ್ದರಿಂದ ಮಕ್ಕಳೆ ನೀವು ಕಲಿಯುವಾಗ ಜ್ಞಾನಾರ್ಜನೆಯ ಸೋಪಾನಪರಂಪರೆಗಳನ್ನು ತಿಳಕೊಂಡು ಕಡೆಯ ಮೆಟ್ಟಿಗೆ ಬಂದ ಹೊರತು, ನಿಮ್ಮ ಹಾಗೂ ನಿಮ್ಮ ದೇಶ ಬಾಂಧವರ ಹಿತವು ಸಾಧಿಸದೆಂದು ನಿಜವಾಗಿ ತಿಳಿಯಿರಿ. ಈ ಸಂಗತಿಗೆ ಒಂದು ದೃಷ್ಟಾಂತವನ್ನು ಕೊಡುತ್ತೇನೆ. ಅಂದರೆ ನಿಮಗೆ ಈ ಸೋಪಾನ ಪರಂಪರೆಯ ಮಹತ್ವವು ತಿಳಿಯುವದು.

ನೀವು ಆಹಾರವನ್ನು ತಕ್ಕೊಳ್ಳುವಿರಷ್ಟೇ. ಇಷ್ಟೇ ಕೃತಿಯಿಂದ ನಿಮ್ಮ ಶರೀರ ಸಾಮರ್ಥ್ಯವು ಬೆಳೆಯುದೆಂಬುದು ನಿಮಗೆ ಗೊತ್ತಿರುವದು. ಆ ತಿಂದ ಅನ್ನವು ಅನ್ನಾಶಯದಲ್ಲಿ ಪಚನವಾಗಿ ಹಾಲಿನಂಥ ದ್ರವ ರೂಪವನ್ನು ಹೊಂದಿ ವೈ

ತುಂಬಾ ಹರಿದಾಡುತ್ತ ರಕ್ತ ರೂಪವನ್ನು ಧಾರಣ ಮಾಡುವ
ದು. ಹಾಗೂ ಆ ಆಹಾರದೊಳಗಿನ ನಿರುಪಯುಕ್ತ ಪದಾರ್ಥವ
ನ್ನು ಶರೀರವು ಹೊರದೂಡುವದು. ಇಷ್ಟು ಕಾರ್ಯವು ಶರೀ
ರದಲ್ಲಿ ಆಯಾ ಅವಯವಗಳಿಂದ ಯಥಾರ್ಥವಾಗಿ ಸಾಗಿದರೆ
ಮಾತ್ರ ಶರೀರಕ್ಕೆ ಬಲಬರುವದು. ಇದು ಸರ್ವರಿಗೂ ಅ
ನುಭವಸಿದ್ಧಸಂಗತಿಯು. ಜ್ಞಾನ ಭೋಜನದ ಬಗೆಯಾದ
ರೂ ಹೀಗೆಯೇ ವುಂಟು ಕಿವಿ, ಕಣ್ಣು, ನಾಲಿಗೆ ಮುಂತಾದ
ವಿಷಯಜ್ಞಾನದ ಮಾರ್ಗಗಳಿಂದ ಇಂದ್ರಿಯಗಳಿಂದ ಗ್ರಹಿಸಿ
ದ ವಿಷಯವು ಬಾಯಿಂದ ತಿಂದು ನುಂಗಿದ ಆಹಾರವಾಗಿರುವ
ದೆಂದು ತಿಳಿಯಿರಿ. ಬಳಿಕ ಅನ್ನದ ಪಚನ ಕ್ರಿಯೆಯು ನಡೆದಂ
ತೆ, ಆ ಗ್ರಹಿಸಿದ ವಿಷಯವನ್ನು ಮನನವೆಂಬ ಜ್ಞಾನಪಚನ
ಕೋಶಕ್ಕೆ ಒಳಪಡಿಸಿರಿ.

ಈ ಮನಸಿನ ಪಚನಕೋಶದಲ್ಲಿ ಸೇರಿದ ವಿಷಯವು ಪ
ಚನವಾಗುವ ಸ್ಥಳವು ಮನಸಿನ ಭಾಗವಾದ ಬುದ್ಧಿಕೋಶ
ವೆನಿಸುತ್ತದೆ. ಈ ಕೋಶದಲ್ಲಿ ಬಿದ್ದ ಬಳಿಕ ನೀವು ಸಾರಾ
ಸಾರ ವೆಂಬ ನಿಮ್ಮ ಬುದ್ಧಿ ಶಕ್ತಿಯ ಸಹಾಯದಿಂದ ಪಾಚಕ
ಅಪಾಚಕ ವಿಷಯಗಳನ್ನು ಅಂದರೆ ಇಷ್ಟ ಅನಿಷ್ಟ ಭಾಗಗಳ
ನ್ನು ಕಂಡು ಹಿಡಿದು ಮನಸ್ಸು ಧಾರಣೆಗೆ ಇಷ್ಟವಾದ ಭಾಗಗ
ವನ್ನೇ ಪಚನ ಕ್ರಿಯೆಗೆ ಒಳಪಡಿಸಿ ಅದರಿಂದ ಪೋಷಕ ರಸ
ವುಂಟಾಗುವಂತೆ ಮಾಡಿ ಆ ರಸದಿಂದ ನಿಮ್ಮ ಮನವನು
ಪೋಷಿಸಿಕೊಳ್ಳಿರಿ. ಅನಿಷ್ಟ ಅಂದರೆ ಪಚನವಾಗದಂಥ ವಿಷ
ಯವನ್ನು ಮಲದ್ವಾರದಿಂದ ಹೊರಗೆ ಹಾಕಿರಿ. ಈ ಕಾ
ರ್ಯ ನಿರ್ವಾಹಕ್ಕೆ ನಿಗ್ರಹ ಶಕ್ತಿಯು ಬಲವತ್ತರವಾಗಿರ
ಬೇಕೆಂಬದು ಸ್ಪಷ್ಟವದೆ. ಇದನ್ನು ಸಂಗ್ರಹಿಸಲಿಕ್ಕೆ ಬೇಕು
ಈ ಮೇರೆಗೆ ಪಕ್ವವಾದ ವಿಷಯದಿಂದ ಉತ್ಪನ್ನವಾದ ರಸ
ವು ಸತ್ಯಜ್ಞಾನವೆನಿಸುವದು. ಬಳಿಕ ಇದೇ ಜ್ಞಾನವನ್ನು ಯಥಾ
ಪಾಗಲು ಚಿಂತನೆಯಿಂದ ದೃಢಪಡಿಸಿಕೊಳ್ಳುವೇ ನಿದಿಧ್ಯಾ
ಸವು.

ಈ ಮೇರೆಗೆ ವಿದ್ಯಾರ್ಜನೆಯನ್ನು ಮಾಡಿದ ವಿದ್ಯಾರ್ಥಿಯು ಲೋಕವಂದ್ಯನಾಗುವನಲ್ಲದೆ, ಮೋಕ್ಷಕ್ಕೂ ಪಾತ್ರನಾಗುತ್ತಾನೆ, ಕೇವಲ ಶಬ್ದಜ್ಞಾನದಿಂದ ತೃಪ್ತರಾಗುವದು ಸರಿಯಲ್ಲ ನಿಜವಾದವಿದ್ಯಾ ಸಂಸ್ಕಾರವು ಯಾವದೆಂಬದನ್ನು ಸ್ವಲ್ಪ ಶಬ್ದಗಳಿಂದ ಹೇಳುವದು ಸಾಧ್ಯವಲ್ಲ. ಮನುಷ್ಯನ ಮನೋವೃತ್ತಿಗಳು ಬಾಹ್ಯ ವಿಷಯಗಳಿಂದ ಮೂಢವಾಗದೆ, ಯಾವಾಗಲೂ ಸದ್ವಿಚಾರಗಳಲ್ಲಿ ನಿಸರ್ಗತಃ ಪ್ರವೃತ್ತವಾಗಿರುವದೇ ನಿಜವಾದ ಶಿಕ್ಷಣವೆಂದು ಹೇಳಲ್ಪಡುವದು. ಈ ವ್ಯಾಖ್ಯೆಯಾದರೂ ಅಷ್ಟು ಪೂರ್ಣವಾದದ್ದಲ್ಲವೆಂದು ಬಗೆದು ಇದರ ಕೆಳಗೊಂದು ಕಥೆಯನ್ನು ಬರೆಯುತ್ತೇವೆ. ಅದರೊಳಗಿನ ಸಾರದಿಂದ ನಮ್ಮ ವ್ಯಾಖ್ಯೆಯ ಅರ್ಥವು ಸ್ಪಷ್ಟವಾಗುವದು.

DEPARTMENTAL NOTICE.

ನೋಟೀಸು.

ಜಾ. ನಂ. ೭

ಪುಣೆ, ೧೮—೧೦—೦೩

ಮೊಹರಬಾನ ಏ॥ ಇ॥ ಸಾ॥ ಬಹಾದ್ದೂರ ದಕ್ಷಿಣಭಾಗ ಇವರ ಸನ್ನಿಧಿಗೆ—

ಅರ್ಜದಾರ ನರಹರ ನಾರಾಯಣ ದಾತಾರ, ಮುಂಬಯಿ ಇಲಾಖೆಯೊಳಗಿನ ಸರಕಾರೀ ಶಾಲೆಗಳಿಗೆ ಬೇಕಾಗುವಂಥ ನಕಾಶೆಗಳ ಮಕ್ತೇದಾರ ಮತ್ತು ಪ್ರಸಿದ್ಧ ಮಾಡುವವನ ವಿನಂತಿ ಯೇನಂದರೆ —

ಮುಂಬಯಿಯೊಳಗಿನ ಸರಕಾರೀ ಬುಕ್‌ಡಿಪೋ ಬಂದವಾದನಂತರ ಆ ಡೀಪೋದಲ್ಲಿದ್ದ ಯಾವತ್ತು ನಕಾಶೆಗಳನ್ನು ನಾನೇ ಖರೇದೀ ಮಾಡಿರುವೆನು. ಮುಂಬಯಿ ಇಲಾಖೆಯೊಳಗಿನ ಯಾವತ್ತೂ ಶಾಲೆಗಳಲ್ಲಿ ಸದ್ಯಕ್ಕೆ ಉಪಯೋಗಿಸಲ್ಪಟ್ಟ ಅಥವಾ ಮುಂದೆ ಉಪಯೋಗಿಸಲ್ಪಡುವ ನಕಾಶೆಗಳ ಸಂಬಂಧದಿಂದ ಮಿ. ಡಾಯರೆಕ್ಟರ ಸಾ॥ ಧೊರೆಗಳು ನನಗೆ ಮ

ಕಾರಣ ವಿನಯ ಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ ಮೆ॥ ರ ಕಡೆಯಿಂದ ಯಾವತ್ತೂ ಡಿ॥ ಎ ಇನಸ್ಪೆಕ್ಟರರಿಗೆ ಮತ್ತು ಮುನಸಿಪಾಲಿಟಿಗಳಿಗೆ ಮತ್ತು ಎಡೆಡ್ ಮತ್ತು ಅನ್ ಏಡೆಡ್ ಶಾಲಾಮಾಸ್ತರರಿಗೆ ತಮಗೆ ಬೇಕಾಗುವ ನಕಾಶಗಳನ್ನು ನನ್ನ ಕಡಿಯಿಂದಲೇ ಕೊಳ್ಳಬೇಕೆಂತ ಬರೆದು ಹೋಗಬೇಕು.

ಮೆ॥ ಡಾಯರೆಕ್ಟರ ಸಾ|| ರವರ ಕಡೆಗೆ ಬರೆದು ಕೊಟ್ಟ ಮುಚ್ಚಿ ಪತ್ರಕದಲ್ಲಿ ಕಬೂಲ ಪಟ್ಟ ಶರ್ತನಂತೆ ರು. ೨೫ ಅಥವಾ ಹೆಚ್ಚು ಕಿಮ್ಮತ್ತಿನ ನಕಾಶಗಳನ್ನು ಒಮ್ಮೆಗೇಲೇ ಕೊಂಡರೆ ಶೇಕಡಾ ೨೫ ರು. ಯಂತೆ ಕಮಿಶನ ದೊರೆಯುವದು.

ಮೇಲೆ ಕಾಣಿಸಲ್ಪಟ್ಟ ನಕಾಶೆಗಳ ಹೊರ್ತು ತಮ್ಮ ತಾಬೆಯೊಳಗಿನ ಶಾಲೆಗಳಿಗೆ ಬೇಕಾದಂಥ ಹೊಸ ನಕಾಶೆಗಳನ್ನಾದರೂ ನಾನು ಛಾಪಿಸಿಕೊಡುವೆನು- ಎಂತ ಬರಕೊಂಡ ವಿನಂತಿ ಅರ್ಜಿ.

ತಮ್ಮ ವಿಧೇಯ

ಸಹಿ ನರಹರ ನಾರಾಯಣ ದಾತಾರ

ಮ್ಯಾಪ್ ಕಾಂಟ್ರಾಕ್ಟರ ಪುಣೆ.

VERNACULER FINAL EXAMINATION.

ವ್ಹರ್ನ್ಯಾಕ್ಯುಲರ ಫಾಯನಲ ಪರೀಕ್ಷೆಯು.

ದಕ್ಷಿಣಭಾಗ

ನೋ ೬ ಸಾ ೬ ನು

ಮುಂಬಯಿ ಸರಕಾರದವರ ಗ್ಯಾಝೀಟನಲ್ಲಿ ಮೊದಲನೇ ಭಾಗದ ೮೩೩—೪ ಪಾನುಗಳ ಮೇಲೆ ತಾ. ೧೬ ಜುಲಾಯಿ ೧೯೦೩ನೇ ಇ. ದಿನ ಪ್ರಸಿದ್ಧ ಪಡಿಸಿದ ನಿಯಮಗಳಿಗೆ ಅನುಸರಿಸಿ ೧೯೦೪—೧೯೦೫ನೇ ಇಸ್ವಿಯಲ್ಲಿ ಆಗತಕ್ಕ ಪರೀಕ್ಷೆಗೆ ದಕ್ಷಿಣಭಾಗ (ಬೆಳಗಾಂವ, ಧಾರವಾಡ, ವಿಜಾಪೂರ, ಕಾರವಾರ, ರತ್ನಾಗಿರಿ ಮತ್ತು ಕುಲಾಬಾ) ದೊಳಗಿಂದ ಮತ್ತು ಕೊಲ್ಹಾಪೂರ ಮತ್ತು ಇತರ ದೇಶೀ ಸಂಸ್ಥಾನಗಳೊಳಗಿಂ

ದ ಬರತಕ್ಕ ಉಮೇದವಾರರ ಸಲುವಾಗಿ ಕೆಳಗೆ ಬರೆದ ಪುಸ್ತಕಗಳು ಆರಿಸಲ್ಪಟ್ಟವೆ.

೨. ಸದರೀ ಪರೀಕ್ಷೆಯು ಬೆಳಗಾಂವ ವಿಜಾಪುರ ಮತ್ತು ಕಾರವಾರ ಈ ಮೂರು ಸ್ಥಳಗಳಲ್ಲಿ ಮರಾಠಿ ಹಾಗು ಕನ್ನಡ ಭಾಷೆಗಳಲ್ಲಿ, ಧಾರವಾಡದಲ್ಲಿ ಕೇವಲ ಕನ್ನಡ ಭಾಷೆಯಲ್ಲಿ ಮತ್ತು ರತ್ನಾಗಿರಿ, ಕುಲಾಬಾ, ಮತ್ತು ಕೊಲ್ಹಾಪೂರ ಈ ಸ್ಥಳಗಳಲ್ಲಿ ಫಕ್ತ ಮರಾಠಿಯಲ್ಲಿ ನಡೆಯುವದು.

೩ ಧಾರವಾಡದಲ್ಲಿರತಕ್ಕಂಥ ಮರಾಠೀ ಫೈನಲ್ ಪರೀಕ್ಷೆಗೆ ಕೂಡತಕ್ಕ ಉಮೇದವಾರರು ಮ. ಎ. ಇ. ದ. ಭಾಗ ಇವರ ಅಪ್ಪಣೆ ಪಡಕೊಂಡು ಬೆಳಗಾವಿಯಲ್ಲಿ ಕೂಡಬೇಕು.

ಮರಾಠಿ.

೧. ಗದ್ಯ— ಹೊಸ ೭ನೇ ಕ್ರಮಿಕ ಪುಸ್ತಕ ಸಂಪೂರ್ಣ

೨. ಪದ್ಯ— ಹೊಸ ೭ನೇ ಕ್ರಮಿಕ ಪುಸ್ತಕದೊಳಗಿನ ಮೊದಲಿನ ೩೦೦ ಸಾಲಿನ ಅರ್ಥ ಹೇಳುವದು ಮತ್ತು ಅವುಗಳನ್ನು ಪಾಠ ಅಂಬುವದು

ಕನ್ನಡ.

೧. ಗದ್ಯ— ಹೊಸ ೭ನೇ ಕ್ರಮಿಕ ಪುಸ್ತಕ ಸಂಪೂರ್ಣ

೨. ಪದ್ಯ— ಹೊಸ ೭ನೇ ಕ್ರಮಿಕ ಪುಸ್ತಕದೊಳಗಿನ ಮೊದಲಿನ ೩೦೦ ಸಾಲುಗಳನ್ನು ಪಾಠ ಅನ್ನುವದು ಮತ್ತು ಅವುಗಳ ಅರ್ಥ ಹೇಳುವದು.

ಉರ್ದು.

ತನಬತನ ನಸೂಹ ಮೋಲ್ವಿ ನಝೀರ ಅಹಮ್ಮದ ಇವರು ಮಾಡಿದ್ದು.

ದಕ್ಷಿಣ ಭಾಗದ
ಎ. ಇ. ಸಾ. ರ ಕಚೇರಿ,
ಧಾರವಾಡ.
೨೩—೧೧—೧೯೦೩

(ಸಹಿ) R. B. KARANDIKAR.
ಎ. ಇ. ದಕ್ಷಿಣಭಾಗ.

MULKI EXAMINATION.

ಮುಲ್ಕೀ—ಪರೀಕ್ಷೆ.

ವ್ಹರನ್ಯಾಕ್ಯೂಲರ ಫೈನಲ ಪರೀಕ್ಷೆಯುನ್ನು ೧೮೦೭ನೇ ಇಸವಿಯಲ್ಲಿ ಹಳೆ ನೇಮುಗಳಂತೆ ಆಗಬೇಕೆಂಬ ಬಗ್ಗೆ

ವಿದ್ಯಾಖಾತೆ. ಮುಂಬೈ ಕೋಟೆ.

ನಂಬರ ೨೩೬೯ ೨೦ ದಿಶಂಬರ ೧೮೦೬

ಸರಕಾರಕ್ಕೆ ಡಾಯರೆಕ್ಟರ ಸಾ. ಬ. ರವರ ಪತ್ರ ನಂ. ೭೮೦೦ ತಾರೀಖು ೭ನೇ ದಿಶಂಬರ ೧೮೦೬ ಇ.

೧೮೦೭ ನೇ ಇಸವಿಯಲ್ಲಿ ಆಗುವ ವ್ಹರನ್ಯಾಕ್ಯೂಲರ ಪರೀಕ್ಷೆಯು ಹಳೆ ನಿಯಮುಗಳಂತೆ ಆಗುವದಕ್ಕೆ ಮಂಜೂರಿ ಸಿಗಬೇಕು. ನವಂಬರ ೧೮೦೫ನೇ ಇಸವಿ ೧೨ನೇ ತಾರೀಖಿನ ೧೮೪೧ ಸರಕಾರ ಠರಾವಿನ ಕುರಿತು ಈ ಸೂಚನೆ ಮಾಡಿದೆ

೨. ಸರಕಾರ ಠರಾವ ಆಗುವದಕ್ಕೆ ಮುಂಚೆ ಈ ಬಗ್ಗೆ ಒಂದು ನೋಟಿಸಿನ ಅವಶ್ಯಕತೆ ಇತ್ತು. ಮತ್ತು ಈ ಬಗ್ಗೆ ಎಲ್ಲ ಇನಸ್ಪೆಕಟರ ಸಾಹೇಬರವರಿಗೆ ಈ ಬಗ್ಗೆ ತಿಳಿಸಿದೆ. ಅಂದರೆ ಹಳೆ ನಿಯಮುಗಳಂತೆ ಪರೀಕ್ಷೆಯ ಬಗ್ಗೆ ನೋಟೀಸ ಕೊಡಬೇಕೆಂಬ ಬಗ್ಗೆ.

ಠರಾವ— ಮೆ. ಡಾಯರೆಕ್ಟರ ಸಾ. ಬ. ಸೂಚನೆ ಮಂಜೂರ.

ಸಹಿ ಎಸ್. ಎಮ್ ಎಡವರಡ್ಸ ಡಿಪೂಟಿ
ಸೆಕ್ರೆಟರಿ ಸಾ. ಸರಕಾರ.

ಸಂಬಂಧಿಸಿದ ಯಾವತ್ತರ ಮಾಹಿತಿಬಗ್ಗೆ ಪ್ರಸಿದ್ಧಿಸಲ್ಪಟ್ಟದೆ.

S. K. Rodd,
Principal.

QUESTION OF WURTH PRIZE EXAMINATION,

ವರ್ಥ್‌ಪ್ರೈಜ್ ಪರೀಕ್ಷೆ

ವ್ಯಾಕರಣ ಛಂದಸ್ಸು.

(೧) ಅ ಪರಿಭಾಷೆಯೆಂದರೇನು? ದರ್ಪಣಕಾರನು ಹೇಳಿದ ಅಥವಾ ಜ್ಞಾಪಿಸಿದ ನಾಲ್ಕಾರು ಪರಿಭಾಷೆಗಳನ್ನೂ ಅವುಗಳ ಪ್ರಯೋಜನವನ್ನೂ ಸ್ಫುಟಗೊಳಿಸಿರಿ. ೪

ಆ ದರ್ಪಣದಲ್ಲಿ ಹೇಳಿದ ಅನವಶ್ಯಕವಾದ ಸಂಜ್ಞೆಗಳನ್ನೂ ಹೇಳದಿರುವ ಅವಶ್ಯವಾದ ಸಂಜ್ಞೆಗಳನ್ನೂ ತೋರಿಸಿ, ಅವುಗಳ ಪ್ರಯೋಜನಾ ಪ್ರಯೋಜನತೆಗಳನ್ನು ಸಮರ್ಥಿಸಿರಿ; ೫

(೨) ಅ ಱ ೞ ಕುಳಗಳು ಎಂದಿನಿಂದ ಯಾವವರೆಗೆ ಉಪಯೋಗಿಸಲ್ಪಡುತ್ತಿದ್ದವು. ದರ್ಪಣ ಕಾರನ ಕಾಲದಲ್ಲಿ ಇವುಗಳ ಉಪಯೋಗ ವಿಷಯದಲ್ಲಿ ಜಿಜ್ಞಾಸವೇನಿತ್ತು ಏಂಬದನ್ನು ಸಹೇತುಕವಾಗಿ ಚರ್ಚಿಸಿ ಸಿದ್ಧಾಂತ ಮಾಡಿರಿ. ೪

ಆ ಸಂಜ್ಞೆ ಮೊದಲಾದ ಪ್ರಕರಣಗಳಲ್ಲಿ ಹೇಳಿದ ಅನೇಕ ಸೂತ್ರಗಳು ಸಂಧಿಪ್ರಕರಣಕ್ಕೆ ಸೇರತಕ್ಕವು ಆವಾವವು? ಇದರಂತೆ ಪ್ರಕರಣವ್ಯತ್ಯಯವನ್ನೂ ಇದ್ದರೆ ಹಲವನ್ನು ಸೂಚಿಸಿರಿ. ೫

(೩) ಅ ಹಳಗನ್ನಡ ವ್ಯಾಕರಣದಲ್ಲಿ ಹೇಳಿದ ಹೊಸಗನ್ನಡಕ್ಕೆ ಮಾತ್ರ ಸಂಬಂಧಿಸಿದ ಸಂಧಿನಿಯಮಗಳಾವುವು. ಅವು ಹೇಗೆ ಬಂದವು. ೨

ಆ ಹಳಗನ್ನಡದ ನಾಮವಿಭಕ್ತಿಗಳು ಹೇಗೆಹೇಗೆ ರೂಪಾಂತರಹೊಂದಿ ಹೊಸಗನ್ನಡದ ವಿಭಕ್ತಿರೂಪಗ

(೪) ಅ ಬಂದಿನಿಸು, ಮೊಸರನ್ನ, ಬೇಗಬಂದ, ... ಕೋ
ಳು, ದುಡ್ಡುಕಡಿಮೆ ಆಣೆ, ಬಂಬಯ್ಯ... ತೂಂ
ಭತ್ತೊಂದು, ಕಿಳ್ಳಿವಳವಳ್, ಪೊಕ್ಕುವೆಳಗಂ, ಹಿ
ಮಗವಿ, ಇವುಗಳ ಸಮಾಸ ವಿಧಾಯಕ ಶಸ್ತ್ರವ
ನ್ನೂ ವಿಗ್ರಹವನ್ನೂ ಹೇಳಿರಿ! ೯

ಆ ಬಡಮತಿ, ಸೌಖ್ಯತರವನ್ನಣೆ, ಮಿತ್ರೋದಯಾ
ತ್ಸರದೊಳ್ ಹೈಡಿಂಬ, ಕರ್ಣ, ಆಗೊಡೆ ತವಾನು
ಗ್ರಹದಿಂದ, ಸಾಮರ್ಥ್ಯಪುರುಷರು, ಈ ಪ್ರಯೋ
ಗಗಳಲ್ಲಿ ದೋಷಗಳೇನು, ಕಾರಣ ಸಹಿತವಾಗಿ
ಹೇಳಿರಿ! ೧೦

(೫) ಅ ವಳ, ಕಾಟಿ, ಕುಳಿ, ಆಳಿ, ಉಳಿಗ, ಇಗ, ಉಗ್
ಅಣ, ವಂತ, ಗ, ಆಯ್ತ, ಈ ತದ್ಧಿತ ಪ್ರತ್ಯಯಗ
ಳು ಸಂಸ್ಕೃತ ಪ್ರತ್ಯಯದ ಅಥವಾ ಶಬ್ದಗಳ ಅಥ
ವಾ ಕನ್ನಡಶಬ್ದದ ರೂಪಾಂತರವೆಂಬುದನ್ನು ಯಾ
ವ ರೀತಿಯಿಂದ ಸ್ಥಿರಪಡಿಸಬಹುದೇ? ಹೇಗೆ? ೧೪

ಆ ಅರಸಿನಮನ, ಕಾಗೆಗಳಗುಂಪು, ಬೆಳಗಿನಕೆಲಸ,
ಹಣವು ಈತಂಗೆ ಇರ್ದುದು, ಕೆಲದೆಪುಟ್ಟದಂ-
ನುಡಿಗಟ್ಟನ್ನು ಓದಿದವನು-ಬಂಗಾರದವಿಕಾರ ಇ
ವುಗಳ ತದ್ಧಿತಾಂತರೂಪಗಳನ್ನೂ ಕೃದಂತಗಳಿ
ಗೂ ಸಮಾಸಗಳಿಗೂ ತದ್ಧಿತಪ್ರತ್ಯಯ ಸೇರಿದ ಅ
ಚ್ಚಗನ್ನಡ ಶಬ್ದಗಳಿದ್ದರೆ ಅವನ್ನೂ ಬರೆಯಿರಿ. ೬

(೬) ಅ ಮುಷ್ಟಿಮುಷ್ಟಿ ಕೆಚ್ಚನೆ-(ಪು. ಏ.) ಪತ್ತು (ಪುಸ್ತ್ರೀ
ಬ) ತರುಧಾತುವಿನ ಭೂತಕಾಲ (ಪ್ರ. ಸ್ತ್ರೀ. ಏ.)
ಕೃದಂತರೂಪ! ಇವುಗಳ ಸಪ್ತವಿಭಕ್ತಿಯ ಪರಿಸಿ
ಷ್ಟನ್ನ ರೂಪಗಳನ್ನೂ ಮಾತ್ರ ಬರೆಯಿರಿ; ೫

ಆ ಉಂಟು- ತಮ್ಮು ತಯ್ವರ್- ಇಳಿಯುಂಬೊಳ್ಳು-
ದಾಂಗುಡಿ-ಕೆಚಿವಟ-ಮಣ್ಣುಳಿಗಂ ಇವುಗಳ ಪ್ರಕ್ರಿ
ಯೆಯನ್ನು ಆಯಾಸೂತ್ರೋಪನ್ಯಾಸ ಪೂರ್ವಕವಾ
ಗಿ ಅನುವಾದ ಮಾಡಿರಿ. ೮

(೭) ಅ ಗುಣಮಾಣಮಿಲ್ಲ, ತರವೇಱ್ಮಾಣಿಕ್ಯ ಭಂಡಾರದ
ಪ್ರಟಿಕೆಗಳ್ಗಂ, ನೀಲಗ್ರೀವರುಮಾತ ರಿಲ್ಲ. ತಿದಿಯೊ
ತ್ತುವ ಕಮ್ಮ ಉಂಬೊಲಿರ್ದಂಭೀವಂ, ಅಟ'ದಿಂಗ
ಳಾಯುವೃಂಟನೆ ಮುರುಗುವುದುಂ, ಎಲೆಸರ್ವೇಶಾ
ನಿನ್ನನಿಜಮಂ ತೋಱ', ಓಸರಿಸಿದಜವನಿಕೆಯೊಡ
ನೋಸರಿಸಿದಂ, ಈ ಪ್ರಯೋಗಗಳು ಯಾವ ಸಂ
ದರ್ಭದಲ್ಲಿ ಉದಾಹೃತವಾಗಿವೆ. ೭

ಇ ಉಣಲ್ ಇಚ್ಛೆ, ಪಶುಕರೆಯಲ್ ಬಂದಂ, ನೀವಿೂಬ
ನಮಂ ಪುಗಲ್ವೇಡಂ, ಅಕಾರ್ಯಮಂ ಮಾಡಲ್,
ವಸಂತದ ಪುಗಿಲೋಳ್, ರಮಣಿನೋಡಲ್ ಇನಿ
ಯಂನಲಿದಂ, ಉಣಲಿರ್ಪುದು, ಕೇಳಲ್'ಸಮರ್ಥಂ'
ಕೇಳಲ್'ತಕ್ಕ-ನಿನ್ನಿಂನೋಡಲ್ ಪಟ್ಟುದು--ಈ ಪ್ರ
ಯೋಗಗಳಲ್ಲಿರುವ ಅಲ್, ಎಂಬುದರ ಅರ್ಥವಿಶೇ
ಷವನ್ನು ಅನುಶಾಸನದೊಡನೆ ಹೇಳಿರಿ, ೮

(೮) ಅ ಮದಾಲಸಾವೃತ್ತದ ಒಂದೇ ಪಾದದಲ್ಲಿ "ತ್ರಿಷ್ಟು
ಪ್" ಛಂದಸ್ಸಿನ ಒಂದುವೃತ್ತದ ಪಾದವೂ "ಬೃ
ಹತೀ" ಛಂದಸ್ಸಿನ ಒಂದುವೃತ್ತದ ಪಾದವೂ ಇರು
ವುದೆಂದು ಪ್ರತಿಪಾದನೆ ಮಾಡಿರಿ, "ಬೃಹತೀ" ಛಂ
ದಸ್ಸಿನಲ್ಲಿ ಆವೃತವು ಏಪ್ಪಟ್ಟನೇದು, 'ತ್ರಿಷ್ಟುಪ್' ಛಂ
ದಸ್ಸಿನ ಆವೃತ್ತದ ಪ್ರಸ್ತಾರವೆಂತು? ೧೪

ಇ ಪರಿಯುಪಟ್ಟಣಮಂ ಪೊಕ್ಕು। ವರಸಭೆಯಂ ಮೋ
ಳ್ಪೈಸಿ ನಾಲ್ವರೊಳಾರುಮುಂ ॥೧॥
ನಾಕಮತಂಗಜ ಮುಂಬರಾದಗಾವಾರಿಸ್ಥಿತಾ ॥
ಸ್ತ್ರೋಕಶುಶೇಶಯಮಂ ಕರಾಗ್ರದಿಂದಂ ಕೀಳು
ತಾ ॥೨॥

(೯) ಕವಿತೆಯ ಭಾಗದಲ್ಲಿರುವ ಛಂದೋದೋಷಗಳನ್ನು
ಕಾರಣ ಸಹಿತ ತಿದ್ದಿ ಬರೆಯಿರಿ.

ಕೆಳಗೆ ಬರೆದ ಶಿಕ್ಷಾ ಖಾತೆಯಿಂದ ಇನಾಮಿಗಾಗಿ, ಲಾಯಬ್ರರಿಗೂ ಮಂಜೂರಾದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು.

ಮೂಲ ಬೆಲೆ.		ಕಡಿಮೆ ಮಾಡಿದ ಬೆಲೆ.
ರೂ. ಆ.		ರೂ. ಆ.
೦—೯	ಕವಿತೆಯ ಎರಡನೇ ಪುಸ್ತಕ (2 nd Book of Poetry)	೦—೭
೦—೮	ಕ್ಷೇತ್ರವ್ಯವಹಾರಮಿತಿ (Practical Geometry)	೦—೪
೦—೧೨	„ ಪ್ರದೇಶಿಕಾ (Geometrical figures)	೦—೧
೦—೩	ಯಂತ್ರಶಾಸ್ತ್ರ (Mechanics)	೦—೯
೨—೦	ಅರ್ಥಶಾಸ್ತ್ರ (Political Economy)	೧—೦
೦—೨	ಜಗತ್ತಿನ ಇತಿಹಾಸ (Universal History)	೦—೧
೩—೫		೧—೧೧
	ವ್ಹಿ. ಪಿ. ಕಮೀಶನ	೦—೧
		೧—೧೨

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳನ್ನು ಒಮ್ಮೇಲೆ ತಕ್ಕೊಂಡರೆ ಹಸ್ತ ರೂ. ೧(೧೨ ಆಣೆ) ಬೀಳುವದು. ಟಪಾಲ ಹಾಸಲ ಬೀಳುವದಿಲ್ಲ. ೧೦ ರೂ. ಯಿಂದ ೨೫ ರೂಪಾಯಿಯ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೧೦ ರಂತೆ ಮತ್ತು ೨೫ ಕ್ಕಿಂತ ಹೆಚ್ಚಿಗೆ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೨೦ ರಂತೆ ಕಮೀಶನ್ನು ದೊರೆಯುವದು.

ಪುಸ್ತಕಗಳು ಕೆಳಗೆ ಬರೆದವರಲ್ಲಿ ದೊರೆಯುವವು.

೧. ಮೆಸರ್ಸ ಎಸ್. ಎಸ್. ತ್ರಿಪಾಠಿ ಆ್ಯಂಡ ಕಂಪನಿ ಪ್ರಿನ್ಸೆಸ ರೋಡ ಮುಂಬಯಿ.

೨. ಧಿ ಗುಜರಾತ ಪ್ರಿಂಟಿಂಗ ಪ್ರೆಸ. ಫೋರ್ಟ ಸರ್ಕಲ ಮುಂಬಯಿ

೩. ರಾ. ಕರಸನದಾಸ ನಾರಾಯಣದಾಸ ಬುಕ್ಸೇಲರ ಸುರತ.

೪. ಮೆಸರ್ಸ ಪರಿಕ್ಷೆಂದ್ರ ಆ್ಯಂಡ ಕಂಪನಿ ಜಕೇರವಾಡಿ ಠಾಕುರದ್ವಾರ ರೋಡ ಮುಂಬಯಿ.

REGISTERED No B. 19

ಹೊಸಪದ್ಧತಿಯ ಭೂಮಿತಿಯು.

ಮಿ. ಕಾಪ್ಸನ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯ
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ ಯು-೧೧೨ಅ.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮಿಶನ್ ಕೊಡಲಾದೀತು.

ಪಿ. ಎಸ್. ಜಂದಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ.

ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆತಂತಾಯಿತು.

ಎಮ್. ಹಿರಿಯಣ್ಣ ಎಮ್. ಎ. ಎಲ್. ಟಿ. ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್‌ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಕಲೆ ಗಣಿತ ಗಣಿತ ಉಪಪತ್ತಿ, ವಗೈರೆ ಪುಸ್ತಕಗಳೂ ಇವೆ. ಶೋಭೆಯುಳ್ಳ ಮಾಸಿಗಳ ಬೆಳವಣಿಗೆ. ತೈಲು ಹೊಸ ಪುಸ್ತಕಗಳ ಹೊತ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ಸ. ಅಬ್ದುಲ್
ಹವಿಬಾದ ಮುಂ। ಸೌದಾಗರ

ಪ್ರಕಟನೆ.

ನಮ್ಮ ಬುಕ್ ಡಿಪೋದಲ್ಲಿ ಸರಕಾರಿ ಮೊದಲಿನ ಕನ್ನಡ ಒಂ ಕಲಿಪಿ ಕಾಂಗ್ರೆಸಿನಿಂದ ಟೀಸರಿಗೆ ಮೊದಲಿನ ಕನ್ನಡ ಟೆಕ್ಸ್ಟಗಳು ಮತ್ತು ಸರಕಾರಿ ನೂತನ ಕ್ರಮಿಕ ಪುಸ್ತಕಗಳು ಪುರಾಣ, ಇತಿಹಾಸ, ಕಾವ್ಯ, ಕಾದಂಬರಿ, ವೇದಾಂತ ಮುಂತಾದ ಅನೇಕ ವಿಧದ ಪುಸ್ತಕಗಳು ಮಾರಾಟಕ್ಕೆ ಸಿಗುತ್ತವೆ. ಸರಕಾರಿ ಮೊದಲಿನ ಟೆಕ್ಸ್ಟಗಳಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ನೂತನ ಕ್ರಮಿಕ ಪುಸ್ತಕಗಳಿಗೆ ೩ ಆಣೆಯಂತೆಯೂ ಕಮಿಶನ್ ಸಿಗುವದು.

ಹುಬ್ಬಳ್ಳಿ
ತಾ॥ ೧-೩-೨೭ } ವಿರೂಪಾಕ್ಷಯ್ಯ ತೇಗೂರ ಮಠದ
ಬುಕ್‌ಡಿಪೋ ಹುಬ್ಬಳ್ಳಿ

ಕನ್ನಡ ಶಾಲಾಪತ್ರ.

KANARESE SCHOOL PAPER.

ಪುಸ್ತಕ ೪೪] ಮಾರ್ಚ ೧೯೦೮. [ಸಂಚಿಕೆ ೩.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೪೯–೫೨
೨. ಗವ್ಹರ್ನರ ಧೊರೆಗಳ ಭಾಷಣವು ೫೩–೫೭
೩. ಲೋಹಚುಂಬಕ ೫೭–೬೦
೪. ರಾಜಸ್ಥಾನದ ಇತಿಹಾಸವು. ೬೦–೬೩
೫. ಹೊಸಶೋಧವು ೬೩–೬೭
೬. ಸತ್ ಶಿಕ್ಷಣ. ೬೭–೬೯
೭. ನೋಟೀಸು. ೬೯–೭೦
೮. ಪತ್ರವ್ಯವಹಾರವು. ೭೦–೭೨

CONTENTS.

1. Educational Intelligence and Useful Notes 49-52
2. The Governor's Speech in Convocation. 53-57
3. Magnet. 57-60
4. The History of Rajasthan. 60-63
5. New Invention. 63-67
6. Valuable Education. 67-69
7. Departmental Notice 69-70
8. Correspondence. 70-72

DHARWAR:
PRINTED AT THE KARNATIC BOOK DEPOT
1908

REGISTERED No. B.

REGISTERED No B. 19.

ಹೊಸಪದ್ಧತಿಯ ಭೂಮಿತಿಯು

ಎ. ಕಾನ್ಫರೆನ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯು
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ್ರಯ- ೧೧೨ಆ.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗ ಶೇ. ೧೦ ರಂತೆ ಕಮಿಶನ್ ಕೊಡಲಾದೀತು.

ಪಿ. ಎಸ್. ಜಂದಾವರೆಕರ, ಬಿ. ಎ. ಹಾಯಸ್ಕೂಲ ಧಾರವಾಡ.

ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆತಂತಾಯಿತು

ಎಮ್. ಹಿರಿಯಣ್ಣ ಎಮ್. ಎ. ಎಲ. ಟಿ. ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್ ಡಿಪೋ

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾಸ್ತರ [illegible] ಕಥೆಗಳೂ, ಪುರಾಣ ಗೋಳಶಾಸ್ತ್ರ ಗಣಿತ, ಗಣಿತ ಉಪಪತ್ತಿ ಮುದ್ರೆ ಪುಸ್ತಕಗಳೂ ಇವೆ. ಶೋಭೆಯುಳ್ಳ ವಿವಾಹಗಳ ಬೆಳವಣಿಗೆ. ತೈಲು ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರೂ. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ಮ. ಅಬ್ದುಲ್
ಹಮೀದ ಮಾ. ಸೌದಾಗರ

ಪ್ರಕಟನೆ.

ನಮ್ಮ ಬುಕ್ ಡಿಪೋದಲ್ಲಿ ಸರಕಾರಿ ಮೊದಲನ [illegible] ಕಳಪಿ ಹಾಂಗು ೧ನೇದ ಇಯತ್ತೆಗೆ ಮೊದಲಿನ ಕನ್ನಡ ಪುಸ್ತಕಗಳು ಮತ್ತು ಸರಕಾರಿ ನಮ್ಮನ ಕ್ರಮಿಕ ಪುಸ್ತಕಗಳು ಪುರಾಣ, ಇತಿಹಾಸ, ಕಾವ್ಯ, ಕಾದಂಬರಿ, ವೇದ, ಗಣ ಮುಂತಾದ ಅನೇಕ ವಿಧದ ಪುಸ್ತಕಗಳು ಮಾರಾಟಕ್ಕೆ ಸಿಗುತ್ತವೆ. ಸರಕಾರಿ ಕ್ರಮಿಕ ಬುಕ್ಕುಗಳಿಗೆ ೧ ರೂಪಾಯಿಗೆ ೨ ಆಣೆಯಂತೆಯೂ ನೂತನ ಕ್ರಮಿಕ ಪುಸ್ತಕಗಳಿಗೆ ೩ ಆಣೆಯಂತೆಯೂ ಕಮಿಶನ್ ಸಿಗುವದು.

ಹುಬ್ಬಳ್ಳಿ } ವಿರೂಪಾಕ್ಷಯ್ಯ ತೇಗೂರ ಮಠದ
ತಾ|| ೧-೧೧-೨೭ } ಬುಕ್ ಡಿಪೋ ಹುಬ್ಬಳ್ಳಿ

ಕನ್ನಡಶಾಲಾಪತ್ರ.

KANARESE SCHOOL PAPER.

ಪುಸ್ತಕ ೪೪] ಮಾರ್ಚ ೧೯೦೮. [ಸಂಚಿಕೆ ೩.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೪೯-೫೨
೨. ಗವರ್ನರ ಧೊರೆಗಳ ಭಾಷಣವು ೫೩-೫೭
೩. ಲೋಹಚುಂಬಕ ೫೭-೬೦
೪. ರಾಜಸ್ಥಾನದ ಇತಿಹಾಸವು. ೬೦-೬೩
೫. ಹೊಸಶೋಧವು ೬೩-೬೭
೬. ಸತ್ ಶಿಕ್ಷಣ. ೬೭-೬೯
೭. ನೋಟೀಸು. ೬೯-೭೦
೮. ಪತ್ರವ್ಯವಹಾರವು. ೭೦-೭೨

CONTENTS.

1. Educational Intelligence and Useful Notes 49-52
2. The Governor's Speech in Convocation. 53-57
3. Magnet. 57-60
4. The History of Rajasthan. 60-63
5. New Invention. 63-67
6. Valuable Education. 67-69
7. Departmental Notice 69-70
8. Correspondence. 70-72

REGISTERED No. 1

DHARWAR:
PRINTED AT THE KARNATIC BOOK DEPOT
908

(ಕನ್ನಡ ಪಂಚಾಂಗಗಳು ೫ರೂ॥ ಯಿಗೆ ೧೦೦ ಪ್ರತಿ)

ನವಣೂರ ಪಂಚಾಂಗಗಳು

ಕೀಲಕನಾಮ ಸಂವತ್ಸರದ ಮರಾಠಿ ಪಂಚಾಂಗಗಳು ಮಾರಾಟಕ್ಕೆ ಸಿದ್ಧವಾಗಿವೆ. ದರ ಸಾವಿರಕ್ಕೆ ೩೦ ರೂ. ೫೦೦ ಕ್ಕೆ ೧೭॥ ರೂ. ೧೦೦ ಕ್ಕೆ ೪ ರೂ. ೧೦೦ ಕ್ಕಿಂತ ಕಡಿಮೆ ಕೊಂಡವರಿಗೆ ೫ ರೂ॥ ದಂತೆ ೧ ಕ್ಕೆ ೧ ಆಣೆ.

ಖಾನೋಳ್ಕರ ಮತ್ತು ಕಂಪನಿ

ಧಾರವಾಡ.

ಸನ್ ೧೯೦೮ನೇ ಇಸ್ವಿಯ ಡಾಯರಿಗಳು

ತೀರ ಸ್ವಲ್ಪ ಉಳಿದವೆ. ಕ್ಯಾಲಿಕೋಕವ್ವರು ೮ ಆಣೆ ಪೂರಾ ಕಟ್ಟಿಸಿದ್ದು ೪ ಆಣೆ. ಠೋಕವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಸಿಗುವದು.

ಶಾಲಾ ಪತ್ರಿಕೆ.

ಪದ್ಯಂ

ಶ್ರೀಯುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮಂ
ಬಯಸುತ್ತಂ ಪ್ರತಿವಾಸರದಾದಿಗೊಳವಿಚ್ಛೇದತ್ವಮಂ ಮಾಡಿಸಿ ॥
ನಯದಿಂದಿತ್ತಪವರ್ಗದಾವರ್ಗಸುಗುಣಂ ತೋರ್ಕೆಕ್ಕೈಕೊಂಬುದೈ ।
ದಯೆಯಿಂದೋಪವತಿದ್ವಾ ವೇಳ್ವ ಬುಧರ್ಜ್ಞಾನಾಭಿವೃದ್ಧಿಪ್ರಿಯರ್ಗೆ

ಪುಸ್ತಕ ೪೫.] ಮಾರ್ಚ—೧೯೦೮. [ಸಂಚಿಕೆ ೩

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಭೂಮಿಮೂಗ ಅಥವಾ ಭೈಮೂಗು ಎಂಬ ಕಾಳನ್ನು ಎಲ್ಲರೂ ಬಲ್ಲರು. ಇವು ಪೂರ್ವದಿಂದ ನಮ್ಮ ದೇಶದಲ್ಲಿಯೇ ಬೆಳೆಯುತ್ತಿದ್ದಂಥವುಗಳಲ್ಲ; ಇವು ಮೊದಲು ದಕ್ಷಿಣ ಅಮೇರಿಕದಿಂದ ಚೀನಕ್ಕೂ ಚೀನದಿಂದ ನಮ್ಮ ದೇಶಕ್ಕೂ ಬಂದವೆಂದು ಬಲ್ಲವರು ಹೇಳುವರು. ಕೆಲವರು ಆಫ್ರಿಕಾ ಖಂಡವು ಇವುಗಳ ಮೂಲಸ್ಥಾನವೆಂದು ಪ್ರತಿಪಾದಿಸುವರು. ಹ್ಯಾಗೇ ಇರಲಿ; ಇವು ಸುಮಾರು ೬೦ | ೭೦ ವರ್ಷದಿಂದ ನಮ್ಮ ಜನರಿಗೆ ಪರಿಚಯವಾಗಿರುವವು.

ಉಪಯೋಗವು—ಕೆಲವರು ಇವುಗಳನ್ನು ಹುರಿದು, ಕೆಲವರು ಹಾಗೇ ಹಸೇಪನ್ನೇ ತಿನ್ನುವರು. ಪಲ್ಯೆ, ಹುಗ್ಗಿ, ಕಾಯಿರಸಗಳಲ್ಲಿ ಹಾಕುವರು. ಆದರೆ ಇವುಗಳಿಂದ ಮುಖ್ಯವಾಗಿ ಎಣ್ಣೆಯನ್ನು ತೆಗೆಯುವರು. ಇವುಗಳಲ್ಲಿ ಎಣ್ಣೆಯ ಅಂಶವು ವಿಶೇಷ. ಈ ಎಣ್ಣೆಯಲ್ಲಿ ಸ್ನಿಗ್ಧತೆಯು ಹೆಚ್ಚಿರುವದರಿಂದ ಯಂತ್ರಾದಿಗಳಲ್ಲಿ ಇದನ್ನು ಹೆಚ್ಚು ಉಪಯೋಗಿಸು

ತ್ತಾರೆ. ಸುಮಾರು ಒಂದೂವರೆ ಲಕ್ಷ ಟನ್ನ ಎಣ್ಣೆಯು ಯುರೋಪ ಖಂಡದಲ್ಲೇ ಬಳಸಲ್ಪಡುತ್ತದೆ. ಹಿಂಡಿಯು ದನಗಳಿಗೆ ಹೆಚ್ಚು ಪುಷ್ಟಿಕರವಾದದ್ದೆಂದು ಗೊತ್ತಾಗಿದೆ. ಇದಲ್ಲದೆ ಈ ಹಿಂಡಿಯನ್ನು ಗೊಬ್ಬರದಂತೆ ಉಪಯೋಗಿಸಿ ಕೊಳ್ಳುವರು.

ಸಾಗುವಳಿ—ಜ್ಯೈಮೂಗಿನ ಬೀಜವನ್ನು ಫೂಟು ಒಂದೂವರೆ ಫೂಟು ಅಂತರದಲ್ಲಿ ಬಿತ್ತುವರು. ಹೊಲವನ್ನು ಸಾಧಾರಣ ಹರಗಿದರೆ ಸಾಕು. ಮಳೆ ಮಾತ್ರ ಬಹಳ ಬೇಕು. ಸುಮಾರು ವರ್ಷದಲ್ಲಿ ೩೦ ಇಂಚುಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಇದರ ಬೆಳೆಯು ಸರಸಾಗಿ ಬರುವದು. ಶ್ರಾವಣ ಭಾದ್ರಪದದಲ್ಲಿ ಬಿತ್ತುವರು. ಮುಂದೆ ನಾಲ್ಕೈದು ತಿಂಗಳಲ್ಲಿ ಬೆಳೆಯು ಹಂಪಿಗೆ ಬರುವದು. ಇದರ ಸಾಗುವಳಿಗೆ ವಿಶಿಷ್ಟಗುಣದ ಭೂಮಿಯೇ ಬೇಕೆಂಬ ನಿಯಮವಿಲ್ಲ. ಸಾಧಾರಣ ಕಸವುಳ್ಳ ಬೇಕಾದ ಜಾತಿಯ ನೆಲವಿದ್ದರೂ ಸಾಗುವದು. ಇದರ ಎಲೆಗಳು ಸಣ್ಣವು, ಸಾಧಾರಣ ದೀರ್ಘವರ್ತುಲಾಕಾರದವಿರುತ್ತವೆ. ಇದು ಮಡಕಿಯ ಬಳ್ಳಿಯಂತೆ ನೆಲಕ್ಕೆ ಹಬ್ಬಿರುವದು. ಗಂಟು ಗಂಟಿಗೆ ಬೇರೊಡೆದು ಆ ಬೇರಿಗೆ ಕಾಯಿಗಳಾಗುವವು. ಮುಂದೆ ಬೆಳೆ ಹಣ್ಣಿಗೆ ಬರಲು ಅಗಿದು ಕಾಯಿಗಳನ್ನು ತಕ್ಕೊಳ್ಳುವರು.

ಮದ್ರಾಸ ಸರಕಾರದವರು ಉದ್ಯೋಗ ಸಂಬಂಧವಾದ ಶಿಕ್ಷಣಕ್ಕೆ ಉತ್ತೇಜನ ದೊರೆಯಬೇಕೆಂದು ಇಬ್ಬರು ವಿದ್ಯಾರ್ಥಿಗಳಿಗೆ ಸ್ಕಾಲರ ಶಿಪ್ಪು ಕೊಟ್ಟು ವಿಲಾಯತಿಗೆ ಕಳಿಸಿಕೊಡಬೇಕೆಂದು ನಿಶ್ಚಯಿಸುವರು. ಇವರು ಚೀಟಗಳನ್ನು ತಯಾರಿಸುವ ಕಲೆಯನ್ನು ಕಲಿಯತಕ್ಕವರು.

ಚೀನದವರು ಅಕ್ಕಿ ಅನ್ನವನ್ನು ಮಾಡುವ ಪದ್ಧತಿಯು. ಇವರು ಅಕ್ಕಿಯನ್ನು, ಆ ಅಕ್ಕಿಯ ತೌಡಿನ ಬೂದಿಯು ರಾಡಿಯಲ್ಲಿ ಹಾಕಿ ಕಾಚುವರು. ಗಂಜಿಯನ್ನು ಬಾಗಿ ತೆಗೆ

ಯುವದಿಲ್ಲ. ಇದರಿಂದ ತೌಡಿನಲ್ಲಿರುವ ಫಾಸ್ಫೇಟ್ಸವೆಂಬ ಕ್ಷಾರವು ಅನ್ನದಕ್ಷಿಯೋ ಸಂಯೋಗವಾಗಿ ನಿಲ್ಲುವದು. ಇದು ಶರೀರಕ್ಕೆ ಬಲಕಾರಕವಾಗಿರುವದು. ತೌಡಿನಲ್ಲಿ, ಶಿಲಿಕಾ ಸೋಡಾ, ಪೊಟಾಶ, ಸುಣ್ಣ, ಮನಿಶಿಯಾ ಮುಂತಾದ ದ್ರವ್ಯಗಳಿರುವವು ಆದ್ದರಿಂದ ಅವರು ನಿತ್ಯಅಕ್ಕೀ ಅನ್ನ ತಿನ್ನುವವರಾಗಿದ್ದರೂ ಬಲಶಾಲಿಗಳಾಗಿರುವರು. ಒಂದು ಸೇರು ಅಕ್ಕಿಯ ತೌಡು ಅರ್ಧಸೇರು ಅಕ್ಕೀ ಅನ್ನಕ್ಕೆ ಸಾಕಾಗುವದು.

ಗಣಿತಜ್ಯೋತಿಷ್ಯದಿಂದ ಪರಶುರಾಮನು ಹದಿಮೂರುಸಾವಿರ ವರ್ಷಗಳಾಚೆಯಲ್ಲಿಯೂ, ರಾಮನು ಹತ್ತು ಸಾವಿರ ವರ್ಷಗಳ ಮುಂಚೆಯೂ, ಕೃಷ್ಣ ಪಾಂಡವರು ೩೮೫೬ ವರ್ಷಗಳ ಮೊದಲೂ ಭರತ ಖಂಡದಲ್ಲಿದ್ದರೆಂದು ತಿಳಿಯುವದು

ಹಾಲಲ್ಲಿ ದುರ್ಗಂಧವನ್ನು ಶೋಷಿಸಿಕೊಳ್ಳುವ ಸಾಮರ್ಥ್ಯವು ಹೆಚ್ಚಾಗಿರುವದು. ಹಾಲು ಹಿಂಡಿಕೊಂಡು ದುರ್ಗಂಧದ ನೆರೆಯಲ್ಲಿಟ್ಟರೆ ತುಸು ಹೊತ್ತಿನಲ್ಲಿ ಅವು ದೋಷಯುಕ್ತವಾಗುವವು. ಆದ್ದರಿಂದ ಹಾಲನ್ನು ಇಡುವ ಸ್ಥಳವು ದುರ್ಗಂಧದಿಂದ ದೂರಿರಬೇಕು. ಇಲ್ಲವೆ ಒಳಿತಾಗಿ ಕಾಸಿ ಬಳಿಸಬೇಕು. ಬೇನೆಯುವನ ಕೋಣೆಯಲ್ಲಿ ಶುದ್ಧ ಹಾಲನ್ನು ಕೆಲವು ಹೊತ್ತು ಬಾಯಿತೆರೆದು ಇಟ್ಟು ಬಳಿಕ ಅವೇ ಹಾಲನ್ನು ರೋಗಿಗೆ ಕುಡಿಯಲಿಕ್ಕೆ ಕೊಡಕೂಡದು. ಹಾಲು ಹಿಂಡಿಕೊಂಡು ಹತ್ತು ಗಳಿಗೆಗಳಾದ ಬಳಿಕ ಅವು ವಿರಸವಾಗಿರುವವು. ಅದೇ ಇಪ್ಪತ್ತುಗಳಿಗೆಗಳಾದ ಬಳಿಕ ಅವು ವಿಷದಷ್ಟು ದುಷ್ಟಗುಣವುಳ್ಳವುಗಳಾಗುವವು. ಆದರೆ ಕಾಸಿದ ಹಾಲು ಇಪ್ಪತ್ತುಗಳಿಗೆಗಳವರೆಗೆ ಕೆಡುವದಿಲ್ಲ. ಸಾರಾಂಶ ಹಾಲಿನಲ್ಲಿರುವ ಮಾಧುರ್ಯವು ನಷ್ಟವಾದ ಬಳಿಕ ಅವು ಹಿತಕರವಲವೆಂದು ತಿಳಿಯಬೇಕು

ನೀರು ಪ್ರಾಶನಕ್ಕೆ ಯೋಗ್ಯವೋ ಅಯೋಗ್ಯವೋ ಎಂಬದನ್ನು ನಿರ್ಣಯಿಸಲಿಕ್ಕೆ ಕೆಳಗಿನ ಪ್ರಯೋಗವು ತಕ್ಕದಾಗಿರುವದು. ಒಂದು ನಿರ್ಮಲವಾದ ಬಿಳೇ ಬಣ್ಣದ ಸೀಸೆಯಲ್ಲಿ ಅದರ ಮುಕ್ಕಾಲು ಭಾಗ ತುಂಬುವಷ್ಟು ನೀರು ಹಾಕಬೇಕು. ಬಳಿಕ ಮೂರು ಬೊಟ್ಟಿನ ಚಿಮುಟಿಗಿಯಲ್ಲಿ ಹಿಡಿಸುವಷ್ಟು ಸಕ್ಕರೆಯನ್ನು ಅದರಲ್ಲಿ ಹಾಕಬೇಕು. ಬಳಿಕ ಸೀಸೆಯ ಬಾಯಿಗೆ ಬೆಣೆ ಜಡಿದು ಸೆಕೆಯುಳ್ಳ ಪ್ರದೇಶದಲ್ಲಿ ಎರಡು ದಿವಸ ಇಡಬೇಕು. ಈ ಅವಧಿಯಲ್ಲಿ ಆ ಮಿಶ್ರಣವು ಬೆಳ್ಳಗಾಗಿ ಕಂಡರೆ ಆ ನೀರು ಕುಡಿಯಲಿಕ್ಕೆ ತಕ್ಕದ್ದಲ್ಲವೆಂದು ನಿರ್ಣಯಿಸಬೇಕು.

ಹೋದ ಪುಷ್ಯಮಾಸದ ಅಮಾವಾಸ್ಯದ ದಿವಸ ಅರ್ಧೋದಯವೆಂಬ ಮಹಾಪರ್ವಣಿಯು ಒದಗಿತ್ತು. ಈ ಪರ್ವಕಾಲವು ಬಹಳ ದಿವಸಕ್ಕೊಮ್ಮೆ ಬರುವದು. ಸೂರ್ಯನು ಮಕರ ರಾಶಿಯಲ್ಲಿದ್ದಾಗ, ಅಮಾವಾಸ್ಯೆ, ರವಿವಾರ, ಶ್ರವಣ ನಕ್ಷತ್ರ, ವ್ಯತೀಪಾತ, ನಾಗಕರಣ ಇವುಗಳ ಸಂಯೋಗವಾಗಲು ಆ ಕಾಲವು ಅರ್ಧೋದಯ ಮಹಾಪರ್ವವೆಂದು ಹೇಳಲ್ಪಡುವದು.

ಸರಕಾರದ ಹೊಸ ಠರಾವಿನಂತೆ, ಕಾಲೇಜದ ಪ್ರಿನ್ಸಿಪಾಲರ ಸಂಬಳವೂ ಯಾವತ್ತೂ ಡಿಪೂಟಿಯವರ ಹಾಗೂ ಅಸಿಸ್ಟಂಟ ಡಿಪೂಟಿಯವರ ಸಂಬಳಗಳೂ ಹೆಚ್ಚಿಸಲ್ಪಟ್ಟವು. ಕಾಲೇಜದ ಉಪಶಿಕ್ಷಕರ ಸಂಬಳಗಳಾದರೂ ಹೆಚ್ಚಿಸಲ್ಪಟ್ಟಿರುವವು. ಈ ಗ್ರೇಡುಗಳನ್ನು ಹಿಂದೆ ನಮ್ಮ ಪತ್ರಿಕೆಯಲ್ಲಿ ಉಲ್ಲೇಖಿಸಿರುತ್ತವೆ.

THE GOVERNOR'S SPEECH IN CONVOCATION.

ಮುಂಬಯಿ ವಿದ್ಯಾಪೀಠದ ಪದವೀದಾನ ಸಮಾರಂಭದಲ್ಲಿ ವಿದ್ಯಾಪೀಠದ ಅಧ್ಯಕ್ಷರಾದ ಗವ್ಹರ್ನರರ ದೊರೆಗಳ ಭಾಷಣವು.

ಸದ್ಗೃಹಸ್ಥರೆ, ಸಾಂಪತ್ರದ ಸ್ಥಿತಿಯಲ್ಲಿ ಸುಶಿಕ್ಷಿತರು ಪರ್ಯಾಲೋಚಿಸತಕ್ಕ ಅನೇಕ ವಿಷಯಗಳಲ್ಲಿ ಶಿಕ್ಷಣ ವಿಷಯವು ಅಗ್ರಸ್ಥಾನವನ್ನು ಆಕ್ರಮಿಸಿರುತ್ತದೆಂದು ನಿರಾತಂಕವಾಗಿ ಹೇಳಬಹುದು. ಶಿಕ್ಷಣದ ಸ್ವರೂಪವೆಂತಿರಬೇಕು? ಕಲಿಸುವ ಮೇಲಾದ ಪದ್ಧತಿ ಯಾವದು? ಎಂಬ ಬಗ್ಗೆ ಮುಂದಾಳುಗಳಲ್ಲಿ ಮತಭೇದವು ತೋರಿ ಬಂದರೂ ಶಿಕ್ಷಣದ ಮಹತಿಯನ್ನು ಯಾರೂ ಬೀಳುಗಳೆಯರು. ಪ್ರಾಚೀನ ಕಾಲದಲ್ಲಿ ವಿದ್ಯೆಯ ಆದಿಪೀಠವೆಂದು ಖ್ಯಾತಿಯನ್ನು ಪಡೆದ ಪ್ರಾಚ್ಯದೇಶಗಳಲ್ಲಿ ಶಿಕ್ಷಣದ ಬಗ್ಗೆ ಇಷ್ಟೊಂದು ಚಲನವಲನವು ನಡೆದಿರುವದನ್ನು ಕಂಡು ಆನಂದವಾಗುವದು. ಶಿಕ್ಷಣ ವಿಷಯದಲ್ಲಿ ಜಪಾನದವರು ಮುಂದರಿದಿರುವರು. ಈ ಜನಾಂಗದಲ್ಲಿ ಉಂಟಾದ ಶಿಕ್ಷಣ ಸುಧಾರಣೆಯು ಹಿಂದುಸ್ತಾನವನ್ನು ಜಾಗ್ರತಗೊಳಿಸುವದು. ಚೀನದೇಶದ ಜನರಲ್ಲಂತೂ ಈ ಪಾಶ್ಚಿಮಾತ್ಯಶಿಕ್ಷಣದ ಧೋರಣದಿಂದ ಉಂಟಾದ ಜಪಾನದ ಶಿಕ್ಷಣ ಪದ್ಧತಿಯು ನೆಲೆಗೊಂಡು ಆ ಜನಾಂಗದಲ್ಲಿ ವಿಚಾರಕ್ರಾಂತಿಯನ್ನೇ ಉಂಟು ಮಾಡಿರುವದು. ಮನುಷ್ಯಜಾತಿಯ ಎಲ್ಲ ಬಗೆಯ ಪ್ರಗತಿಗಳು ಶಿಕ್ಷಣವನ್ನೇ ಅವಲಂಬಿಸಿರುವವು. ಆದ್ದರಿಂದ ಏನನ್ನು ಕಲಿಯಬೇಕು? ಹ್ಯಾಗೆ ಕಲಿಯಬೇಕು? ಎಂಬವೆರಡು ಪ್ರಶ್ನಗಳನ್ನು ಯಾರೂ ಮರೆಯಲಾಗದು. ಪ್ರತಿ ಒಬ್ಬ ಹುಡುಗನಿಗೆ ಈಶ್ವರದತ್ತವಾದ ಬುದ್ಧಿಸಾಮರ್ಥ್ಯವು ಇದ್ದೇ ಇರುತ್ತದೆ. ಆದರೆ ಅದನ್ನು ಹ್ಯಾಗೆ ಉಪಯೋಗಿಸಿಕೊಂಡರೆ ತನ್ನ ಇಹಪರಯಾತ್ರೆಗಳು ಸುಖರೂಪದಿಂದ ಸಾಂಗವಾಗುವವು.

ಎಂಬುದನ್ನು ಮಾತ್ರ ಅವನು ಕಲಿತುಕೊಳ್ಳಬೇಕಾಗುವದು. ಶಿಕ್ಷಣದ ಮುಖ್ಯ ಉದ್ದೇಶವು ಈ ಬುದ್ಧಿಸಾಮರ್ಥ್ಯಕ್ಕೆ ಉತ್ತಮ ಮಾರ್ಗವನ್ನು ತೋರಿಸುವದೇ ಇರುತ್ತದೆ ಈ ಶಿಕ್ಷಣವು ದುಷ್ಟ ಅಥವಾ ಸುಷ್ಟವಾಗಿದ್ದಂತೆ, ಆ ಮನುಷ್ಯನು ಕೆಟ್ಟವನೂ, ಉತ್ತಮನೂ ಆಗುವನು.

ಶಿಕ್ಷಣವನ್ನು ಗಳಿಸಿಕೊಳ್ಳುವ ಬಗೆಗಳು ಎರಡಿರುವವು. ಅಥವಾ ಶಿಕ್ಷಣವು ಎರಡು ಮಾರ್ಗಗಳಿಂದ ದೊರೆಯುವದು. ಒಂದನೇದು ಪ್ರತ್ಯಕ್ಷಶಿಕ್ಷಣವು. ಇದು ಅಧ್ಯಾಪಕನಿಂದ ಪ್ರಾಪ್ತವಾಗುವದು. ಎರಡನೇದು ಅಪ್ರತ್ಯಕ್ಷಶಿಕ್ಷಣವು. ಇದು ಪರಿಸ್ಥಿತಿ, ದೇಶಾಚಾರ, ಸಮಾಜವರ್ತನ, ವ್ಯಕ್ತಿಸಂಬಂಧ ಮುಂತಾದವುಗಳಿಂದ ಪ್ರಾಪ್ತವಾಗುತ್ತದೆ. ಅನೇಕ ಶತಕಗಳಿಂದ ಕೂಡಿಬಿದ್ದ ಜ್ಞಾನಭಾಂಡಾರದ ಛಾಯೆಯು ನಾವು ಮೇಲೆ ಉಲ್ಲೇಖಿಸಿದ ಸಾಧನಗಳಲ್ಲಿ ಬಿಂಬಿಸಿರುತ್ತದೆ. ಆದ್ದರಿಂದ ಅಪ್ರತ್ಯಕ್ಷ ಶಿಕ್ಷಣವು ಆ ಸಂಕಲಿತ ಜ್ಞಾನದಿಂದಲೇ ಉತ್ಪನ್ನವಾಗುತ್ತದೆ. ಬೇರೊಂದು ಬಗೆಯಿಂದ ವಿಚಾರ ಮಾಡಲು, ಇವೆರಡು ಶಿಕ್ಷಣಗಳಲ್ಲಿ ಜನ್ಯಜನಕ ಭಾವಸಂಬಂಧವುಂಟೆಂದು ವ್ಯಕ್ತವಾಗುವದು. ಪ್ರತ್ಯಕ್ಷಶಿಕ್ಷಣವು ನಿರ್ದುಷ್ಟವಾಗಿ ನಡೆಯುತ್ತಿದ್ದರೆ, ಅದರ ಪರಿಣಾಮವು ಮೇಲೆ ವಿವರಿಸಿದ ಸಾಧನಗಳಲ್ಲಿ ಉಂಟಾಗಲಿಕ್ಕೇಬೇಕು. ಅಂದರೆ ಒಂದು ಪೀಳಿಗೆಯು ಪ್ರತ್ಯಕ್ಷಶಿಕ್ಷಣವು ಮತ್ತೊಂದು ತಲೆಯುವರೆಗೆ ಅಪ್ರತ್ಯಕ್ಷಶಿಕ್ಷಣದ ರೂಪದಿಂದ ಗೋಚರವಾಗುವದು. ಇದರಿಂದ ಶಿಕ್ಷಣದ ನಿರ್ದುಷ್ಟಪದ್ಧತಿಯು ಗೌರವವೆಷ್ಟಿರುವದು ನೋಡಿರಿ. ಮೇಲಾದ ಪದ್ಧತಿಯಿಂದ ನಡಿಸಲ್ಪಟ್ಟ ಶಿಕ್ಷಣವು ಇಮ್ಮಡಿ ಮುಮ್ಮಡಿ ಶಕ್ತಿಯಿಂದ ತನ್ನ ಕಾರ್ಯವನ್ನು ಸಾಧಿಸುತ್ತದೆ. ಅದೇ ಶಿಕ್ಷಣದ ಪದ್ಧತಿಯು ದೋಷಯುಕ್ತವಾದದ್ದಿದ್ದು, ಆ ದೇಶದ ಜನರು ಅದನ್ನು ಸುಧಾರಿಸಿಕೊಳ್ಳಲು ಉದಾಸೀನರಾಗಿದ್ದರೆ ಆ ಶಿಕ್ಷಣವು ತನ್ನ ಶಕ್ತಿಯ ಗುಣಿತ ಪ್ರಮಾಣದಿಂದ ರಾಷ್ಟ್ರವನ್ನು ರಸಾತಳಕ್ಕೊಯ್ಯುವದು. ಅಪ್ರತ್ಯಕ್ಷ

ಶಿಕ್ಷಣದಿಂದ ಅಮಿತ ಲಾಭಗಳಾಗಬೇಕೆಂದು ಬಯಸುವವರು ಪ್ರತ್ಯಕ್ಷಶಿಕ್ಷಣದ ಪದ್ಧತಿಯು ದೋಷರಹಿತವಾಗಿರುವಂತೆ ಯತ್ನಿಸತಕ್ಕದ್ದು. ಅಪ್ರತ್ಯಕ್ಷಶಿಕ್ಷಣದಿಂದ ಗ್ರಹಿಸಬಹುದಾದ ವಿಷಯಗಳನ್ನು ಪಕ್ಕಾಗೊಳಿಸಿಕೊಳ್ಳಬೇಕಾದರೆ ಮೊದಲು ಪ್ರತ್ಯಕ್ಷಶಿಕ್ಷಣದಿಂದ ತಕ್ಕಷ್ಟು ಸಂಸ್ಕೃತಮನನಾಗಬೇಕು. ಪೂರ್ವಕಾಲದಲ್ಲಿ ಭರತಖಂಡದೊಳಗೆ ಈಗಿನಂತೆ ಶಿಕ್ಷಣಸಂಸ್ಥೆಗಳ ಅಭಾವವಿದ್ದರೂ ವೇದಾಂತವಿದ್ಯೆಯು ಉಜ್ವಲವಾಗಿ ಬೆಳಗುತ್ತಿತ್ತೆಂದು ಹೇಳಲಿಕ್ಕೆ ಪ್ರತ್ಯವಾಯವಿಲ್ಲ. ಅಧ್ಯಾಪಕನು ದೇವನೆಂದು ಪ್ರತಿಪಾದಿಸುವ ಉಪನಿಷತ್ ವಾಕ್ಯಗಳನ್ನು ಹೇರಳವಾಗಿ ಉದಾಹರಿಸಬಹುದು ಇದರಿಂದ ಆ ಕಾಲದಲ್ಲಿ ಗುರುಶಿಷ್ಯ ಸಂಬಂಧವು ಎಷ್ಟು ಉಚ್ಚತಮ ಅವಸ್ಥೆಯಲ್ಲಿತ್ತೆಂಬುದು ತೋರಿಬರುವದು.

ಇದಲ್ಲದೆ ಆ ಗ್ರಂಥಗಳಲ್ಲಿ ಅಲ್ಲಲ್ಲಿ ವೇದಾಂತಜ್ಞಾನದ ಮಹತಿಯನ್ನು ವರ್ಣಿಸಿದ್ದು ದೃಷ್ಟಿಗೋಚರವಾಗುವದು. ಆ ಕಾಲದಲ್ಲಿ ಅಧ್ಯಯನಾಧ್ಯಾಪನಗಳು ಗುರುಶಿಷ್ಯರ ತಾದಾತ್ಮ್ಯರೂಪದಿಂದ ನಡೆಯುತ್ತಿತ್ತು. ಇದರಿಂದ ಆ ಕಾಲದ ವಿದ್ಯಾವಂತರಾದ ಜನರ ಲೌಕಿಕವು ಲೋಕದತುಂಬ ಹಬ್ಬಿತ್ತು ಈ ಚಾರಿತ್ರ್ಯವು ಅಥವಾ ಲೌಕಿಕವು ರಾಷ್ಟ್ರದ ಉನ್ನತಾವಸ್ಥೆಯು ದರ್ಶಕವಾಗಿರುವದು. ಈ ಶಿಕ್ಷಣದ ಪದ್ಧತಿಯು ವರ್ಚಸ್ಸು ಕಾಲಾಂತರದಲ್ಲಿ ಗ್ರೀಕರಮೇಲೂ ಕೂತಿತು. ಈ ಪೂರ್ವ ಪಶ್ಚಿಮ ದೇಶಗಳ ಜನರಲ್ಲುಂಟಾದ ಶಿಕ್ಷಣಕ್ರಾಂತಿಯ ಪರ್ಯವಸಾನವನ್ನು ಅವಲೋಕಿಸುವದು ಮನೋರಂಜಕ ಸಂಗತಿಯಾಗಿದೆ. ಮುಂಬಯಿ ವಿದ್ಯಾಪೀಠದ ಪದವೀಧರನೊಬ್ಬನು ಈ ಶಿಕ್ಷಣ ಪ್ರಸಾರದ ಇತಿಹ್ಯವನ್ನು ಬರೆಯಲುಪಕ್ರಮಿಸಲು ಅವನಿಗೆ ಪಾಶ್ಚಮಾತ್ಯರಲ್ಲಿ ಶಿಕ್ಷಣ ಜಾಗ್ರತೆಯು ಪ್ರಾಚ್ಯರಿಂದುಂಟಾದರೂ ಪ್ರಸ್ತುತಕ್ಕೆ ತದ್ವಿಪರೀತವಾಗಿ ಪಾಶ್ಚಮಾತ್ಯರಿಂದ ಪ್ರಾಚ್ಯರು ಶಿಕ್ಷಣ ಹೊಂದುವ ಪ್ರಸಂಗ ಬಂದಿರುವದೆಂದು ಮನವರಿಕೆಯಾಗದಿರದು. ಆದರೆ ಈ ಪಾಶ್ಚಮಾತ್ಯಜ್ಞಾನವು ಐಹಿಕ

ಸುಖವರ್ಧನಕ್ಕೆಂಬುದನ್ನು ಮರೆಯಲಾಗದು. ಸಾಂಪ್ರತಕ್ಕೆ ಪಾಶ್ಚಾತ್ಯ ಪಂಡಿತರು ಪೂರ್ವದೇಶದಲ್ಲಿ ಜ್ಞಾನ ಜಾಗ್ರತಿಯ ಸ್ಫೂರ್ತಿಯನ್ನು ಉತ್ಪನ್ನ ಮಾಡತೊಡಗಿರುವರು. ಆದರೆ ಏಸಿಯಾ ಖಂಡದ ಜನರಲ್ಲಿ ರಾಜ್ಯಕ್ರಾಂತಿ ಮೊದಲಾದ ಅನೇಕ ಬಗೆಯ ಕ್ರಾಂತಿಗಳೊದಗಿದರೂ ಅವರ ಜ್ಞಾನದರ್ಪಣವು ಹೇಳಿಕೊಳ್ಳುವಷ್ಟು ಮೊಖಾಳವಾಗಿಲ್ಲ. ಆಸೀರಿಯಾ, ಇರಾಣ ಮೊದಲಾದ ದೇಶಗಳು ಕೆಲವೊಂದು ಕಾಲದಲ್ಲಿ ತಮ್ಮ ಬಾಹುಬಲದಿಂದ ಜನರನ್ನು ದಂಗುಬಡಿಸಿದವು. ಆದರೂ ಈ ಶಾರೀರಬಲಕ್ಕೆ ಜ್ಞಾನದ ಬೆಂಬಲವು ದೊರೆಯದ್ದರಿಂದ ಆ ಬಾಹುಬಲವು ಅಲ್ಪಕಾಲದಲ್ಲಿಯೇ ನಷ್ಟವಾದವು. ಐಹಿಕ ಸುಖಸಾಧನಗಳಲ್ಲಿ ಪೌರ್ವದೇಶಗಳು ಹಿಮ್ಮೇಡಾದ್ದರಿಂದ ಅವು ಸ್ವಾಭಾವಿಕವಾಗಿ ನಿವೃತ್ತಿ ಮಾರ್ಗವನ್ನು ಸ್ವೀಕರಿಸಿದವು. ಇಷ್ಟೇ ಅಲ್ಲ ಈ ತಮ್ಮ ವೇದಾಂತ ಜ್ಞಾನೋಪದೇಶದಿಂದಲೂ ಉದಾಹರಣದಿಂದಲೂ ಪಾಶ್ಚಿಮಾತ್ಯರ ಮನವನ್ನು ಒಲಿಸಿಕೊಳ್ಳಲು ಯತ್ನಿಸಿದವು.

ಹೀಗೆ ಇತಿಹಾಸದ ಆರಂಭಕಾಲದಿಂದ ಶಿಕ್ಷಣದಲ್ಲುಂಟಾಗುತ್ತ ಬಂದ ಕ್ರಾಂತಿಯನ್ನು ಕುರಿತು ಸಮಾಲೋಚಿಸುವದು ಸದ್ಯಕ್ಕೆ ಶಕ್ಯವಲ್ಲ. ಸಾರಾಂಶವೇನೆಂದರೆ ಜಗತ್ತಿನಲ್ಲಿ ಮಾನವನಿಗೆ ಒದಗಿದ ಪರಿಸ್ಥಿತಿಯಂತೆ ಅವನ ಶಿಕ್ಷಣದಲ್ಲಿ ಹೆಚ್ಚು ಕಡಿಮೆಯಾಯಿತೆಂಬುದು ನಿರ್ವಿವಾದವು. ಈ ಕಾಲ ಪರಿಸ್ಥಿತಿಗಳ ಅನುರೋಧದಿಂದ ಭರತಖಂಡ, ಗ್ರೀಸ, ರೋಮ ಮುಂತಾದ ರಾಷ್ಟ್ರಗಳು ವಿದ್ಯೆಯ ಆದ್ಯಪೀಠಗಳಾಗಿ ಮೆರೆದವು. ಆದರೂ ಆ ಕಾಲದಲ್ಲಿ ಯುದ್ಧಾದಿಗಳಿಂದ ಶಿಕ್ಷಣ ಪ್ರಸಾರಕ್ಕೂ ಅದರ ಬೆಳವಣಿಗೆಗೂ ಅನುಗುಣವಾದ ಶಾಂತಕಾಲವು ದೊರೆಯದ್ದರಿಂದ ಅದು ಅಷ್ಟು ಅಭಿವೃದ್ಧಿಯನ್ನು ಹೊಂದಲಿಲ್ಲ. ರೋಮ ರಾಜ್ಯವು ನಷ್ಟವಾದ ಬಳಿಕ ಆ ರಾಷ್ಟ್ರದ ಧರ್ಮೋಪದೇಶಕರ ಕೈಯಲ್ಲಿ ಶಿಕ್ಷಣಕಾರ್ಯವು ಸಳೆಗೊಂಡಿತು. ಈ ಶಿಕ್ಷಣ ಚಾಲಕರು ಕೇವಲ ಉಚ್ಚವರ್ಗದವರಿಗೇ ಕಲಿಸತೊಡಗಿದರು. ಆದರಿಂ

ದ ಮಧ್ಯಮವರ್ಗದವರೂ ಕನಿಷ್ಠಪ್ರತಿಯ ಜನರು ಅಶಿಕ್ಷಿತಾವಸ್ಥೆಯಲ್ಲಿಯೇ ಉಳಿದರು. ಇದಾದ ಬಳಿಕ ಈಗ ನಾಲ್ಕುನೂರು ವರ್ಷದ ಮೊದಲು ಇಂಗ್ಲಂಡದಲ್ಲಿ ಧರ್ಮಕ್ರಾಂತಿಯಾದಂದಿನಿಂತ ಈಟನ್ ಉಯಿಂಚಸ್ಟರ ಮುಂತಾದ ಸ್ಥಲದಲ್ಲಿ ಹೊಸ ಮಾದರಿಯ ಶಿಕ್ಷಣವು ಪ್ರಾದುರ್ಭವವಾಯಿತು. ಆದರೆ ಈ ಆಧುನಿಕ ಶಿಕ್ಷಣವು ಇಷ್ಟು ಏಳಿಗೆಗೆ ಬಂದದ್ದರ ಶ್ರೇಯಸ್ಸು ಅದನ್ನು ಪ್ರಚಾರದಲ್ಲಿ ತಂದವರಿಗಿಂತ ಮುದ್ರಣಕಲೆಗೆ ಅರ್ಪಿಸುವದೇ ತಕ್ಕದ್ದೆಂದು ಹೇಳಲು ಆತಂಕವಿಲ್ಲ. ಈ ಕಲೆಯ ಸಹಾಯವಿಲ್ಲದ ಶಿಕ್ಷಣವು ಇಷ್ಟು ಪ್ರಸಾರವನ್ನು ಅತ್ಯಲ್ಪಕಾಲದಲ್ಲಿ ಹೊಂದುತ್ತಿತ್ತೆಂದು ತೋರುವದಿಲ್ಲ.

(ಸೇಮ.)

MAGNET.

ಲೋಹಚುಂಬಕ.

—◁(+)▷—

ಪ್ರಯೋಗ ವಿಧಿ— ಈ ಚುಂಬಕ ಮುಳ್ಳಿನ ನಡಕ್ಕೆ ರೇಶಿಮೆಯ ದಾರವನ್ನು ಕಟ್ಟಿ ಈ ಚುಂಬಕ ಕಂಬಿಯ ಮೇಲೆ ತುಸು ಅಂದರೆ ತಕ್ಕಷ್ಟು ಅಂತರದಲ್ಲಿ ಹಿಡಿಯುತ್ತೇನೆ. ಕಂಬಿಯ ಮಧ್ಯವೂ ಮುಳ್ಳಿನ ಮಧ್ಯವೂ ಒಂದೇ ರೇಷೆಯಲ್ಲಿರುವದರಿಂದ ಮುಳ್ಳು ಕಂಬಿಗೆ ಸಮಾಂತರವಾಗಿಯೇ ನಿಂತಿರುವದು. ಇನ್ನು ಮುಳ್ಳನ್ನು ಕಂಬಿಯ ಉತ್ತರ ಧ್ರುವಕ್ಕೆ ಸಮಿ ಸಮೀಪವಾಗಿ ಒಯ್ಯುವಂತೆ ಮುಳ್ಳಿನ ದಕ್ಷಿಣಧ್ರುವವು ಹೆಚ್ಚು ಹೆಚ್ಚು ಕೆಳಗೆ ಬಾಗ ತೊಡಗುತ್ತದೆ. ಕಂಬಿಯ ದಕ್ಷಿಣ ಧ್ರುವದೆಡೆಗೊಯ್ಯಲು ಮುಳ್ಳಿನ ಉತ್ತರ ಧ್ರುವದ ಪಾಡಾದರೂ ಹೀಗೆಯೇ ಆಗುವದು. ಸಜಾತಿಯ ಧ್ರುವಗಳು ಒಂದನ್ನೊಂದು ದೂಡುತ್ತವೆಂಬದೂ ವಿಜಾತಿಯ ಧ್ರುವಗಳು ಒಂದನ್ನೊಂದು ಎಳೆಯುತ್ತವೆಂಬದೂ ನಿಮಗೆ ಮೊದ

ಲೇ ಗೊತ್ತಾಯಿತು ಇರಲಿ, ಇನ್ನು ಕಂಬಿಯ ಉತ್ತರ ಧ್ರುವದ ಮೇಲೆಯೇ ಮುಳ್ಳನ್ನು ಹಿಡಿಯುವೆನು. ನೋಡು ಮುಳ್ಳಿನ ದಕ್ಷಿಣ ಧ್ರುವವು ಕಂಬಿಯ ಉತ್ತರ ಧ್ರುವದ ಆಕರ್ಷಣದಿಂದ ಎಳೆಯಲ್ಪಟ್ಟು ಲಂಬವಾಗಿ ನಿಂತಿತು. ದಕ್ಷಿಣ ಧ್ರುವದ ಬಳಿಯಲ್ಲಿ ಒಯ್ದರೆ ಮುಳ್ಳಿನ ಉತ್ತರ ಧ್ರುವದ ಅವಸ್ಥೆಯೂ ಹೀಗೆಯೇ ಆಗುತ್ತದೆ.

ಈ ಪರಿಣಾಮವು ಭೂಗೋಲದ ಮೇಲಾದರೂ ಸಂಭವಿಸುತ್ತದೆ. ಉತ್ತರ ಗೋಲಾರ್ಧದಲ್ಲಿ ಉತ್ತರಕ್ಕೆ ಒಯ್ದಂತೆ ಚುಂಬಕ ಮುಳ್ಳಿನ ಉತ್ತರ ಧ್ರುವವು ಹೆಚ್ಚು ಹೆಚ್ಚು ಬಲಿಯುವದು. ಇದಕ್ಕೆ ವಿಪರೀತವಾಗಿ ಚುಂಬಕ ಮುಳ್ಳನ್ನು ದಕ್ಷಿಣಗೋಲಾರ್ಧದಲ್ಲಿ ದಕ್ಷಿಣಕ್ಕೆ ಒಯ್ದಂತೆ ಅದರ ದಕ್ಷಿಣ ಧ್ರುವವು ಹೆಚ್ಚೆಚ್ಚು ಬಲಿಯುವದು. ಇದನ್ನು ಸ್ಪಷ್ಟೀಕರಿಸುವದಕ್ಕೋಸ್ಕರ ಕೆಳಗಿನ ಪ್ರಯೋಗವನ್ನು ಮಾಡಿ ನೋಡು.

(ಪ್ರಯೋಗ ೨೪)--- ಇದೊಂದು ಕಾಗದದ ಗೋಲುಂಟು. ಈ ಚುಂಬಕ ಕಂಬಿಯನ್ನು ಈ ಗೋಲದ ವ್ಯಾಸದ ಸ್ಥಾನದಲ್ಲಿ ಇಡುತ್ತೇನೆ. ಅಂದರೆ ಗೋಲವು ಪೃಥ್ವಿಯೆಂದೂ ಕಂಬಿಯು ಅದರ ಅಕ್ಷವೆಂದೂ ತಿಳಿ. ಈ ಗೋಲದ ಮೇಲೆ ತುಸು ಅಂತರದಲ್ಲಿ ಈ ಕಟ್ಟಿಗೆಯ ಚೌಕಟ್ಟನ್ನು ನಿಲ್ಲಿಸಿ ಅದರ ಬೇರೆ ಬೇರೆ ಸ್ಥಳಗಳಲ್ಲಿ ಈ ಚುಂಬಕ ಮುಳ್ಳನ್ನು ಹಚ್ಚಿ ನೋಡು. ಚೌಕಟ್ಟಿನ ಮಧ್ಯದ ದಾರಕ್ಕೆ ಕಟ್ಟಿದ ಮುಳ್ಳು ಚುಂಬಕ ಕಂಬಿಗೆ ಸಮಾಂತರವಾಗಿ ನಿಂತಿರುವದು. ಇದೇ ಮುಳ್ಳನ್ನು ಎರಡೂ ಧ್ರುವಕ್ಕೆ ಸಮಿ ಸಮೀಪವಾಗುವಂತೆ ತೂಗ ಬಿಡಲು ಆ ಮುಳ್ಳಿನ ಧ್ರುವಗಳು ಮೇಲೆ ಕೆಳಗೆ ಬಲಿಯುವವು. ಇನ್ನು ಗೋಲದೊಳಗಿನ ಚುಂಬಕ ಕಂಬಿಯ ಧ್ರುವ ಸ್ಥಳಗಳ ಬಳಿಯಲ್ಲಿ ಬರುವಂತೆ ಮುಳ್ಳನ್ನು ತೂಗ ಬಿಡಲು ಮುಳ್ಳು ಕಂಬಿಯ ಧ್ರುವಕ್ಕೆ ಎದುರಾಗಿ ಸರಳ ರೇಷೆಯಲ್ಲಿ ನಿಲ್ಲುವವು. ಈ ಪ್ರಯೋಗದಿಂದ ಪೃಥ್ವಿಯ ಕಾರ್ಯವು ಚುಂಬಕಗಳ ಮೇಲೆ ಪರಿಣಾ

ಮಿಸುವ ಬಗೆಯು ಸ್ಪಷ್ಟವಾಗುವದು. ಆದ್ದರಿಂದಲೇ ಪಂಡಿತರು ಪೃಥ್ವಿಯು ದೊಡ್ಡದೊಂದು ಚುಂಬಕವಿರುವದೆಂದೂ ಅದಕ್ಕೆ ಎರಡು ಚುಂಬನ ಧ್ರುವಗಳಿರುವವೆಂದೂ ಆ ಚುಂಬನ ಧ್ರುವಗಳು ಪೃಥ್ವಿಯ ನಿಜಧ್ರುವಗಳಿಗೆ ಸಮೀಪವಾಗಿಯೇ ಇರುತ್ತವೆಂದೂ ನಿಶ್ಚಯಿಸಿರುವರು. ಪೃಥ್ವಿಯ ಉತ್ತರ ಕಡೆಯ ಚುಂಬನ ಧ್ರುವವು ಅದರ ಋಣ ಅಥವಾ ದಕ್ಷಿಣ ಧ್ರುವವಾಗಿರಬೇಕು. ಅದರ ದಕ್ಷಿಣ ಕಡೆಯ ಧ್ರುವವು ಧನ ಅಥವಾ ಉತ್ತರ ಧ್ರುವವಾಗಿರುವದು. ಯಾಕೆಂದರೆ ಅವು ಕ್ರಮವಾಗಿ ಚುಂಬಕ ಮುಳ್ಳಿನ ಉತ್ತರ ದಕ್ಷಿಣ ಧ್ರುವಗಳನ್ನು ಆಕರ್ಷಿಸುತ್ತವೆ ಆದರೆ ಹೀಗೆ ತಿಳಿಯುವದರಿಂದ ತೊಂದರೆಯಾಗುವದೆಂದು ಬಗೆದು ಪೃಥ್ವಿಯ ಉತ್ತರ ಕಡೆಯ ಧ್ರುವವನ್ನು ಅದರ ಉತ್ತರ ಚುಂಬನ ಧ್ರುವವೆಂದೂ ದಕ್ಷಿಣ ಕಡೆಯ ಧ್ರುವವನ್ನು ಅದರ ದಕ್ಷಿಣ ಚುಂಬನ ಧ್ರುವವೆಂದೂ ಎಣಿಸುವ ಪರಿಪಾಠವು ಇಂದಿಗೂ ಅಬಾಧಿತವಾಗಿ ನಡೆಯುತ್ತದೆ.

ಪೃಥ್ವಿಯ ಉತ್ತರ ಚುಂಬನ ಧ್ರುವವು ಉತ್ತರ ಅಮೇರಿಕದಲ್ಲಿ ಹಡಸನ್ನದ ಉಪಸಾಗರದ ಸಮೀಪದಲ್ಲಿ ಅಂದರೆ ಉತ್ತರ ಅಕ್ಷಾಂಶ ೭೦°—೫' ಪಶ್ಚಿಮರೇಖಾಂಶ ೧೧೮°—೫೫' ಇಲ್ಲಿ ಇರುವದು. ಮತ್ತು ಅದರ ದಕ್ಷಿಣ ಚುಂಬನ ಧ್ರುವವು ಆಸ್ಟ್ರೇಲಿಯದಲ್ಲಿ ಅಂದರೆ ದಕ್ಷಿಣ ಅಕ್ಷಾಂಶ ೭೨°—೨೫' ಪೂರ್ವರೇಖಾಂಶ ೧೫೫°—೩೦' ಈ ಸ್ಥಳದಲ್ಲಿರುವವು ಸರ ಜೇಮ್ಸರಾಸ ಎಂಬವನು ಸನ ೧೮೩೧ನೇ ವರ್ಷ ಪೃಥ್ವಿಯ ಉತ್ತರ ಚುಂಬನ ಧ್ರುವವನ್ನು ಗೊತ್ತು ಹಚ್ಚಿದನು. ಈ ಚುಂಬನ ಧ್ರುವದ ಬಗ್ಗೆ ಸಂಶಯವು ಉಳಿಯಲಿಲ್ಲ. ಯಾಕೆಂದರೆ ಪೃಥ್ವಿಯ ಪೃಷ್ಠಭಾಗದ ಮೇಲೆ ಯಾವ ಸ್ಥಳದಲ್ಲಿಯಾದರೂ ಚುಂಬಕ ಮುಳ್ಳನ್ನು ಇಟ್ಟರೆ ಅದು ಪೃಥ್ವಿಯ ಉತ್ತರ ಚುಂಬನ ಧ್ರುವದ ಕಡೆಗೆ ಒಲಿಯುವದು. ಪೃಥ್ವಿಯ ಚುಂಬನ ಧ್ರುವವೂ ಚುಂಬನ ವಿಷುವೃತ್ತವೂ

ಇವುಗಳಲ್ಲಿಯ ಭೇದವನ್ನು ಲಕ್ಷ್ಯದಲ್ಲಿಡುವದು ಅವಶ್ಯವದೆ.

೧೮. ಇನ್ನು ವಿವಕ್ಷಿತ ಸ್ಥಳದಲ್ಲಿ ಚುಂಬಕ ಮುಳ್ಳು ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ಒಲಿಯುವದು. ಕೆಳಗೆ ಮೇಲೆ ಎಷ್ಟು ಬಾಗುವದು. ಇದನ್ನು ಗೊತ್ತು ಹಚ್ಚುವ ಬಗೆಯನ್ನು ಕುರಿತು ವಿಚಾರಿಸುವಾ.

THE HISTORY OF RAJASTHAN.

ರಾಜಾಸ್ಥಾನದ ಇತಿಹಾಸವು.

(×)

ಮೇಲೆ ಹೇಳಿದಂತೆ ಯವನರು, ಮೊಗಲರು, ತಾರ್ತರರು ಮೊದಲಾದವರ ದಾಳಿಗಳಾದ ಬಳಿಕ ಇಂಗ್ಲಿಷರು ಹಿಂದುಸ್ತಾನಕ್ಕೆ ಬಂದರು ಇವರು ಸಂಖ್ಯೆಯಿಂದ ತೀರ ಸ್ವಲ್ಪ ಜನರಿದ್ದಾಗ್ಯೂ ಬುದ್ಧಿ ಬಲದಿಂದ ಹಿಂದಿನವರಿಗಿಂತ ಹೆಚ್ಚು ಶ್ರೇಷ್ಠರಾಗಿದ್ದರು. ಆದರಿಂದಲೇ ಅವರು ಆ-ಸೇತು ಹಿಮಾಚಲದ ವರೆಗೆ ಇರುವ ಯಾವತ್ತೂ ಭರತಭೂಪ್ರದೇಶವನ್ನು ಅಧೀನ ಪಡಿಸಿಕೊಂಡು ನಿರ್ವೇಧವಾಗಿ ರಾಜ್ಯಪರಿಪಾಲನೆಯನ್ನು ಮಾಡುತ್ತಲಿದ್ದಾರೆ. ಇದು ಅಸಾಧಾರಣ ಚಮತ್ಕಾರವಲ್ಲವೇ. ಒಂದು ದೇಶವು ಬೇರೊಂದು ಬಲಿಷ್ಠ ದೇಶದವರಿಂದ ಗೆಲ್ಲಲ್ಪಟ್ಟು ಅದು ಆ ಜಯಶಾಲಿಗಳ ಅಧೀನದಲ್ಲಿ ದೀರ್ಘಕಾಲದ ವರೆಗೆ ಇದ್ದ ಉದಾಹರಣೆಗಳು ಇತಿಹಾಸದಲ್ಲಿ ಅನೇಕವುಂಟು. ಆದರೆ ಇಂಥ ರಾಜ್ಯಕ್ರಾಂತಿಯಲ್ಲಿ ಸೋತ ದೇಶದ ಜನರ ಜಾತಿ ಕುಲಗಳಲ್ಲಿ ಸ್ಥಿತ್ಯಂತರವುಂಟಾಗಿರುವದು. ಅವರ ಧರ್ಮ-ಆಚಾರಗಳು ಬದಲಾಗಿರುವವು. ಮೂಲ ದೇಶದ ಹೆಸರು ಸಹ ಬದಲಾದ ಉದಾಹರಣೆಗಳು ಎಷ್ಟೋ ಉಂಟು. ಆದರೆ ಹಿಂದುಸ್ತಾನವು ಅನೇಕ ಪರಚಕ್ರಗಳಿಂದ ಪರಾಭೂತವಾಗಿ ಅನೇಕ ಕಾಲ ಅವರಿಗೆ ಅಂಕಿತವಾಗಿ ಬಾಳಿದರೂ ಹಿಂದೂ ಜನರ ಸ್ಥಿತಿ ರೀತಿ ಧರ್ಮಾಚರಣೆಗಳಲ್ಲಿ ವಿಶೇಷ ಸ್ಥಿತ್ಯಂತರವಾದದ್ದು ದೃಷ್ಟಿ

ಗೋಚರವಾಗುವದಿಲ್ಲ. ಈ ಜನರು ತಮ್ಮ ಆಚಾರ ವಿಚಾರ ಧರ್ಮ, ಕುಲ ಗೋತ್ರ ಮುಂತಾದವುಗಳ ಬಗ್ಗೆ ವಿಶೇಷ ಅಭಿಮಾನ ಪಡುತ್ತಾರೆ. ಮೂರು ಸಾವಿರ ವರ್ಷಗಳಿಂದ ಪರಚಕ್ರಗಳು ಹಿಂದುಸ್ಥಾನದ ಮೇಲೆ ದಾಳಿಗಳನ್ನು ಮಾಡಿದರೂ ಈ ದೇಶದೊಳಗಿನ ಕ್ಷಾತ್ರ ವೃತ್ತಿಯುವರಾದ ರಜಪೂತರ ಅಭಿಮಾನ ಪರಾಕ್ರಮಗಳಲ್ಲಿಯೂ ಆಚಾರ ವಿಚಾರಗಳಲ್ಲಿಯೂ ಬದಲಾಗಿಲ್ಲ. ಇಷ್ಟೇ ಅಲ್ಲ ಅವರು ತಮ್ಮ ಆಚಾರವಿಚಾರಗಳನ್ನು ಬದಲಿಸಬೇಕೆಂದು ಇಚ್ಛಿಸಲೂ ಇಲ್ಲ. ಈ ಮಾತಿಗೆ ಈಗ ರಾಜಸ್ಥಾನದಲ್ಲಿರುವ ಸಂಸ್ಥಾನಿಕರೇ ಬಲವಾದ ಪ್ರಮಾಣವಾಗಿದ್ದಾರೆ. ಇದರಿಂದ ಹಿಂದುಸ್ಥಾನದಲ್ಲಿ ರಾಜ್ಯಭಾರವನ್ನು ನಡಿಸುವ ಅನ್ಯದೇಶದ ಜನರು ಈ ಕ್ಷಾತ್ರಧರ್ಮಿಗಳಾದ ರಜಪೂತರನ್ನು ಚನ್ನಾಗಿ ರಕ್ಷಿಸಿ, ಮನ್ನಿಸಿ ತಮ್ಮ ಸಾಮ್ರಾಜ್ಯದ ಚಿರಸ್ಥಾಯಿತ್ವಕ್ಕೆ ಅನುಕೂಲ ಮಾಡಿಕೊಳ್ಳುವದು ಹಿತಕರವೆಂದು ಸಿದ್ಧವಾಗುತ್ತದೆ.

ಹಿಂದು ಧರ್ಮದ ಪುರಾಣಗಳಲ್ಲಿ ವಿಶೇಷವಾಗಿ ಭವಿಷ್ಯೋತ್ತರ ಪುರಾಣದಲ್ಲಿ ಭರತ ಖಂಡದೊಳಗೆ ಕಲಿಯುಗದಲಿ ಮ್ಲೇಂಛ, ತುರುಕ, ಯವನರುಗಳ ರಾಜಸತ್ತೆಯು ನೆಲೆಗೊಳ್ಳುವದೆಂದು ಉಲ್ಲೇಖಿಸಿರುವದು. ಈ ಭವಿಷ್ಯವು ಈ ಕಾಲದಲ್ಲಿ (ಸಂಗರಾಣಾನ ಆಳಿಕೆಯಲ್ಲಿ) ಸತ್ಯವಾಗುವ ಸಮಯವು ನಿಜವಾಗಿ ಪ್ರಾಪ್ತವಾಯಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ನಾವು ಮೇಲೆ ಉಲ್ಲೇಖಿಸಿದಂತೆ ಸಂಗರಾಣಾನಿಗೆ ಬಲಾಢ್ಯಪ್ರತಿ ಸ್ಪರ್ಧಿಯಾದ ಬಾಬರನು ಜನ್ಮ ಹೊಂದಿದನು. ಇವನು ತುರ್ಕಸ್ಥಾನದೊಳಗಿನ ಫರ್ಗನಾ ಗ್ರಾಮದ ಅವನಿಪನಾಗಿದ್ದನು. ತುರ್ಕಸ್ಥಾನವನ್ನು ಹಿಂದೂ ಜನರು ತಮ್ಮ ಗ್ರಂಥದಲ್ಲಿ ಶಕದ್ವೀಪವೆಂದು ಸಂಬೋಧಿಸಿರುವರು. ತೈಮೂರ, ಜಂಗಿಸಖಾನ ಮೊದಲಾದ ಕಡುಗಲಿಗಳು ಹಿಂದುಸ್ಥಾನವನು

ವಿರ ಜನ ರಾಜಪುತರನ್ನು ಒಡಗೊಂಡು ಸಮರ್ಕಂದವನ್ನು ಬಿಟ್ಟು ವಿಜಯವನ್ನೂ ಸತ್ತಾ ಸಂಪತ್ತಿಗಳನ್ನೂ ಸಂಪಾದಿಸುವ ಹವ್ಯಾಸದಿಂದ ಭರತಖಂಡವನ್ನು ಪ್ರವೇಶಿಸಿದನು.

ಸಂಗ್ರಾಮಾನಂತರ ಬಾಬರನಾದರೂ ಅನೇಕ ದುಃಖ ಸಂಕಟಗಳನ್ನು ಸೋಸಿದವನೂ ಎಷ್ಟೋ ಪ್ರಸಂಗಗಳಲ್ಲಿ ತಲೆ ಬಡಿಸಿಕೊಂಡವನೂ ಆದ ಅನುಭವ ಶಾಲಿಪುರುಷನು. ಇವನು ಗರ್ಗಶರಲ್ಲಿ ತನ್ನ ರಾಜ್ಯಕ್ಕೆ ಒಡೆಯನಾದನು ಈ ಕಾಲದಲ್ಲಿ ಇವನು ಕೇವಲ ೧೨ ವರ್ಷದ ಬಾಲಕನ ಗಿದ್ದನು. ಇವನು ೧೬ವರ್ಷದವನಾದ ಕೂಡಲೆ ತನ್ನಲ್ಲಿರವ ಶೌರ್ಯವನ್ನು ಪ್ರಕಟಿಸಿದನು. ಇವನು ಎರಡು ಸಾರೆ ಸಮರ್ಕಂದ ನಗರವನ್ನು ಸ್ವಾಧೀನ ಮಾಡಿಕೊಂಡರೂ ಅದನ್ನು ಚಿರಸ್ಥಾಯಿಯಾಗಿ ತನ್ನ ಅಂಕಿತದೊಳಗೆ ಇಟ್ಟುಕೊಳ್ಳಲು ಸಮರ್ಥನಾಗಲಿಲ್ಲ ಅವನಿಗೊದಗಿದ ತರತರದ ಗಂಡಾಂತರಗಳಿಂದ ಅವನು ಎದೆಗುಂದದೆ ಒಳ್ಳೇ ಜಾಣನೂ ಧೀರನೂ ವಿಚಾರವಂತನೂ ಆದನು. ಒಮ್ಮೊಮ್ಮೆ ಅವನು ತನ್ನ ವಿಸ್ತಾರವಾದ ರಾಜ್ಯದಲ್ಲಿ ಸಾರ್ವಭೌಮನೆಂದು ಸನ್ಮಾನ ಪಡೆಯುವನು. ಒಮ್ಮೊಮ್ಮೆ ಏಕಾಂಗಿಯಾಗಿ ವೇಷಾಂತರದಿಂದ ಪ್ರೈಮರಿಸಿಕೊಂಡು ಅನೇಕ ಸಂಕಟಗಳನ್ನೂ ಯಾತಾಯಾತಗಳನ್ನೂ ಅನುಭವಿಸುತ್ತಿರುವನು. ಈ ಮೇರೆಗೆ ಇವನು ಹಲವು ಸಾರೆ ಇಂಥ ಜಯಾಪಜಯಗಳನ್ನು ಸುಖಾಪತ್ತಿಗಳನ್ನೂ ಅನುಭವಿಸಿದ್ದನಾದ್ದರಿಂದ ಸರ್ವ ಪ್ರಸಂಗದಲ್ಲಿ ಸ್ವಸಂರಕ್ಷಣೆ ಮಾಡಿಕೊಳ್ಳಲಿಕ್ಕೆ ಬಲ್ಲವನಾಗಿದ್ದನು ಕಡೆಯಲ್ಲಿ ೧೬೦೧ನೇ ಇಸವಿಯಲ್ಲಿ ದೊಡ್ಡದೊಂದು ಪರಚಕ್ರವು ಸಮರ್ಕಂದವನ್ನು ಮುತ್ತಲು ಇವನು ಉಪಾಯಾಂತರದಿಂದ ತಪ್ಪಿಸಿಕೊಂಡು ಪಾಗಾಗಿ ಹಿಂದುಕುಶ ಪರ್ವತವನ್ನು ಇಳಿದು ನಿಜ್ಜಾಪಮುಣಮಾಡುತ್ತ ಸಿಂಧೂ ತೀರಕ್ಕೆ ತಲಪಿದನು. ಈ ಸಮಯದಲ್ಲಿ ಇವನು ಬದ್ಧ ಏಕಾಂಗಿಯಾಗಿದ್ದನು. ಇದೇ ಅವಸ್ಥೆಯಲ್ಲಿ

ತ್ತ ತನ್ನ ಭೂಮೀ ಉರ್ಜಿತ-ಸ್ಥಿತಿಯನ್ನು ಪಡೆಯಬೇಕೆಂಬ ಹವಣಿಕೆಯಿಂದ ಅನೇಕಜನ ಮಿತ್ರರನ್ನು ಕಲೆಹಾಕಿದನು. ಆ ಜನರ ನೆರವಿನಿಂದ ಕೆಲವು ದಂಡನ್ನು ಕೂಡಿಸಿಕೊಂಡು ದಿಲ್ಲಿಯಲ್ಲಿ ಆಳುತ್ತಿದ್ದ ಲೋಡೀವಂಶದ ಇಬ್ರಾಹಿಮ ಬಾದಶಹನನ್ನು ಕೆಣಕಿದನು. ಈ ದಾಳಿಯಲ್ಲಿ ಇವನಿಗೆ ದೈವಯೋಗದಿಂದ ಯಶದೊರೆಯಿತು. ಕಾಳಗದಲ್ಲಿ ಇಬ್ರಾಹಿಮನು ಮಡಿಯಲು, ದಿಲ್ಲಿಯ ಅರಸೊತ್ತಿಗೆಯು ಇವನಿಗೆ ಪ್ರಾಪ್ತವಾಯಿತು. ಜನ್ಮದಾರಭ್ಯ ಇವನು ಬಡತನದಲ್ಲಿ ಕಾಲಕಳೆದವನೂ ದೀನಾವಸ್ಥೆಯ ಅನುಭವವುಳ್ಳವನೂ ಆಗಿದ್ದದರಿಂದ ಪ್ರಸ್ತುತದಲ್ಲಿ ಒದಗಿದ ಜಯದಿಂದ ಇವನು ಗರ್ವಗಿರಿಯ ಶಿಖರವನ್ನೇರದೆ, ಪರಾತ್ಪರನಾದ ಪರಮೇಶ್ವರನು ತನಗೆ ಒದಗಿಸಿಕೊಟ್ಟಂಥ ಸುಖಭಾಗ್ಯದಿಂದ ನಮ್ರನಾಗಿ ಎಲೈ ದೇವಾ, ಈ ಜಯವು ನಿನ್ನದು, ನನ್ನದಲ್ಲ; ನಿನಗೆ ಸದಾ ಜಯಜಯಕಾರವಿರಲಿ ಎಂದು ಪ್ರಾರ್ಥಿಸಿದನು. ಮುಂದೆ ಒಂದು ವರ್ಷದೊಳಗೇ ಇವನು ಚಿತೋಡವನ್ನು ಗೆದ್ದುಕೊಳ್ಳಲಿಕ್ಕೆ ಅಣಿಯಾದನು.

NEW INVENTION

ಹೊಸಶೋಧವು.

(ಪಿ ಎಸ್. ಚಂದಾವರಕರ ಇವರಿಂದ ಬರೆದು ಬಂದದ್ದು)

ಅಯ್ಯಾ, ಶಾಲಾ ಪತ್ರಕರ್ತರೇ ತಮ್ಮ ಮಾಸ ಪತ್ರಿಕೆಯ ಫೇಬ್ರುವರಿ ತಿಂಗಳ ಸಂಚಿಕೆಯಲ್ಲಿ ಇದರಡಿ ಕೊಟ್ಟ ನಾಲ್ಕು ಪಂಕ್ತಿಗಳಿಗೆ ಸ್ಥಳವನ್ನು ದಯಪಾಲಿಸುವಿರೆಂದು ಕೋರುತ್ತೇನೆ.

ಪ್ರೊಫೆಸರ ಬೊಟವ್ಲೇ ಎಂಬವರು 'ನೈಟ್ರೋ ಬ್ಯಾಕ್ಟರೀನ' ಎಂಬದೊಂದು ಅತ್ಯುಪಯುಕ್ತವಾದ ದ್ರವ್ಯವನ್ನು ಶೋಧಿಸಿ ತೆಗೆದಿದ್ದಾರೆ. ಈ ರಸಾಯನ ದ್ರವ್ಯದ ಉಪ

ಲದಲ್ಲಿ ನೈಟ್ರೋಜನವು ಸಾಕಷ್ಟು ಇಲ್ಲದೆ ನಿಸ್ಸಾರವಾಗಿದ್ದ ಭೂಮಿಯಲ್ಲಿ ವಾಡಿಕೆಯಾಗಿ ಸಿಗುವಷ್ಟಕ್ಕಿಂತ ಹೆಚ್ಚು ಬೆಳೆಯನ್ನು ದೊರಕಿಸಬಹುದೆಂತ ಅನೇಕ ಸಾರೆ ಹೊಲಗಳಲ್ಲಿಯೂ ತೋಟಗಳಲ್ಲಿಯೂ ಪ್ರಯೋಗವನ್ನು ಮಾಡಿ ನಿರ್ಣಯಿಸಿದ್ದಾರೆ. ಪೃಥ್ವಿಯ ಮೇಲೆ ಇಂಥ ಬಂಜರು ಭೂಮಿಯ ಕೊರತೆಯಿಲ್ಲ. ಎಲ್ಲ ಪ್ರಾಣಿಗಳು ಏಕಪ್ರಕಾರವಾಗಿ ಭೂಮಿಯ ಸಾರವನ್ನು ದಣಿಸುತ್ತಿರಲು ಆ ಭೂಮಿಯನ್ನು ಬಲಪಡಿಸುವದಕ್ಕಾಗಿ ಲಕ್ಷಗಟ್ಲೆ ರೂಪಾಯಿ ಬೆಲೆಯ ನೈಟ್ರೋಜನಯುಕ್ತವಾದ ಗೊಬ್ಬರವನ್ನು ಖರ್ಚು ಮಾಡಬೇಕಾಗುವದು. ನೈಟ್ರೋಜನದ ಹೊರತು ಯಾವ ಬೆಳೆಯಾದರೂ ಬಲಕೊಳ್ಳುವದಿಲ್ಲ. ಭೂಮಿಯಲ್ಲಿ ಇದರ ಅಸ್ತಿತ್ವದ ಮಹತ್ವವು ಎಷ್ಟು ಎಂಬದರ ವಿಷಯಕ್ಕೆ ವಿಚಾರ ಮಾಡೋಣ.

ಸಸ್ಯಾದಿಗಳ ಬೆಳೆಯುವಿಕೆಗೆ ೧೦ ಪ್ರಕಾರದ ದ್ರವ್ಯಗಳು ಅತ್ಯವಶ್ಯವಾಗಿರುವವು. ಇವುಗಳಲ್ಲಿ ೭ ದ್ರವ್ಯಗಳು ಯಾವ ತರದ ಭೂಮಿಯಲ್ಲಾಗಲಿ ಸಾಕಷ್ಟಕ್ಕಿಂತ ಹೆಚ್ಚು ಇರುವವು. ಉಳಿದ ೩ ದ್ರವ್ಯಗಳು ಅಂದರೆ 'ನೈಟ್ರೋಜನ' 'ಫೊಸ್ಫೋರಸ್' ಮತ್ತು 'ಪೋಟ್ಯಾಶ್' ಇವು ಸಸ್ಯಾದಿಗಳಿಗೆ ಬಹಳ ಬೇಕಾಗಿರುವದರಿಂದಲೂ ಇವುಗಳ ಸಂಚಯವು ವಾಡಿಕೆಯಾಗಿ ಭೂಮಿಯಲ್ಲಿ ತೀರ ಕಡಿಮೆ ಪ್ರಮಾಣದಲ್ಲಿರುವದರಿಂದಲೂ ನಿರಂತರವಾಗಿ ಪೈರು ಬೆಳಸುವದರಿಂದ ಭೂಮಿಯ ಕಸವು ಕಡಿಮೆಯಾಗಿ ತೀರಿದ ದ್ರವ್ಯಗಳನ್ನೆಲ್ಲ ತಿರಿ ತಿರಿಗಿ ಭೂಮಿಯಲ್ಲಿ ನೆಲೆಗೊಳಿಸುವದಕ್ಕಾಗಿ ಸಹಜವಾದ ಗೊಬ್ಬರವನ್ನಾಗಲಿ ಕೃತಕ ಗೊಬ್ಬರವನ್ನಾಗಲಿ ವೇಳಿಂದ ಮೇಲೆ ಉಪಯೋಗಿಸಬೇಕಾಗುತ್ತದೆ.

ಅಮೇರಿಕಾದಲ್ಲಿ ಮುಖ್ಯ ಮುಖ್ಯವಾದ ಜಾತಿಯ ಭೂಮಿಯ ಮಣ್ಣನ್ನು ಅನೇಕ ಸಾರೆ ಪರೀಕ್ಷಿಸಿ ನೋಡಲಾಗಿ ಒಂದು ಎಕರೆ ಭೂಮಿಯ ಮೇಲ್ಭಾಗದಿಂದ ೮ ಇಂಚುಗಳ

ದಂತೆ ಇರುವವೆಂದು ಗೊತ್ತುಪಡಿಸಿದ್ದಾರೆ—ನೈಟ್ರೋಜನ ೨೬೦೦ ಪೌಂಡು. ಫೊಸ್ಫೊರಿಕ್ ಎಸಿಡ್ ೪೮೧೦ ಪೌಂಡ್ ಮತ್ತು ಪೊಟ್ಯಾಶ್ ೧೩,೪೦೦ ಪೌ. ಅಲ್ಲಿ ಒಂದು ಎಕರೆಗೆ ೧೪ ಬುಶೆಲ್ ಗೋಧಿ ಹುಟ್ಟುತ್ತದೆ. ಇಷ್ಟು ಗೋದಿ ಬೆಳೆಯಬೇಕಾದರೆ ಭೂಮಿಯೊಳಗಿಂದ ನೈಟ್ರೋಜನ ೨೯.೩ ಫೊಸ್ಫೊರಿಕ್ ಎಸಿಡ್ ೯.೫ ಪೌ. ಮತ್ತು ಪೊಟ್ಯಾಶ್ ೧೩.೭ ಪೌ ಖರ್ಚ ಆಗುವದು ಇದರಿಂದ ನೈಟ್ರೋಜನದ ಹೊರತಾಗಿ ಉಳಿದ ಎರಡು ದ್ರವ್ಯಗಳು ಭೂಮಿಯಲ್ಲಿ ಹೇರಳವಿದ್ದು ಅವುಗಳನ್ನು ದೊರಕಿಸಿಕೊಳ್ಳುವದು ಸುಲಭವಾಗಿರುವದರಿಂದ ಎಂದಾದರೂ ಇವುಗಳ ಕೊರತೆಯುಂಟಾದೀತೆಂಬ ಅಂಜಿಕೆಗೆ ಕಾರಣವಿಲ್ಲೆಂಬದು ಸ್ಪಷ್ಟವಾಗುತ್ತದೆ. ನೈಟ್ರೋಜನವು ಮಾತ್ರ ಸಂಯುಕ್ತ ಸ್ಥಿತಿಯಲ್ಲಿ (ಅಂದರೆ ಸಸ್ಯಾದಿಗಳಿಗೆ ತಕ್ಕುದಾದ ಆಹಾರದ ರೂಪದಲ್ಲಿ) ದುರ್ಲಭವಾಗಿರಲಿಕ್ಕೆ ಅದರ ಪ್ರಮಾಣವೂ ಸಸ್ಯಾದಿಗಳಿಗೆ ಬೇರೆ ದ್ರವ್ಯಗಳಿಗಿಂತ ಹೆಚ್ಚು ಬೇಕಾದುದರಿಂದ ಇದೊಂದೇ ದ್ರವ್ಯದ ವಿಷಯಕ್ಕೆ ಮಾತ್ರ ತಿಳುವಳಿಕೆಯಿದ್ದ ಎಲ್ಲ ಕೃಷಿಕರು ಯೋಚನೆ ಪಡುವದಾಗಿತ್ತು.

ಪೃಥ್ವಿಯ ಪೃಷ್ಠದ ಪ್ರತಿಯೊಂದು ಎಕರೆ ಭೂಮಿಯ ಮೇಲಿನ ವಾತಾವರಣದಲ್ಲಿ ೩೫,೦೦,೦೦೦ ಪೌಂ ಅಸಂಯುಕ್ತ ನೈಟ್ರೋಜನವು ಇರುವದೆಂದು ಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ. ಈಗ 'ನೈಟ್ರೇಟ ಆಫ ಸೋಡಾ' (ನೈಟ್ರೋಜನ ಯುಕ್ತವಾದ ಒಂದು ಜಾತಿಯ ಗೊಬ್ಬರ) ಇದರಲ್ಲಿ ಶೇಕಡಾ ೧೬ರಂತೆ ನೈಟ್ರೋಜನವು ಇರುತ್ತದೆ. ಈ ಗೊಬ್ಬರದ ಬೆಲೆಯನ್ನು ೧೦೦ ಪೌಂ. ಗೆ ೮ ಶಿಲಿಂಗಿನಂತೆ ಎಣಿಸಿದರೆ ೧ ಪೌಂ. ನೈಟ್ರೋಜನದ ಬೆಲೆಯು ೬ ಪೇನ್ಸ ಆಗುವದು. ಈ ಲೆಕ್ಕದಿಂದ ಪ್ರತಿಯೊಂದು ಎಕರೆ ಭೂಮಿಯ ಮೇಲಿನ ವಾತಾವರಣದಲ್ಲಿ ಉಪಯೋಗಕ್ಕೆ ಬರುವಂಥ ಅಸಂಯುಕ್ತ ನೈಟ್ರೋಜನವು ಸರಾಸರಿ ೨೦ ಲಕ್ಷ ಪೌಂಡು ಬೆಲೆಯುಳ್ಳದಿರುತ್ತದೆಂಬ ಮಾತು ಸ್ಪಷ್ಟವಾಗುತ್ತದೆ.

ವಾತಾವರಣದೊಳಗಿನ ಅಸಂಯುಕ್ತ ನೈಟ್ರೋಜನವನ್ನು ಯಾವ ಒಗೆಯಿಂದ ಉಪಯೋಗಿಸಿಕೊಳ್ಳಬಹುದೆಂಬದು ಸೃಷ್ಟಿ ಕ್ರಮದ ಆತ್ಯಾಶ್ಚರ್ಯಕರವಾದ ಅಗಾಧ ನಿಯಮಗಳ ಸಾಧನೆಗಳಿಂದಲೇ ತಿಳಿದು ಬರುತ್ತದೆ. ಸಸ್ಯಾದಿಗಳ ವಿಶೇಷವಾಗಿ ಅವರೆ ಕಡ್ಲೆ ಉದ್ದು ಮುಂತಾದ ಬೇಳೆಯಾಗುವ ಧಾನ್ಯದ ಸಸಿಗಳ, ಬೇರುಗಳ ಮೇಲೆ ಸಣ್ಣ ಸಣ್ಣ ಗಂಟುಗಳಿರುವವು. ಈ ಗಂಟುಗಳಲ್ಲಿ ಒಂದು ತರದ ಅಣು ಪ್ರಾಣಿಗಳು ಮನೆ ಮಾಡಿಕೊಂಡು ಹವೆಯೊಳಗಿನ ಅಸಂಯುಕ್ತ ನೈಟ್ರೋಜನವನ್ನು ಹೀರಿಕೊಂಡು ಅದಕ್ಕೆ ಭೂಮಿಯಲ್ಲಿದ್ದ ಬೇರೆ ಕೆಲವು ತತ್ವಗಳ ಸಂಯೋಗವನ್ನುಂಟು ಮಾಡಿಸಿ ಸಸ್ಯಾದಿಗಳಿಗೆ ಯೋಗ್ಯವಾದ ಆಹಾರವನ್ನು ಸಿದ್ಧಪಡಿಸುವವೆಂದು ಕಂಡು ಬಂದದೆ. ಸರ್ವವ್ಯಾಪಿಯೂ ಸರ್ವ ತ್ರಾಣಿಯೂ ಆದ ಸೃಷ್ಟಿಕರ್ತನ ಅಪಾರವಾದ ಚಾತುರ್ಯವನ್ನೂ ಅಗಾಧವಾದ ಲೀಲೆಯನ್ನೂ ಎಷ್ಟು ಬಣ್ಣಿಸಿದರೂ ಕಡಿಮೆ!

‘ನೈಟ್ರೋಬ್ಯಾಕ್ಟ’ ಲೀನದ ಕಾರ್ಯವು ಗೊಬ್ಬರದ ಕಾರ್ಯದಿಂದ ತೀರ ಭಿನ್ನವಿರುತ್ತದೆ ಗೊಬ್ಬರದಲ್ಲಿ ಸಸ್ಯಾದಿಗಳಿಗೆ ತಕ್ಕದಾದ ಆಹಾರವು ಸಿದ್ಧವಾಗಿದ್ದೇ ಇರುತ್ತದೆ. ಇದು ಗೊಬ್ಬರವಲ್ಲ. ಆದರೆ ಗೊಬ್ಬರವನ್ನು ತಯಾರಿಸುವ ಅಣುಪ್ರಾಣಿಗಳ ಕುಲವನ್ನು ಬೆಳಿಸುವ ಒಂದು ತರದ ದ್ರವ್ಯವಿರುತ್ತದೆ. ಒಂದು ಎಕರೆ ಭೂಮಿಗೆ ೪ ಶಿಲಿಂಗು ೬ ಪೇನ್ಸು ಬೆಲೆಯ ಈ ದ್ರವ್ಯವನ್ನು ಉಪಯೋಗಿಸಿದರೆ ಶೇಕಡಾ ಸರಾಸರಿ ೬೦ರಿಂದ ೮೦ರ ವರೆಗೆ ಬೆಳೆಯು ಹೆಚ್ಚು ಬರುವದೆಂತ ಪ್ರಯೋಗಗಳಿಂದ ಗೊತ್ತು ಪಡಿಸಿದ್ದಾರೆ.

ಪೈರುಗಳನ್ನು ಬೆಳಸುವ ಕಾರ್ಯಕ್ಕಾಗಿ ವಾತಾವರಣದೊಳಗಿನ ಅಸಂಯುಕ್ತ ನೈಟ್ರೋಜನವನ್ನೂ ಸಸ್ಯಾದಿಗಳಿಗೆ ಯೋಗ್ಯವಾದ ಆಹಾರದ ರೂಪದಲ್ಲಿ ಹೇಗೆ ದೊರಕಿಸಬಹುದೆಂಬ ವಿಚಾರವು ಅನೇಕ ಶಾಸ್ತ್ರಜ್ಞರಿಗೆ ಇದು ವರೆಗೆ ಒಗೆಹರಿಯದೆ ಈಗ ಪ್ರೋ. ಬೂಟಮ್ಲೇಯವರು ಬಹು ಶ್ರ

ಮುಬಟ್ಟು ಮಾಡಿದ ಶೋಧನೆಗಾಗಿ ಎಲ್ಲರೂ ಆ ಮಹನೀಯುರ ಉಪಕಾರವನ್ನು ನೆನಿಸತಕ್ಕದ್ದು.

VALUABLE EDUCATION.

ಸತ್ ಶಿಕ್ಷಣ

ಪೂರ್ವಕಾಲದಲ್ಲಿ ಒಬ್ಬ ಪ್ರಖ್ಯಾತನಾದ ನರಪತಿ ಇದ್ದನು ಇವನು ವಿದ್ಯಾಪಕ್ಷಪಾತಿಯಾಗಿ ಕೊಡಗೈಯಲ್ಲಿ ಕೇವಲ ಕರ್ಣ ನೆನಿಸಿಕೊಳ್ಳುತ್ತಿದನು. ಆದರಿಂದ ಅನೇಕ ಜನ ಪಂಡಿತರು ಇವನ ಬಳಿಗೆ ಬಂದು ತಮ್ಮ ಪಾಂಡಿತ್ಯವನ್ನು ತೋರಿಸಿ ಸಂಭಾವನೆಯನ್ನು ಪಡಕೊಂಡು ಹೋಗುವರು ಇವನು ಬಂದ ವಿದ್ವಾಂಸರಿಗೆಲ್ಲ ಇದೊಂದೇ ಶ್ಲೋಕದ ಅರ್ಥವನ್ನು ಕೇಳುವನು. ಅದು ಯಾವದೆಂದರೆ:—

अनन्याश्चिंतयंतो मां ये जनाः पर्युपासते॥
तेषां नित्याभियुक्तानां योगक्षेमं वहाम्यहम् ॥ १॥

ಈ ಶ್ಲೋಕವು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನಿಂದ ಉಕ್ತವಾಗಿರುವದು. ಇದರ ಶಬ್ದಾರ್ಥವು ಒಂದೆರಡು ಸಂಸ್ಕೃತ ಪುಸ್ತಕಗಳನ್ನು ಕಲಿತವರಿಗೆ ಸುಲಭವಾಗಿ ತಿಳಿಯುವದು. ಯಾವನು ಅನನ್ಯಭಾವದಿಂದ ನನ್ನ ಚಿಂತನೆಯನ್ನೂ ಉಪಾಸನೆಯನ್ನೂ ಮಾಡುವನೋ ಅವನ ನಿತ್ಯದ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ. ಎಂಬಗೇ ಇವರ ಅರ್ಥವು.

ಬಂದವರೆಲ್ಲ ಈ ಅರ್ಥವನ್ನು ಹೇಳಿದರೂ ಅರಸನು ಒಡಂಬಡುತ್ತಿದ್ದಿಲ್ಲ. ಕೆಲಕೆಲವು ಪಂಡಿತರು ತಮ್ಮ ಶಬ್ದಪಾಂಡಿತ್ಯದಿಂದ ಎರಡೆರಡು ಮೂರುಮೂರು ಅರ್ಥಗಳನ್ನು ಹೇಳುವರು ಆದರೂ ಅರಸನು ಅದಕ್ಕೊಪ್ಪಿಕೊಳ್ಳದೆ ನಿ

ಮಗೆ ಅದರ ಅರ್ಥ ಬರುವದಿಲ್ಲೆಂದು ಖಂಡಿತವಾಗಿ ಹೇಳಿ ಬಿಡುವನು. ಇದರಿಂದ ಎಷ್ಟೋ ಪಂಡಿತರು ಮಾನಭಂಗ ಹೊಂದಿ ಹೋದರು. ಕಡೆಯಲ್ಲಿ ಒಬ್ಬ ಪಂಡಿತನು ಅರಸನ ಓಲಗಕ್ಕೆ ಬರಲು, ಅರಸನು ವಾಡಿಕೆಯಂತೆ ಈ ಶ್ಲೋಕದ ಅರ್ಥವನ್ನು ಕೇಳಿದನು. ಆ ವಿದ್ವಾಂಸನಾದರೂ ತನ್ನ ಪಾಂಡಿತ್ಯದ ಬಲದಿಂದ ಪರಿಪರಿಯ ಅರ್ಥವನ್ನು ಹೇಳಿದರೂ ಅರಸನು ನಿಮಗೆ ಈ ಶ್ಲೋಕದ ಅರ್ಥವು ಬರುವದಿಲ್ಲೆಂದು ಸ್ಪಷ್ಟವಾಗಿ ಹೇಳಲು, ಬ್ರಾಹ್ಮಣನು ನಿರೀಕ್ಷನಾಗಿದೆ "ನನಗೆ ಮೂರು ದಿವಸದ ಅವಧಿಯನ್ನು ದಯಪಾಲಿಸಿದರೆ ಇದರ ಅರ್ಥವನ್ನು ಹೇಳುವೆನೆಂದು" ನುಡಿಯಲು ರಾಜನು ಒಪ್ಪಿಕೊಳ್ಳಲು, ಬ್ರಾಹ್ಮಣನು ಅರಸನ ಅಪ್ಪಣೆಯನ್ನು ಪಡೆದು ಮನೆಗೆ ಬಂದು ಚಿಂತಿಸುತ್ತ ಕುಳಿತನು. ಆ ಬ್ರಾಹ್ಮಣನ ಮಗಳು ರಾಜಸಭೆಯಿಂದ ಬಂದ ತಂದೆಯು ಚಿಂತಾರ್ಣವದಲ್ಲಿ ಮುಳುಗಿರುವದನ್ನು ಕಂಡು ಅವನ ಬಳಿಗೆ ಬಂದು ತಂದೆಯೇ, ನಿನ್ನ ಮನಸಿಗೆ ಇಷ್ಟು ಪರಿತಾಪವನ್ನೊದಗಿಸಿದಂಥ ಸಂಗತಿಯಾದರೂ ಯಾವದು! ಎಂದು ಪ್ರಶ್ನೆ ಮಾಡಲು ಬ್ರಾಹ್ಮಣನು ನೃಪನೋಲಗದಲ್ಲಿ ತನಗೆ ಅರ್ಥ ಹೇಳಲಿಕ್ಕೆ ಬಾರದ ಶ್ಲೋಕವನ್ನು ನುಡಿದು, ಮಗಳೇ ಇದರ ಅರ್ಥವನ್ನು ನಾನು ಹೇಳಿದರೂ ಅರಸನು ನಿನಗೆ ಇದರ ಅರ್ಥ ಬರುವದಿಲ್ಲೆಂದು ಸ್ಪಷ್ಟವಾಗಿ ನುಡಿದನು. ಅದರಿಂದ ನನ್ನ ಅಪ್ರತಿಷ್ಠೆಯಾಯಿತು. ಇನ್ನು ಮೂರು ದಿವಸಗಳಲ್ಲಿ ಇದರ ಅರ್ಥವನ್ನು ಹೇಳುತ್ತೇನೆಂದು ಅವಧಿಯನ್ನು ಪಡೆದು ಬಂದಿರುವೆನು. ಇದೇ ನನ್ನ ದುಗುಡಕ್ಕೆ ಕಾರಣವೆನಲು, ಮಗಳು ನೀವು ಹೇಳಿದ ಅರ್ಥವೇನು? ಎಂದು ಕೇಳಲು, ಬ್ರಾಹ್ಮಣನು ನಾವು ನೋಡಿ ವಿವರಿಸಿದ್ದ ಅರ್ಥವನ್ನು ಹೇಳಿದನು. ಆಗ ಆ ಬಾಲಿಕೆಯು ಕ್ಷಣಹೊತ್ತು ಆಲೋಚಿಸಿ, ತಂದೆಗಳೇ, ಆ ರಾಜನು ತಮಗೆ ಇದರ ಅರ್ಥ ಬರುವದಿಲ್ಲೆಂದು ನುಡಿದದ್ದು ಯಥಾರ್ಥವು. ಎಂದು ನುಡಿಯಲು, ಬ್ರಾಹ್ಮಣನು ಗಾಬರಿಯಾಗಿ ಏನು ನನ್ನ

ಶಿಷ್ಯತ್ವೆಯು ಇಂದು ಲಯವಾಯಿತೋ? ನನ್ನ ಬುದ್ಧಿಯು ನನ್ನನ್ನು ತ್ಯಜಿಸಿಹೋಯಿತೋ! ದರಬಾರದಲ್ಲಿ ಆದ ಮಾನಭಂಗವು ಸಾಲದೆಂದು ಬಗೆದು ದೇವರು ಈ ಮುಗ್ಧಬಾಲಿಕೆಯಿಂದ ನನ್ನನ್ನು ಹೆಚ್ಚಿಗೆ ಅವಮಾನ ಪಡಿಸುವನೋ! ಎಂದು ಅಂದುಕೊಂಡು, ಮಗಳೇ ಇದರ ನಿಜವಾದ ಅರ್ಥವನ್ನು ನೀನು ಹೇಳು, बालादपि सुभाषितम् ग्राह्यम् ಎಂಬ ಮಾತು ಉಂಟಷ್ಟೇ, ಬೆದರಬೇಡ, ಹೇಳು, ಎನಲು; ಅವಳು ತಂದೆಯೇ ಈ ಶ್ಲೋಕದಲ್ಲಿ ಹೇಳಿದ ಅರ್ಥವು ಅಂದರೆ ಪರಮೇಶ್ವರನ ವಾಕ್ಯವು ನಿಮಗೆ ತಿಳಿದು ಅದರಂತೆ ನಿಮ್ಮ ಬುದ್ಧಿಗೆ ಸಂಸ್ಕಾರವಾಗಿದ್ದರೆ ಅಂದರೆ ಅದರ ನಿಜವಾದ ಅರ್ಥವು ತಿಳಿದಿದ್ದರೆ ನೀವು ಅರಸನ ಬಳಿ ಯಾಚಕವೃತ್ತಿಯನ್ನು ವಹಿಸಿ ಎಂದೂ ಹೋಗುತ್ತಿದ್ದಿಲ್ಲ. ನಿಮಗೆ ಕೇವಲ ಶಬ್ದಾರ್ಥಜ್ಞಾನವಷ್ಟೇ ಆಗಿರುವದಾದ್ದರಿಂದ ನೀವು ಯೋಗಕ್ಷೇಮಕ್ಕಾಗಿ ಅರಸನಿಗೆ ಕೈವೊಡ್ಡುತ್ತೀರೆಂದು ಹೇಳಲು, ಬ್ರಾಹ್ಮಣನ ಮನದಲ್ಲಿ ಸತ್ಯಜ್ಞಾನದ ಬೆಳಕು ಝಗ್ಗನೆ ಹೊಳೆಯಿತು ಮುಂದೆ ಅವನು ಅರಸನ ಬಳಿಗೆ ಹೋಗಲಿಲ್ಲ. ಅರಸನಾದರೂ ಇವನಿಗೆ ನಿಜವಾದ ಅರ್ಥವು ತಿಳಿಯಿತೆಂದು ನೆನೆದು ಅವನಿಗೆ ಬಹುಮಾನ ಮಾಡಿದನು.

ತಾತ್ಪರ್ಯವೇನಂದರೆ ಶಬ್ದಜ್ಞಾನಕ್ಕೂ ತತ್ವಜ್ಞಾನಕ್ಕೂ ಮಹದಂತರವುಂಟೆಂಬದನ್ನು ವಿದ್ಯಾರ್ಥಿಗಳು ತಿಳಿದುಕೊಂಡು ಜ್ಞಾನಾರ್ಜನೆಯಲ್ಲಿ ತೊಡಗಬೇಕು.

DEPARTMENTAL NOTICE.

ನೋಟೀಸು.

ಎಲ್ಲ ಕನ್ನಡಶಾಲೆಗಳ ಮಾಸ್ತರರಿಗೆ ತಿಳಿಸುವದೇನಂದರೆ ಶಿತ್ರಗಳದೆಶೆಯಿಂದ ಒಳ್ಳೇ ಹಸ್ತಾಕ್ಷರದ ನಮೂನೆಗಳು ಬೇಕಾಗಿರುತ್ತವೆ. ಅದರ ದೆಶೆಯಿಂದ ಆತರದ ನಮೂನೆಗಳು ಸಿಗುವ ಹಾಗಿದ್ದ ಎಲ್ಲ ಶಾಲೆಗಳ ಮಾಸ್ತರರು ಬರ

ವ ಮೇ ತಿಂಗಳ ಕೊನೆಯು ಒಳಗೆ ಕೆಳಗೆ ಸಹಿ ಮಾಡಿದ ವರ ಪತ್ರಿಗೆ ಕಳಿಸಿ ಕೊಡಬೇಕು. ಯಾರ ಕಿತ್ತಿಗಳು ಒಳ್ಳೇವೆಂದು ನಿರ್ಣಯಿಸಲ್ಪಡುವವ್ರೋ ಅವುಗಳ ಬಗ್ಗೆ ಮಂಜೂರಿ ತರಿಸಿ ಅವುಗಳು ಶಾಲೆಯಲ್ಲಿ ಉಪಯೋಗಿಸಲ್ಪಡುವವು. ಮತ್ತು ಪಸಂದ ಆದಮಾಸ್ತರರಿಗೆ ಉಚಿತಶಿಗುವದು.

ಧಾರವಾಡ ಟ್ರೇನಿಂಗ ಕಾಲೇಜ
ತಾ ॥ ೧೪—೨—೦೮

S. K. RODDA.
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

ಶ್ರೀ.

ಗುರುವರ್ಯರಾದ ರಾವಸಾ. ಕನ್ನಡ ಶಾಲಾಪತ್ರಿಕದ ಸಂಪಾದಕ ಮಹಾಶಯರ ಸನ್ನಿಧಿಗೆ:—

ಸಾ. ನ. ವಿ. ತರುವಾಯು, ಎಂದಿನಂತೆ ಶ್ರೀಮಕರ ಸಂಕ್ರಮಣ ಸಂಬಂಧವಾದ ಶರ್ಕರಾವಗುಂಠಿತ -ಸುತಿಲಂಗಳನ್ನು ಪ್ರಿಯಗುರುವರಿಷ್ಠರಿಗೂ ಪ್ರೇಮದ ವ್ಯವಸಾಯಬಂಧುಗಳಿಗೂ ಸಾಕಾಗಿ ಉಳಿಯುವನಿತು ಇದರೊಡನೆ ಕಳುಹಿದೆ. ದಯಮಾಡಿ ಸ್ವೀಕಾರಗೆಯ್ಯುವದಲ್ಲದೆ ಸರ್ವರಿಗೂ ಮುಟ್ಟುವಂತೆ ತಮ್ಮಯ ಪತ್ರಕದಲ್ಲಿ ಇಂಬೀಯಬೇಕು.

ಎಳ್ಳೆಲ್ಲದಿನಿವಾಡುಗಳು.

ಕಂದಂ॥ ಸಿರಿ, ಕೌಸ್ತುಭದೊಳ್ ಮೂಡಿದ।
ಸ್ವ+ರೂಪಮನೆನೋಡಿ ಬೇರೆ ಕೆಣ್ಗೆತ್ತೀಪಿಂ॥
ದುರು--ದಿಟ್ಟಿಪಳೆ ಮುಗ್ಧತೆ।
ಗರೆನಗೆಯುಂನಗುವ ಶ್ರೀಶನೋವುಗೆ ನಮ್ಮಂ॥

॥ ಚಂಪಕಮಾಲಾವೃತ್ತಂ ॥

ಇದು ಮಕರಾಖ್ಯ ಸಂಕ್ರಮಣಸರ್ವಣಿ ವಿಶ್ರುತಪುಣ್ಯಕಾ

ಇದು ಹಿತದಿಷ್ಟ ಮಿತ್ರಗುರುವರ್ಯಜನಂ ಬೆರಸುಣ್ಣ ಸ
ಯ್ಯುವ್ರೊ ॥
ಕಿ್ರದು ನಿಜವೃತ್ತಿ ಯೋಳ್ಗಗನಿದೆಳ್ಗ್ಗಡಲುಂ ಕೊಳಲುಂ
ಸಯೋಗವಿಂ ॥
ತಿದುವಿದು ಸೂರ್ಯಸಂಕ್ರಮಣ ಸೂತ್ಸವಮೆಂಬ ಕೆಸರ್ಗೆ
ಯೋಗ್ಯಮೋ ॥

॥ ಶಾ.ವಿ-ವೃ ॥

ಆರೋಗ್ಯಂ ಬೆಳ್ಸೈಕಿಲಿಂದೆತವ್ರುಗುಂಕ ಸ್ನಾಶಕೀ ಮರ್ದ್ದ
ನೊಂ ।
ದಾರಬ್ಧಿಳ್ಗಳಸ್ನಾನದಾನಹವನಾ ಹಾರಂಗಳಂ ರೂಢಿಯೋ
ಳ್ ॥
ಸೇರಿರ್ಪಂತೆಸಗಿರ್ಪರಲ್ಲದೆವಲಂ ಕ್ರೀಮಾಬ್ಧಿಯುಕ್ಕೇರ
ತ್ತೆಳ್ ।
ಕೋರಂತೆಲ್ಲರೊಳೀವ ಕಟ್ಟಸಗಿದರ್ ಪ್ರಾಚೀನ ಸುಜ್ಞಾನಿ
ಗಳ್ ॥

॥ ಮತ್ತೇಭ. ವಿ. ವೃ ।

ಇನನೀಗಳ್ ಕ್ರಮದಿಂದೆ ಸಂಕ್ರಮಿಸುತಂ ಬಿಟ್ಟು ಧನು
ಸಂಘಮಂ ।
ಮನವೋಲ್ದೀ ಮಕರಕ್ಕೆ ಬಂದಿರೆ ಪಗಲ್ ಸೈಚ್ಛಾಯ್ಯು
ಸಂತುಷ್ಟಿಸಂ ॥
ಜನಿಸಿತ್ತಿಲ್ಲಜನಕ್ಕೆ ಪರ್ಬದಕುಳಿರ್ ಕುಂದಲ್ದಲಿಂಬಾ
ಯ್ತುವೇ ।
ಕಾನುವಾಯ್ತ್ರೊಕ್ಕಲಿಗರ್ಗೆಬಂದ ಬೆಳಸಂತಂ ದೊಕ್ಕಲಂತಿ
ಕ್ಕಲುಂ ॥

ಮತ್ತೇಭ ವಿ. ವೃ

ಎನಿತುಂ ಶ್ರೀಮಕರಧ್ವಜಂಗೆ ಮುದಮಂತಾವಿೂಯುಲೆಳ್ಪಿ
ಲ್ಲಬಾ ।
ಯುಮಂ ಸೀಡುತ ಮೃದೆಯರ್ ಸವಿಯುತಮಂ ಬೆಲ್ಲಗ್ಗಳಂ
ಬಾಲಕರ್ ॥
ಮುನಿನೋಡಲ್ ಕುಸುರೆಳೊಡುತ ಮಿತರರ್ ತಂತಮ

ಜನನಿಲ್ಲಂನೆರೆದಿಂತು ಶ್ರೀಮಕರಸಂಕ್ರಾಂತ್ಯುತ್ಸವಂಗೆಯ್ದಪರ್

ಕಂದಂ ॥ ತಿಲಕಂ ಸೌಭಾಗ್ಯದಕಲೆ।
ಲಲನಾಮಣಿಗಳ್ಗೆ, ಪೌರುಷದ ಸಲ್ಲಕ್ಷ್ಮಂ ॥
ಕಲಿಗಳ್ಗೆ, ದೃಷ್ಟಿದೋಷದ।
ಕಿಲುಬಂಕಳೆದೀಳ್ಗುಕುರುಪುಕಂದರ್ಗೆ ಕರಂ ॥

ಕಂದಂ ॥ ಇದು ವೈತ್ರಿಯ ಮಾಲಿಕೆಯೋ।
ಸಿದುದುರ್ಧರದುಃಖದೂರಿ ಧನದಾಯಿನಿತಾ ॥
ಸಿದು ಪರವಿರೋಧವಾರಿಣಿ।
ಯಿದುವಿನಯ ಗುಣೋಪದೇಶಿಯೆನಿಕುಂತಿಲಕಂ।

ಪಿರಿದಿನಿದಾದಪಾಕಮನಮುಜ್ಜಿಸಿಕೊಂಪುಕುಳಗ್ಗಳಾಗದಾ।
ಕ್ಷೀರನಿರದೋಳಿಬಂಣದುಡಿಪಂಹೃದಯಂಗಮಮಾಗೆ ಮಾಡಿಬಲ್
ಮರುಕದೆ ಮಕ್ಕಳಂ ಪೊರೆವವೊಲ್ ತಿಳಕಂಗಳ ನೆಳ್ಳರಿಂದ ಮೋಹಾ ॥
ತರುಣಿಯರಳ್ಕರಿಂದೆರಚಿಪರ್ ಮಿಗೆಮೋಹಮದೆಂತು ಪೂರ್ವದೋ ॥

ಕಂದಂ॥ ಬಗೆವೊಳವೆಳ್ಳಿನಿದಿರ್ಪೆಂ।
ಬೊಗೆಯದೆ ಸುಪ್ರೇಮ ಶರ್ಕರಾ ಸಂಸ್ಕೃತಿಯಿಂ।
ಬಗೆವೃಗೆ ಗೆಯ್ದು ಕೊಳಲ್ಕಯ್।
ಮುಗಿಯುತ್ತಂಕಬ್ಬೊಳಕ್ಕೆ ಪ್ರಾರ್ಥಿಸೆನೊಲವಿಂ।

ಕಂದಂ॥ ಕನ್ನಡದಭಿಮಾನಿಗಳಿರ।
ಕನ್ನಡಿಗಂ ನಾನೋರ್ವನೊಲ್ದು ಬೆಲ್ಲಗಳುಮಂ।
ಬಿನ್ನಪದೀಯೊರ್ಬ ಘುಮಂ।
ಸನ್ನಿಧಿಗಿವನೀವೆನಪ್ಪುಗೆಯ್ವುದು ತಾವ್ಗಳ್ ॥

ಶ್ರೀರಸ್ತು.

ಬೀಡು—ಶಿಶುವಿನಹಳ್ಳಿ.
ತಾ॥ ೧೮ ಜನವರಿ ೧೯೦೮

ತಮ್ಮ ವಿಧೇಯಂ
ಕೃಷ್ಣಾಜಿ ಶಂಕರ ಇಂಗಳಗಿ.
[illegible] — ಶಿಶುವಿನಹಳ್ಳಿ

ಕೆಳಗೆ ಬರೆದ ಶಾಲಾಖಾತೆಯಿಂದ ಇನಾಮಿಗೂ,
ಲಾಯಬ್ರರಿಗೂ ಮಂಜೂರಾದ ಪುಸ್ತಕಗಳು
ನಮ್ಮಲ್ಲಿ ಮಾರಾಟಕ್ಕೆ ಸಿಗುವವು.

ಮೂಲ ಬೆಲೆ. ರೂ. ಆ.		ಕಡಿಮೆ ಮಾಡಿದ ಬೆಲೆ. ರೂ. ಆ.
೦—೯	ಕವಿತೆಯ ೨ನೇ ಪುಸ್ತಕ (2 nd Book of Poetry)	೦—೨
೦—೭	ಕ್ಷೇತ್ರವ್ಯವಹಾರಗಣಿತ (Practical Geometry)	೦—೪
೦—೧೧	„ ಪ್ರಮೇಯಗಳು (Geometrical figures)	೦—೧
೦—೫	ಯಂತ್ರಶಾಸ್ತ್ರ (Mechanics)	೦—೪
೨—೮	ಅರ್ಥಶಾಸ್ತ್ರ (Political Economy)	೧—೦
೦—೨	ಜಗತ್ತಿನ ಇತಿಹಾಸ (Universal History)	೦—೧
೬—೫		೧—೧೧
	ವ್ಹಿ. ಪಿ. ಕಮಿಶನ	೦—೧
		೧—೧೨

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳನ್ನು ಒಮ್ಮೇಲೆ ತಕ್ಕೊಂಡರೆ ದಕ್ಕ್ರು ರೂ. ೧(೧—೨ ಮಾತ್ರ) ಬೀಳುವದು. ಟಪಾಲ ಹಾಸಲ ಬೀಳಲಿಕ್ಕಿಲ್ಲ. ೧೦ ರು. ಯಿಂದ ೨೫ ರೂಪಾಯಿ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೧೦.೧೨.೫ ಮತ್ತು ೨೫ ಕ್ಕಿಂತ ಹೆಚ್ಚಿಗೆ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೨೦ ರಂತೆ ಕಮಿಶನ್ನು ದೊರೆಯುವದು.

ಪುಸ್ತಕಗಳು ಕೆಳಗೆ ಬರೆದವರಲ್ಲಿ ದೊರೆಯುವವು.

೧. ಮೆಸರ್ಸ ಎಸ್. ಎಚ್. ತ್ರಿಪಾಠಿ ಆ್ಯಂಡ ಕಂಪನಿ ಪ್ರಿನ್ಸೆಸ ರೋಡ ಮುಂಬಯಿ.

೨. ಧಿ. ಗುಜರಾಥ ಪ್ರಿಂಟಿಂಗ ಪ್ರೆಸ. ಕೋಟ ಸರ್ಕಲ ಮುಂಬಯಿ.

೩. ರಾ ಕರಸನದಾಸ ನಾರಾಯಣದಾಸ ಬುಕ್ಕಸೇಲರ ಸೂರತ.

೪. ಮೆಸರ್ಸ ಹರಿಶ್ಚಂದ್ರ ಆ್ಯಂಡ ಕಂಪನಿ ಚತ್ರೇಕರವಾಡಿ ಠಾಕುರದ್ವಾರ ರೋಡ ಮುಂಬಯಿ.

REGISTERED No. B. 19.

ಹೊಸಪದ್ಧತಿಯ ಭೂಮಿತಿಯು.

ಎ. ಕಾನ್ಸರನ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯು
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ. ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ. ಯು-೪೧೨೮.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮೀಶನ್ ಕೊಡಲಾದೀತು.

ಪಿ. ಎಸ್. ಚಂದಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ.

ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆದಂತಾಯಿತು.

ಎಮ್. ಹಿರಿಯಣ್ಣ ಎಮ್. ಏ ಎಲ್. ಟಿ ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾಸ್ಟರಡನ್ ಚಿತ್ರ[illegible], ಕಥೆಗಳೂ, ಪುರಾಣ ಗೋಖಲೆ ಗಣಿತ ಗಣಿತಉಪಪತ್ತಿ ವಗೈರೆ ಪುಸ್ತಕಗಳೂ ಅವೆ. ಶೋಭೆಯುಳ್ಳ ವಿಹಾಸಿಗಳ ಬೆಳವಣಿಗೆ. ತೈಲು. ಹೊಸ ಪುಸ್ತಕಗಳ ಹೊತ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ವ. ಅಬ್ದುಲ್
ಹಮೀದ ಸಾ॥ ಸೌದಾಗರ

ಪ್ರಕಟನೆ.

ನಮ್ಮ ಬುಕ್ ಡಿಪೋದಲ್ಲಿ ಸರಕಾರಿ ಮೊದಲಿನ ಕನ್ನಡ ಅಂಕಲಿಪಿ ಹಾಂಗು ೧ರಿಂದ ೬ರವರೆಗೆ ಮೊದಲಿನ ಕನ್ನಡ ಪುಸ್ತಕಗಳು ಮತ್ತು ಸರಕಾರಿ ನೂತನ ಕ್ರಮಿಕ ಪುಸ್ತಕಗಳು ಪುರಾಣ, ಇತಿಹಾಸ, ಕಾವ್ಯ, ಕಾದಂಬರಿ, ವೇದಾಂತ ಮುಂತಾದ ಅನೇಕ ವಿಧದ ಪುಸ್ತಕಗಳು ಮಾರಲಿಕ್ಕೆ ಸಿಗುತ್ತವೆ. ಸರಕಾರಿ ಮೊದಲಿನ ಪುಸ್ತಕಗಳಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ನೂತನ ಕ್ರಮಿಕ ಪುಸ್ತಕಗಳಿಗೆ ೩ ಆಣೆಯಂತೆಯೂ ಕಮಿಶನ್ ಸಿಗುವದು.

ಹುಬ್ಬಳ್ಳಿ } ವಿರೂಪಾಕ್ಷಯ್ಯ ತೇಗೂರ ಮಠದ
ತಾ॥ ೧-೧೦-೦೭ } ಬುಕ್ ಡಿಪೋ ಹುಬ್ಬಳ್ಳಿ

ಕನ್ನಡ ಶಾಲಾಪತ್ರ

KANARESE
SCHOOL PAPER.

ಪುಸ್ತಕ ೪೪] ಎಪ್ರೀಲ ೧೯೦೮. [ಸಂಚಿಕೆ ೪.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೭೩-೭೯
೨. ಗವ್ಹರ್ನರ ಧೊರೆಗಳ ಭಾಷಣವು. ೭೯-೮೧
೩. ಲೋಹಚುಂಬಕ ೮೧-೮೪
೪. ರಾಜಸ್ಥಾನದ ಇತಿಹಾಸವು. ೮೪-೮೯
೫. ಪತ್ರವ್ಯವಹಾರವು. ೮೯-೯೧
೬. ಮಾದರಿಯಪಾಠದ ಟಿಪ್ಪಣಿ ೯೨-೯೬

CONTENTS.

1. Educational Intelligence and Useful Notes 73–79
2. The Governor's Speech in Convocation. 79–81
3. Magnet. 81–84
4. The History of Rajasthan. 84–89
5. Correspondence. 89–91
6. Model Note.... 92–96

DHARWAR:
PRINTED AT THE KARNATIC BOOK DEPOT PRESS
1908.

(ಕನ್ನಡ ಪಂಚಾಂಗಗಳು ೫ರೂ॥ ಯಿಗೆ ೧೦೦ ಪ್ರತಿ.)

ನವಣೂರ ಪಂಚಾಂಗಗಳು.

ಕೀಲಕನಾಮ ಸಂವತ್ಸರದ ಮರಾಠಿ ಪಂಚಾಂಗಗಳು ಮಾರಾಟಕ್ಕೆ ಸಿದ್ಧವಾಗಿವೆ. ದರ ಸಾವಿರಕ್ಕೆ ೩೦ ರು. ೫೦೦ಕ್ಕೆ ೧೬॥ ರು. ೧೦೦ ಕ್ಕೆ ೪ ರೂ. ೧೦೦ ಕ್ಕಿಂತ ಕಡಿಮೆ ಕೊಂಡವರಿಗೆ ೫ ರೂ॥ ಡಜನ ೧ ಕ್ಕೆ ೧ ಆಣೆ.

ಜಾನೋಳಿಕರ ಮತ್ತು ಕಂಪನಿ

ಧಾರವಾಡ.

ಸನ್ ೧೯೧೪ನೇ ಇಸ್ವಿಯ ಡಾಯರಿಗಳು

ತೀರ ಸ್ವಲ್ಪ ಉಳಿದವೆ. ಕ್ಯಾಲಿಕೋಕಪ್ಪರು ೪ ಆಣೆ. ಪೂರಾ ಕಟ್ಟುಳ್ಳದ್ದು ೮ ಆಣೆ. ಠೋಕವ್ಯಾಪಾರಸ್ಥರಿಗೆ ಯೋಗ್ಯಕಮಿಶನ್ ಸಿಗುವದು.

ಹೊಸದಾಗಿ ಸುಧಾರಿಸಲ್ಪಟ್ಟ ದಿವ್ಯಶಾಯಿ.

ಕೆಟ್ಟದಾದರೆ ಹಣವು ತಿರಿಗಿ ಸಿಗುವದು.

೬—೧೦ಕ್ಕೆ ರಾಸಕೋಪ ಸಿಸ್ಟೀಮಾವಾಚು, ೫೦೦ ದಿವ್ಯಶಾಯಿ ಚೀಟುಗಳು ಕರಪಳಿ ಹೋಕಾಯಂತ್ರ ಸ್ಪ್ರಿಂಗ ಕನ್ನಡ ಪೆಟ್ಟಿಗೆ ಸಹ ಟಪಾಲ ಮಾಫ.

೩—೧೦ ಕ್ಕೆ Pocket "ಬಿ" ಟೈಂಪೀಸು ೪೦೦ ದಿವ್ಯಶಾಯಿ ಚೀಟುಗಳು ಟಪಾಲ ಮಾಫಿ.

೧—೧೦ಕ್ಕೆ ೧೦೦ ಶಾಯಿ ಚೀಟುಗಳು, ೧೦೦ ಕಾರ್ಡುಗಳು ೧ ಸೂಕ್ಷ್ಮ ದರ್ಶಕ ಯಂತ್ರವು ಹೋಕಾಯಂತ್ರವು ೧ ಲೋಹ ಚುಂಬಕವು ಟಪಾಲ ಮಾಫಿ.

☞ ರಘುನಾಥ ಜೀವಾಜಿ ಕುಲಕರ್ಣಿ ಪೊ ಹಿಪ್ಪರಗಿ

ವಿಜಾಪುರ.

ಶಾಲಾಪತ್ರಿಕೆ.

ಪದ್ಯಂ

ಪ್ರಿಯದಿ ವಿದ್ಯಾಗುರುವರ್ಯರನ್ನಿರಿಯಂ ಕಲ್ಪದ್ರುಮೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಿಂದಿಗೆ ಇಂದೀಪತ್ರಮಂ ಮುದ್ರಿಸಿ ॥
ಸದಯಂ ಚಿತ್ತವನೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಡುದ
ದಯೆಯಿಂದೋಷವತಿದ್ದ ವೇಳ್ವ ಬುಧರಿಜ್ಞಾನಾಭಿವೃದ್ಧಿಪ್ರಿಯರ್

ಪುಸ್ತಕ ೪೩.] ಎಪ್ರೀಲ ೧೯೦೭. [ಸಂಚಿಕೆ ೪.

EDUCATIONAL INTELLIGENCE AND USEFUL NOTES

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು,

ಶಾಸ್ತ್ರೀಯ ಜ್ಞಾನವು.

ಫೋಟೋಗ್ರಾಫಕಲೆಯ ಪ್ರಗತಿಯು.

ಇಲ್ಲವೆ

ಕಣ್ಣದ ಚಿತ್ರಗಳು.

ಫೋಟೋಗ್ರಾಫ ಅಂದರೆ ಏನೆಂಬುವದು ಸರ್ವಸಾಧಾರಣವಾಗಿ ಪ್ರತಿ ಒಬ್ಬ ಸುಶಿಕ್ಷಿತನಿಗೆ ಗೊತ್ತಿರುತ್ತದೆ. ಆದರೆ ಫೋಟೋಗ್ರಾಫರ ಅಂದರೆ ಮನುಷ್ಯನ ಚಿತ್ರದ ಹೊರ್ತು ಬೇರೆ ಯಾವ ವಿಚಾರವೂ ಜನರ ಮನಸಿನಲ್ಲಿ ಬರುವದಿಲ್ಲ. ಆದಾಗ್ಯೂ ವಿಚಾರ ಮಾಡಿನೋಡಿದರೆ ಮನುಷ್ಯರ ಚಿತ್ರಗಳನ್ನು ತೆಗೆಯಬರುವದೊಂದೇ ಫೋಟೋಗ್ರಾಫಿಯ ಮಹತ್ವದ ಉಪಯೋಗವಲ್ಲೆಂಬುವದು ಕೆಳಗೆ ಬರೆದ ಒಂದೆರಡು ಸಂಗತಿಗಳಿಂದ ಕಂಡುಬರುವದು.

ಸ್ವಲ್ಪ ದಿವಸದ ಕೆಳಗೆ ಒಬ್ಬ ಫೋಟೋಗ್ರಾಫರನು ಒಬ್ಬ ಹುಡಿಗೆಯ ಚಿತ್ರವನ್ನು ತೆಗೆದಿದ್ದನು. ಮತ್ತು ಅದರ ಕನ್ನಡಿಯನ್ನು ಅವನು ರಸಾಯನಗಳಿಂದ ತೊಳೆಯುತ್ತಿರು

ವಾಗ್ಗೆ ಹುಡಿಗೆಯ ಮೋರೆಯ ಮೇಲೆ ಚಿಕ್ಕಚಿಕ್ಕೆಗಳು ಕಾಣುಹತ್ತಿದವು. ಹೀಗೆ ಆಗುವ ಕಾರಣವು ಅವನಿಗೆ ತಿಳಿಯದಂತಾಯಿತು. ಯಾಕಂದರೆ ಆ ಹುಡಿಗೆಯು ಸುರೂಪಿಯಿದ್ದು ಫೋಟೋ ತಕ್ಕೊಳ್ಳುವಾಗ್ಗೆ ಅವಳ ಮೋರೆಯ ಮೇಲೆ ಯಾವ ತರದ ಚಿನ್ಹಗಳೂ ಕಲೆಗಳೂ ಇದ್ದಿಲ್ಲ. ಮತ್ತು ಅವನು ಬಹು ಜಾಗರೂಕತನದಿಂದ ಆ ಕೆಲಸ ಮಾಡಿದ್ದರಿಂದ ತಾನು ಫೋಟೋ ತೆಗೆಯುವದರಲ್ಲಿ ಇಲ್ಲವೆ ಕಾಜಿನಲ್ಲಿ ಯಾವ ತರಹದ್ದಾದರೂ ದೋಷವಿದ್ದೀತೆಂದು ಅವನಿಗೆ ತೋರಲೊಲ್ಲದು. ಆಗ ಅವನು ಏನೂ ತಿಳಿಯದವನಾಗಿ ಆ ಕಾಜನ್ನು ಹಾಗೇ ಇಟ್ಟುಬಿಟ್ಟನು. ಎರಡು ಮೂರು ದಿವಸಗಳ ಮೇಲೆ ಆ ಹುಡಿಗೆಯ ತಾಯಿಯು ತನ್ನ ಮಗಳ ಚಿತ್ರವನ್ನು ಬೇಡಬಂದಳು. ಅವನು ಅದಕ್ಕೆ ಹುಡಿಗೆಯು ಎಲ್ಲಿರುವಳೆಂದು ಪ್ರಶ್ನೆ ಮಾಡಿದನು. ಅದಕ್ಕೆ ಅವಳು ಹುಡಿಗೆಗೆ ಗಣಜಲಿ ಎದ್ದಿರುವವೆಂದು ಹೇಳಿದಳು. ಆಕೆಯ ಫೋಟೋ ತೆಗೆದ ದಿವಸ ರಾತ್ರಿಯಲ್ಲಿಯೇ ಆಕೆಗೆ ಗಣಜಲಿ ಎದ್ದವು. ಇದನ್ನು ಕೇಳಿ ಅವನು ಆಶ್ಚರ್ಯಚಕಿತನಾದನು. ಯಾಕಂದರೆ ಆತನ ಕ್ಯಾಮರಾನವು ಬಾಹ್ಯಚರ್ಮದ ಫೋಟೋ ತಕ್ಕೊಳ್ಳುವದಲ್ಲದೆ ಅದರ ಒಳವೈಯಲ್ಲಿರುವ ಚಿಕ್ಕೆಗಳ ಫೋಟೋ ಸಹ ತಕ್ಕೊಂಡಿತ್ತು! ಈ ರೀತಿಯ ಫೋಟೋಗಳು ಹೊರಡಹತ್ತಿದರೆ ವೈದ್ಯಶಾಸ್ತ್ರಕ್ಕೆ ಏನಾದರು ಸಹಾಯವಾದೀತು.

ಜ್ಯೋತಿಃಶಾಸ್ತ್ರದಲ್ಲಿ ಫೋಟೋಗ್ರಾಫಿಯ ಉಪಯೋಗವು ಬಹಳ ಆಗುತ್ತದೆ. ಆ ಸಂಬಂಧದ ಒಂದು ಸಂಗತಿಯನ್ನು ಹೇಳಲಾಗಿ ಅದರ ಉಪಯೋಗವು ಎಷ್ಟು ಮಹತ್ವದ್ದಿರುತ್ತದೆಂಬುವದು ಕಂಡುಬರುವದು. ನಾವು ವಾಸ ಮಾಡಿರುವ ಪೃಥ್ವಿಗೆ ಚಂದ್ರನಿರುವಂತೆಯೇ ಶನಿಗ್ರಹಕ್ಕಾದರೂ ಅನೇಕ ಚಂದ್ರರಿರುವರು. ಎಷ್ಟೋ ದಿವಸಗಳ ವರೆಗೆ ಚಂದ್ರರು ಎಂಟೇ ಇರುತ್ತಾರೆಂದು ತಿಳಿಯುತ್ತಿದ್ದರು. ಆದರೆ ಈಚೆಗೆ ಎಂಟು ಹೋಗಿ ಒಂಭತ್ತು ಆಗಿರುತ್ತಾರೆ. ಪೇರು ದೇಶ

ನ ಜ್ಯೋತಿರ್ವಿದ ಪ್ರೊಫೆಸರ ಡಿಕರಿಂಗ ಇವರು ಗಣಿತಜ್ಞ ದಿಂದ ಶನಿಗ್ರಹಕ್ಕೆ ಹೆಚ್ಚು ಚಂದ್ರರಿರಬೇಕೆಂದು ಊಹಿಸಿದ್ದರು. ಮತ್ತು ೧೮೯೮ ನೇ ಇಸವಿಯಲ್ಲಿ ಶನಿಮಹಾರಾಜರ ಫೋಟೋ ತಕ್ಕೊಂಡಾಗ್ಗೆ ಅದರಲ್ಲಿ ಒಂದು ಚಿಹ್ನವು ಮೂಡಿತ್ತು. ಅದು ಬಹಳವಾಡಿ ಯಾವದಾದರೊಂದು ಗತಿಯುಳ್ಳ ಗ್ರಹದ್ದಿರಬಹುದೆಂದು ಆ ಪ್ರೊಫೆಸರರು ತಿಳಿದರು. ಆದರೆ ಕೆಲವು ಕಾರಣಗಳ ಮೂಲಕ ಈ ಊಹೆಯ ಸತ್ಯಾಸತ್ಯದ ನಿರ್ಣಯವನ್ನು ಮಾಡುವದಾಗಲಿಲ್ಲ ಐದು ವರ್ಷಗಳು ಕಳೆದುಹೋದವು. ಅನೇಕರು ಅದರ ಶೋಧದಲ್ಲಿ ತೊಡಗಿದಾಗ್ಯೂ ಆ ಉಪಗ್ರಹದ ಗೊತ್ತು ಹತ್ತಲಿಲ್ಲ. ಆಗ ಎಲ್ಲರು ಅದು ಯಾವದಾದರೊಂದು ಆಗಂತುಕ ಧೂಮಕೇತು ಇರಬಹುದೆಂದು ಊಹಿಸಿದರು. ಆದರೆ ೧೯೦೪ ರಲ್ಲಿ ಅರೇಕಿಪಾ ದೇಶದೊಳಗಿನ ಫ್ರಾನ್ಸ ಎಂಬ ಜ್ಯೋತಿರ್ವಿದನು ಕಾಮೆರಾದ ಸಹಾಯದಿಂದ ಬೇರೆ ಬೇರೆ ಕಾಲಕ್ಕೆ ತಕ್ಕೊಂಡಂಥ ೧೧ ಫೋಟೋಗಳಲ್ಲಿ ಈ ಆಗಂತುಕ ಗ್ರಹದ ಗುರ್ತು ಇದ್ದೇ ಇತ್ತು. ಪುನಃ ಪ್ರೊಫೆಸರ ಡಿಕರಿಂಗ ಇವರು ಏಪ್ರೀಲ ೧೬ರರಿಂದ ಜೂನ ೯ರ ವರೆಗೆ ಬಿಟ್ಟುಬಿಡದೆ ಪ್ರತಿದಿವಸ ಫೋಟೋ ತೆಗೆದುಕೊಂಡರು. ಮತ್ತು ಆ ಯಾವತ್ತು ಫೋಟೋಗಳ ಮೇಲಿಂದ ಈ ವರೆಗೆ ಆಗಂತುಕ ಗ್ರಹವೆಂದು ತಿಳಿದದ್ದು ಒಂದು ಉಪಗ್ರಹವೇ ಇರುತ್ತದೆಂದು ಮನಗಂಡರು. ಅವರು ಗಣಿತ ಮಾಡಿ ಶನಿಯಿಂದ ಆ ಉಪಗ್ರಹದ ಅಂತರವನ್ನೂ ಆ ಗ್ರಹಕ್ಕೆ ಶನಿಯ ಸುತ್ತಲು ಪ್ರದಕ್ಷಿಣೆ ಹಾಕಲಿಕ್ಕೆ ಬೇಕಾಗುವ ಹೊತ್ತನ್ನೂ ತೆಗೆದರು. ಮತ್ತು ಎಷ್ಟೋ ಜನರು ವೇಧವನ್ನು ತಕ್ಕೊಂಡು ಅದು ಸತ್ಯವಿರುತ್ತದೆಂದು ನಿರ್ಣಯಿಸಿದರು.

ಕಾಮೆರಾದ ಆಧುನಿಕ ಮತ್ತು ಎಲ್ಲಕ್ಕೂ ಚಮತ್ಕಾರವಾದ ಉಪಯೋಗವು ಯಾವದೆಂದರೆ ಫೋಟೋದಲ್ಲಿ ಪದಾರ್ಥಗಳ ನೈಸರ್ಗಿಕ ಬಣ್ಣವನ್ನು ಇಳಿಸುವದು. ಈ ವರೆಗೆ ಮೂರು ಬಣ್ಣಗಳಲ್ಲಿ ಚಿತ್ರವನ್ನು ತೆಗೆಯುವದು

ಗೊತ್ತಿತ್ತು; ಆದರೆ ಅದರ ರೀತಿಯು ಬೇರೆ. ಕ್ಯಾಮರಾದ ಮುಂದೆ ಕೆಂಪು, ಹಸರು, ಜಾಂಭಳಿ, ನೀಲ ಬಣ್ಣದ ಕಾಜುಗಳನ್ನು ಇಟ್ಟು ಬೇರೆ ಬೇರೆ ಮೂರು ಚಿತ್ರಗಳನ್ನು ತೆಗೆಯುತ್ತಿದ್ದರು. ಆ ಮೇಲೆ ಈ ಮೂರು ಫೋಟೋಗಳನು ಒಮ್ಮೇಲೆ ಕಾಣುವಂತೆ ಇಟ್ಟು ಅವುಗಳ ಮುಂದೆ ಪುನಃ ಮೂರು ಬಣ್ಣದ ಕಾಜುಗಳನ್ನು ಇಡುತ್ತಿದ್ದರು. ಈ ಪ್ರಕಾರ ನೋಡಿದರೆ ಮಾತ್ರ ಫೋಟೋದಲ್ಲಿ ಪದಾರ್ಥಗಳ ನೈಸರ್ಗಿಕ ಬಣ್ಣಗಳು ಕಾಣುತ್ತಿದ್ದವು; ಆದರೆ ಇತ್ತಿತ್ತ ಒಂದೇ ಕಾಜಿನ ಮೇಲೆ ಒಂದೇ ಫೋಟೋ ತಕ್ಕೊಂಡು ಅದರಲ್ಲಿ ಯಾವತ್ತು ಬಣ್ಣಗಳನ್ನು ತೋರಿಸುವದು ಶಕ್ಯವಾಗಿರುತ್ತದೆ. ಕಾಜು ತಯಾರ ಮಾಡಬೇಕಾದರೆ ತೀರ ನುಣ್ಣಗಾದ ಸ್ಟಾರ್ಚ ತಕ್ಕೊಂಡು ಅದನ್ನು ಬೇರೆ ಬೇರೆ ಬಣ್ಣಗಳಲ್ಲಿ ಎದ್ದುತ್ತಾರೆ. ಆ ಮೇಲೆ ಮೂರು ಬಣ್ಣದ ಮೂರು ಪುಡಿಗಳನ್ನು ಬೆರಿಸುತ್ತಾರೆ. ನಂತರ ಆ ಕಾಜಿನ ಮೇಲೆ ಈ ಮೂರು ಬಣ್ಣದ ಸ್ಟಾರ್ಚಿನ ಥರವನ್ನು ಕೂಡಿಸುತ್ತಾರೆ. ಈ ಮೂರು ಬಣ್ಣಗಳ ಮಿಶ್ರಣದಿಂದ ಈ ತಯಾರಾದ ಕಾಜು ಸಾಧಾರಣ ನೆರೆ ಬಣ್ಣದ್ದು ಕಾಣುತ್ತದೆ. ಆ ಕಾಜಿಗೆ ಈ ಬಣ್ಣದ ತರ ಕೊಟ್ಟನಂತರ ಅದರ ಮೇಲೆ ರೋಹಣ ಹಚ್ಚಿ ಆ ಮೇಲೆ ರೌಪ್ಯ ಕ್ಷಾರದ ಥರವನ್ನು ಕೂಡಿಸುತ್ತಾರೆ. ಫೋಟೋಗ್ರಾಫಿಯಲ್ಲಿ ಕ್ಷಾರಗಳ ಮಹತ್ವವೇ ವಿಶೇಷವಾಗಿರುತ್ತದೆ ಅವುಗಳ ಮೇಲೆ ಪ್ರಕಾಶದಕ್ರಿಯೆಯು ಆದ ಕೂಡಲೆ ಹೆಚ್ಚುಕಡಿಮೆಗಳಾಗಿ ಚಿತ್ರಗಳು ಹೊರಡುತ್ತವೆ. (ಈ ವಿಷಯುವನ್ನು ಕುರಿತು ಸವಿಸ್ತರ ವರ್ಣನೆಯ ಒಂದು ಸ್ವತಂತ್ರ ಲೇಖವನ್ನು ಮುಂದೆ ಕೊಡುವೆವು.) ನಂತರ ಈ ಪ್ರಕಾರ ತಯಾರಿಸಿದ ಕಾಜನ್ನು ಕ್ಯಾಮರಾದಲ್ಲಿ ತೀವಿ ಇಡುತ್ತಾರೆ. ಅದು ಹ್ಯಾಗಂದರೆ, ಬಣ್ಣದ ಥರವು ಕೂಡಿಸಿದ ಭಾಗವನ್ನು ಲೆನ್ಸದ ಕಡೆಗೆ ಮಾಡಿರುತ್ತದೆ. ಅದರಿಂದ ರೌಪ್ಯಕ್ಷಾರದ ಮೇಲೆ ಬರುವ ಪ್ರಕಾಶವು ಮೂರೂ ತರದ ಬಣ್ಣಗಳೊಳಗಿಂದ ಹಾಯ್ದು ಬಂದು ಅದರ

ಮೇಲೆ ಚಿತ್ರವನ್ನು ಹುಟ್ಟಿಸುತ್ತದೆ. ಇಷ್ಟಾದ ಮೇಲೆ ಮಾಡಿಕೆಯ ಪ್ರಕಾರ ಈ ಕಾಜುಗಳನ್ನು ತೊಳೆಯಬೇಕಾಗುತ್ತದೆ; ಆದರೆ ಇವುಗಳಿಗೆ ಬೇರೆ ರಸಾಯನಗಳು ಬೇಕಾಗುತ್ತವೆ ಕಾಜು ತೊಳೆದು ತಯಾರಾಯಿತೆಂದರೆ ಆ ಕಾಜಿನ ಮೇಲೆ ಫೋಟೊ ತೆಗೆದ ಪದಾರ್ಥಗಳ ಚಿತ್ರಗಳು ಆ ಆ ಪದಾರ್ಥಗಳ ನೈಸರ್ಗಿಕ ಬಣ್ಣಗಳಲ್ಲಿಯೇ ಕಾಣುಹತ್ತುತ್ತವೆ ಫ್ರಾನ್ಸದೊಳಗಿನ ಮೆಸರ್ಸ ಲುಬಿಮಾರ ಕಂಪನಿಯವರು ಈ ಶೋಧವನ್ನು ತೆಗೆದು ಕಾಜುಗಳನ್ನು ತಯಾರ ಮಾಡಿದ್ದಾರೆ.

ಈಶಸೃಷ್ಟಿಯಲ್ಲಿ ಏನುಂಟು! ಏನಿಲ್ಲ! ಎಂಬದು ಮಾನವನ ಕಲ್ಪನಾತೀತವಾದ ಸಂಗತಿಯೇ ಸರಿ. ಸೃಷ್ಟಿಯ ಅಂತವನ್ನು ಕಂಡು ಹಿಡಿಯುವದು ಎಂದಿಗೂ ಆಗದು. ಆದರೂ ಅದರೊಳಗಿನ ಹಲವು ಸಂಗತಿಗಳನ್ನು ಮಾನವನು ಶೋಧ ಮಾಡಿ ತೆಗೆದಿರುವನು ಇವಿಷ್ಟೇ ಸಂಗತಿಗಳಾದರೂ ಪರಮೇಶ್ವರನು ನಿರ್ಮಿಸಿದ ಸೃಷ್ಟಿಯ ಗೌರವವನ್ನು ವ್ಯಕ್ತಗೊಳಿಸಲಿಕ್ಕೆ ಸಾಕೆಂದು ಹೇಳಬಹುದು. ವಿಶ್ವದ ಅನಂತ ವಿಸ್ತಾರವು, ಪ್ರಾಣಿಗಳ ಗುಣರೂಪ, ಆಕಾರಗಳ ವಿಚಿತ್ರತೆಯು, ವನಸ್ಪತಿಗಳ ಗುಣಧರ್ಮ, ಬಣ್ಣಗಳ ಅನಂತತ್ವವು ಜಡವಸ್ತುಗಳ ವಿಪುಲತೆ, ಪ್ರಯೋಜನತ್ವಗಳು ಮನುಷ್ಯನನ್ನು ಆಶ್ಚರ್ಯಚಕಿತವಾಗಿ ಮಾಡುತ್ತವೆ.

ಸಣ್ಣದರಲ್ಲಿ ತೀರ ಸಣ್ಣದಾದ ಪದಾರ್ಥಕ್ಕೆ ಪರಮಾಣುವೆಂದು ಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ. ಪೂರ್ವದವರು ಬೆಳಕಿಂಡಿಯ ಬಿಸಿಲಲ್ಲಿ ಹಾರಾಡುವ ಅಣುಗಳಿಗೆ ಪರಮಾಣುಗಳೆಂಬ ಸಂಜ್ಞೆಯನ್ನು ಕೊಟ್ಟಿರುವರು. ಈಗ ಈ ಪರಮಾಣುಗಳ ಆರನೇ ಪಾಲಿಗೆ ಪರಮಾಣುವೆಂದು ಪಂಡಿತರು ಗೊತ್ತು ಮಾಡಿದ್ದಾರೆ. ಮೊದಲಿನ ಪರಮಾಣುಗಳಲ್ಲಿ ವಿಭಾಗ ಮಾಡಲಿಕ್ಕೆ ಬರುವದಿಲ್ಲೆಂದು ತಿಳಿದೇ ಅದಕ್ಕೆ ಪರಮಾಣುವೆಂದು ಹೆಸರಿಟ್ಟಿದ್ದರು. ಆದರೆ ಈಗ ಈ ಪದಾರ್ಥದಲ್ಲಿ ಕೂಡ ಪಾಲು ಮಾಡುವ ಯಂತ್ರಸಾಧನವು ದೊರೆ

ತದ್ದರಿಂದ ಆ ಪರಮಾಣುವು ತನ್ನ ಬಿಸುಪನ್ನು ಕಳಕೊಂಡಿತು. ಈಗಿನ ಪಂಡಿತರು ನಿರ್ಣಯಿಸಿದ ಪರಮಾಣುವಿನ ಕಲ್ಪನೆಯು ವಾಚಕರಿಗಾಗಬೇಕೆಂದು ಕೆಳಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಕೊಳಚೆ ನೀರಿನದೊಂದು ಹನಿಯನ್ನು ಸೂಕ್ಷ್ಮದರ್ಶಕ ಯಂತ್ರದೊಳಗಿಟ್ಟು ನೋಡಲು ಅದರಲ್ಲಿ ಅಸಂಖ್ಯ ಪ್ರಾಣಿಗಳು ದೃಷ್ಟಿಗೋಚರವಾಗುವದು ಸರ್ವರಿಗೂ ಗೊತ್ತಿದ್ದ ಮಾತೇ ಸರಿ. ಈ ಪ್ರಾಣಿಗಳು ಆ ನೀರಲ್ಲಿ ಒಂದರೊಡನೊಂದು ಹೋರಾಡುತ್ತಿದ್ದದನ್ನು, ಅವುಗಳ ಶೀಘ್ರವಾದ ಚಲನವಲನಗಳನ್ನು, ಜನ್ಮಮರಣಗಳನ್ನು ನೋಡುತ್ತೇವೆ. ಇವುಗಳಿಗೆ ಅದೊಂದೇ ಹನಿಯು ಸಮುದ್ರದಂತೆ ಆಗಿರುವದು. ಇನ್ನು ಇಂಥ ಸಣ್ಣ ಜಲಬಿಂದುವಿನಲ್ಲಿ ಅಸಂಖ್ಯಾತವಾಗಿ ಹರಿದಾಡುತ್ತಿರುವ ಸೂಕ್ಷ್ಮ ಪ್ರಾಣಿಶರೀರಗಳನ್ನು ಉಂಟು ಮಾಡಿದ ಪದಾರ್ಥಗಳ ಪರಮಾಣುಗಳ ಸೂಕ್ಷ್ಮತೆಯು ಎಷ್ಟಿರಬೇಕು ? ನೋಡಿರಿ!

ಬಳ್ಳಗಡೆಯಲ್ಲಿ ಉತ್ತಮವಾದ ತರಾಜುಗಳು ತಯಾರಾಗಿರುತ್ತವೆ. ಈ ತರಾಜುಗಳಲ್ಲಿ ಒಂದು ತೊಲಿಯ ಲಕ್ಷಾಂಶವು ಕೂಡ ಒಡೆದು ಕಾಣುವದು. ಒಂದು ಕಸ್ತೂರಿ ತುಂಬಿದ ಕುಪ್ಪಿಯನ್ನು ಬಾಯಿಮುಚ್ಚಿ ಇಂಥ ತರಾಜಿನಲ್ಲಿ ತೂಗಿರಿ. ಬಳಿಕ ಇದನ್ನು ದೊಡ್ಡದೊಂದು ಮನೆಯಲ್ಲಿ ತೆರೆದಿಟ್ಟು ಆ ಮನೆಯು ಕಸ್ತೂರಿಯ ನಾತದಿಂದ ತುಂಬಿದ ಬಳಿಕ ಅದನ್ನು ಮರಳಿ ತೂಗಿರಿ. ತೊಲಿಯ ಲಕ್ಷಾಂಶವನ್ನು ಕೂಡ ತೋರಿಸಿಕೊಡುವ ತರಾಜಿನಲ್ಲಿ ಸಹ ಅದರ ತೂಕವು ಮೊದಲಿನಷ್ಟೇ ಆಗುವದು. ಕುಪ್ಪಿಯೊಳಗಿನ ಕಸ್ತೂರಿಯ ಕಣಗಳು ಮನೆತುಂಬ ಹಬ್ಬಬೇಕಾದರೆ ಎಷ್ಟು ಕಣಗಳು ಕುಪ್ಪಿಯಿಂದ ಹೊರಬಿದ್ದಿರಬೇಕು ನೋಡಿರಿ! ಅಷ್ಟು ಕಣಗಳು ಹೊರಬಿದ್ದು ಹೋದರೂ ಕುಪ್ಪಿಯ ತೂಕವು ಕಡಿಮೆಯಾಗಲಿಲ್ಲೆಂದ ಬಳಿಕ ಆ ಕಣಗಳ ಪರಿಮಾಣವು ಎಷ್ಟು ಸೂಕ್ಷ್ಮವಾಗಿರಬೇಕೆಂಬುದನ್ನು ನೀವೇ ತರ್ಕಿಸಬೇಕು.

ಇತ್ತಲಾಗಿನ ಶೋಧದಿಂದ ಮೊದಲು ಗೊತ್ತಾದ ದ್ರವ್ಯ ಅಣುವಿನಲ್ಲಿ ನಿಕೃಷ್ಟ ಪಕ್ಷಕ್ಕೆ ನಾಲ್ವತ್ತೆಂಟುಕೋಟಿ ಪರಮಾಣುಗಳು ಕೂಡಿರಬೇಕೆಂದು ಗೊತ್ತಾಗಿದೆ. ಒಂದು ಪಾವಿನಷ್ಟು ಮಾಪಿನ ಪಾತ್ರೆಯಲ್ಲಿ ಹೈಡ್ರೋಜನ್ ತುಂಬಿದರೆ, ಅದರೊಳಗೆ ಆರು ಸಾವಿರ ಪರಾರ್ಧ ಪರಮಾಣುಗಳಿರುವವೆಂದು ಈಗ ಗೊತ್ತು ಮಾಡಲ್ಪಟ್ಟಿದೆ. ಇಷ್ಟೇ ಅಲ್ಲ ಈ ಪರಮಾಣುವಿನಲ್ಲಿಯೂ ಸಹಸ್ರಾಂಶ ಮಾಡಬಹುದೆಂದು ಹಲವರು ವಾದಿಸುವರು. ಇದರಿಂದ ಪರಮಾಣುಗಳ ಸೂಕ್ಷ್ಮತೆಯು ಇನ್ನು ಎಲ್ಲಿಯ ವರೆಗೆ ಹೋಗುವದೆಂಬದನ್ನು ನಿರ್ಣಯಿಸುವದು ಕೂಡ ಅಶಕ್ಯವಾಗಿದೆ.

GOVERNORS SPEECH.

ಗವ್ಹರ್ನರ ದೊರೆಗಳ ಭಾಷಣವು.

(ಹಿಂದಿನಿಂದ ಮುಂದೆ ಸಾಗಿದ್ದು)

ಹಿಂದುಸ್ಥಾನದಲ್ಲಿ ಪ್ರಚಾರದಲ್ಲಿರುವ ಶಿಕ್ಷಣ ಪದ್ಧತಿಯು ಇಂಗ್ಲಂಡದ ಶಿಕ್ಷಣಪದ್ಧತಿಯನ್ನು ಅನುಸರಿಸುತ್ತದೆ ಆದರೆ ಯಾವ ಶಿಕ್ಷಣಪದ್ಧತಿಯ ಮಾದರಿಯನ್ನು ನಾವು ಈ ದೇಶಕ್ಕಾಗಿ ಅನುಕರಿಸಿದೆವೋ ಆ ಪದ್ಧತಿಯಲ್ಲಿ ಕಾಲ ಕಾಲಕ್ಕೆ ಅನೇಕ ಕ್ರಾಂತಿಗಳೊದಗಿ ಅದು ಈಗ ಇಂಗ್ಲಂಡಕ್ಕೆ ಅತಿಪ್ರಯೋಜನಕರವಾಗಿ ಮೆರೆಯುವದು ಸನ್ ೧೮೩೫ರಲ್ಲಿ ಲಾರ್ಡ ಮೆಕಾಲೆಸಾಹೇಬರು ಶಿಕ್ಷಣವಿಷಯಕವಾಗಿ ಒಂದು ಸುಶ್ರಾವ್ಯವಾದ ಭಾಷಣವನ್ನು ಮಾಡಿ ಹಿಂದುಸ್ಥಾನದೊಳಗಿನ ಶಿಕ್ಷಣ ಪದ್ಧತಿಗೆ ಹೊಸ ಮಾರ್ಗವನ್ನು ತೋರಿಸಿಕೊಟ್ಟರು ಈ ಉಪನ್ಯಾಸದ ಧೋರಣವನ್ನೇ ಅವಲಂಬಿಸಿ ಮುಂಬಯಿಯ ವಿದ್ಯಾಖಾತೆಯು ಜನ್ಮತಾಳಿತು ಶಿಕ್ಷಣ ಕ್ರಮದಲ್ಲಿ ಅರಬೀ ಫಾರಸೀ, ಸಂಸ್ಕೃತ ಮುಂತಾದ ಮೃತಭಾಷೆಗಳಿಗೆ ಪ್ರಾಧಾನ್ಯವನ್ನು ಕೊಡಬೇಕೋ ಅಥವಾ ಆ ಮಾನವು ಇಂಗ್ಲೀಷ ಭಾಷೆಗೆ ಸಲ್ಲತಕ್ಕದ್ದೋ! ಎಂಬ ಬಗ್ಗೆ ಸಭೆಯಲ್ಲಿ ಅತಿ ಪ

ಖರವಾದ ವಿವಾದವು ನಡೆದು ಕಡೆಯಲ್ಲಿ ಸಭಿಕರ ಮತವ ನ್ನು ತೆಗೆದುಕೊಳ್ಳಲು ಈ ಎರಡು ಸೂಚನೆಗಳಿಗೂ ಸಮ ಸಮಾನ ಮತಗಳು ದೊರೆತವು. ಆದರೆ ಅಧ್ಯಕ್ಷರಾದ ಲಾ ರ್ಡ ಮೆಕಾಲೆ ಸಾಹೇಬರು ಇಂಗ್ಲೀಷ ಭಾಷೆಗೆ ಅಗ್ರಸ್ಥಾನ ವನ್ನು ಕೊಡಬೇಕೆಂದು ಅಭಿಪ್ರಾಯ ಪಟ್ಟದ್ದರಿಂದ ಪ್ರಸ್ತು ತದಲ್ಲಿ ಇದೇ ಭಾಷೆಗೆ ಪ್ರಾಮುಖ್ಯತೆಯು ಪ್ರಾಪ್ತವಾಗಿರುವ ದು. ಲಾರ್ಡ ಮೆಕಾಲೆ ಸಾಹೇಬರು ತಮ್ಮ ಅಭಿಪ್ರಾಯವ ನ್ನು ಕೊಡುವಾಗ ಫಾರಸಿ, ಅರಬೀ, ಸಂಸ್ಕೃತ ಮೊದಲಾದ ಪ್ರಾಚ್ಯಭಾಷೆಗಳನ್ನೂ ಆ ಭಾಷೆಯಲ್ಲಿ ಬರೆದ ಗ್ರಂಥಗಳ ನ್ನೂ ಕುರಿತು ಅನಾದರವನ್ನು ಪ್ರಕಟಿಸಿರುವರು. ಆ ಕಾಲದ ಲ್ಲಿ ಪಾಶ್ಚಿಮಾತ್ಯರು ಪ್ರಾಚ್ಯರ ವಾಙ್ಮಯವನ್ನು ಒಳಿತಾಗಿ ಪರಿಶೀಲನ ಮಾಡಿದ್ದಿಲ್ಲ. ಆದರೆ ಈಗಿನ ಕಾಲದಲ್ಲಿ ಲಾರ್ಡ ಮೆಕಾಲೆ ಸಾಹೇಬರು ಪ್ರಾಚ್ಯ ವಾಙ್ಮಯವನ್ನು ಕುರಿತು ಪ್ರಕಟಿಸಿದ ಅನುದರತಾಯುಕ್ತವಾದ ಅಭಿಪ್ರಾಯವು ಯಾರಿಗೂ ಸರಿಬಾರದು. ಹಿಂದುಸ್ಥಾನದಲ್ಲಿ ಇಂಗ್ಲೀಷಭಾ ಷೆಯ ಶಿಕ್ಷಣವು ಅವಶ್ಯವೆಂದು ಹೇಳುವಕಾರಣವಿಲ್ಲ ಆದ ರೆ ಈ ಭಾಷೆಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಪ್ರತಿ ಪಾದಿಸುತ್ತಿದ್ದ ಮೆಕಾಲೆ ಸಾಹೇಬರ ಉದ್ದೇಶವು ರಾಜಪ್ರ ಜೆಗಳ ನಡುವೆ ದ್ವಿಭಾಷಿಯ ಕಾರ್ಯವನ್ನು ಸಾಗಿಸುವ ಜ ನರನ್ನು ಉಂಟು ಮಾಡುವದೇ ಆಗಿತ್ತು. ಈ ಉದ್ದೇಶವು ತೀರ ಸಂಕುಚಿತವಾದದ್ದೆಂದು ಒಡೆದು ಹೇಳುವ ಕಾರಣವಿ ಲ್ಲ. ಈ ಮಾತಿಗೆ ಈ ಕಾಲದಲ್ಲಿ ಯಾರೂ ಮಾನ್ಯ ಮಾಡ ಲಾರರೆಂಬುದು ಸ್ಪಷ್ಟವೇ. ಜನರು ವಂಶಪರಂಪರೆಯಿಂದಪ್ರಾ ಪ್ತವಾದ ತಮ್ಮ ಗುಣಗಳನ್ನು ವಿಕಾಸಗೊಳಿಸಿಕೊಳ್ಳುವದೂ ನೈಸರ್ಗಿಕ ವೈಗುಣ್ಯವನ್ನು ನಷ್ಟಗೊಳಿಸಿಕೊಳ್ಳುವದೂ ಶಿಕ್ಷ ಣಪದ್ಧತಿಯ ಉಚ್ಚತಮ ಹೇತುಗಳಾಗಿರುತ್ತವೆಂದು ಸಾರಿ ಹೇಳಬಹುದು. ಭರತ ಖಂಡದಲ್ಲಿ ವರ್ಧಿಸುತ್ತಿರುವ ಪ್ರಗತಿ ಗನುರೂಪವಾದ ಶಿಕ್ಷಣ ಪದ್ಧತಿಯನ್ನು ನೆಲೆಗೊಳಿಸುವದ ಕ್ಕಾಗಿ ಸುಶಿಕ್ಷಿತರು ಯತ್ನಿಸುವದು ಅಭಿನಂದನೀಯ ಸಂಗ

ತಿಯೇ ಸರಿ. ಹಿಂದೂಜನರ ಸಮಾಜವನ್ನು ಇಂಗ್ಲಿಷ ಜನರ ನಡೆನುಡಿಗಳಿಂದ ಅಲಂಕರಿಸಬೇಕೆಂಬ ಉದ್ದೇಶದಿಂದ ಮೆಕಾಲೆಯು ಸಾಹೇಬನು ಆಂಗ್ಲಭಾಷಾ ಪ್ರಧಾನ ಶಿಕ್ಷಣ ಪದ್ಧತಿಯನ್ನು ಭರತಖಂಡದಲ್ಲಿ ಊರುವ ಕಾರ್ಯದಲ್ಲಿ ಮಗ್ನವಾಗಿರುವಾಗ ಇಂಗ್ಲಂಡದ ಶಿಕ್ಷಣ ಕ್ರಮದಲ್ಲಿ ಪ್ರಾಚೀನ ಭಾಷೆಗೆ ಅಗ್ರಸ್ಥಾನವನ್ನು ಕೊಡುವ ಪರಿಪಾಠವಿತ್ತು. ಈ ಕಾರಣಗಳಿಂದ ಆ ದೇಶದಲ್ಲಿಯೂ ಸುಶಿಕ್ಷಿತರೆನಿಸಿಕೊಳ್ಳುತ್ತಿರುವ ಜನರಲ್ಲಿ ಸಹ ಗಳಿಯು ವಿದ್ಯೆಯು ಹೊರ್ತು ಪ್ರಯೋಜನಕರವಾದ ಜ್ಞಾನದ ಲವಲೇಶವು ಕಂಡು ಬರುತ್ತಿದ್ದಿಲ್ಲ.

(ಸಶೇಷ.)

MAGNET.

ಲೋಹ ಚುಂಬಕ.

ವಿವಕ್ಷಿತ ಸ್ಥಲದಿಂದ ಹಾಯ್ದು ಪೃಥ್ವಿಯ ಎರಡೂ ಧ್ರುವಗಳೊಳಗಿಂದ ಪೋಗುವ ಪಾತಳಿಗೆ ಆ ಸ್ಥಲದ ಭೂಮಧ್ಯಪಾತಳಿಯೆಂಬ ಹೆಸರು. ಹಾಗೂ ಇದೇ ಮೇರೆಗೆ ವಿವಕ್ಷಿತ ಸ್ಥಲದಿಂದ ಹೊರಟು ಪೃಥ್ವಿಯ ಚುಂಬನ ಧ್ರುವಗಳೊಳಗಿಂದ ಹಾಯ್ದು ಹೋಗುವ ಪಾತಳಿಯು ಆ ಸ್ಥಳಗಳ ಭೂಚುಂಬನ ಮಧ್ಯಪಾತಳಿಯೆಂದು ಹೇಳಲ್ಪಡುವದು. ಇವೆರಡು ಪಾತಳಿಗಳ ನಡುವಿನ ಕೋನವೇ ಆ ಸ್ಥಲದ ಚುಂಬನ ವಕ್ರತ್ವವೆನಿಸುವದು. ಚುಂಬನ ಮುಳ್ಳು ಪೂರ್ವಕ್ಕಾಗಲಿ ಪಶ್ಚಿಮಕ್ಕಾಗಲಿ ಒಲೆದಂತೆ, ಪೂರ್ವದ ಒಲೆತವೆಂತಲೂ ಪಶ್ಚಿಮದ ಒಲೆತವೆಂತಲೂ ಹೇಳುವರು. ಈ ಒಲೆತವು ನಾವಿಕರಿಗೆ ತಿಳಿಯುವದರಿಂದ ಅವರು ತಾವು ಪೃಥ್ವಿಯ ನಿಜವಾದ ಉತ್ತರದಿಂದ ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ಎಷ್ಟು ಅಂತರದಲ್ಲಿರುತ್ತೇವೆಂಬದನ್ನು ಅರಿತುಕೊಳ್ಳಲು ಸಮರ್ಥರಾಗುತ್ತಾರೆ. ಈ ಒಲೆತವನ್ನು ತಿಳಕೊಳ್ಳಲಿಕ್ಕೆ

ಆ ವಿವಕ್ಷಿತ ಸ್ಥಲದ ಭೂಮಧ್ಯ ರೇಷೆಯೂ ಅದೇ ಸ್ಥಲದ ಚುಂಬನ ವಿಷುವವೃತ್ತವೂ ಗೊತ್ತಾಗಬೇಕು.

ವಿವಕ್ಷಿತ ಸ್ಥಲದಿಂದ ಪೃಥ್ವಿಯ ಎರಡೂ ಧ್ರುವಗಳೊಳಗಿಂದ ಹಾಯುವ ಪಾತಳಿಗೆ ಭೂಮಧ್ಯಪಾತಳಿಯೆಂಬ ಹೆಸರು. ಈ ಪಾತಳಿಯ ಪರಿಮಿತಿಯನ್ನು ತೋರಿಸುವ ರೇಷೆಯು ಆ ಸ್ಥಲದ ವಿಷುವವೃತ್ತವೆನಿಸುವದು. ಈ ಭೂಮಧ್ಯರೇಷೆಯೂ, ಅದಕ್ಕೆ ಸಮಿಪದಲ್ಲಿರುವ ಯಾವದೊಂದು ತಾರೆಯ ಭೂಮಧ್ಯರೇಷೆಯೂ ಗೊತ್ತಾಗಲು ಭೂಮಿಯ ಮೇಲಿನ ವಿಷುವವೃತ್ತವನ್ನು ಕಂಡು ಹಿಡಿಯಬಹುದು. ಕೆಲವೊಂದು ಸ್ಥಳದಲ್ಲಿ ಚುಂಬಕ ಕಂಬಿಯನ್ನು ಅಡ್ಡ ಇಡಲು ಪೃಥ್ವಿಯ ಚುಂಬನ ಧ್ರುವಗಳ ದಿಕ್ಕಿನಲ್ಲಿ ಸ್ಥಿರವಾಗಿ ನಿಲ್ಲುವದು. ಈ ಎರಡೂ ಧ್ರುವಗಳೊಳಗಿಂದ ಪಾರಾಗಿ ಹೋಗುವ ಪಾತಳಿಯು ಆ ಸ್ಥಳದ ಚುಂಬನ ಮಧ್ಯಪಾತಳಿಯೆನಿಸುವದು, ಈ ಎರಡು ಪಾತಳಿಗಳ ಮಧ್ಯದಲ್ಲಿ ಉಂಟಾಗುವ ವಕ್ರತ್ವವು ಅಥವಾ ಕೋನವು ಆ ಸ್ಥಳದ ಚುಂಬನ ಕೋನವೆಂದು ಹೇಳಲ್ಪಡುವದು. ಈ ವಿಷಯವನ್ನು ಕುನಗಾಣಿಸಿಕೊಡುವ ಯಂತ್ರದ ರಚನೆಯು ಬಹು ತೊಂದರೆಯುಳ್ಳದುಂಟು. ಆ ಯಂತ್ರಕ್ಕೆ ಡಿಕ್ಲೀನೇಶನ್ ಕಂಪಾಸ ಅಥವಾ ಡಿಕ್ಲೀನಾಮೀಟರ ಎಂಬ ಹೆಸರು.

೧೯ ನಾವಿಕರ ಹೋಕಾಯಂತ್ರವು:- ಹಡಗ ನಡಿಯುವ ದಿಕ್ಕನ್ನು ತಿಳುಕೊಳ್ಳುವದಕ್ಕಾಗಿ ಈ ಯಂತ್ರವು ಅತ್ಯವಶ್ಯವಾದದ್ದು. ಹಡಗವು ದಂಡೆಗುಂಟ ನಡಿದಿದ್ದರೆ ಆಗ ಮಾತ್ರ ಅವರಿಗೆ ದಿಕ್ಕುಗಳ ಜ್ಞಾನವು ಸುಲಭವಾಗಿ ಆಗಬಹುದು. ವಿಸ್ತಾರವಾದ ಮಹಾಸಾಗರದ ಮಧ್ಯದಲ್ಲಿ ಸಂಚರಿಸುವ ಗನಾವಿಕರ ಕಣ್ಣಿಗೆ ಎತ್ತ ನೋಡಿದತ್ತ ನೀರೂ ಸಮುದ್ರದ ಅಲೆಗಳೂ ಗೋಚರವಾಗುವವು. ಇಂಥ ಪ್ರಸಂಗಗಳಲ್ಲಿ ಅವರು ತಮ್ಮ ಹಡಗನನ್ನು ಎತ್ತ ನಡಿಸುತ್ತೇವೆಂಬವನ್ನು ಬರಿಗಣ್ಣಿನಿಂದ ನೋಡಿ ತಿಳುಕೊಳ್ಳುವದು ಅಸಾಧ್ಯವು. ಆಗ ಅವರಿಗೆ ಈ ಹೋಕಾಯಂತ್ರದ ಅವಶ್ಯಕತೆ

ಯು ವಿಶೇಷವಿರುವದು ಈ ಯಂತ್ರದ ರಚನೆಯು ಬಹು ಸುಲಭವಾಗಿದೆ. ಒಂದು ಬಟ್ಟನ್ನ ರಟ್ಟಿನ ಪರಿಘದಲ್ಲಿ ೩೨ ಸರಿ ಪಾಲುಗಳನ್ನು ಮಾಡಿ ಕ್ರಮವಾಗಿ ಯಾವತ್ತು ದಿಕ್ಕುಗಳನ್ನು ತೋರಿಸುವದು. ಆಯಾ ಸ್ಥಳದಲ್ಲಿ ಆಯಾ ದಿಕ್ಕುಗಳ ಹೆಸರುಗಳನ್ನೂ ಬರೆದಿರುವರು. ಆ ರಟ್ಟಿನ ಮಧ್ಯಬಿಂದುವಿನಿಂದ ಪರಿಘದಲ್ಲಿ ಮಾಡಿದ ಯಾವತ್ತು ಭಾಗ ಬಿಂದುಗಳನ್ನು ಸರಳ ರೇಷೆಗಳಿಂದ ಕೂಡಿಸಿರುವರು. ಉತ್ತರದಿಶೆಯನ್ನು ತೋರಿಸುವ ರೇಷೆಯು ಅಗ್ರಭಾಗಕ್ಕೆ ಬಾಣದ ಗುರ್ತನ್ನು ಮಾಡಿರುವರು. ಈ ರಟ್ಟಿನ ಬುಡದಲ್ಲಿ ಹಳಚಿಯಾದ ಚುಂಬಕ ಕಂಬಿಯನ್ನು ಅಂಟಿಸಿರುವರು. ರಟ್ಟಿನೊಳಗಿನ ಉತ್ತರ ದಕ್ಷಿಣ ದಿಕ್ಕುಗಳೂ ಕಂಬಿಯ ಉತ್ತರ ದಕ್ಷಿಣ ಧ್ರುವಗಳ ದಿಕ್ಕು ಒಂದೇಯಾಗಿರುವಂತೆ ಅದರ ರಚನೆಯಾಗಿರುವದು. ಅಂದರೆ ಚುಂಬಕ ಕಂಬಿಯ ಒಂದು ತುದಿಯು ರಟ್ಟಿನೊಳಗಿನ ಉತ್ತರ ದಿಕ್ಕು ತೋರಿಸುವ ಅಕ್ಷರದ ಬುಡಕ್ಕೂ ಮತ್ತೊಂದು ದಕ್ಷಿಣದ ದಿಕ್ಕನ್ನು ತೋರಿಸುವ ಅಕ್ಷರದ ಬುಡಕ್ಕೂ ಇರುವದು. ಬಳಿಕ ಈ ಕಂಬಿ ಸಹಿತವಾದ ರಟ್ಟನ್ನು ಒಂದು ಪೆಟ್ಟಿಗೆಯ ತಳದಲ್ಲಿರುವ ಆಸಿಕೆಯ ಮೇಲೆ ಎತ್ತಬೇಕಾದತ್ತ ತಿರುಗಲಿಕ್ಕೆ ಬರುವಂತೆ ಇಟ್ಟಿರುವರು ಚುಂಬಕ ಕಂಬಿಯು ತನ್ನ ಧರ್ಮದಂತೆ ದಕ್ಷಿಣೋತ್ತರಾಭಿಮುಖವಾಗಿ ನಿಲ್ಲುವದು. ಆದರೆ ಅದು ನೋಡುವವರ ಕಣ್ಣಿಗೆ ಕಾಣಿಸುವದಿಲ್ಲ. ರಟ್ಟಿಗೂ ಅದಕ್ಕೂ ಸಂಬಂಧವಿರುವದರಿಂದ ಅದು ಒಲೆದ ಕೂಡಲೆ ರಟ್ಟೂ ಒಲೆಯುವದು ಅದರಿಂದ ರಟ್ಟಿನಮೇಲಿನ ಉತ್ತರದಿಗ್ದರ್ಶಕ ರೇಷೆಯನ್ನು ನೋಡಿ ನಾವು ಸಹಜವಾಗಿ ಉತ್ತರ ದಿಕ್ಕನ್ನು ಅರಿತುಕೊಳ್ಳಬಹುದು. ಈ ಪೆಟ್ಟಿಗೆಯು ತಾಮ್ರದ್ದು. ಹಡಗವು ನಡೆಯುವಾಗ ಅದರ ದಡಕಿಯಿಂದ ಚುಂಬಕ ಯಂತ್ರಕ್ಕೆ ಧಕ್ಕಿ ಬರಬಾರದೆಂದೂ ಅದರ ಕ್ಷಿತಿಜ ಪಾತಳಿಗೆ ಭಂಗವುಂಟಾಗಬಾರದೆಂದೂ ಈ ಪೆಟ್ಟಿಗೆಯನ್ನು ಅರ್ಧವರ್ತುಳಾಕಾರವಾದ ಒಂದು ಪಾತ್ರೆಯಲ್ಲಿ

ಟ್ಟು ಜೋಡೊಂದು ಕಟ್ಟಿಗೆಯ ಪೆಟ್ಟಿಗೆಯಲ್ಲಿ ಇಡಿಸಿರುವರು. ಇದರಿಂದ ಕಟ್ಟಿಗೆಯ ಪೆಟ್ಟಿಗೆಯು ಹೊಯ್ದಾಡಿದರೂ ಒಳಗಿನ ತಾಮ್ರದ ಪೆಟ್ಟಿಗೆಯು ಕ್ಷಿತಿಜಪಾತಳಿಗೆ ಸಮಾಂತರವಾಗಿ ನಿಲ್ಲುವದು. ಒಳಗಿನ ಪೆಟ್ಟಿಗೆಯು ಬಾಯುಮುಚ್ಚಳವು ಕನ್ನಡಿಯದಿರುವದು ಅದರಿಂದ ಇಟ್ಟು ನೋಡಲಿಕ್ಕೆ ತೊಂದರೆಯಾಗುವದಿಲ್ಲ. ಇಷ್ಟೇ ಅಲ್ಲ; ಹುಡಿ ಮುಂತಾದ ಕಸಕಡ್ಡಿಗಳು ಯಂತ್ರದಲ್ಲಿ ಸೇರುವ ಭಯವೂ ಇಲ್ಲ. ಹಡಗ ನಡಿಸುವವನು ಇದನ್ನು ಯಾವಾಗಲು ತನ್ನ ಬಳಿಯಲ್ಲಿಟ್ಟುಕೊಂಡಿರುವನು. ಇದರಿಂದ ಕಡಲಪಯಣವು ನಿರ್ಭಯವಾಗಿದೆ. (ಸಶೇಷ)

THE HISTORY OF RAJASTHAN.

ರಾಜಾಸ್ಥಾನದ ಇತಿಹಾಸವು.

ಬಾಬರನು ಸ್ವತಃ ಗುಣವಂತನೂ ಪದ್ಯರಚನಾಕಾರ್ಯದಲ್ಲಿ ಬಲ್ಲಿದನೂ ಆಗಿದ್ದನು ಇವನು ತನಗೊದಗಿದ ಯಾವತ್ತು ಜಯಾಪಜಯಗಳನ್ನು ತನ್ನ ದಿನವಹಿಯಲ್ಲಿ ಬರೆದಿಟ್ಟಿರುವನು ಅದರಲ್ಲಿ ಉಲ್ಲೇಖಿಸಿದ ಸಂಗತಿಗಳಿಂದ ಇವನ ಸತ್ಯಪ್ರಿಯತ್ವವು ಚೆನ್ನಾಗಿ ಒಡೆದು ಕಾಣುವದು. ಉಳಿದ ಮುಸಲ್ಮಾನ ಸರದಾರರಂತೆ ಇವನು ಕೇವಲ ಧರ್ಮಾಭಿಮಾನದಿಂದ ಉನ್ಮತ್ತನಾಗಿದ್ದಿಲ್ಲವಾದ್ದರಿಂದ ಕವೋಣಲೋಕಾನುರಾಗಕ್ಕೆ ಪಾತ್ರನಾದನು ಇವನ ಶೌರ್ಯವನ್ನಂತೂ ಪೃಥಕ್ಕಾಗಿ ವರ್ಣಿಸುವ ಅವಶ್ಯಕತೆಇಲ್ಲ. ಭರತಖಂಡದಿಂದ ಅತಿ ದೂರದಲ್ಲಿರುವ ಪ್ರಾಂತದಿಂದ ಏಕಾಂಗಿಯಾಗಿ ಹೊರಬಿದ್ದು, ದಂಡು ಕೂಡಿಸಿಕೊಂಡು ದಿಲ್ಲಿಯರಾಜ್ಯಪದವನ್ನು ಗೆದ್ದುಕೊಂಡದ್ದಲ್ಲದೆ, ಮಹಾವೀರನೆನಿಸಿದ ರಜಪೂತ ಭೂಪನಾದ ಸಂಗನಕೂಡ ಹೋರಾಡಲಿಕ್ಕೆ ನಡಕಟ್ಟಿಕೊಂಡು ನಿಂತನು ಇವೇ ಸಂಗತಿಗಳು ಇವನ ಪ್ರಖರವಾದ ಪ್ರತಾಪವನ್ನು ವಿಶದವಾಗಿ ಸ್ಪಷ್ಟೀಕರಿಸುತ್ತವೆ.

ಮೇಲೆ ಹೇಳಿದಂತೆ ಬಾಬರನು ತನ್ನ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಆಗ್ರಾಪಟ್ಟಣದಿಂದ ಹೊರಟು ಶಿಕ್ರಿಯ ಮಾರ್ಗವಾಗಿ ಸಂಗನಮೇಲೆ ಸಾಗಿಬಂದನು. ಇತ್ತ ಸಂಗನಾದರೂ ತನ್ನ ಯಾವತ್ತೂ ಮಾಂಡಳಿಕ ರಾಜರನ್ನೂ ಠಾಕೂರರನ್ನೂ ಒಡಗೊಂಡು ಬಾಬರನನ್ನೆದುರಿಸಲಿಕ್ಕೆಂದು ಶಿಕ್ರಿಯ ಕಡೆಗೆ ಸಾಗಿದನು. ಇಷ್ಟರಲ್ಲಿ ಬಾಬರನ ಕಡೆಯ ಹದಿನೈದು ಜನ ರಾಹುತರು ಬಿಯಾನಾ ಹೊಳೆಯನ್ನು ದಾಟಿ ರಾಜಸ್ಥಾನವನ್ನೊಳನುಗ್ಗುತ್ತಿದ್ದರು. ಇದನ್ನು ಕಂಡು ಸಂಗನು ಅವರಿಗೆದುರಾಗಿ ನಿಂತು ಅವರನ್ನು ಹಣಿದೋಡಿಸಿದನು. ಈ ಪರಾಜಯವು ಬಾಬರನಿಗೆ प्रथमग्रासे मक्षिकापात. ಎಂಬ ಸಂಸ್ಕೃತಗಾದೆಯಂತೆ ಅಥವಾ ಮೊದಲ ತುತ್ತಿಗೇ ಪರಳು ಕಡಿದಂತೆ ಎಂಬ ಕನ್ನಡ ಸಾಮತಿಯಂತೆ ಪರಿಣಮಿಸಿತು. ಆದರೆ ಬಾಬರನು ಇಂಥ ಬಿಕ್ಕಟ್ಟಿನ ಅನೇಕ ಪ್ರಸಂಗಗಳನ್ನು ಕಂಡವನಾದ್ದರಿಂದ ಈ ಪರಾಜಯಕ್ಕೆ ಅಂಜಲಿಲ್ಲ. ಆದರೂ ಆವನು ತನ್ನ ಬಳಿಯಲ್ಲಿರುವ ದಂಡಾಳುಗಳು ವಂಶಪರಂಪರಾಗತರಾಗಿ ಇದ್ದವರಲ್ಲ; ಇಷ್ಟೇ ಅಲ್ಲ ಹಿಂಡತಂದ ನಾಯಿಯು ಮೊಲಹಿಡಿಯಲಾರದು, ಎಂದು ಬಗೆದು ಈ ಕಾಟಾಕಾಳಿಯ ದಂಡಿನಿಂದ ತನಗೆ ಯಶವು ಎಂತು ದೊರೆಯುವದು! ಎಂದು ಚಿಂತಿಸಿ ತನಗೆ ನಿಜವಾಗಿ ಜಯದೊರೆಯುವದೆಂಬಷ್ಟು ಸೈನ್ಯದ ಸಿದ್ಧತೆಯೂ ಸಾಮರ್ಥ್ಯವೂ ಮನದಟ್ಟಾದ ಹೊರ್ತು ಮುಂದಡಿಯನ್ನಿಡುವದು ತಿಳಿಗೇಡಿತನವೆಂದು ನಂಬಿ ಅಲ್ಲೇ ತನ್ನ ಪಾಳೆಯವನ್ನು ಬಿಡಿಸಿ ಅದರ ಸುತ್ತು ಆಳವಾದ ಕಂದಕವನ್ನು ಅಗಿಸಿಕೊಂಡು ಸ್ವಂತ ರಕ್ಷಣೆಯ ಕಾರ್ಯವನ್ನು ನೆರವೇರಿಸಿಕೊಂಡನು.

ಈ ಮೇರೆಗೆ ಬಾಬರನು ಆತ್ಮ ಸಂರಕ್ಷಣೆಯ ಉಪಾಯವನ್ನು ಯೋಚಿಸಿ ಕಂದಕದ ಅಂತರ್ಯದಲ್ಲಿ ಬಹು ಭದ್ರವಾಗಿ ವಾಸಮಾಡಿಕೊಂಡು ಕೆಲವು ದಿವಸಗಳನ್ನು ಕಳೆದನು. ಈ ಅವಧಿಯಲ್ಲಾದರೂ ಸ್ವಪರ ಸೇನೆಗಳ ಬಲಾಬಲವನ್ನು ಒರೆಗಲ್ಲಿಗಿಕ್ಕಿ ನೋಡುವ ಕುತೂಹಲದಿಂದ ಆ

ಗಾಗ್ಗೆ ಒಂದೊಂದು ದಳಭಾಗವನ್ನು ಶತ್ರುಗಳಿಗೆದುರಾಗಿ ಕಳುಹುತ್ತಿದ್ದನು. ಈ ಹೋದ ದಳಭಾಗವು ಒಂದು ಬಾರಿಯಾದರೂ ವಿಜಯಪತಾಕೆಯೊಂದಿಗೆ ಬರಲಿಲ್ಲ. ಯಾವಾಗಲೂ ಶತ್ರುವಿನ ಆಯುಧಪ್ರಹಾರದಿಂದ ಸಡಿಲಿದ ವ್ಯಾಕುಲಗ್ರಸ್ತರಾಗಿ ಬರುತ್ತಿತ್ತು. ಆದರಿಂದ ಸಂಗನ ಮೇಲೆ ಏರಿಹೋಗಲು ಬಾಬರನಿಗೆ ಎದೆಯಾಗಲಿಲ್ಲ; ಆದರೂ ಅವನು ಹತಾಶನಾಗದೆ ಯಶಪ್ರಾಪ್ತಿಗಾಗಿ ಅನೇಕ ಉಪಾಯಗಳನ್ನು ಯೋಚಿಸಿದನು. ಮಾನವನು ತನ್ನ ಕಾರ್ಯವು ಕೈಗೂಡಬೇಕೆಂದು ಹಲವು ಬಗೆಯ ಉಪಾಯಗಳನ್ನು ಯೋಚಿಸುತ್ತಾನೆ. ಆದರೆ ಅನುಕೂಲ ಕಾಲವು ಅಥವಾ ದೈವಾನುಕೂಲತೆಯ ಸಮಯವು ಪ್ರಾಪ್ತವಾದ ಹೊರತು ಮಾನವನ ಉಪಾಯಗಳು ಫಲಿಸಲಾರವು. ಇದೇ ಸಮಯದಲ್ಲಿ ಬಾಬರನ ಬಳಿಯಲ್ಲಿದ್ದ ದೈವಜ್ಞನು ಕೂಡ ನಿನಗೆ ಈಗ ಕಾಲವು ಅನುಕೂಲವಿಲ್ಲ. ಯಾಕೆಂದರೆ ಮಂಗಳನು ಪಶ್ಚಿಮಕ್ಕಿರುತ್ತಾನೆ. ಅವನ ಎದುರಿಂದ ಅಂದರೆ ಪೂರ್ವದಿಂದ ಬರುವ ಅರಸನಿಗೆ ಜಯವು ದೊರೆಯದು ಎಂದು ಹೇಳಿದನು.

ಈ ಮೇರೆಗೆ ಮೂಢ ಶ್ರದ್ಧೆಯುಳ್ಳ ಬಾಬರನಿಗೆ ಗ್ರಹದಶೆಯ ಪ್ರತಿಕೂಲತ್ವವು ತಿಳಿಯಲು ಅವನು ತನ್ನ ಸ್ಥಳದಲ್ಲಿ ಅಂದರೆ ಕಂದಕದ ಮಧ್ಯದಲ್ಲಿ ಸ್ವಸ್ಥವಾಗಿ ಉಳುಕೊಂಡನು. ಆದರೂ ರಜಪೂತರನ್ನು ಗೆಲ್ಲಬೇಕೆಂಬ ಹವ್ಯಾಸವನ್ನು ಬಿಡಲಿಲ್ಲ. ಅದೇ ಆಲೋಚನೆಯಲ್ಲಿ ಅವನು ಮಗ್ನನಾಗಿರುವಾಗ ಅವನ ಮನಸ್ಸಿನಲ್ಲಿ ವಿಧವಿಧದ ವಿಚಾರತರಂಗಗಳು ಉಂಟಾದವು. ಒಮ್ಮೆ ಅವನು ಶೌರ್ಯದಿಂದ ಶತ್ರುವಿನ ಮೇಲೆ ಏರಿಹೋಗಿ ಕಾದಬೇಕೆನ್ನುವನು. ಮತ್ತೊಮ್ಮೆ ಒಂದು ವೇಳೆ ತಾನು ಸೋತರೆ ತನ್ನ ಅವಸ್ಥೆಯೂ ಕೀರ್ತಿಯೂ ಕಷ್ಟತರವಾಗಬಹುದೆಂದು ಬಗೆಯುವನು. ಒಮ್ಮೆ ದೈವಬಲವನ್ನು ಹಾರೈಸುವನು. ಮತ್ತೊಮ್ಮೆ ಜನಕಾಲ ಮುಂತಾದ ಸಾಧನಗಳನ್ನು ಪ್ರತೀಕ್ಷಿಸುವನು. ಒಮ್ಮೆ ತಾನು ಮಾಡಿದ ಪಾತಕಗಳಿಂದೇನಾದರೂ ನನ್ನ ಜಯಕೆ

ದೇವರು ಕುಪಿತನಾಗಿ ವಿಘ್ನವನ್ನುಂಟು ಮಾಡಿದನೋ!
ಎಂದು ನೆನೆಸುವನು. ಈ ವಿಚಾರವು ಅವನ ಮನದಲ್ಲಿ
ಉದ್ಭವಿಸಿದ ಕೂಡಲೆ ತಾನು ಮುಸಲ್ಮಾನ ಧರ್ಮಶಾಸ್ತ್ರವಾ
ದ ಶರಾ ಎಂಬ ಶಾಸ್ತ್ರದಂತೆ ಮದ್ಯಪಾನವು ಮಹಾ ಪಾತಕ
ವೆಂದು ಎಣಿಸಲ್ಪಟ್ಟ ದೋಷವು ತನ್ನಿಂದ ನಿತ್ಯಶಃ ಘಟಿಸು
ತ್ತದೆಂಬ ಸಂಗತಿಯು ಥಟ್ಟನೆ ಹೊಳೆಯಿತು. ಆಗ ಅವ
ನು ತಡಮಾಡದೆ ಇನ್ನು ಮುಂದೆ ನಾನು ಮದ್ಯವನ್ನು ಮು
ಟ್ಟುವದಿಲ್ಲೆಂದು ಆಣೆ ಮಾಡಿದನು. ಈ ವಿಷಯವಾಗಿ ಅವ
ನು ಮಾಡಿದ ವಿಚಾರವನ್ನು ಅವನು ತನ್ನ ದಿನವಹಿಯಲ್ಲಿ
ತಾನೇ ಬರೆದಿಟ್ಟದ್ದನ್ನು ಇದರಡಿಯಲ್ಲಿ ಅವತರಿಸಿಕೊಂಡಿ
ದ್ದೇವೆ.

"ನಾನು ಜಮಾದಿ ತಿಂಗಳ ತಾರೀಖು ೨೩ನೇ ಸೋಮ
ವಾರ ದಿವಸ ಕುದುರೆಯ ಮೇಲೆ ಕೂತುಕೊಂಡು ದಂಡನಾ
ಯಕರನ್ನು ನೋಡುವದಕ್ಕಾಗಿ ಹೊರಟಿರಲು ಒಮ್ಮಿಂದೊ
ಮ್ಮೆ ನನ್ನ ಮನಸಿನಲ್ಲಿ ಅನೇಕ ವಿಚಾರಗಳು ಉದ್ಭವಿಸಿದ
ವು. ಕೃತಕರ್ಮದ ವಿಚಾರವನ್ನು ಮಾಡಿ ಘಟಿಸಿದ ಅಪ
ರಾಧಗಳ ಬಗ್ಗೆ ಪಶ್ಚಾತ್ತಾಪಬಟ್ಟು ಮುಂದೆ ನನ್ನ ನಡತೆಯ
ನ್ನು ತಿದ್ದಿಕೊಳ್ಳುವದು ನನ್ನ ಸ್ವಭಾವಸಿದ್ಧ ಸಾಂಪ್ರದಾಯ
ವಾಗಿದೆ. ಇದಕ್ಕನುಸಾರವಾಗಿ ನಾನು ಪ್ರಸ್ತುತದ ಪ್ರಸಂ
ಗದಲ್ಲಿ ನನಗೆ ಅಪಯಶ ತಟ್ಟುವ ಕಾರಣವನ್ನು ಕುರಿತು
ಆಲೋಚಿಸತೊಡಗಿದೆನು. ನಾನು ನನ್ನ ಜೀವವನ್ನುದ್ದೇ
ಶಿಸಿ ಎಲೈ ಜೀವವೇ! ನೀನು ಈ ಪಾಪಯುಕ್ತವಾದ ವ್ಯ
ವಹಾರದಲ್ಲಿ ಈಗಿನಂತೆ ತಲ್ಲೀನನಾಗಿ ಎಷ್ಟು ದಿವಸ ಸುಖೋ
ಪಭೋಗವನ್ನು ಉಣ್ಣುವನು! ಅಪ್ಪ, ಸ್ವಲ್ಪಾದರೂ ನಿನಗೆ
ಪಶ್ಚಾತ್ತಾಪವಾಗುವದಿಲ್ಲವೋ! ನೀನು ಈ ಪಾತಕದಿಂದ
ಪರಮ ಅಪವಿತ್ರನಾಗಿದ್ದೀ ಯಾವಾಗಲೂ ನಿರಾಶಾಪರಿವೃತವಾ
ದ ಸಂಗತಿಗಳಿಗೆ ಸುಖಾಭಿಲಾಷೆಯಿಂದ ಮೋಹಿಸುವದು
ಅರಿದಲ್ಲವೆ! ನೀನು ಈ ಮನೋವಿಕಾರಗಳಿಗೆ ದಾಸಾನು
ದಾಸನಾಗಿ ಎಷ್ಟು ದಿವಸ ಬಾಳಬೇಕು! ಎಲೋ, ನೀನು
ನಿನ್ನ ಆಯುಷ್ಯವನ್ನು ಹಾಳು ಮಾಡಿಬಿಟ್ಟೆಯಲ್ಲ! ನೀನು

ಪವಿತ್ರವಾದ ಧರ್ಮಕೃತ್ಯಗಳಲ್ಲಿ ಕಾಲಕ್ಷೇಪ ಮಾಡದೆ ನಿಷಿದ್ಧವಾದಂಥ ಗರ್ಹ್ಯವಾದಂಥ ವಿಷಯ ಲೋಲುಪ್ತಿಯಲ್ಲಿಯೂ ದುಂದುಗಾರಿಕೆಯಲ್ಲಿಯೂ ಕ್ರೀಡಾವಿನೋದಗಳಲ್ಲಿಯು ಎ ತಲೆಮಟ ಮುಳುಗಿ ಅದೇ ಸುಖವೆಂದು ತಿಳುಕೊಳ್ಳುತ್ತೀ ಅಲ್ಲ? ಇನ್ನಾದರೂ ಈ ವಿಷಯಪಾಶಗಳನ್ನು ಹರಿದೊಗೆದು ಮುಕ್ತನಾಗು. ಎಂದು ಜೀವಕ್ಕೆ ಬೋಧಿಸಿ ನಾನು ಮಾಡುತ್ತಿದ್ದ ಮದ್ಯಪಾನವೇ ಮಹಾಪಾತಕವೆಂದು ನಿಶ್ಚೈಸಿ ಇನ್ನು ಮೇಲೆ ಮದ್ಯವನ್ನು ಕುಡಿಯಲಿಕ್ಕಿಲ್ಲೆಂದು ಶಪಥ ಮಾಡಿದೆನು. ಮದ್ಯಪ್ರಾಶನಕ್ಕೆ ಉಪಯೋಗಿಸುತ್ತಿದ್ದ ಬೆಳ್ಳಿಬಂಗಾರಗಳ ಪಾತ್ರೆಗಳನ್ನು ಒಡೆದು ಚೂರು ಚೂರು ಮಾಡಿಸಿ ಬಡವರಿಗೂ ಫಕೀರರಿಗೂ ಹಂಚಿಕೊಟ್ಟೆನು. ಅದರಿಂದ ನನ್ನ ಮನಸ್ಸು ನಿರ್ಮಲವಾಯಿತು. ಈ ನನ್ನ ಆಚರಣೆಯಿಂದ ನನ್ನ ಪದರಿನಲ್ಲಿದ್ದ ಆಸಾಸನೆಂಬ ಒಬ್ಬ ಮನುಷ್ಯನಲ್ಲಿಯೂ ವಿರಕ್ತಿಯು ತಲೆದೋರಿ ಅಂದಿನಿಂದ ಮದ್ಯಪ್ರಾಶನ ಮಾಡಲಿಕ್ಕಿಲ್ಲೆಂದು ಆಣೆ ಇಟ್ಟುಕೊಂಡನು. ನನ್ನಂತೆ ಅವನೂ ಗಡ್ಡ ಬೆಳಿಸುವದನ್ನು ನಿಶ್ಚೈಸಿದನು. ಅದೇ ದಿವಸ ರಾತ್ರಿ ಹಾಗೂ ಮರುದಿವಸ ಕೂಡಿ ಸುಮಾರು ೩೦೦ ಜನರು ನಾನು ಮಾಡಿದ ಶಪಥಕ್ಕೆ ಅನುಮೋದಿಸಿದ್ದಲ್ಲದೆ ತಾವೂ ಅದರಂತೆ ನಡೆದುಕೊಳ್ಳುವೆವೆಂದು ಪ್ರತಿಜ್ಞೆ ಮಾಡಿದರು. ಈ ಜನರಲ್ಲಿ ಸರದಾರರೂ, ಮುತ್ಸದ್ದಿಗಳೂ, ಅಮೀರರೂ, ದಂಡಾಳುಗಳೂ ಮುಂತಾದ ಎಲ್ಲ ಯೋಗ್ಯತೆಯ ಜನರಿದ್ದರು. ನಮ್ಮ ಬಳಿಯಲ್ಲಿರುವ ಮದ್ಯವನ್ನೆಲ್ಲ ನಾವು ನೆಲದ ಮೇಲೆ ಚಲ್ಲಿಸಿದೆವು. ಬಾಬಾದೋಸ್ತನೆಂಬವನು ತಂದ ಅತ್ಯುತ್ತಮ ಮದ್ಯದಲ್ಲಿ ಉಪ್ಪುಗಲಿಸಿ ಅದು ಪ್ರಾಶನಕ್ಕೆ ಅಯೋಗ್ಯವಾಗುವಂತೆ ಮಾಡಬೇಕೆಂದು ನಾನು ಅಪ್ಪಣೆ ಮಾಡಿದೆನು. ಮದ್ಯವನ್ನು ಚೆಲ್ಲಿದ ಸ್ಥಳದಲ್ಲಿ ಒಂದು ಭವ್ಯವಾದ ಕಲ್ಲು ಕಟ್ಟೆಯನ್ನು ಕಟ್ಟಿಸಿ ಅದರ ನೆರೆಯಲ್ಲಿಯೇ ಒಂದು ಭಿಕ್ಷಾಗೃಹವನ್ನು ಕಟ್ಟಿಸಬೇಕೆಂದು ಗೊತ್ತು ಮಾಡಿದೆನು. ಮುಂದೆ ನಾನು ೯೩೨ ನೇ ಫಸಲಿಯ ಮೊಹರಮ್ ತಿಂಗಳಲ್ಲಿ ಧವಲ

ಪುರದಿಂದ ಶಿಕ್ರಿಗೆ ಹೋಗುವಾಗ ಮಾರ್ಗದಲ್ಲಿ ಗ್ವಾಲ್ಹೇರಿಯಲ್ಲಿ ಉಳುಕೊಂಡೆನು. ಅಷ್ಟರಲ್ಲಿಯೇ ಮೇಲೆ ಉಲ್ಲೇಖಿಸಿದ ಮದ್ಯಪರಿತ್ಯಾಗ ಸ್ಥಾನವೂ ಭಿಕ್ಷಾಗ್ರಹವೂ ಕಟ್ಟಿ ತಯಾರಾಗಿದ್ದವು. ಇದಲ್ಲದೆ ನಾನು ಸಂಗನನ್ನು ಗೆದ್ದರೆ ಮುಸಲ್ಮಾನರಿಗೆ ಶಿಕ್ಕಾ ಎಂಬ ಕರವನ್ನು ಬಿಟ್ಟುಬಿಡುವೆನೆಂದು ಹರಿಕೆ ಹೊತ್ತಿದ್ದೆನು. ಈ ನನ್ನ ಹರಿಕೆಯನ್ನು ನಿಶ್ಚಯಿಸುವವನ್ನು ನನಗೆ ಯಾವಾಗಲೂ ಸ್ಮರಣೆಗೆ ತಂದು ಕೊಡಬೇಕೆಂದು ನಾನು ಮಹಮ್ಮದ ಶಾರಬಾನ ಶೇಖರಿಝುನ ಎಂಬ ಇಬ್ಬರು ಫಕೀರರಿಗೆ ಹೇಳಿದ್ದೆನು. ಅವರು ತಮ್ಮ ಕರ್ತವ್ಯವನ್ನು ಬಳ್ಳೇ ಜಾಗ್ರತೆಯಿಂದ ಮಾಡುತ್ತಿದ್ದರು. ಅದರಿಂದ ನಾನು ಕೂಡಲೇ ನನ್ನ ರಾಯಭಾರಿಯನ್ನು ಕರಿಸಿ ನನ್ನ ಪ್ರಜರಾಗಿರುವ ಯಾವತ್ತೂ ಮುಸಲ್ಮಾನರಿಗೆ ಶಿಕ್ಕಾ ಕರವನ್ನು ಬಿಟ್ಟುಬಿಟ್ಟದ್ದೇನೆಂದು ಪ್ರಕಟಿಸಿದೆನು."

CORRESPONDENCE

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಕರ್ತರವರ ಸನ್ನಿಧಾನಕ್ಕೆ—

ಸಿರಸಾಷ್ಟಾಂಗ ನಮಸ್ಕಾರ ವಿ. ವಿ. ತಮ್ಮ ಕರಕಮಲವೆಂಬ ಆಕಾಶ ಮಂಡಲದಲ್ಲಿ ತೇಜೋಮಯವಾದ ದಿನಕರನೋಪಾದಿಯಲ್ಲಿ ಉದ್ಭವಿಸುತ್ತಿರುವ ಸುಂದರವಾದ ಮಾಸಪತ್ರಿಕೆಯಲ್ಲಿ ಕೆಳಗಿನ ಸಂಗತಿಯನ್ನು ಪ್ರಕಟಿಸುವಿರೆಂಬದಾಗಿ ನಂಬಿರುವೆನು.

ನವಿಲ್ಗ್ರಾಮದ ವಿದ್ಯಾಲಯದಲ್ಲಿ ಮೊನ್ನೆ ಶಿಕ್ಷಣೋತ್ತೇಜಕ ಸಭೆಯು ಬಹು ವಿಜೃಂಭಣೆಯಿಂದ ನೆರೆದಿತ್ತು. ಊರೊಳಗಿನ ಪ್ರಮುಖ ಸಾವಕಾರರೂ, ಬೇರೆ ಸಭ್ಯ ಗೃಹಸ್ಥರೂ ಕೂಡಿದ್ದರು. ಇಲ್ಲಿಯ ಪ್ರಮುಖ ಮನುಷ್ಯರೂ ಕನ್ನಡ ಭಾಷಾಭಿಮಾನಿಗಳೂ ಆದ ಮಿ. ಪರಸನಗೌಡಾ ಅಣ್ಣಾ ಪರಸರಸಿ ಇವರು ಮುಖ್ಯಾಸನದಲ್ಲಿ ಬಹು ಜನರ ಅನುಮತಿಯಂತೆ ವಿರಾಜಮಾನರಾದ ಬಳಿಕ ಸಭೆಯು ಕಾ

ಯೋಗಗಳು ಪೂರ್ವಸಂಕೇತ ಪ್ರಕಾರ ನೆರವೇರಿಸಲ್ಪಟ್ಟವು ಬಳಿಕ ಹೆಣ್ಣುಮಕ್ಕಳ ಸಾಲೆಯವರಿಗೆ ಖಣಗಳೂ ಧೇಡ ಸಾಲಿಯವರಿಗೆ ಧೋತರಗಳೂ ಪಾಟಿಗಳೂ ಕೊಡಲ್ಪಟ್ಟವು ಮಿ. ರಾಮನಗೌಡಾ ಪೇದಗೊಸ್ಸ ಇವರು ಯಾವತ್ತೂ ವಿದ್ಯಾರ್ಥಿಗಳಿಗೆ ಮಿಠಾಯಿಯನ್ನು ಹಂಚಿಕೊಟ್ಟರು. ತರುವಾಯ ಸನ್ತ್ರಿ ಶಾಲೆಯ ಹೆಡ್ಡ ಮಾಸ್ತರ ಮಿ॥ ಚಿದಂಬರ ಅನಂತಭಟ್ಟ ರಾಮದುರ್ಗ ಇವರು ಚಿಕ್ಕ ಬಾಲಕರ ಶಾರೀರ ಸಾಮರ್ಥ್ಯದ ಬೆಳವಣಿಗೆಯು ಭಾವೀ ರಾಷ್ಟ್ರೋನ್ನತಿಯ ಮುಖ್ಯ ಸಾಧನಗಳಲ್ಲಿ ಮೊದಲನೇಯದಾಗಿದೆ. ಆದುದರಿಂದ ಒಂದು ಅಂಗ ಸಾಧನಾಲಯವನ್ನು ಕಟ್ಟಿಸಬೇಕೆಂದು ಯೋಚಿಸಿದ್ದೇನೆ ಎಂದು ಜನರಿಗೆ ತಿಳಿಯಪಡಿಸಲಾಗಿ ಎಲ್ಲರೂ ಇದಕ್ಕೆ ಒಪ್ಪಿ ಕೆಳಗೆ ಬರೆದಂತೆ ಅರವತ್ತು (೬೦) ರೂಪಾಯಿಗಳನ್ನು ವರ್ಗಣಿ ಕೊಟ್ಟರು ಇದೇ ಗೃಹಸ್ಥರು ಎರಡು ತಿಂಗಳ ಹಿಂದೆ (೩೦) ರೂಪಾಯಿಗಳನ್ನು ಕೊಟ್ಟಿದ್ದರು. ಒಟ್ಟಿದ (೯೦) ರೂಪಾಯಿಗಳಿಂದ ಸರಕಾರದವರ ಸಹಾಯದಿಂದಲೂ ಒಂದು ತಾಲೀಮಖಾನೆಯನ್ನು ಕಟ್ಟಿಸುವದು ಗೊತ್ತಾಗಿದೆ.

ಧನ ಸಹಾಯಕರು.

ಸಂಖ್ಯೆ	ಹೆಸರು.	ರಕಮು.
೧	ಮಿ. ತಮ್ಮನಗೌಡಾ ಪೋಲೀಸಪಾಟೀಲ	೫
೨	,, ಕೊಳ್ಳಪ್ಪಗೌಡಾ ಪಾಟೀಲ.	೫
೩	,, ಶರಣಪ್ಪ ಅಣ್ಣಾ ಕಿತ್ತೂರ	೫
೪	,, ಯಲ್ಲಪ್ಪಗೌಡಾ ಹಿರೇಗೌಡನವರ	೩
೫	,, ಪರಪನಗೌಡಾ ಪೇಪರಸಿ	೪
೬	,, ಹಿರೇಗೌಡಾ ಹಿರೇಗೌಡನವರ	೪
೭	,, ಶೀಷೋ ಗೋವಿಂದ ಕುಲಕರ್ಣಿ	೨
೮	,, ಅಣ್ಣಾರಾವ ಮುತಾಲಿಕ ದೇಸಾಯಿ	೨
೯	,, ಅಣ್ಣಪ್ಪಗೌಡಾ ಹಳೆಮನಿ	೨
೧೦	,, ಯಲ್ಲಪ್ಪಗೌಡಾ ಗಡದಗೌಡನವರ	೪
೧೧	,, ರಾಮನಗೌಡಾ ಗೂಡರಾಸಿ	೨

೧೨	,,	ಗೌಡಪ್ಪಗೌಡಾ ಹಿರೇಗೌಡನವರ	೨
೧೩	,,	ಭರಮಗೌಡಾ ಪೊ॥ ಪಾ॥ ಹುಳಕಟ್ಟಿ	೨
೧೪	,,	ಡ್ಯಾಮನಗೌಡಾ ನಿಂಗರಾಜಿ	೨
೧೫	,,	ಅಡಿವೆಪ್ಪ ಅಣ್ಣಾ ವಿ॥ ದೇಸಾಯಿ	೨
೧೬	,,	ಸಂಗನಬಸಪ್ಪ ಮುರಗಣಿ	೨
೧೭	,,	ವೀರನಗೌಡಾ ಕಾಳಿಂಗೌಡನವರ	೨
೧೮	,,	ಪರಪ್ಪನಗೌಡಾ ಗಂದಿಗಿವಾಡ	೧
೧೯	,,	ಯಲ್ಲಪ್ಪಗೌಡಾ ತಿಪರಾಸಿ	೧
೨೦	,,	ಪರಪ್ಪನಗೌಡಾ ರೊಟಿಗೋಡದ	೧
೨೧	,,	ಚನಮಲ್ಲಪ್ಪ ಮುನವಳ್ಳಿ	೧
೨೨	,,	ಬಸನಗೌಡಾ ಸಂದಿಮನಿ	೧
೨೩	,,	ಕಲ್ಲಾಣಪ್ಪ ಅಣ್ಣಾ ಹನಸಿ	೧
೨೪	,,	ಯಲ್ಲಪ್ಪಗೌಡಾ ಸಂದಿಮನಿ	೧
೨೫	,,	ಭರಮನಗೌಡಾ ನಿಂಗರಾಜಿ	೧
೨೬	,,	ಪರಪ್ಪನಗೌಡಾ ಗಡದಗೌಡನವರ	೧
೨೭	,,	ರಾಮನಗೌಡಾ ಬಸನಗೌಡಾ ಮೇದ	೧
೨೮	,,	ವೇಣಿಕೆಗೌಡಾ ತೋಪಣ್ಣನವರ(ಗೊಪ್ಪ	೧
೨೯	,,	ಪರಪ್ಪನಗೌಡಾ ಸಾವಕ್ಕನವರ	೧
೩೦	,,	ರಾಮನಗೌಡಾ ಇದರಮನಿ	೧
೩೧	,,	ಗಿರಿಮಪ್ಪಗೌಡಾ ಮೇದಗೊಪ್ಪ	೧
೩೨	,,	ಗುರವಪ್ಪ ಅಣ್ಣಾ ತೊರಗಲ್ಲ	೧
೩೩	,,	ಸಿದ್ದಪ್ಪ ಮುದಕವ್ವಾ	೧
೩೪	,,	ಬುಡ್ಡಪ್ಪ ಕರೇಗಾರ	೧

ಅಂತು... ೬೦ ರೂ॥

ತರುವಾಯ ನಿಯಮಾನುಸಾರವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಪತ್ರಕರ್ತ ಮಹನೀಯರೇ ತೊಂದರೆಯ ಬಗ್ಗೆ ಕ್ಷಮೆ ಇರಲೆಂದು ಪ್ರಾರ್ಥಿಸುತ್ತಿಪ್ಪ ಶ್ರೀಯುತ ಗುರು ಪರ್ಯಾರ ಪರೋಕ್ಷ ಶಿಷ್ಯ.

ಕಲ್ಲಪ್ಪ ಭೀ. ಸಿದ್ದಣ್ಣವರ

೧ನೇ ಉಪಶಿಕ್ಷಕ ನಬಾಪುರ.

MODEL NOTE.

ಇತಿಹಾಸ (೫೬ನೇ ಅಧ್ಯಾಯ)

೬ನೇ ಇಯತ್ತೆ — ವೇಳೆ ೪೫ ಮಿನಿಟು

ಉದ್ದೇಶ— ಬಂಗಾಲದಲ್ಲಿ ಇಂಗ್ಲಿಷರ ಅಧಿಕಾರ ಪೂರ್ಣವಾಗಿ ನೆಲೆಗೊಂಡದ್ದು

ಉಪಕರಣ— ಹಿಂದುಸ್ಥಾನದ ನಕಾಶೆ

ಉಪೋದ್ಘಾತ— ಚಿನ್ಸುರಾ ಕಾಳಗ ಎಂದಾಯಿತು ಆಗ ಬಂಗಾಲದ ನಬಾಬನ್ಯಾರು? ಮೀರಜಾಫರನೆಂಬ ಉತ್ತರ ಬಂದ ಬಳಿಕ ಅವನ ಆಳಿಕೆಯಲ್ಲಿ ಇಂಗ್ಲೀಷರ ಅಧಿಕಾರ ಬೆಳೆದದ್ದು ನಿಮಗೆ ಗೊತ್ತು ಅದೆ ಆದರೆ ಈ ಹೊತ್ತು ಅವರು ಉತ್ತರಹಿಂದುಸ್ಥಾನದಲ್ಲಿ ತಮ್ಮ ಅಧಿಕಾರ ಪೂರ್ತಿಯಾಗಿ ನೆಲೆಗೊಳಿಸಿದ್ದನ್ನು ಹೇಳುತ್ತೇನೆ.

ಭಾಗ.	ಹೇಳುವದು.	ಪ್ರಶ್ನರೂಪದಿಂದ ಹೊರಡಿಸುವದು.
೧ ಮೀರಕಾ ಸೀಮನು	(೧) ಆಗ ಕಂಪನಿಯವರು ಕ್ಲೈವನಿಗೆ ಗ್ರಹಕೃತ್ಯಕ್ಕಾಗಿ ಎಲಾಯತಿಗೆ ಅಪ್ಪಣೆ ಕೊಡಲು ಅವನು	(೧) ಚಿನ್ಸುರಾ ಕಾಳಗದ ಪರಿಣಾಮವೇನಾಯಿತು? ಉ. ಇಂಗ್ಲೀಷರ ಶತ್ರುಗಳೆಲ್ಲರೂ ಇಲ್ಲದಂತಾದರು.

ನಬಾಬ ನಾದದ್ದು

೧೭೬೦ರಲ್ಲಿ ವಿಲಾಯತಿಗೆ ಹೋದನು.

(೩) ದಿಲ್ಲಿಯ ಬಾದಶಹ ಅಯೋಧ್ಯೆಯ ನಬಾಬರು ದಂಡೆತ್ತಿ ಬರಲು ಇಂಗ್ಲಿಷರು ತಮ್ಮ ಸೇನೆಯನ್ನು ಅಲ್ಲಿಗೆ ಕಳುಹಿಸಿ ಅವರನ್ನು ಪಾಟಣದ ಹತ್ತಿರ ಸೋಲಿಸಿ ಮೀರ ಜಾಫರನು ನಬಾಬನಾಗಲಿಕ್ಕೆ ಶಕ್ತನಲ್ಲೆಂದು ಅವನ ಸ್ಥಳಕ್ಕೆ ಮೀರ ಕಾಸೀಮನಿಗೆ ನಬಾಬ ಮಾಡಿದನು (೧೭೬೧) ರಲ್ಲಿ ಅದಕ್ಕಾಗಿ ನಬಾಬನು ಭರದ್ವಾನ, ಮಿದಿನಾಪೂರ ಚಿತಗಾಂವ ಎಂಬೀ ಮೂರು ಜಿಲ್ಹೆಗಳನ್ನು ಕೊಟ್ಟನು.

(೪) ಅದರಿಂದ ನಬಾಬನು ಚನ್ನಾಗಿ ರಾಜ್ಯವಾಳಿ ಹಿಂದಿನ ಸಾಲ ತೀರಿಸಿದನು.

ಹೀಗಾದದರಿಂದ ಅವರಿಗಾದ ಲಾಭವೇನು? ಅವರ ವ್ಯಾಪಾರವು ಸುಸೂತ್ರವಾಗಿ ಸಾಗಹತ್ತಿತು.

(೧) ಕ್ಲೈವನು ಹೋದದರಿಂದ ಯಾರಿಗೆ ಹಾನಿಯಾಯಿತು? ಯಾಕೆ? ಮೀರಜಾಫರನಿಗೆ ಹಾನಿಯಾಯಿತು. ಯಾಕೆಂದರೆ ಅವನಿಗೆ ಸಹಾಯ ಇಲ್ಲದಂತಾಯಿತು. ನಬಾಬನಿಗೆ ಹಾನಿ ಆಗಲು ಯಾರಿಗೆ ಸಂತೋಷವಾಗುವದು? ಅವರ್ಯಾರು? ಉ. ಅವನ ಶತ್ರುಗಳಿಗೆ ಸಂತೋಷವಾಗಬೇಕು. ದಿಲ್ಲಿಯ ಅರಸು ಅಯೋಧ್ಯೆಯ ನಬಾಬನು.

ದಿಲ್ಲಿಯ ಬಾದಶಹ ಮೊದಲಾದವರು ದಂಡೆತ್ತಿ ಬರಲು ಇಂಗ್ಲಿಷರ ಕರ್ತವ್ಯವೇನು? ಯಾಕೆ? ಅವನಿಗೆ ಸಹಾಯ ಮಾಡಬೇಕು. ಯಾಕೆಂದರೆ ಮೀರಜಾಫರನು ತಮ್ಮ ಪಕ್ಷದವನು.

(೩) ಮೀರಜಾಫರನನ್ನು ಕೆಲಸದಿಂದ ಯಾಕೆ ತೆಗೆದರು. ಅವನು ಚನ್ನಾಗಿ ಆಳಲಿಲ್ಲ ಆದಕಾರಣ ತೆಗೆದರು?

ಆದುದರಿಂದ ಮೀರ ಕಾಸೀಮನು ಹ್ಯಾಗೆ ವರ್ತಿಸ ತಕ್ಕದ್ದು ತನ್ನನ್ನಾದರೂ ಕೆಲಸದಿಂದ ತೆಗೆದಾರೆಂಬ ಅಂಜಿಕೆಯಿಂದ ಚನ್ನಾಗಿ ಆಳತಕ್ಕದ್ದು.

೨
ಮಿರಕಾಸೀಮನಿಗೂ ಇಂಗ್ಲಿಷರಿಗೂ ಆದ ಯುದ್ಧ.

(೪) ಮೀರಕಾಸೀಮನು ಯಾರಿಗೆ ಅಂಕಿತನಿದ್ದನು ಇಂಗ್ಲೀಷರಿಗೆ ಆದುದರಿಂದ ಅವಗೆ ಅವರಿಗೆ ಅಂಕಿತವಾಗಿ ನಡೆಯುವದು ಮನಸ್ಸಿಗೆ ಬಾರದ್ದರಿಂದ ಫ್ರೇಂಚರನ್ನು ಇಟ್ಟುಕೊಂಡು ತನ್ನ ಸೇನೆಯನ್ನು ಸಿದ್ಧಮಾಡಿ ಮೋಂಗೀರವನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನು.

ಕಾರಣಗಳು— (೧) ಕಂಪನಿಯುವರ ಸರಕಿನ ಮೇಲೆ ಸುಂಕವಿದ್ದಿಲ್ಲ. ಆಗ ಕಂಪನಿಯ ನೌಕರರು ವರ್ತಕರಿಂದ ಹಣ ತಕ್ಕೊಂಡು ತಮ್ಮ ಸರಕೆಂದು ವ್ಯಾಪಾರ ಮಾಡಹತ್ತಿದರು.

ಆದ್ದರಿಂದ ನಬಾಬನು ಅದನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಲು ಅದು ವ್ಯರ್ಥವಾಯಿತು. ಹಾಗೂ ಕಂಪನಿಯುವರು ಅವರಿಗೆ ವ್ಯಾಪಾರಕ್ಕೆ ಪರವಾನಗಿಯನ್ನು ಕೊಟ್ಟರು ಯುದ್ಧಕ್ಕೆ ಸಿದ್ಧನಾದನು

(೧) ಧಾರವಾಡದಲ್ಲಿ ಎಲ್ಲಾ ಸಾಮಾನದ ಮೇಲೆ ಸುಂಕ ತೆಗೆದುಕೊಳು ವರೋ ಇಲ್ಲ ಸರಕಾರೀ ಸಾಮಾನದ ಮೇಲೆ ತೆಗೆದುಕೊಳ್ಳುವದಿಲ್ಲ.

ಈ ಸಂಧಿಯಲ್ಲಿ ಇಂಗ್ಲೀಷರ ವರ್ತನ ಹ್ಯಾಗಿತ್ತು ಆ ನ್ಯಾಯದ್ದಿತ್ತು.

ವರ್ತಿಸಿದ ಸಂಗತಿಗಳು—

ಆಗ ಇಂಗ್ಲೀಷರು ಮೀರ ಜಾಫರನನ್ನು ನಬಾಬನನ್ನು ಮಾಡಿ ಅಡಾಮ್ಸನ ಕೈಕೆಳಗೆ ಸೇನೆ ಕೊಟ್ಟು ಕಳುಹಿಸಿದರು ಆಗ ಅವನು ಅವರನ್ನು ಯುದ್ಧದಲ್ಲಿ ಸೋಲಿಸಿ ಮೊಂಗೀರನ ಮೇಲೆ ಸಾಗಿ ಹೋದನು. ಆಗ ನಬಾಬನು ಮೊಂಗೀರದಲ್ಲಿರದೆ ಪಾಟಣಕ್ಕೆ ಹೋಗಿ "ನೀವು ಮುಂದೆ ಸಾಗಿ ಬಂದರೆ ಶೆರೆಯಲ್ಲಿ ಶಿಕ್ಕ ಇಂಗ್ಲೀಷರನ್ನು ಕೊಲ್ಲುತ್ತೇನೆಂದು ಹೇಳಿಕಳಿಸಿದನು. ಆಗ ಶೆರೆಯವರ ಮುಖ್ಯಸ್ಥನು ಏನೇ ಆಗಲಿ ನೀವು ಮುಂದೆ ಸಾಗತಕ್ಕದ್ದು ಎಂದು ಹೇಳಿ ಕಳುಹಿಸಲು ಅವನು ಹಾಗೆ ಮಾಡಿದನು. ನಬಾಬನು ಶೆರೆಗಾರನನ್ನು ಕೊಲ್ಲಿಸಿದನು ಇದೇ ಪಾಟಣ ಕೊಲೆಯು.

ಪಾಟಣದ ಕೊಲೆಯು ಇಂಗ್ಲೀಷರಿಗೆ ತಿಳಿಯಲು ಅವರು ಏನು ಮಾಡಬೇಕು? ಅವನನ್ನು ಶಿಕ್ಷಿಸಬೇಕು ಅದರಂತೆ ಅಡಾಮ್ಸನು ಹೋಗಿ ಪಾಟಣಾ ತಕ್ಕೊಂಡನು

ಈಗ ಮೀರಜಾಫರನು ಯಾರ ಸಹಾಯ ಅಪೇಕ್ಷಿಸಬೇಕು? ಇಂಗ್ಲೀಷರ ಶತ್ರುಗಳಾದ ದಿಲ್ಲಿಯ ಅರಸು ಅಯೋಧ್ಯೆಯ ನಬಾಬರ ಸಹಾಯ ತೆಗೆದುಕೊಳ್ಳಬೇಕು.

ಶೆರೆಯವರು ಅಡಮ್ಸನಿಗೆ ಏನೆಂದು ಹೇಳಿ ಕಳುಹಿಸಿದನು. ನಮ್ಮ ಪ್ರಾಣ ಹೋದರೂ ಚಿಂತೆಯಿಲ್ಲ ನೀವು ಮುಂದಕ್ಕೆ ಬರತಕ್ಕದ್ದು.

ಹೀಗೆ ಅವನು ಮಾಡುವ ಕಾರಣವೇನು? ತನ್ನ ಪ್ರಾಣ ಹೋದರೂ ತಮ್ಮ ರಾಜರಿಗೆ ಜಯ ಬಂದು ಅವರ ಬೆಳವಣಿಗೆಯಾಗಲಿ

ಕೆಳಗೆ ಬರೆದ ಶಾಳಾಖಾತೆಯಿಂದ ಇನಾಮಿಗೂ, ಲಾಯಬ್ರರಿಗೂ ಮಂಜೂರಾದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ತೆಗುವವು.

ಪೂರ್ಣ ಬೆಲೆ. ರು. ಆ.		ಕಡಿಮೆ ಮಾಡಿದ ಬೆಲೆ. ರು. ಆ.
೧—೪	ಕವಿತೆಯ ೨ನೇ ಪುಸ್ತಕ (2 nd Book of Poetry)	೦—೧೫
೦—೮	ಕ್ಷೇತ್ರವ್ಯವಹಾರಗಣಿತ (Practical Geometry)	೦—೬
೦—೧೨	ಕ್ಷೇತ್ರರಚನೆ (Geometrical figures)	೦—೯
೦—೭	ಯಂತ್ರಶಾಸ್ತ್ರ (Mechanics)	೦—೫
೦—೧೦	ಅರ್ಥಶಾಸ್ತ್ರ (Political Economy)	೧—೦
೦—೩	ಜಗತ್ತಿನ ಇತಿಹಾಸ (Universal History)	೦—೯
೩—೧೨		೧—೧೧
	ವ್ಹಿ. ಪಿ. ಕಮಿಶನ	೦—೧
		೧—೧೨

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳನ್ನು ಒಮ್ಮೆಲೆ ತಕ್ಕೊಂಡರೆ ಪೋಸ್ಟ ರು. ೧(೧೨ ಮಾತ್ರ) ಬೀಳುವದು. ಟಪಾಲ ಹಾಸಲ ಬೇರೆ ಕೊಡಬೇಕು. ೧೦ ರು. ಯಿಂದ ಹೆಚ್ಚಿಗೆ ರೂಪಾಯಿಯ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೧೦ ರಂತೆ ಮತ್ತು ಎಲ್ಲಕ್ಕಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೨೦ ರಂತೆ ಕಮಿಶನ್ನು ದೊರೆಯುವದು.

ಪುಸ್ತಕಗಳು ಕೆಳಗೆ ಬರೆದವರಲ್ಲಿ ದೊರೆಯುವವು.

೧. ಮೆಸರ್ಸ್ ಎಸ್. ಎಚ್. ತ್ರಿಪಾಠಿ ಆ್ಯಂಡ ಕಂಪನಿ ಪ್ರಿನ್ಸೆಸ ಸ್ಟ್ರೀಟ ಮುಂಬಯಿ.

೨. ಧಿ ಗುಜರಾತಿ ಪ್ರಿಂಟಿಂಗ ಪ್ರೆಸ. ಕೋಟ ನರ್ಕಲ ಮುಂಬಯಿ.

೩. ರಾ. ಕರಸನದಾಸ ನಾರಾಯಣದಾಸ ಬುಕ್ಕಸೇಲರ ಸೂರತ.

೪. ಮೆಸರ್ಸ್ ಹರಿಶ್ಚಂದ್ರ ಆ್ಯಂಡ ಕಂಪನಿ ಚತ್ರೇಕರವಾಡಿ ಠಾಕುರದ್ವಾರ ರೋಡ ಮುಂಬಯಿ.

ಆಗ ನಬಾಬನ ಓಡಿ ಹೋಗಿ ತನ್ನ ಸ್ನೇಹಿತರನ್ನು ಕೂಡಿಕೊಂಡನು. ಬಳಿಕ ಮನ್ರೋನೆಂಬವನು ಬಕ್ಸಾರದಲ್ಲಿ ಈ ಮೂವರನ್ನು ಸೋಲಿಸಿದನು ೧೭೬೪ರಲ್ಲಿ ೧೭೬೫ ಕ್ಲೈವನು ವಿಲಾಯತಿಯಿಂದ ಬಂದನು.

ಪರಿಣಾಮವು—

ಇಲ್ಲಿಯು ಬಾದಶನು ಶರಣು ಬಂದನು. ಅಯೋಧ್ಯೆಯ ನಬಾಬನು ಪತ್ತೆ ಕೋರಾದಲ್ಲಿ ಯುದ್ಧ ಮಾಡಿ ಸೋತು ಶರಣ ಬಂದನು. ಮೀರ ಕಾಸೀಮನು ಓಡಿ ಹೋದನು.

ಈ ಗುಣಕ್ಕೆ ಸ್ವದೇಶಪ್ರೀತಿಯನ್ನುವರು.

ಬಕ್ಸಾರದಲ್ಲಿ ಯಾರು ಸೋತರು ? ಅಯೋಧ್ಯೆಯ ನಬಾಬ ಮೊದಲಾದವರು, ಬಳಿಕ ಅವರು ಏನು ಮಾಡಬೇಕು, ಇಂಗ್ಲೀಷರಿಗೆ ಶರಣು ಹೋಗಬೇಕು. ಅಥವಾ ಯುದ್ಧ ಮಾಡಬೇಕು.

ಬಕ್ಸಾರದ ನಂತರ ಇಂಗ್ಲಿಷರಿಗೆ ಶತ್ರುಗಳ್ಯಾರಿದ್ದರು ಯಾರೂ ಇದ್ದಿಲ್ಲ, ಅವರ ಅಧಿಕಾರ ಎಲ್ಲ ನಡೆಯ ಹತ್ತಿತು ದಿಲ್ಲಿಯ ಅರಸು, ಅಯೋಧ್ಯೆಯ ನಬಾಬ, ಬಂಗಾಲದ ನಬಾಬ, ಇದರಿಂದ ಇಂಗ್ಲೀಷರ ಅಧಿಕಾರ ನೆಲೆಗೊಂಡಂತಾಯಿತು

ಉಪಸಂಹಾರ— (೧) ಮೀರಜಾಫರನನ್ನು ನಬಾಬನ ಕೆಲಸದಿಂದ ಯಾಕೆ ತೆಗೆದರು.
(೨) ಮೀರಕಾಸೀಮನಿಗೂ ಕಂಪನಿಯವರಿಗೂ ಯುದ್ಧವಾಗಲಿಕ್ಕೆ ಕಾರಣಗಳ್ಯಾವವು
(೩) ಬಕ್ಸಾರದ ಕಾಳಗ ಎಂದು ಯಾರ್ಯಾರಿಗೆ ಆಯಿತು? ಇದರಲ್ಲಿ ಜಯಶಾಲಿಗಳ್ಯಾರು?

ಕೆಳಗೆ ಬರೆದ ಶಾಳಾಖಾತೆಯಿಂದ ಇನಾಮಿಗೂ, ಲಾಯಬ್ರರಿಗೂ ಮಂಜೂರಾದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು.

ಮೂಲ ಬೆಲೆ ರು. ಆ.		ಕಡಿಮೆ ಮಾಡಿದ ಬೆಲೆ. ರು. ಆ.
೦—೬	ಕವಿತೆಯ ೨ನೇ ಪುಸ್ತಕ (2 nd Book of Poetry)	೦—೨
೦—೮	ಕ್ಷೇತ್ರವ್ಯಭೂಮಿತಿ (Practical Geometry)	೦—೪
೦—೧೧	ಪ್ರಮೇಯಗಳು (Geometrical figures)	೦—೧
೦—೭	ಯಂತ್ರಶಾಸ್ತ್ರ (Mechanics)	೦—೬
೦—೩	ಅರ್ಥಶಾಸ್ತ್ರ (Political Economy)	೧—೦
೦—೨	ಜಗತ್ತಿನ ಇತಿಹಾಸ (Universal History)	೦—೧
೨—೫		೧—೧೨
	ವ್ಹಿ. ಪಿ. ಕಮೀಶನ	೦—೧
		೧—೧೩

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳನ್ನು ಒಮ್ಮೆಲೆ ತಕ್ಕೊಂಡರೆ ಫಕ್ತ ರು. ೧(೧೩ ಮಾತ್ರ) ಬೀಳುವದು ಟಪಾಲ ಹಾಸಲ ಬೀಳಲಿಕ್ಕಿಲ್ಲ. ೧೦ ರು. ಯಿಂದ ೫೦ ರೂಪಾಯಿ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೧೦ ರಂತೆ ಮತ್ತು ೫೦ ಕ್ಕಿಂತ ಹೆಚ್ಚಿಗೆ ಬೆಲೆಯ ಪುಸ್ತಕ ಕೊಳ್ಳುವವರಿಗೆ ನೂರಕ್ಕೆ ೨೦ ರಂತೆ ಕಮೀಶನ್ನು ದೊರೆಯುವದು.

ಪುಸ್ತಕಗಳು ಕೆಳಗೆ ಬರೆದವರಲ್ಲಿ ದೊರೆಯುವವು.

೧. ಮೆಸರ್ಸ್ ಎಸ್. ಎಮ್. ತ್ರಿಪಾಟಿ ಆ್ಯಂಡ ಕಂಪನಿ ಪ್ರಿನ್ಸೆಸ ರೋಡ ಮುಂಬಯಿ.

೨. ದಿ. ಗುಜರಾತಿ ಪ್ರಿಂಟಿಂಗ ಪ್ರೆಸ. ಕೋಟ ಸರ್ಕಲ ಮುಂಬಯಿ

೩. ರಾ. ಕರಸನದಾಸ ನಾರಾಯಣದಾಸ ಬುಕ್ಕಸೇಲರ ಸುರತ.

೪. ಮೆಸರ್ಸ ಹರಿಶ್ಚಂದ್ರ ಆ್ಯಂಡ ಕಂಪನಿ ಜವೇರವಾಡಿ ಠಾಕುರದ್ವಾರ ರೋಡ ಮುಂಬಯಿ.

REGISTERED No. B. 19.

ಹೊಸಪದ್ಧತಿಯ ಭೂಮಿತಿಯು.

ವಿ. ಕಾನ್ಫರನ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯ
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ. ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ್ರಯ-೧೧೨ಅ.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮಿಶನ್ ಕೊಡಲಾದೀತು.

ಪಿ. ಎಸ್. ಚಂದಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ. ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆದಂತಾಯಿತು.

ಎಮ್. ಹಿರಿಯಣ್ಣಾ ಎಮ್ ಎ. ಎಲ್. ಟಿ. ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಟಿಪಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣಿತ ಗಣಿತಉಪಪತ್ತಿ ವಗೈರೆ ಪುಸ್ತಕಗಳೂ ಅವೆ. ಶೋಭೆಯುಳ್ಳ ಮಸಿಗಳ ಬೆಳವಣಿಗೆ ತೈಲು ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರೂ. ೧ಕ್ಕೆ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್
ಹಮೀದ ಸಾ|| ಸೌದಾಗರ

"ಮರಾಠೀ ಶಿಕ್ಷಕ" ಎಂಬ ಪುಸ್ತಕವನ್ನು ಇದೇ
ವರ್ಷದ ಜೂನ ತಿಂಗಳಲ್ಲಿ ಮುದ್ರಿಸಿ, ಗ್ರಾಹ
ಕರಿಗೆ ವ್ಹಿ. ಪಿ. ಯಿಂದ ಕಳಿಸುವೆನು
ಮೇ ಅಖೈರದೊಳಗೆ ಹೆಸರು
ತಿಳಿಸಿದವರಿಗೆ ಬೆಲೆ-೧ಪ್ರತಿಗೆ ೧೦ ಆಣೆ.
ಮುಂದೆ ೧-೦ ಆಣೆ. ಟ. ಖ. ಬೇರೆ.

☞ ವ. ಸು ಬಾಗಲಕಡಕೊಳ, ಪೋ ತಿರಹಟ್ಟಿ,
ಜಿ. ಧಾರವಾಡ.

ಕನ್ನಡ ಶಾಲಾಪತ್ರ

KANARESE
SCHOOL PAPER.

ಪುಸ್ತಕ ೪೪] ಮೇ ೧೯೦೮. [ಸಂಚಿಕೆ ೫.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ [illegible] ... ೯೭--೯೯
೨. ಲೋಹಚುಂಬಕ ೯೯--೧೦೨
೩. ರಾಜಸ್ಥಾನದ ಇತಿಹಾಸವು. ೧೦೨--೧೦೫
೪. ಭೂಗೋಲ ೧೦೬--೧೧೦
೫. ಪತ್ರವ್ಯವಹಾರವು. ೧೧೦--೧೧೩
೬. ಧಾರವಾಡ ಟ್ರೇನಿಂಗಕಾಲೇಜ ಷಾಣ್ಮಾಸಿಕ... ಪರೀಕ್ಷೆಯ ಪ್ರಶ್ನೆಗಳು. ...೧೧೩--೧೧೪
೭. ಹಿಂದುಸ್ಥಾನದ ಪ್ರಾಕೃತಿಕ ಸ್ವರೂಪ ...೧೧೫--೧೨೦

CONTENTS.

1. Educational Intelligence and Useful Note. 97–99
2. Magnet. 99–102
3. The History of Rajasthan. 102–105
4. Geography... 106–110
5. Correspondence. 110–113
6. Dharwar Training College Terminal Exmn. 113–114
7. Model Note on the Outline of India ...115–120

DHARWAR.

PRINTED AT THE KARNATIC BOOK DEPOT PRESS,

1908.

REGISTERED No. B.

ಉಪಯುಕ್ತ ಪುಸ್ತಕಾಲಯ

ನಮ್ಮಲ್ಲಿ ಶಾರೂಪಯೋಗಿ ಕನ್ನಡ, ಮರಾಠಿ ಕ್ರಮಿಕ ವಗೈರೆ ಎಲ್ಲ ಪುಸ್ತಕಗಳೂ; ಮಾದರಿ ಕೀರ್ತಿಗಳೂ; ೧-೨ನೇ ಇಯತ್ತೆಯ ಹೊಸ ಅರ್ಥಗಳೂ; ಕನ್ನಡ ಗೋಖಲೆ ಗಣಿತದ ಎಲ್ಲ ಭಾಗಗಳೂ; ಹೊಸ ನೇಮದಂತೆ ೩ನೇ ಇಯತ್ತೆಯವರಿಗಾಗಿ ಮುಂಬಯಿ ಕರ್ನಾಟಕ ವರ್ಣನೆಯೂ; ಶಿರಾಲಿಕರ ಇತಿಹಾಸ, ಹೂಲಿಗಣಿತ, ಜಮಾಖರ್ಚು. ಸುಡಿಗಟ್ಟು, ಹೊಸಕೋಷ್ಟಕ, ಸಿದ್ಧಾಂತ ಭೂಗೋಲ ೧-೨-೩ನೇ ಭಾಗ, ಕರ್ನಾಟಕ ವರ್ಣನೆ, ಲಘುವ್ಯಾಕರಣ ಮೊದಲಾದವೆಲ್ಲ ಅವೆ. ತುಂಬಾ ಕಮಿಶನ.

ಫುಕಟ!] ಸಂಗೀತ ನಾಟಕಗಳು [ಫುಕಟ!

ಹಿಂದುಸ್ಥಾನದೊಳಗೆಲ್ಲ ಹೆಸರುಗೊಂಡ ನಮ್ಮ ೩ ಕೈ ದರದ ನೀಲಿ-ಕಪ್ಪು, ಕೆಂಪು, ಜಾಂಬಳಿ, ಹಸರು "ಶಾರೂಪಾಯಿಯ ಶಾಯಿ" ಕೊಳ್ಳುವವರಿಗೆ ನೂತನವಾಗಿ ರಚಿಸಿದ್ದ ಮರಾಠಿ ಮನೋಹರವಾದ ಸಂಗೀತ ಶಾರದಾ, ಶಾಕುಂತಲಾ, ಸುಭದ್ರಾ, ಸಾವಿತ್ರಿ, ಸೈರೇಂಧ್ರಿ, ದ್ರೋಂಗಿಭೈರಾಗಿ, ಕಾಮಸೇನರಸಿಕಾ, ವೀರಸೇನಮಂಜರಿ, ವಿಕ್ರಮಶಶಿಕಲಾ, ಮಾಲತಿಮಾಧವ, ಸುಪ್ರಸಿದ್ಧ ೧೨ ಸಂ. ನಾಟಕಗಳೊಳಗಿನ ಪ್ರವೇಶಭಾಗ ೧, ೨, ಈ ೧೨ ಸಂಗೀತ ನಾಟಕಗಳು ಫುಕಟ!! ಅಲ್ಲದೇ (ಮುಕ್ತೇಶ್ವರಕೃತ) "ಶುಕರಂಭಾ ಸಂವಾದ" ಮತ್ತು "ಮೋರೋಪಂತಾಚೀ ವಲೀಚಿ ಗಾಣಿ" ಎಂಬೆರಡು ಸಂಗ್ರಾಹ್ಯ ಪುಸ್ತಕಗಳ ಬಹುಮಾನ

ದಿ ಸೆಲ್ಫ ಇಂಗ್ಲೀಷ ಟೀಚರ ಭಾಗ ೧-೨.

ಸ್ವಲ್ಪವೂ ಇಂಗ್ಲೀಷ ಓದು ಬರಹ ತಿಳಿಯದವರು ಸಹ ಗುರುಗಳ ಸಹಾಯವಿಲ್ಲದೆ ಈ ಗ್ರಂಥಗಳಿಂದ ಅತ್ಯಲ್ಪಕಾಲದಲ್ಲಿ ಇಂಗ್ಲೀಷ ಬರೆಯಲಿಕ್ಕೂ, ಓದಲಿಕ್ಕೂ, ಮಾತಾಡಲಿಕ್ಕೂ ಸುಲಭವಾಗಿ ಕಲಿಯುವರು. ಪ್ರತಿಭಾಗದ ಕ್ರಯ

ಶಾಲಾಪತ್ರಿಕೆ.

ಪದ್ಯಂ

ಪ್ರಿಯದಿಂ ವಿದ್ಯಾಗುರುವರ್ಯರನ್ನು ಶಿಶುಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗಳವಿಂದೀಪತ್ರವಂ ಮುದ್ರಿಸಿ ॥
ನಯದಿಂ ಶಿಕ್ಷೆವೊಂದುವರ್ಗೆ ಸುಗುಣಂ ತೋರಲ್ಕೆ ಕೈಕೊಂಡುದೈ
ದಯೆಯಿಂದೋಪತಿದ್ದವೇಳ್ವ ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೪೩.] ಮೇ ೧೯೦೮. [ಸಂಚಿಕೆ ೫.

EDUCATIONAL INTELLIGENCE AND USEFUL NOTES

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕನ್ನಡ ಭಾಷಾಭಿಮಾನಿಗಳೂ, ಮೂರು ತಲೆಯ ವರೆಗೆ ತಪ್ಪದೆ ನ್ಯಾಯಾಧೀಶರ ಕಾರ್ಯವನ್ನು ನಡಿಸಿ ಜಡ್ಜಿಯವರೆಂಬ ಉಪನಾಮವನ್ನು ಪಡೆದವರೂ, ಇಂಗ್ಲೀಷ ಸರಕಾರದಿಂದ ಇನಾಮುಪಡೆದು ಇನಾಮದಾರರೆಂಬ ಬಿರುದು ಪಡೆದವರೂ ಆದ ರಾ. ಬ. ಜಯಸತ್ಯಬೋಧರಾಯರು ಎಪ್ರೀಲ ತಿಂಗಳ ೧೮ ನೇ ತಾರೀಖಿನ ದಿವಸ ವೈಕುಂಠವಾಸಿಗಳಾದರೆಂದು ತಿಳಿಸಲು ಪರಮಾವಧಿ ವ್ಯಸನವಾಗುತ್ತದೆ. ಇವರು ಸರಕಾರೀ ಉದ್ಯೋಗದಿಂದ ನಿವೃತ್ತರಾದ ಬಳಿಕ ಆನರರಿ ಮಾಜಿಸ್ಟ್ರೇಟರಾಗಿಯೂ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿಯೂ ಇದ್ದರು. ಇವರಿಗೆ ಗಂಡು ಸಂತತಿ ಇಲ್ಲ; ದೌಹಿತ್ರನಿರುವನು. ಕರ್ನಾಟಕದಲ್ಲಿ ಬೆಳುವಣಿಗೆಯನ್ನು ಹೊಂದಿದ ಪ್ರಸಿದ್ಧ ಮನೆತನವು ಕುಂದಿ ಹೋಯಿತು. ಈಶ ಸಂಕಲ್ಪಕ್ಕೆ ಉಪಾಯವಿಲ್ಲ.

ಕಾಲೇಜದಲ್ಲಿ ಹೋಗದಾಗಿ ಮಂಜೂರಾದ ಶಿಕ್ಷಕ ಜನ ಸ್ಥಳಗಳಲ್ಲೊಂದನ್ನು ಪ್ರಾಥಮಿಕ ಶಾಲೆಯ ಮಾಸ್ತರರಿಗ ಕೊಟ್ಟಿರುವರು. ಈ ನೇಮಿಸಲ್ಪಟ್ಟ ಶಿಕ್ಷಕನು ಕನ್ನಡ ಸಂಸ್ಕೃತ ಭಾಷೆಗಳನ್ನು ಕಲಿಸುತ್ತಿದ್ದ ಈಗಿದ್ದ ಅಧ್ಯಾಪಕ ರಿಗೆ ನೆರವಾಗತಕ್ಕದ್ದು, ಎಂದು ಗೊತ್ತಾಗಿರುವದು. ಸದ್ಯ ಕ್ಕೆ ಈ ಕೆಲಸವು ಗುತ್ತಲ ಶಾಲಾಮಾಸ್ತರರಾದ ಮಿ. ಗಳಗ ನಾಥ ಇವರಿಗೆ ಸಿಕ್ಕಿರುವದು. ಪ್ರಾಥಮಿಕ ಶಾಲೆಯ ಮಾಸ್ತ ರರ ಯೋಗ್ಯತೆಯು ಬೆಳೆಯಬೇಕೆಂದು ಬಯಸಿ ಈಗಿರುವ ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾವ ಬಹದ್ದೂರ ಕಂದೀಕರ ಸಾಹೇಬರು ಡಾಯರೆಕ್ಟರ ದೊ ರೆಗಳವರಿಗೆ ವಸ್ತುಸ್ಥಿತಿಯನ್ನು ವಿವರಿಸಿ ಈ ನೇಮಣೂ ಕಿಗೆ ಅವರ ಮನಸ್ಸೊಲಿಸಿದ್ದು ಇಬ್ಬಗೆಯಿಂದ ಸ್ತುತ್ಯರ್ಹವಾ ಗಿದೆ. ಪ್ರಸ್ತುತ ನೇಮಣೂಕಾದರೂ ಯೋಗ್ಯವಾಗಿರುವದೆಂ ದು ಹೇಳಲು ಅಡ್ಡಿ ಇಲ್ಲ. ದೊರೆತ ಸ್ಥಲದ ಗೌರವವನ್ನು ಕಾಯ್ದುಕೊಂಡು ಪ್ರಾಥಮಿಕ ಶಾಲಾಧ್ಯಾಪಕರು ಇಂಥ ಕೆಲ ಸಕ್ಕೆ ತಕ್ಕವರಿರುವರೆಂಬ ನಂಬುಗೆಯನ್ನು ಹುಟ್ಟಿಸುವದು ಮಿ. ಗಳಗನಾಥ ಇವರ ಕರ್ತವ್ಯವಾಗಿದೆ. ಅದು ಅವರಿಂದ ಪೂರೈಸಲ್ಪಡುವದೆಂದು ಹಾರೈಸುತ್ತೇನೆ.

ಪ್ರಸ್ತುತದ ಇನಸ್ಪೆಕ್ಟರ ಸಾಹೇಬರು ಮೇಲೆ ಉಲ್ಲೇಖಿ ಸಿದ್ದೊಂದೇ ಸತ್ಕಾರ್ಯವನ್ನು ಮಾಡಿ ನಿಲ್ಲಲಿಲ್ಲ. ಕರ್ನಾ ಟಕ ಕಾಲೇಜದಲ್ಲಿ ಕನ್ನಡ ಕಲಿಸುವ ಅಧ್ಯಾಪಕರ ಕೊರ ತೆಯುಂಟಾದ ಕೂಡಲೆ ಮೈಸೂರವರ ಮೋರೆ ನೋಡುತ್ತ ನಿಲ್ಲುವದು ಸರಿಯಲ್ಲವೆಂದು ಭಾವಿಸಿ, ತಮ್ಮ ಸ್ವಂತ ಹಣ ವೆಚ್ಚಮಾಡಿ ತಿಂಗಳೊಂದಕ್ಕೆ ಹತ್ತು ರೂಪಾಯಿಗಳಂತೆ ಕೊಡುತ್ತ, ಕಾಲೇಜದ ೩ ನೇ ವರ್ಷದಲ್ಲಿ ಪ. ಸಾದ ಮಿ. ಪೂಜಾರ ಎಂಬ ವಿದ್ಯಾರ್ಥಿಯನ್ನು ಮೈಸೂರಿಗೆ ಕಳಿಸಿ ಅಲ್ಲಿ ಯ ಕಾಲೇಜದಲ್ಲಿ ನಡಿಯುತ್ತಿದ್ದ ಪಂಡಿತ ಪರೀಕ್ಷೆಯು ಅ

ಭ್ಯಾಸವನ್ನು ಮಾಡಲಿಕ್ಕೆ ಅವನಿಗೆ ಅನುಕೂಲಮಾಡಿಕೊಟ್ಟಿರುವರು. ಇದೇನು ಸಾಮಾನ್ಯ ಸಂಗತಿಯೇ! ಇದರಿಂದ ಸಾಹೇಬರವರಲ್ಲಿದ್ದ ಕರ್ನಾಟಕದ ಅಭಿಮಾನವೂ ಸುಧಾರಣಾಪ್ರಿಯತ್ವವೂ ಒಡೆದು ಕಾಣುವದು.

ಡಾಯರೆಕ್ಟರ ದೊರೆಗಳಾದ ಮೊಹರ್ಬಾನ್ ಸೆಲ್ಬೀಸಾಹೇಬರಿಗೆ ಮುಂಬಯಿ ವಿದ್ಯಾಪೀಠದವರು. ಎಲ್. ಎಲ್. ಡಿ. ಎಂಬ ಗೌರವದ ಪದವಿಯನ್ನು ಕೊಟ್ಟಿರುವರು. ಇವರ ಮೂವತ್ತು ವರ್ಷದ ಅಧ್ಯಾಪನ ಕೌಶಲ್ಯವನ್ನು ಅರಿತ ಯಾವತ್ತರಿಗೂ ಇದರಿಂದ ಸಂತೋಷವಾಗದೆ ಇರದು. ಈ ದೊರೆಗಳು ಕುಸು ದಿವಸಗಳಲ್ಲಿಯೇ ಕೆಲಸದಿಂದ ನಿವೃತ್ತರಾಗುವವರಿದ್ದಾರೆ.

MAGNET.

ಲೋಹ ಚುಂಬಕ.

ಚುಂಬನ ನಕಾಶವು—ಪೃಥ್ವಿಯ ಮೇಲೆ ಈ ಚುಂಬಕ ಮಣಿನ ಒಲವೂ ಬಾಗೂ ಒಂದೇಸಮನೇ ಇರುವದಿಲ್ಲ. ಇಷ್ಟೇ ಅಲ್ಲ, ಒಂದೇ ಸ್ಥಳದಲ್ಲಿ ಸಹ ಭಿನ್ನ ಭಿನ್ನ ಕಾಲದಲ್ಲಿ ಇದರ ಒಲವು ಬಾಗುಗಳು ಹೆಚ್ಚುಕಡಿಮೆಯಾಗಿ ಇರುತ್ತವೆ. ಈ ಮಾತು ಪ್ರತ್ಯಕ್ಷ ಅನುಭವಕ್ಕೆ ಬಂದಿರುವದು. ಭೂಗೋಲದ ಬೇರೆ ಬೇರೆ ಸ್ಥಳಗಳಲ್ಲಿ ಚುಂಬಕ ಯಂತ್ರವನ್ನಿಟ್ಟು ಅದರ ಬಾಗು ಒಲವುಗಳನ್ನರಿತು ಪಂಡಿತರು ಒಂದು ನಕಾಶವನ್ನು ತಯಾರಿಸಿದ್ದಾರೆ. ಆ ನಕಾಶದಲ್ಲಿ ಅಷ್ಟಷ್ಟೇ ಬಾಗು ಒಲವುಗಳನ್ನು ತೋರಿಸುವ ಸ್ಥಳಗಳನ್ನು ರೇಖೆಗಳಿಂದ ಕೂಡಿಸಿರುವರು. ಈ ಬಾಗು ಒಲವುಗಳು ಮೇಲೆ ಹೇಳಿದಂತೆ ಕ್ಷಣಶಃ ಬದಲಾಗುವಂಥವುಗಳಾದದರಿಂದ ಈ ನಕಾಶವು ಸರ್ವದಾ ಪ್ರಯೋಜನಕರವಾದೀತೆಂದು ನಂಬಕೂಡದು. ಆದರೂ ಇದರಿಂದ ನಕಾಶವನ್ನು ಸಿದ್ಧಮಾಡಿದ ಕಾಲದಲ್ಲಿ ಚುಂಬಕದ ಚುಂಬನ ಸ್ಥಿತಿಯು ಹ್ಯಾಗಿತ್ತೆಂಬದನ್ನು ತಿಳಕೊಳ್ಳ

ಲು ಪ್ರಯೋಜನವಾಗುವದು. ಈ ನಕಾಶವನ್ನು ಕರ್ನಲ್ ಸಬಿಯಿನ ಎಂಬವನು ಸ‍ನ್ ೧೮೪೦ನೇ ಇಸವಿಯಲ್ಲಿ ಸಿದ್ಧ ಮಾಡಿದನು. ಅಂದಿನಿಂದ ಇಂದಿನವರೆಗೆ ಪೃಥ್ವಿಯ ಚುಂಬನ ಸ್ಥಿತಿಯಲ್ಲಿ ಹೇಳಿಕೊಳ್ಳತಕ್ಕಂಥ ಹೆಚ್ಚು ಕಡಿಮೆಗಳಾಗಿಲ್ಲವಾದ್ದರಿಂದ ಅವನು ಮಾಡಿದ ನಕಾಶವು ತೀರ ನಿರುಪಯುಕ್ತವಾದದ್ದೆಂದು ಹೇಳಕೂಡದು.

ಈ ನಕಾಶದಲ್ಲಿ ಉತ್ತರ ಅಮೇರಿಕದೊಳಗಿನ ಹಡಸನ್ ಉಪಸಾಗರದ ಕಡೆಗೆ ಚುಂಬಕದ ಉತ್ತರ ತುದಿಯೂ ಆಸ್ಟ್ರೇಲಿಯದ ದಕ್ಷಿಣ ತುದಿಯ ಒಂದು ಬಿಂದುವಿನಲ್ಲಿ ಚುಂಬಕದ ದಕ್ಷಿಣ ತುದಿಯೂ ಇರುವಂತೆ ತೋರಿಸಲ್ಪಟ್ಟದೆ. ಇವೇ ಚುಂಬನದ ಧ್ರುವ ಬಿಂದುಗಳು. ಚುಂಬನ ಮುಳ್ಳಿನ ಪಶ್ಚಿಮ ಒಲವು ದಕ್ಷಿಣ ಅಮೇರಿಕದ ಪೂರ್ವದ ಮೂಲೆಯಿಂದ ಶೂನ್ಯ ರೇಖಾಂಶದಲ್ಲಿ ಹಾಯ್ದು ಉತ್ತರ ಅಮೇರಿಕದಲ್ಲಿ ಸೇರಿ ಏರಿ ಹ್ಯೂರೋನ್ ಸರೋವರಗಳೊಳಗಿಂದ ಹಾಯ್ದು ಹಡಸನ್ ಉಪಸಾಗರದ ಪಶ್ಚಿಮ ಬದಿಯ ಬಿಂದುವಿನಲ್ಲಿ ಹೋಗಿರುವದು. ಪೂರ್ವದ ಒಲವು ಶೂನ್ಯ ರೇಖಾಂಶದೊಳಗಿಂದ ಯುರೋಪದೊಳಗಿನ ರಶಿಯದ ಉತ್ತರದೊಳಗೆ ಸೇರಿ ರಶಿಯಾದ ಪೂರ್ವ ಭಾಗದೊಳಗಿಂದ ಕಾಸ್ಪಿಯನ್ ಸಮುದ್ರದ ಮೇಲಿಂದ ಇರಾಣದಲ್ಲಿ ಸೇರಿ ಅರಬೀ ಸಮುದ್ರದಲ್ಲಿ ಬಂದಿರುವದು. ಅಲ್ಲಿಂದ ವಿಷುವವೃತ್ತವನ್ನು ದಾಟಿ ಪೂರ್ವಕ್ಕೆ ಒಲಿದು ಆಸ್ಟ್ರೇಲಿಯಾ ನಡುಗಡ್ಡೆಯ ಪಶ್ಚಿಮ ಭಾಗದಲ್ಲಿ ಸೇರಿ ದಕ್ಷಿಣಕ್ಕೆ ಹೋಗಿರುವದು. ಈ ಎರಡು ರೇಷೆಗಳ ಮಧ್ಯದಲ್ಲಿ ಮುಳ್ಳು ಪಶ್ಚಿಮಕ್ಕೆ ಒಲಿದಿರುವದು. ಉಳಿದ ಸ್ಥಳಗಳಲ್ಲಿ ಅದು ಪೂರ್ವಕ್ಕೆ ಒಲಿದಿರುವದು. ಏಸಿಯಾದ ಪೂರ್ವ ಭಾಗದಲ್ಲಿ ಒಂದು ದೀರ್ಘ ವರ್ತುಳಾಕಾರವಾದ ಸ್ಥಳವು ನಕಾಶದಲ್ಲಿ ತೋರಿಸಲ್ಪಟ್ಟದೆ. ಆ ಸ್ಥಳದಲ್ಲಿ ಮುಳ್ಳು ಪಶ್ಚಿಮಕ್ಕೆ ಒಲಿಯುವದು. ಇದರ ಕಾರಣವು ಇನ್ನೂ ತಿಳಿದಿಲ್ಲ. ಇಂಗ್ಲಂಡ ದೇಶದೊಳಗಿಂದ ೨೫ ಪಶ್ಚಿಮ ಒಲವಿನ ರೇಷೆಯು ಹೋಗುವದು. ಹಿಂದುಸ್ಥಾನದೊಳಗಿಂದ ೪ ಹಾಗೂ ೫ ಪೂರ್ವ ಒಲತವನ್ನು ತೋರಿಸುವ ರೇಷೆಯು

ಹೋಗುವದು. ಈ ಎಲ್ಲ ಸಂಗತಿಗಳು ಆ ನಕಾಶದಿಂದ ತಿಳಿಯುವವು.

ಕೃತ್ರಿಮ ಚುಂಬನ ಮಾಡುವ ರೀತಿಯು.

ಭೂಚುಂಬನದ ಕಸುವು—ಚುಂಬಕವನ್ನು ತಯಾರ ಮಾಡುವ ರೀತಿಯನ್ನು ಹೇಳುವ ಪೂರ್ವದಲ್ಲಿ ಭೂಚುಂಬನದ ಕಸುವನು ಕುರಿತು ತುಸು ನಿರೂಪಿಸುವದು ತಕ್ಕದ್ದಾಗಿರುವದು. ಲಂಬಕವೆಂದರೆ ಅಂದೋಲನವನ್ನು ಒತ್ತಟ್ಟಿಗೆ ಕಟ್ಟಿ ತೂಗಬಿಟ್ಟು ಅದನ್ನು ಅಗಳಾಡಿಸಿದರೆ ಅದು ಕೆಲಹೊತ್ತು ಅತ್ತ ಇತ್ತ ಅಗಳಾಡಿ ಕಡೆಯಲ್ಲಿ ಸ್ಥಿರವಾಗುವದು. ಇದಕ್ಕೆ ಪೃಥ್ವಿಯ ಗುರುತ್ವಾಕರ್ಷಣವೇ ಕಾರಣವೆಂಬದು ನಿಮಗೆ ಗೊತ್ತುಂಟು. ಲಂಬಕವು ಗುರುತ್ವಾಕರ್ಷಣದ ದಿಕ್ಕನ್ನು ತೋರಿಸುತ್ತದೆಂಬದನ್ನು ಮರೆಯಲಾಗದು. ಇದೇ ಮೇರೆಗೆ ಚುಂಬಕ ಮುಳ್ಳನ್ನು ಪೃಥ್ವಿಯ ಮೇಲಿಟ್ಟು ಅದನ್ನು ಬೇಕಾದತ್ತ ತಿರುಗಿಸಿ ಕೈ ಬಿಟ್ಟ ಕೂಡಲೆ ಅದು ಮರಳಿ ಚುಂಬನ ಧ್ರುವಗಳಿಗೆ ಅಭಿಮುಖವಾಗಿ ಸ್ಥಿರ ನಿಲ್ಲುವದು. ಇದರ ಕಾರಣವು ಪೃಥ್ವಿಯ ಚುಂಬಕ ಶಕ್ತಿ ಎಂಬುವದು ಈ ಮೊದಲೇ ನಿಮಗೆ ಗೊತ್ತಿರುವದು. ಈ ಶಕ್ತಿಗೆ ಭೂಚುಂಬನವೆಂದು ಹೆಸರು. ಚುಂಬನ ಮುಳ್ಳನ್ನು ಒಂದು ನಿಯಮಿತವಾದ ಶಕ್ತಿಯಿಂದ ತಿರಿಗಿಸಲು ಅದು ಸ್ಥಿರವಾಗುವವರೆಗೆ ಎಷ್ಟು ಸಾರೆ ಒಲಿದಾಡುವದೋ ಆ ಒಲತಗಳ ಸಂಖ್ಯೆಯಿಂದ ಆ ಸ್ಥಳದ ಭೂಚುಂಬನದ ಬಲವನ್ನು ಅಳೆಯುವರು. ಇದೇ ಮುಳ್ಳನ್ನು ಬೇರೊಂದು ಸ್ಥಳದಲ್ಲಿ ಒಯ್ದು ಅಷ್ಟೇ ಶಕ್ತಿಯಿಂದ ಅದನ್ನು ತಿರಿಗಿಸುವರು. ಅದು ಆ ಶಕ್ತಿಯ ಒಲದಿಂದ ಕೆಲಹೊತ್ತು ಹೊಯ್ದಾಡುವದು ಸ್ವಾಭಾವಿಕವು ಅಲ್ಲಿ ಅದು ಎಷ್ಟು ಸಾರೆ ಒಲಿದಾಡುವದೆಂಬದನ್ನು ಬರೆದಿಡುವರು. ಈ ಜೋಲಿಗಳ ವರ್ಗಪ್ರಮಾಣಕ್ಕೆ ಭೂಚುಂಬನದ ಚುಂಬಕ ಶಕ್ತಿಯ ಪ್ರಮಾಣವು ಸರಿಯಿರುವದೆಂದು ವಿದ್ವಾಂಸರು ನಿಶ್ಚಯಿಸಿದ್ದಾರೆ. ಕೆಲವೊಂದು ಸ್ಥಳದಲ್ಲಿ ಚುಂಬಕ ಮುಳ್ಳು ಒಂದು ಮಿನಿಟದಲ್ಲಿ ೩೦ ಅಂದೋಲನಗಳನ್ನು ಮಾಡಿ ಸ್ಥಿರವಾಗಿ ನಿಲ್ಲುತ್ತದೆಂದೂ ಅದೇ ಮುಳ್ಳು ಅಷ್ಟೇ ಶಕ್ತಿಯಿಂದ

ಅಷ್ಟೇ ವೇಳೆಯಲ್ಲಿ ಮತ್ತೊಂದು ಸ್ಥಳದಲ್ಲಿ ೩೧ ಆಂದೋಲನಗಳನ್ನು ಮಾಡಿ ಸ್ಥಿರವಾಗಿ ನಿಲ್ಲುತ್ತದೆಂದೂ ಎಣಿಸಿದರೆ ಇವೆರಡೂ ಸ್ಥಳಗಳಲ್ಲಿ ಭೂಚುಂಬಕ ಶಕ್ತಿಯ ಪ್ರಮಾಣವು ೯೦೦ : ೯೬೧ ಅಥವಾ ೧ : ೧.೧ ಈ ಪ್ರಮಾಣದಲ್ಲಿ ಇರುವವೆಂದು ತಿಳಿಯತಕ್ಕದ್ದು.

ಈ ಬಲವನ್ನು ಅಳೆಯುವದಕ್ಕಾಗಿ ತಕ್ಕೊಳ್ಳುವ ಚುಂಬಕ ಮುಳ್ಳನ್ನು ಒಂದು ವಿಶೇಷ ಪ್ರಕಾರದಿಂದ ಮಾಡಿರುವರು. ಆದ್ದರಿಂದ ಪೃಥ್ವಿಯ ಮೇಲಿನ ಯಾವದೊಂದು ಸ್ಥಳದ ಚುಂಬಕ ಸ್ಥಿತಿಯನ್ನು ತಿಳಿಯಲಿಕ್ಕೆ ಆ ಸ್ಥಳದ ಚುಂಬಕ ಮುಳ್ಳಿನ ಪೂರ್ವ ಪಶ್ಚಿಮ ಬಲವೂ ಉತ್ತರ ದಕ್ಷಿಣ ಬಾಗೂ ಭೂಚುಂಬನದ ಬಲವೂ ಗೊತ್ತಾಗ ಬೇಕಾಗುವದು.

ಸ್ವಾಭಾವಿಕ ಹಾಗೂ ಕೃತ್ರಿಮ ಚುಂಬಕಗಳಿಂದಲೂ ಭೂಚುಂಬನದಿಂದಲೂ ವಿದ್ಯುತ್ಪ್ರವಾಹದಿಂದಲೂ ಕೃತ್ರಿಮ ಚುಂಬಕಗಳನ್ನು ಸಿದ್ಧ ಮಾಡುವರು. ಕಬ್ಬಿಣದಲ್ಲಿ ಕೇವಲ ಸ್ಪರ್ಶದಿಂದಲೇ ಚುಂಬಕ ಶಕ್ತಿಯು ತೀವ್ರವಾಗಿ ಬರುತ್ತದೆ. ಆದರೆ ಅದು ಬಹಳ ಹೊತ್ತು ನಿಲ್ಲುವದಿಲ್ಲ. ಉಕ್ಕು ತೀವ್ರವಾಗಿ ಚುಂಬಕ ಶಕ್ತಿಯನ್ನು ಗ್ರಹಣ ಮಾಡುವದಿಲ್ಲ. ಆದರೆ ಅದರಲ್ಲಿ ಒಮ್ಮೆ ಉಂಟಾದ ಚುಂಬಕ ಶಕ್ತಿಯು ತೀವ್ರವಾಗಿ ಹೋಗುವದಿಲ್ಲ. ಆದ್ದರಿಂದ ಕೃತ್ರಿಮ ಚುಂಬಕವನ್ನು ಮಾಡುವವರು ಉಕ್ಕನ್ನೇ ಉಪಯೋಗಿಸುವರು. ಚುಂಬಕವನ್ನು ಚುಂಬಕದಿಂದ ಮಾಡುವ ಬಗೆಗಳು ಮೂರು ಉಂಟು. ೧ ಸಕೃತ್‌ಸ್ಪರ್ಶದಿಂದ. ೨ ಪೃಥಕ್‌ಸ್ಪರ್ಶದಿಂದ. ೩ ದ್ವಿಸ್ಪರ್ಶದಿಂದ.

(ಸಶೇಷ.)

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

—◁ +)▷—

ಈ ಮೇರೆಗೆ ಬಾಬರನು ವ್ಯವಸ್ಥೆಯನ್ನು ಮಾಡಿ ತನ್ನ ಪದರಿನ ಯವನರ ಭಟರನ್ನು ಒಟ್ಟುಗೂಡಿಸಿ ಅವರನು ಕುರಿತು ಒಂದು

ಉತ್ಕೃಷ್ಟವಾದ ಉತ್ತೇಜನಪರವಾದ ಭಾಷಣವನ್ನು ಮಾಡಿದನು. ಇಷ್ಟು ಹುರಿದುಂಬಿಸಿಕೆಯಿಂದ ಜಯಲಕ್ಷ್ಮಿಯು ತನ್ನನ್ನೇ ವರಿಸುವಳೆಂದು ನಂಬಲಿಕ್ಕೆ ಪೂರ್ಣವಾದ ಅಸ್ಪದವು ಇಲ್ಲೆಂದು ಬಗೆದು ಯಾವತ್ತೂ ಭಟರಿಂದ "ನಾನು ಕಡಿಯುವೆನು ಇಲ್ಲವೆ ಮಡಿಯುವೆನು" ಎಂದು ಕುರಾನವನ್ನು ಮುಟ್ಟಿಸಿ ಶಪಥ ಮಾಡಿಸಿದನು. ಈ ಪ್ರಸಂಗದಲ್ಲಿ ಬಾಬರನು ಮಾಡಿದ, ಭಟರನ್ನು ಪ್ರೋತ್ಸಾಹಗೊಳಿಸುವಂಥ ಆವೇಶಯುಕ್ತ ಭಾಷಣವು ಶವದ ನಾಡಿಯಲ್ಲಿಯೂ ಕೂಡಾ ಆವೇಶವನ್ನುಂಟು ಮಾಡುವಂಥಾದ್ದಾಗಿತ್ತು. ಈ ಭಾಷಣವು ಅವನ ಆತ್ಮಚರಿತ್ರದಲ್ಲಿ ಇಂದಿಗೂ ಕಂಗೊಳಿಸುತ್ತ ಇದೆ. ಇಷ್ಟಾದ ಬಳಿಕ ಈಗೊಂದು ತಿಂಗಳಿನಿಂದ ಒತ್ತಟ್ಟಿಗೆ ತಳವೂರಿದ ಪಾಳೆಯವನ್ನು ಎಬ್ಬಿಸಿ ಶತ್ರುವಿನ ಮೇಲೆ ಸಾಗಿಹೋದನು. ಬಾಬರನು ತನ್ನ ಪಾಳೆಯದಿಂದ ಎರಡು ಮೈಲು ಬಂದ ಬಳಿಕ ರಜಪೂತರು ತನ್ನ ತುಬಾಕಿಯ ಗುಂಡಿನ ಅಳತೆಯೊಳಗೆ ಬಂದರೆಂಬದನ್ನು ಮನಗೊಂಡನು. ಸಂಗನು ಹುಟ್ಟಾ ಕಡುಗಲಿಯು; ಯಾವತ್ತೂ ರಜಪೂತರ ಬೆಂಬಲವು ಅವನಿಗೆ ಆ ಕಾಲಕ್ಕೆ ಅನುಕೂಲವಾಗಿತ್ತು. ಇದೆಲ್ಲ ನಿಜವೇ. ಆದರೆ ಅವನು ಬಾಬರನು ಕಂದಕವನ್ನು ಆಶ್ರಯಿಸಿ ಕಾಲಹರಣ ಮಾಡುವದನ್ನು ಕಂಡು ಅವನಲ್ಲಿ ತನ್ನ ಮೇಲೆ ಏರಿ ಬರುವಷ್ಟು ಬಲವಿಲ್ಲೆಂಬ ತಿಳುವಳಿಕೆಯಿಂದ ಮೈಮರೆದು ಕುಳಿತಿದ್ದನು. ಅವನು ವಾಸ್ತವಿಕವಾಗಿ ಬಾಬರನು ಯಾಕೆ ಮುಂದೊರೆದು ಬರಲೊಲ್ಲನು! ಅವನ ಉದ್ದೇಶವೇನಿರಬಹುದು! ಅವನ ಸೇನಾಗಣನೆಯು ಎಷ್ಟು! ಸಾಮಗ್ರಿಯ ಪೂರೈಕೆಯು ಹ್ಯಾಗಿರುವದು! ಮುಂತಾದ ಸಂಗತಿಯನ್ನು ತಿಳಿಕೊಳ್ಳುವದನ್ನು ಉಪೇಕ್ಷಿಸಿ ಸ್ವಸ್ಥವಾಗಿ ಕುಳಿತುಕೊಂಡನು ಸಂಗನು ಹುಟ್ಟಾ ಚಟುವಟಿಕೆಯವನಲ್ಲೆಂಬ ಸಂಗತಿಯು ಬಾಬರನಿಗೆ ಗೊತ್ತಿತ್ತು. ಅದರಿಂದ ಅವನು ತಾನು ಏರಿ ಹೋಗುವ ಕಾರ್ಯದಲ್ಲಿ ತೋರಿಸುವ ಸ್ತಬ್ಧತೆಯಿಂದ ಸಂಗನು ನಿಜವಾಗಿ ಅಜಾಗ್ರತನಿರಲೇಬೇಕೆಂದು ನಿಶ್ಚಯಿಸಿದನು. ಇತ್ತ ಸಂಗನು ಉಭಯರಲ್ಲಿ ಉಂಟಾದ ಮನಸ್ತಾಪವನ್ನು ಇಲ್ಲದಂತೆ ಮಾಡಿ ಇಬ್ಬರೂ ಗೆಳೆಯರಾಗಬೇಕೆಂಬ ಉದ್ದೇಶದಿಂದ ರಾಯಸೀನ

ದ ತುವರ ಜಾತಿಯ ರಾಜನಾದ ರಾಜಾಕಲ್ಲೀ ಎಂಬ ನಿಯೋಗಿಯನ್ನು ಬಾಬರನ ಬಳಿಗೆ ಕಳುಹಿ ಉಭಯರ ರಾಜ್ಯದ ಸೀಮೆಯನ್ನು ನಿಶ್ಚಯಿಸುವ ಕಾರ್ಯವನ್ನು ನಡಿಸಿದ್ದನು. ಈ ನಿಯೋಗಿಗೆ ಸಂಗನು ಚಿತೋಡದ ಈಗಿರುವ ರಾಜ್ಯಮರ್ಯಾದೆಯು ಇದ್ದಂತೆ ಇರಬೇಕೆಂತಲೂ ಪರಸ್ಪರರು ಸ್ನೇಹಭಕ್ತಿಯಿಂದ ವರ್ತಿಸಬೇಕೆಂತಲೂ ಬಾಬರನಿಗೆ ವರ್ಷಾ ತವಿಂದ ಏನಾದರೂ ಕಾಣಿಕೆಯು ಮುಟ್ಟುವದೆಂತಲೂ ಹೇಳಿಕಳಿಸಿದ್ದನು. ಆದರೆ ನಿಯೋಗಿಯು ತನ್ನ ಕಾರ್ಯದಲ್ಲಿ ತಕ್ಕಷ್ಟು ದಕ್ಷತೆಯನ್ನೂ ನಿಪುಣತೆಯನ್ನೂ ತೋರಿಸಲಿಲ್ಲವಾದ್ದರಿಂದ ಸಂಧಿಯು ಮುರಿದು ವಿಗ್ರಹಾಗ್ನಿಯು ಪ್ರಜ್ವಲಿಸಿತು.

ಸನ್ ೧೫೨೭ನೇ ಇಸವಿಯ ಮಾರ್ಚ ತಿಂಗಳ ೧೬ನೇ ತಾರೀಖಿನ ದಿವಸ ಆರಂಭದಲ್ಲಿ ರಜಪೂತರು ಬಲಗಡೆಯಿಂದ ಮುಸಲ್ಮಾನರ ಮೇಲೆ ಏರಿ ಹೋದರು. ಈ ಕದನದಲ್ಲಿ ಮುಸಲ್ಮಾನರ ತುಬಾಕಿಗೂ ತೋಫಿಗೂ ರಜಪೂತರು ಈಡಾಗದೆ ವಿಶೇಷ ನಷ್ಟವನ್ನು ಹೊಂದಿದರು. ದೊಡ್ಡ ದೊಡ್ಡ ನಾಮಾಂಕಿತರಾದ ಎಷ್ಟೋ ಜನ ಸರದಾರರು ಆಸುದೊರೆದರು. ಆದರೂ ಜಯಾಪಜಯಗಳ ನಿರ್ಣಯವು ಅನುಮಾನದಲ್ಲಿತ್ತು. ಇಷ್ಟರಲ್ಲಿ ನಾವು ಮೇಲೆ ಉಲ್ಲೇಖಿಸಿದ ನಿಯೋಗಿಯಾದ ರಾಯಶೀನದ ತುವರ ರಾಜನು ಸಂಗನ ಪಕ್ಷವನ್ನು ಬಿಟ್ಟು ಬಾಬರನನ್ನು ಕೂಡಿದನು. ಇವನ ವೃತ್ತಿಯು ಮೊದಲಿನಿಂದ ಚಂಚಲವಾದದ್ದೇ ಇತ್ತು. ಕಡೆಗೆ ಒಳ್ಳೇ ಕಠಿಣ ಪ್ರಸಂಗದಲ್ಲಿ ಈ ಬಗೆಯಾಗಿ ವಿಶ್ವಾಸಘಾತ ಮಾಡಿದ್ದರಿಂದ ಇಷ್ಟೊತ್ತಿನ ವರೆಗೆ ಸಂಗನನ್ನು ವರಿಸಬೇಕೆಂದು ಹಣಿಕಿ ನೋಡುತ್ತಿದ್ದ ಜಯಸಿರಿಯು ಒಮ್ಮಿಂದೊಮ್ಮೆ ಮೋರೆ ತಿರುವಿ ತನ್ನ ಪ್ರಸಾದಕಟಾಕ್ಷಗಳಿಂದ ಬಾಬರನನ್ನು ಆದರಿಸತೊಡಗಿದಳು. ಈ ಘೋರ ಸಂಗ್ರಾಮದಲ್ಲಿ ಸಂಗನಿಗೆ ಎಷ್ಟೋ ಗಾಯಗಳು ಪ್ರಾಪ್ತವಾದವು. ನೆರವಿಗೆ ಬಂದವರಲ್ಲಿ ಎಷ್ಟೋ ಜನ ಕಡುಗಲಿಗಳು ಮಡಿದುಹೋದರು. ಡೋಂಗರಪುರದ ಉದಯಸಿಂಗ ರಾವಳನು ತನ್ನ ೨೦೦ ಮಂದಿ ಸೈನಿಕರೊಂದಿಗೆ ರಣಕ್ಕೆ ಬಲಿಯಾದನು. ಸಾದಂಬಿಯ ರತ್ನಾಠಾಕೂರನೂ ಅವನ ೩೦೦

ಜನ ಚೋಂಡಾವತ ಸರದಾರರೂ ಮಾರವಾಡದ ಅರಸುಮಗನಾದ ರಾಯಮಲ್ಲರಾಥೋಡನೂ ಮೇರತದ ಚೇತ್ರನಿಯೂ ವೀರಸ್ವರ್ಗವನ್ನು ಪಡೆದರು. ಇವರಲ್ಲದೆ ಸೋನಗಡದ ರಾವನಾದ ರಾಮದಾಸನೂ ಝಾಲವಾಡದ ಓಝಾ ಎಂಬವನೂ ಪ್ರಮಾರವಂಶದ ಗೋಕುಲದಾಸನೂ ಮೇವಾಡದ ಚವ್ಹಾಣ ವಂಶದ ಮಾಣಿಕಚಂದನೂ ಚಂದ್ರಭಾನನೂ ಸಂಗನಿಗೋಸ್ಕರವಾಗಿ ಧಾರಾ ತೀರ್ಥದಲ್ಲಿ ಬಿದ್ದರು. ದಿಲ್ಲಿಯ ಸಿಂಹಾಸನದಿಂದ ಭ್ರಷ್ಟರಾಗಿದ್ದ ಲೋದೀ ಕುಲದ ರಾಜಪುತ್ರರು ಸಂಗನನ್ನು ಕೂಡಿಕೊಂಡು ಸ್ವಕುಲಘಾತಕನಾದ ಬಾಬರನ ಮುಯ್ಯವನ್ನು ತೀರಿಸಿಕೊಳ್ಳಲಿಕ್ಕೆ ಬಂದವನು ಕಾಳಗದಲ್ಲಿ ಅಸುದೊರೆದನು.

ಈ ಮೇರೆಗೆ ನಾಲ್ಕೂ ಕಡೆಯಿಂದ ಸಂಗರಾಜನು ಹೀನಬಲನಾಗಿ ಪರಾಜಯದ ಅಪಯಶದೊಂದಿಗೆ ಹಿಂದಿರುಗಿದನು. ಆಗ ಮುಸಲ್ಮಾನರು ವೀರಶ್ರೀಯಿಂದ ಉನ್ಮತ್ತರಾಗಿ ರಣಾಂಗಣದಲ್ಲಿ ಗಾಯ ಹೊಂದಿ ಬಿದ್ದ ಶತ್ರುಪಕ್ಷದ ವೀರರ ತಲೆಗಳನ್ನು ಕನಿಕರವಿಲ್ಲದೆ ಕಡಿದು ರಾಶಿಯಾಗಿ ಒಟ್ಟಿದರು. ಬಾಬರನು ಈ ಜಯದ ದ್ಯೋತಕವೆಂದು ತನಗೆ ಗ ಜೀ ಎಂಬ ಬಿರುದನ್ನು ಇಟ್ಟುಕೊಂಡನು. ಈ ಬಿರುದು ಈ ವಂಶದವರಲ್ಲಿ ಕಡೇತನಕ ನಡೆಯುತ್ತಿತ್ತು. ಗಾಜೀ ಶಬ್ದವು ಅರಬೀ ಭಾಷೆಯೊಳಗಿನದು. ಗಿಜಾ ಅಂದರೆ ಕುರಾನೋಕ್ತ ಧರ್ಮವನ್ನು ಮಾನಿಸದವರ ಅಂದರೆ ಕಾಫರರ ಪಾರಿಪತ್ಯವನ್ನು ಮಾಡೋಣವೆಂಬ ಶಬ್ದದಿಂದ ಹುಟ್ಟಿರುವದು. ಮುಸಲ್ಮಾನರು ಲೋಕದ ಜನರಲ್ಲಿ ಇಮಾನೀ ಅಂದರೆ ಕುರಾನವನ್ನು ಮನ್ನಿಸುವವರೆಂತಲೂ ಕಾಫರರೆಂದರೆ ಮನ್ನಿಸದವರೆಂತಲೂ ಎರಡು ವರ್ಗಗಳನ್ನು ಮಾಡಿರುವರು. ಕಾಫರರೊಡನೆ ಹೋರಾಡುವವನು ಗೆದ್ದರೆ ಅವನಿಗೆ ಗಾಜಿ ಎಂತಲೂ ಸತ್ತರೆ ಅವನಿಗೆ ಷಹಿದನೆಂತಲೂ ಅನ್ನುವರು. ಕಾಫರರೊಡನೆ ಮಾಡುವ ಯುದ್ಧಕ್ಕೆ ಜಿಹಾದವೆನ್ನುವರು. ಮುಸಲ್ಮಾನರು ತಮ್ಮ ಧರ್ಮವನ್ನು ಉಳಿದು ಅನ್ಯಧರ್ಮವನ್ನು ಸ್ವೀಕರಿಸಿದವರಿಗೆ ಬಾಜಬುಲ್ ಕತಲ್ ಅಂದರೆ ವಧಾರ್ಹರು ಎಂದು ಸಂಬೋಧಿಸುವರು.

(ಸಶೇಷ.)

ಭೂಗೋಲ.

ವಿ. ಅಪ್ಪಣ್ಣನಭಾವಿ ಇವರಿಂದ ಬರೆದು ಬಂದದ್ದು.

ಪೂರ್ವಸಿದ್ಧತೆ:—ಭೂಗೋಲದಲ್ಲಿ ಬರುವ ಕಲ್ಪನೆಗಳ ಹಾಗು ಸಂಜ್ಞೆಗಳ ಪ್ರತ್ಯಕ್ಷಜ್ಞಾನ ಮಾಡಿ ಕೊಡದೆ ಹುಡುಗರಿಗೆ ಆ ವಿಷಯವನ್ನು ಕಲಿಸುವದು ವ್ಯರ್ಥ; ಆದ ಕಾರಣ ಶಿಕ್ಷಕರು ಮುಂದೆ ಹೇಳುವ ಪೂರ್ವಸಿದ್ಧತೆಯನ್ನು ಅವಶ್ಯವಾಗಿ ಮಾಡಲಿಕ್ಕೆ ಬೇಕು.

ಅಂತರಜ್ಞಾನ:—ಫೂಟ, ಯಾರ್ಡ, ಫರ್ಲಾಂಗ, ಮೈಲು, ಹರದಾರಿ ಅಂದರೇನೆಂಬದನ್ನು ಹುಡುಗರಿಗೆ ಪ್ರತ್ಯಕ್ಷವಾಗಿ ತಿಳಿಸಿ ಕೊಡಬೇಕು. ಸಾಲೆಯೊಳಗಿನ ಒಂದೊಂದು ಕೋಣೆ, ತೋಟ, ಪಾಗಾರ, ಊರೊಳಗಿನ ಯಾವದೊಂದು ಓಣಿ, ಸಾಲೆಯ ಒಂದು ಗೋಡೆ, ಇವುಗಳನ್ನು ಹುಡುಗರಿಂದ ಪ್ರತ್ಯಕ್ಷವಾಗಿ ಅಳೆಯಿಸಬೇಕು. ವಸ್ತುಗಳ ಅಂತರವನ್ನು ಅಜಮಾಸಿನಿಂದ ಅಳೆದು ಹೇಳುವ ರೂಢಿಯನ್ನು ಹುಡುಗರಿಂದ ಮಾಡಿಸಬೇಕು. ಸಾಲೆಯಿಂದ ಒಂದು ಮೈಲು, ಇಲ್ಲವೆ ಒಂದು ಹರದಾರಿ ದೂರವಾಗಿರುವ ಸ್ಥಳಗಳಿಗೆ ಅವರನ್ನು ಕರಕೊಂಡು ಹೋಗಬೇಕು. ಇದರಿಂದ ಅವರಿಗೆ "ಇಂತಿಷ್ಟು ಮೈಲು ಅಥವಾ ಹರದಾರಿ ದೂರ" ಎಂಬ ವಾಕ್ಯದ ನಿಜವಾದ ಕಲ್ಪನೆಯು ಅವರ ಮನಸಿನಲ್ಲಿ ಬರುವದು. ಎತ್ತರಳತೆಯ ಕಲ್ಪನೆಯನ್ನಾದರೂ ಇದೇ ಪ್ರಕಾರ ಅವರ ಮನಸಿನಲ್ಲಿ ಹುಟ್ಟಿಸಬೇಕು.

ತರುವಾಯ ದಿಕ್ಕುಗಳ ಜ್ಞಾನವನ್ನು ಮಾಡಿಕೊಡುವದು. ಒಂದು ವಸ್ತುವು ಮತ್ತೊಂದು ವಸ್ತುವಿನ ಯಾವ ಬದಿಗೆ ಅದೆ. ಎಂಬದನ್ನು ಕೇಳಿ ದಿಕ್ಕುಗಳನ್ನು ಗೊತ್ತು ಮಾಡುವ ಅವಶ್ಯಕತೆಯನ್ನು ಅವರ ಮನಸಿನಲ್ಲಿ ಬಿಂಬಿಸತಕ್ಕದ್ದು.

[ಹ್ಯಾಗಂದರೆ:—ಸಾಲೆಯ ಎಡಕ್ಕೆ, ಸಾಲೆಯ ಬಲಕ್ಕೆ, ಸಾಲೆಯ ಮುಂದೆ, ಸಾಲೆಯ ಹಿಂದೆ ಎಂದು ಹೇಳಿದಾಗ ಹೇಳುವವನು ಸಾಲೆಯ ಬೇರೆ ಬೇರೆ ನಿಟ್ಟಿಗೆ ಸಾಲೆಯ ಕಡೆಗೆ ಮೋರೆ ಮಾಡಿ ನಿಂತಂತೆ ಆ ಶಬ್ದಗಳ ಅರ್ಥಗಳು ಬೇರೆ ಬೇರೆಯಾಗುತ್ತವೆ. ಆ

ದ ಕಾರಣ ಸೂರ್ಯೋದಯದ ಕಡೆಗೆ ಸೂರ್ಯಾಸ್ತದ ಕಡೆಗೆ ಎಂದು ಹೇಳಿದರೆ ಆ ಪದಾರ್ಥಗಳ ಸ್ಥಾನದ ನಿಶ್ಚಿತಜ್ಞಾನವಾಗುವದು. ಭಾ. ಕ.]

ಸೂರ್ಯೋದಯ, ಸೂರ್ಯಾಸ್ತ, ಧೃವನಕ್ಷತ್ರ ಇವುಗಳ ಸ್ಥಾನವನ್ನು ಹುಡುಗರಿಗೆ ತೋರಿಸಿ ಅವುಗಳಿಂದ ದಿಕ್ಕುಗಳನ್ನು ಗೊತ್ತು ಮಾಡುವ ಕ್ರಮವನ್ನು ಕಲಿಸತಕ್ಕದ್ದು.

ದಕ್ಷಿಣೋತ್ತರ ದಿಕ್ಕುಗಳನ್ನು ತೋರಿಸುವದೊಂದು ರೇಖೆಯನ್ನು ವರ್ಗದಲ್ಲಿ ಭೂಮಿಯ ಮೇಲೆ ತೆಗೆದು, ಆ ಗೆರೆಗೆ ಕಾಟಕೋನ ಮಾಡುವ ಗೆರೆಯು ಪೂರ್ವ ಪಶ್ಚಿಮ ದಿಕ್ಕುಗಳನ್ನು ತೋರಿಸುತ್ತದೆ ಯೆಂಬದನ್ನು ಅವರ ಧ್ಯಾನಕ್ಕೆ ತಂದು ಕೊಡಬೇಕು. ಹಾಗು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಈ ಹೆಸರುಗಳನ್ನು ಕಾಗದದ ಮೇಲೆ ಬರೆದು, ಅವುಗಳನ್ನು ಶಾಲೆಯ ಆಯಾದಿಕ್ಕಿನ ಗೋಡೆಗಳಿಗೆ ಹಚ್ಚಬೇಕು.

ಸಣ್ಣ ಹೋಕಾಯಂತ್ರವು ಸಿಗುವಂತಿದ್ದರೆ, ಅದನ್ನು ಸಂಪಾದಿಸಿ ಅದರ ಉಪಯೋಗವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.

ಪಯಣಗಳು:—ಹುಡುಗರನ್ನು ತಮ್ಮ ಸಂಗಡ ಚಿಕ್ಕ ಚಿಕ್ಕ ಪಯಣ (ಎಕ್ಸ್ಕರ್ಶನ್)ಗಳಿಗೆ ಕರಕೊಂಡು ಹೋಗಿ ಅವರಿಗೆ ಮುಂದೆ ಹೇಳಿದ ಸಂಗತಿಗಳ ಜ್ಞಾನ ಮಾಡಿಕೊಡತಕ್ಕದ್ದು. ಪಯಣಕ್ಕೆ ಹೊರಡುವ ಪೂರ್ವದಲ್ಲಿ ಪಯಣದಲ್ಲಿ ಅವರ ದೃಷ್ಟಿಗೆ ಬೀಳತಕ್ಕ ಸಂಗತಿಗಳ ಸಂಬಂಧದಿಂದ ಹುಡುಗರ ಕೂಡ ಸಂಭಾಷಣ ಮಾಡಿ ಅವರ ಕುತೂಹಲವನ್ನು ಜಾಗ್ರತಗೊಳಿಸಬೇಕು. ಆದರೆ ಅವರ ಕುತೂಹಲವು ನಷ್ಟವಾಗುವಷ್ಟು ಅಥವಾ ಜ್ಞಾನಸಂಪಾದನೆಗೆ ಸ್ವಂತ ಅವಲೋಕನದ ಕಾರಣ ಬೀಳದಷ್ಟು ಸಂಗತಿಗಳನ್ನು ಮೊದಲೇ ಹೇಳಿ ಬಿಡಬಾರದು ಪ್ರವಾಸದಲ್ಲಿ ಹೊಸ ಸಂಗತಿಗಳ ಜ್ಞಾನ ಮಾಡಿ ಕೊಡುವದು ಎಷ್ಟು ಅವಶ್ಯಕವೋ ಅಷ್ಟೇ ಹಳೇ ಸಂಗತಿಗಳ ಪುನರಾವರ್ತನವೂ ಉಪಯೋಗವೂ ಅವಶ್ಯಕವೆಂಬದನ್ನು ಲಕ್ಷ್ಯದಲ್ಲಿಡಬೇಕು ಹುಡುಗರ ಗ್ರಾಹಕ ಶಕ್ತಿಗೆ ಮೀರಿದ ಸಂಗತಿಗಳ ಪ್ರಸಕ್ತಿಯನ್ನು ಪ್ರವಾಸದಲ್ಲಿ ತೆಗೆಯಬಾರದು. ಪಯಣದಿಂದ ತಿರುಗಿ ಬಂದ ಮೇಲೆ ನೋಡಿದ ಸಂಗತಿಗಳ ಸಂ

...ಂಧದಿಂದ ಸಂಭಾಷಣ ಮಾಡಿ ನಿಶ್ಚಿತ ಜ್ಞಾನವನ್ನು ಮಾಡಿಕೊಡ ಬೇಕು.

ಪಯಣಗಳಲ್ಲಿ ಹುಡುಗರ ದೃಷ್ಟಿಗೆ ತರತಕ್ಕ ಸಂಗತಿಗಳು ಯಾವವೆಂದರೆ:—

೧ ದಿಕ್ಕು, ಗುಡ್ಡ, ಶಿಖರ, ಬೈಲುಪ್ರದೇಶ, ಓಣಿ ಕಂದರ, ಜಲಚ್ಟ್ರೀವ, ಬೈಲು, ಪಡಭೂಮಿ, ಸಾಗುಭೂಮಿ, ಹುಲ್ಲುಗದ್ದೆ, ಸರೋವರ, ಕೆರೆ, ಒಡ್ಡು, ಕಾಲುವೆ, ನಡುಗಡ್ಡೆ, ಸಂಗಮ ಇತ್ಯಾದಿ ಸಂಜ್ಞೆಗಳಿಂದ ಕರೆಯಲ್ಪಡುವ ವಸ್ತುಗಳು.

೨ ನದಿಯ ಸಂಬಂಧದಿಂದ ತೋರಿಸತಕ್ಕ ಸಂಗತಿಗಳು:—

(ಅ) ನದಿಯು ಎತ್ತರ ಪ್ರದೇಶದಿಂದ ತಗ್ಗು ಪ್ರದೇಶದ ಕಡೆಗೆ ಹರಿಯುವದು

(ಬ) ನದಿಯು ಬಹಳ ಎತ್ತರವಾದ ಪ್ರದೇಶದಲ್ಲಿ ಅಂದರೆ ಗುಡ್ಡದಲ್ಲಿ ಉಗಮವಾಗುವದು.

(ಕ) ಮಳೆಯ ನೀರು ನದಿಯ ಕಡೆಗೆ ಹರಿಯುವಾಗ ಮತ್ತು ನದಿಯ ಪಾತ್ರವು ತುಂಬಿ ಎರಡೂ ದಂಡೆಯ ಮೇಲೆ ನೀರು ಹಬ್ಬಿದಾಗ ರೇವೆಯು ಕೂತು ನದಿಯ ದಂಡೆಯ ಪ್ರದೇಶವು ಬೆಳೆಯುಳ್ಳದ್ದಾಗುತ್ತದೆ

(ಡ) ನದಿಗಳಿಂದ ಒಡ್ಡುಗಳನ್ನು ಕಟ್ಟಿ ಹಾಗು ಕಾಲುವೆಗಳನ್ನು ಅಗಿದು ಭೂಮಿಗಳಿಗೆ ನೀರು ಪೂರೈಸುತ್ತಾರೆ.

೩ ಭೂಪೃಷ್ಠದ ರಚನೆ:—ಬಾವಿಗಳನ್ನು ಅಗಿಯುವಲ್ಲಿಗೆ ಅಥವಾ ಕಲ್ಲಿನ ಖಣಿಗಳಿಗೆ ಹುಡುಗರನ್ನು ಕರಕೊಂಡು ಹೋಗಿ ಎಲ್ಲಕ್ಕೂ ಮೇಲೆ ಮಣ್ಣಿನಸ್ತರ ಅದರ ಕೆಳಗೆ ಕಟಕಿನಸ್ತರ ಅದರ ಕೆಳಗೆ ಕಲ್ಲಿನ ಅಥವಾ ಗೆರೆಕಲ್ಲಿನಸ್ತರ ಈ ಪ್ರಕಾರ ಸಾಧಾರಣವಾಗಿ ಭೂಪೃಷ್ಠದ ರಚನೆ ಇರುತ್ತದೆ ಎಂಬದನ್ನು ಪ್ರತ್ಯಕ್ಷವಾಗಿ ತೋರಿಸಬೇಕು.

೪ ಪೃಥ್ವಿಯ ಹೊಟ್ಟೆಯೊಳಗಿನ ನೀರಿನ ಪ್ರವಾಹಗಳೂ, ಬುಗ್ಗೆಗಳ ಉತ್ಪತ್ತಿಯೂ.

೫ ಗುಡ್ಡದ ಸವಕಳಿಯೂ ಅದರಿಂದ ಉತ್ಪನ್ನವಾಗುವ ಮಣ್ಣು-ಗುಡ್ಡದಿಂದ ನೆರೆಯಲ್ಲಿರುವ ನದಿಯ ದಂಡೆಯ ಕಡೆಗೆ ಹೋ

ಗುವಾಗ ಮಣ್ಣಿನ ಶಕ್ತಿ ಹೆಚ್ಚು ಹೆಚ್ಚು ದಸ್ತಾಗಿರುವದನ್ನೂ ಮತ್ತು ಭೂಮಿಯು ಹೆಚ್ಚು ಹೆಚ್ಚು ಬೆಳೆಯುಳ್ಳದ್ದಾಗುವದನ್ನೂ ಹುಡುಗರಿಗೆ ತೋರಿಸತಕ್ಕದ್ದು.

೬ ದಿಣ್ಣೆಯ ಮೇಲೆ ನಿಂತು ನೋಡಿದರೆ ಕಾಣುವ ಸುತ್ತಮುತ್ತಲಿನ ಭೂಪ್ರದೇಶದ ಸ್ವರೂಪವು.

೭ ಹೆಚ್ಚುಹೆಚ್ಚು ಎತ್ತರವಾದ ಪ್ರದೇಶದ ಕಡೆಗೆ ಹವೆಯ ಉಷ್ಣಮಾನವು ಕಡಿಮೆ ಕಡಿಮೆಯಾಗುವದು.

೮ ಭೂಮಿಯ ಮುಖ್ಯ ಎರಡು ಮೂರು ಪ್ರಕಾರಗಳು.

೯ ನೆರೆಯ ಪ್ರದೇಶದೊಳಗಿನ ಮುಖ್ಯ ಬೆಳೆಗಳೂ ಗಿಡಗಳೂ ಪ್ರಾಣಿಗಳೂ ಅವುಗಳ ಉಪಯೋಗವೂ; ಬೆಳೆಗೆ ಅನುಕೂಲಿಸುವ ಕಾರಣಗಳು ಹಾಗು ಅವು ಫಲಿಸುವ ಋತು ಅಥವಾ ಕಾಲ.

೧೦ ಎಕರೆ, ಬಿಘೆ, ಚೌರಸಮೈಲು ಇತ್ಯಾದಿ ಶಬ್ದಗಳಿಂದ ತೋರಿಸಲ್ಪಡುವ ಭೂಮಿಯ ಕ್ಷೇತ್ರಫಲವು.

೧೧ ಊರೊಳಗಿನ ಹಾಗು ಊರ ಸಮೀಪದ ನೋಡತಕ್ಕ ಮುಖ್ಯ ಮುಖ್ಯ ಸ್ಥಳಗಳು ಉದಾಹರಣಾರ್ಥವಾಗಿ ದೇವಾಲಯಗಳು, ಹಳೇ ಅರಮನೆಗಳು ಕೋಟೆಗಳು ಕೆರೆಗಳು, ಗುಡ್ಡದಲ್ಲಿ ಕೊರೆದ ಗುಡಿಗಳು ಇತ್ಯಾದಿ.

೧೨ ಬಳೆಗಾರರು, ಕಂಚುಗಾರರು, ನೇಕಾರರು, ಬಣ್ಣಗಾರರು ಹೊಲೆಯುವ ಸಮಗಾರರು ಇವರೇ ಮೊದಲಾದ ಕಾರಾಗೀರರೂ, ಅವರ ಕೆಲಸಗಳೂ ಸಾಧ್ಯವಿದ್ದರೆ ಗಿರಣಿಗಳು ಹಾಗು ಕಾರಖಾನೆಗಳು.

೧೩ ಜಾತ್ರೆಗಳೂ ಸಂತೆಗಳೂ ಮತ್ತು ವ್ಯಾಪಾರಕ್ಕೂ ಮನುಷ್ಯರ ಪರಸ್ಪರ ಬಳಕೆಯು ಹೆಚ್ಚಾಗಲಿಕ್ಕೂ ಅವುಗಳಿಂದ ಆಗುವ ಉಪಯೋಗವೂ.

೧೪ ಸರಕಾರೀ ಆಫೀಸುಗಳೂ ಅಧಿಕಾರಸ್ಥರೂ ಮತ್ತು ಅಧಿಕಾರಿಗಳು ಮಾಡುವ ಕೆಲಸಗಳಿಂದ ಆಗುವ ಸಾರ್ವಜನಿಕ ಉಪಯೋಗವೂ.

ಸೃಷ್ಟಿಯ ಅವಲೋಕನವು:-ಹುಡುಗರಿಂದ, ಮನೆಯಲ್ಲಿಯೂ ಶಾಲೆಯಲ್ಲಿಯೂ ಸೃಷ್ಟಿಯ ಅವಲೋಕನವನ್ನು ಮಾಡಿಸಿ ಮುಂದಿನ ಸಂಗತಿಗಳ ಜ್ಞಾನವನ್ನು ಮಾಡಿಕೊಡಬೇಕು.

೧ ಹಗಲು ರಾತ್ರಿಗಳೂ ಅವುಗಳ ಬೇರೆ ಬೇರೆ ಪ್ರಹರಗಳ ಉಷ್ಣತಾಮಾನದಲ್ಲಿ ಕಂಡು ಬರುವ ಹೆಚ್ಚು ಕಡಿಮೆಗಳೂ

೨ ಸೂರ್ಯನ ಕಿರಣಗಳ ಲಂಬರೂಪದ ಹೆಚ್ಚು, ಕಡಿಮೆ, ಅವುಗಳಿಂದ ಉತ್ಪನ್ನವಾಗುವ ಉಷ್ಣತೆ ಇವುಗಳ ಪರಸ್ಪರ ಸಂಬಂಧವು.

೩ ಮಂಜು ಮೋಡ ಇಬ್ಬನ್ನಿ ಇವುಗಳಿಂದ ಹವೆಯ ಮೇಲೆ ಉಂಟಾಗುವ ಪರಿಣಾಮವು.

೪ ಬೇರೆ ಬೇರೆ ಋತುಗಳಲ್ಲಿ ಹವೆಯ ಮೇಲೆ ಉಂಟಾಗುವ ಹೆಚ್ಚು ಕಡಿಮೆಯು.

೫ ಮಳೆ ಬರುವ ಗಾಳಿಯ ದಿಕ್ಕನ್ನು ಗೊತ್ತು ಮಾಡುವದು:- ಮೊದಲು ಎರಡು ಮೂರು ತಿಂಗಳು ಮಳೆಯು ಪಶ್ಚಿಮದಿಂದ ಬರುವದು; ಮುಂದೆ ಅದು ಪೂರ್ವದಿಂದ ಬರುವದೆಂಬದನ್ನು ಹುಡುಗರ ಅನುಭವಕ್ಕೆ ತಂದು ಕೊಡುವದು.

(ಮುಂದೆ ಸಾಗುವದು.)

CORRESPONDENCE.

ಪತ್ರವ್ಯವಹಾರ.

ರಾವಸಾ। ಕನ್ನಡ ಶಾಲಾಪತ್ರದ ಎಡೀಟರರವರ ಚರಣ ಸನ್ನಿಧಿಗೆ.

ವಿ ವಿ ಇದೇ ತಿಂಗಳೊಳಗೆ ಹೊರಡುವ ತಮ್ಮ ಸುಂದರವಾದ ಶಾಲಾಪತ್ರದಲ್ಲಿ ಕೆಳಗಿನ ನಾಲ್ಕು ಪಂಕ್ತಿಗಳಿಗೆ ಸ್ಥಳ ಕೊಡುವಿರೆಂದು ನಂಬಿ ತಮ್ಮ ದರ್ಶನಕ್ಕೆ ಬಂದಿರುವೆನು.

ಈ ಜನವರೀ ತಿಂಗಳ ೭ನೇ ತಾರೀಖು ಮಂಗಳವಾರ ದಿವಸ ಇಲ್ಲಿಯ ಕನ್ನಡ ೧ನೇ ನಂಬರ ಶಾಲೆಯಲ್ಲಿ ಈ ಊರ ಮ್ಯುನಸಿಪಾಲಿಟಿಯ ಎಲ್ಲ ಶಾಲೆಗಳಲ್ಲಿ ಪಾಸಾದ ಹುಡುಗರಿಗೆ ಬಕ್ಷೀಸ ಕೊಡುವ ನಿಮಿತ್ಯ ಒಂದು ಮಹಾ ಸಭೆಯು ಬಹು ವಿಜೃಂಭಣೆಯಿಂದ ನೆರೆದಿತ್ತು. ಅದಕ್ಕಾಗಿ ಶಾಲಾಗೃಹವನ್ನು ಸುಶೋಭಿತಗೊಳಿಸಿ, ಕೂಚಾಸನಗಳಿಂದ ಸಜ್ಜುಗೊಳಿಸಿದ್ದರು. ಮೊದಲೇ ಗೊತ್ತಾದ ಕಾರ್ಯಕ್ರಮ

ಡ ವೇಳೆಗೆ ಅಂದರೆ ಮಧ್ಯಾಹ್ನದ ೪ ಗಂಟೆಗೆ ಸರಿಯಾಗಿ ಊರೊಳಗಿನ ಸೆಟ್ಟಿಸಾಹುಕಾರರೂ ವ್ಯಾಪಾರಸ್ಥರೂ, ಮ್ಯುನಿಸಿಪಲ್ ಮೆಂಬರರೂ, ಲೋಕಲಮೆಂಬರರೂ ಬೇರೆ ಎಷ್ಟೋ ಪ್ರಮುಖ ಸದ್ಗೃಹಸ್ಥರೂ ಬಂದು ಸಭಾಮಂದಿರವನ್ನು ಅಲಂಕರಿಸಿದರು. ಕೂಡಲೆ ಅಧ್ಯಕ್ಷಸ್ಥಾನದ ಆಲೋಚನೆಗೆದ್ದು ಗೊತ್ತುಪಡಿಸಿದ ವೇಳೆಗೆ ರಾವಸಾ॥ ಗೋವಿಂದ ಮಹಾದೇವ ಜೋಸಿ ೩ ನೇ ಅಸಿ॥ ಡಿ. ಎಂ ಇನಸ್ಪೆಕ್ಟರ ಜಿಲ್ಲಾ ವಿಜಾಪೂರ ಇವರು ಅಸ್ಥಾನದಲ್ಲಿ ವಿರಾಜಮಾನರಾದರು. ಒಳಿಕ ಮ್ಯುನಸಿಪಲ್ ಸೆಕ್ರೇಟರಿ ಮಿಸ್ತರ ನಾರಾಯಣರಾವ ಕಾರಕೂನ ಇವರು ಸಭೆಯ ಉದ್ದೇಶವನ್ನು ಕುರಿತು ಸ್ವಲ್ಪದರಲ್ಲಿಯೇ ಸರಸವಾಗಿ ಹೇಳಿದರು. ತದನಂತರ ಅಧ್ಯಕ್ಷರು ಇಲ್ಲಿಯ ಎಲ್ಲ ಶಾಲೆಗಳ ಸ್ಥಿತಿಗಳನ್ನೂ, ನ್ಯೂನತೆಗಳನ್ನೂ ವ್ಯಕ್ತಪಡಿಸಿ, ಅವುಗಳ ಸುಧಾರಣೋಪಾಯಗಳನ್ನು ಸಹ ಅರುಹಿದರು. ಮತ್ತು ಬಡ ಹುಡುಗರ ಕಲ್ಯಾಣದ ದೆಸೆಯಿಂದ ಈ ಬಕ್ಷೀಸ ಸಮಾರಂಭಕ್ಕಾಗಿ ಯಾರಾದರೂ ಸ್ವಸಂತೋಷದಿಂದ ಉದಾರಾಶ್ರಯ ಕೊಡುವ ಮನವಿದ್ದವರು ಯಥಾನುಶಕ್ತಿ ಕೊಡಬಹುದೆಂದು ಸೂಚಿಸಿ ತಮ್ಮ ಸ್ಥಳದಲ್ಲಿ ವಿಶ್ರಮಿಸಿದರು. ಆಗ್ಗೆ ಅಧ್ಯಕ್ಷರ ಸಮಕ್ಷ ೪೪ ರೂಪಾಯಿ ವರ್ಗಣಿ ವಸೂಲಾಯಿತು. ಅವರ ತಪಸೀಲು ಕೆಳಗೆ ಬರೆದಂತೆ.

೨೦ ರು॥ ಮ್ಯುನಿಸಿಪಾಲಿಟಿ ಕಚೇರಿಯಿಂದ

೫ ,, ಮ॥ ರಾ॥ ರಾ॥ ಶಂಕರೆಪ್ಪಾ ಅಣ್ಣಾ ಪಕ್ಕರಿ ಮಾಜಿ ಸ್ಕೂಲ ಬೋರ್ಡ ಚೇರಮನ್

೩ ,, ,, ,, ಅಬ್ದುಲ ಖಾದಿರಸಾಬ ಬಿಳೇಕುದುರ್ರಿ ಮ್ಯು. ಮೆಂಬರ

೩ ,, ,, ,, ವೆಂಕಟೇಶ ನಾರಾಯಣ ಕೋಟಗಾವೆ ಮುನಸೀಫ

೨ ,, ,, ,, ಭೀಮಸೇನನಾಯಿಕ ಜೋಡಬಾಗಲ ಸಾವುಕಾರ

೨ ,, ,, ,, ವೆಂಕೋಬನಾಯಿಕ ದೋಟಿಹಾಳ ಮಾಜಿ
ಸ್ಕೂಲ ಬೋರ್ಡ ಚೇರಮನ' ಇಲಕಲ್ಲ
೧ ,, ,, ,, ಶಿದ್ದನಗೌಡಾ ಅಣ್ಣಾ ಪಾಟೀಲ ಮು. ಮೆಂಬರ
೧ ,, ,, ,, ಇರ್ಜನಗೌಡಾ ಅಣ್ಣಾ ಸ್ಕೂಲಬೋರ್ಡ ಚೇರಮನ್
೧ ,, ,, ,, ರಾಮಚಂದ ಗೌಡಾ ಕೋಟಿ ಮು. ಮೆಂಬರ
೧ ,, ,, ,, ಇಬ್ರಾಹಿಮಸಾಹೇಬ ಪಟೇಲ ಮು. ಮೆಂ.
೧ ,, ,, ,, ಹಣಮಂತರಾವ ಕುಲಕರ್ಣಿ ಇಲಕಲ್ಲ
೧ ,, ,, ,, ಕೃಷ್ಣಪ್ಪನಾಯಿಕ ಗೊಂಬಿ ಸಾವುಕಾರ
೧ ,, ,, ,, ಅಮರಪ್ಪಾ ಬಿಜ್ಜಲ
೧ ,, ,, ,, ಜಗನ್ನಾಥ ಸೆಟ್ಟಿ ಮು, ಮೆಂಬರ
೧ ,, ,, ,, ಈರಪ್ಪ ರುವಾಲದ

೪೪ ಅಂತು ನಾಲ್ವತ್ತುನಾಲ್ಕು ರೂಪಾಯಿ ವರ್ಗಣಿ ವಸೂಲಿ ಕೈಕಿ ಆದ ಖರ್ಚಿನ ತಪಸೀಲು ಕೆಳಗೆ ಬರೆದಂತೆ.

೨೩	ರೂಪಾಯಿಗಳ	ಪುಸ್ತಕ
೧೨	,,	ಅಂಗಿಗಳು
೪	,,	ಖಣಗಳು
೫	,,	ಮಿಠಾಯಿ
೪೪	ಅಂತು ಖರ್ಚು	

ಮೇಲೆ ಬರೆದಂತೆ ಸಾಮಾನು ತಕ್ಕೊಂಡು ಪಾಸಾದ ಎಲ್ಲ ಹುಡುಗರಿಗೆ ಪುಸ್ತಕ, ಬಡ ಹುಡುಗರಿಗೆ ಅಂಗಿ, ಹೆಣ್ಣು ಮಕ್ಕಳಿಗೆ ಖಣ ಯಾವತ್ತೂ ವಿದ್ಯಾರ್ಥಿಗಳಿಗೆ ಮಿಠಾಯಿ ಮುಟ್ಟುವಂತೆ ಅಧ್ಯಕ್ಷರ ಹಸ್ತದಿಂದಲೇ ಹಂಚಿಸಲ್ಪಟ್ಟಿತು. ಬಳಿಕ ಹೆಡ'ಮಾಸ್ತರ ಮಿಸ್ತರ ರಂಗೋ ಕೊಪ್ರೇಕ ಹಲಗೇರಿ ಇವರು ಅಧ್ಯಕ್ಷರ ಹಾಗು ಉಳಿದ ಸಭಿಕರ ಆಗಮನೋತ್ಸವದ ಬಗ್ಗೆ ಆ ಭಾರವನ್ನು ಮನ್ನಿಸಿದ ನಂತರ ಎಲ್ಲ ಸಭಿಕ

ರಿಗೂ ಹಾರ, ತುರಾಯಿ, ಅತ್ತರ, ಪಾನಸುಪಾರಿ ಮುಟ್ಟಿಸಿ ಸರ್ವರನು ಮತದಿಂದ ಸಭೆಯು ಕಾರ್ಯವು ಸಾಂಗವಾಯಿತು.

ತಾ. ೧೨-೧-೦೮ ನೇ ಇಸವಿ ಇಲಕಲ್ಲ ತಾಲೂಕ ಹುನಗುಂದ ಜಿಲ್ಲಾ ವಿಜಾಪುರ	ಎಲಗುರ್ದ ಅಪ್ಪಾಜಿ ದೇಶಪಾಂಡೆ ೧ ನೇ ಅಸಿ॥ ಮಾಸ್ತರ ಶಾಳಾ ನಂಬರ ೧ ಇಲಕಲ್ಲ.

DHARWAR TRAINING COLLEGE.

Terminal Examination.
1908.

April.

೨ನೆಯ ವರುಷ.

ಕರ್ನಾಟಕ ವ್ಯಾಕರಣ ಮತ್ತು ನಿಬಂಧ.

ವ್ಯಾಕರಣ.

೧. ತಪಸ್ಕರಣಮಾತ್ರದೊಳಪ್ಪುದು ಮಾತೆಮಕ್ಕಳೊಡಗೂಡಿದರ್ದೊಡೆ, ವೃಥಾಮಂದಿ ಕುದುರೆಯನ್ನೋಡಿಸದಿರ್! ನಿನ್ನ ಪಿತನಾವಾತನೆಂಬುವಂ ಸಿಂಧಸೀಗುರಿ ಛತ್ರಚಾಮರಗಳ; ಧೀಮಾನನಿಲ್ಲದಾಸ್ಥಾನ.

ಮೇಲಿನ ವಾಕ್ಯಗಳಲ್ಲಿ ಶಬ್ದಮಣಿದರ್ಪಣಕ್ಕೆ ವಿರೋಧವಾದ ಶಬ್ದಗಳೇನಿವೆ ಹೇಳಿ!

೨. (ಅ) ಪಸೆ, ಕೇಣ, ಸಂಕಲೆ, ಸನಿಹ, ಬಿಯದ, ತುರಿಪ, ಕನ್ನೆ ಬಿನದ ಇವುಗಳ ತತ್ಸಮಗಳನ್ನು ಹೇಳಿರಿ.

(ಬ) ಎಡೆಗಣ್ಗಳ್, ನಡುವೆದೆಯಂ. ನಿಡುನಿದುಸರಲ್ಗಳ್, ಕಡಿವಡೆದು ಎಣ್ದಿಸೆ, ಎಡಬಲದ, ಇವುಗಳ ವಿಗ್ರಹದೊಡನೆ ಸಮಾಸದ ಮತ್ತು ಸಂಧಿಯ ಹೆಸರನ್ನು ಹೇಳಿರಿ.

೩. (ಅ) ಸಂತವಿಸು. ಪರಿಕಿಸು. ಸೈಸು. ಮನ್ನಿಸು. ಉಜ್ಜಳಿಸು. ಯಾವ ಮೂಲ ಶಬ್ದಗಳು ಹ್ಯಾಗೆ ರೂಪಾಂತರವನ್ನು ಹೊಂದಿ ಬಳಿಕ ಪ್ರತ್ಯಯಾಂತ ಧಾತುಗಳಾದವು.

(ಬ) ಅರಿಯ್. ಸೋಲ್. ಅರಿ ಕೆಯ್. ಎಸೆ. ಒರೆ. ನುಡಿ.

ಈ ಧಾತುಗಳ ಕ್ರಿಯಾನಾಮಗಳನ್ನು ಕೈವಿನಿಯಲ್ಲಿ ಹೇಗೆ ಉಪಯೋಗಿಸಿರುವನು? ಉದಾಹರಿಸಿರಿ.

೪. ಅದಂ ಹ್ರಸ್ವೈದಂತಮ| ದಾದತ್ವಂ ಹ್ರಸ್ವಮೆನಿಸಿದೀದೂದಂತಂ॥ ಜ್ಯಾದಿ ಸಮಸ್ತೈಕಾಕ್ಷರ| ಮಾದವಿಕೃತಿ ಶಬ್ದ ಮುಕ್ತಿ ಎದರಿಂ ಲಿಂಗಂ॥ ಕರೆಗತ್ವದಿರ್ಗೆಯಲ್ಲದೆ| ಪರವಿರೆ ಪದ್ಯಾರ್ಥ ವಾಕ್ಯವೇಷ್ಟನದೆಡೆಗಂ॥ ಸ್ಫುರದನು ಕೃತಿಗಂ ಸ್ವರಮುವ| ಪರಮಿರೆ ಖುತ್ವಕ್ಕಮಂತೆ ಸಂಧಿ ವಿಕಲ್ಪಂ॥

ಈ ಸೂತ್ರಾರ್ಥಗಳನ್ನು ನಿಸ್ಸಂಶಯವಾಗುವಂತೆ ಬರೆದು ಉದಾಹರಣೆ ಕೊಡಿ.

೫. ದ್ವಿತ್ವ ಬರುವ ಸಂದರ್ಭಗಳನ್ನೂ, ಶಿಥಿಲ ದ್ವಿತ್ವವಾಗುವ ವಿಧಿಗಳನ್ನೂ ಹೇಳಿರಿ.

೬. ಸಂಧಿ ಪ್ರಕರಣದ ನಿಯಮಗಳಲ್ಲಿ ಹಳಗನ್ನಡಕ್ಕೂ ಹೊಸಗನ್ನಡಕ್ಕೂ ವ್ಯತ್ಯಾಸವಿದ್ದರೆ ತಿಳಿಸಿ

೭. (ಅ) ಮಾತ್ರೆ. ಹ್ರಸ್ವ. ಲಘು. ಯತಿ ಪ್ರಸ್ತಾರ. ಗಳೆಂದರೇನು ಉದಾಹರಿಸಿ.

(ಬ) ಭಾಮಿನಿಷಟ್ಪದಿ. ವಾರ್ಧಿಕಷಟ್ಪದಿ. ಕಂದಪದ್ಯ. ಇವುಗಳ ಲಕ್ಷಣವನ್ನು ಸಂಪೂರ್ಣವಾಗಿ ವಿವರಿಸಿ.

ನಿಬಂಧ.

೮. (ಅ) " ಆರೋಗ್ಯಕ್ಕೆ ಅತ್ಯವಶ್ಯವಾಗಿ ಬೇಕಾದ ಪದಾರ್ಥಗಳ ವಿಷಯದಲ್ಲಿ ನಾವು ತಿಳಿಯಬೇಕಾದ ಸಂಗತಿಗಳು "

(ಬ) " ಪರೀಕ್ಷೆಯ ಕಾಲದಲ್ಲಿಯೂ ಅದಕಿಂತಲೂ ಪೂರ್ವದಿವಸಗಳಲ್ಲಿಯೂ ವಿದ್ಯಾರ್ಥಿಗಳ ಯಾವ ರೀತಿಯಿಂದಿರಬೇಕು "

ಎಂಬೀ ಎರಡು ವಿಷಯಗಳಲ್ಲಿ ಯಾವದಾದರೊಂದನ್ನೆ ಕುರಿತು, ಶುದ್ಧವಾದ ಕನ್ನಡದಲ್ಲಿ ಒಂದು ನಿಬಂಧವನ್ನು ಬರೆಯಿರಿ.

ಹಿಂದುಸ್ಥಾನದ ಪ್ರಾಕೃತಿಕ ಸ್ವರೂಪ.

೫ನೇ ಇಯತ್ತೆಯು-ವೇಳೆ ೩೦ ಮಿನಿಟು.

ಉದ್ದೇಶ—ಪ್ರಾಕೃತಿಕ ಸ್ವರೂಪವನ್ನೂ ಅದರಿಂದಂದ ಭಾಗಗಳನ್ನೂ ಪ್ರಾಕೃತಿಕ ಸ್ವರೂಪದಿಂದ ಆಯಾ ಭಾಗದ ಜನರ ಉದ್ಯೋಗಗಳಲ್ಲಿ ಗುಣದಲ್ಲಿ ಆದ ಸ್ಥಿತ್ಯಂತರವನ್ನೂ ಭಾಗದ ಹವೆಯನ್ನೂ ಹೇಳುವದು.

ಉಪಕರಣ—ಹಿಂದುಸ್ತಾನದ ಮಾಡಲ—(ಹಿಂದೂ ದೇಶದ ನಕಾಶ)

ಉಪೋದ್ಘಾತ—ನಮ್ಮ ದೇಶ ಯಾವದು? ಹಿಂದುಸ್ತಾನವು. ಆ ದೇಶದ ಸಂಬಂಧದಿಂದ ವಿಚಾರಮಾಡುವ.

ಭಾಗ.	ವಿಷಯ.	ಕ್ರಮ.
(೧) ಬಾಹ್ಯ ಸ್ವರೂಪ	ದಕ್ಷಿಣಕ್ಕೂ ಪೂರ್ವ ಪಶ್ಚಿಮದ ಕೆಲ ಭಾಗಕ್ಕೂ ಸಮುದ್ರವದೆ. ಉಳಿದ ಕಡೆಯಲ್ಲಿ ಗುಡ್ಡವದೆ.	ಮಾಡಲದಲ್ಲಿ ಮೇರೆಯು ಸ್ವರೂಪವನ್ನು ತೋರಿಸಿ ಅವರಿಂದ ಈ ಉತ್ತರವನ್ನು ಹೊರಡಿಸುವದು

ವಿಶೇಷ:—ನಮ್ಮ ದೇಶದ ಸುತ್ತುಮುತ್ತು ಅಭೇದ್ಯವಾದ ಕೋಟೆಯನ್ನು ದೇವರು ನಿರ್ಮಾಣ ಮಾಡಿದ್ದಾನೆ. ಇಂಥ ಕೋಟೆಯನ್ನು ಇಂಗ್ಲೀಷರು ಒಡಿದು ಪ್ರವೇಶಿಸಿದರಿಂದ ಅವರ ಶೌರ್ಯವನ್ನು ಹುಡುಗರ ಮನದಲ್ಲಿ ತಂದು ಕೊಡುವದು.

(೨) ಸ್ವಾಭಾವಿಕ ಭಾಗಳು.	(೧) ಉತ್ತರಹಿಂದುಸ್ತಾನ (೨) ದಕ್ಷಿಣಹಿಂದುಸ್ತಾನ	ಹುಡುಗರ ಎದುರಿಗೆ ಆಕೃತಿಯನ್ನು ಇಟ್ಟು ವಿಂಧ್ಯ ಪರ್ವತವನ್ನು ತೋರಿಸಿ ಅದ

		ರಿಂದಾದ ವಿಭಾಗಗಳನ್ನು ಅವರಿಂದ ಹೊರಡಿಸಿ ಹೆಸರುಗಳನ್ನು ಹೇಳಿಸುವದು.
(೩) ದಕ್ಷಿಣ ಹಿಂದುಸ್ತಾನದ ಭಾಗಗಳು.	(೧) ಪೂರ್ವಸಮುದ್ರದ ತಗ್ಗುಭೂಮಿ (೨) ನಿಜದಕ್ಷಿಣ (೩) ಪಶ್ಚಿಮಸಮುದ್ರದ ತಗ್ಗುಭೂಮಿ (೪) ನರ್ಮದಾ ತೀರದ ಪ್ರದೇಶ.	ಆಕೃತಿಯಲ್ಲಿ ಗುಡ್ಡಗಳಿಂದಾದ ಭಾಗಗಳ ಮೇಲಿಂದ ಇದನ್ನು ಹೊರಡಿಸುವದು.
(೪) ಉತ್ತರಹಿಂದುಸ್ಥಾನದ ಭಾಗಗಳು.	(೧) ಹಿಮಾಲಯದ ಇಳುಕಲಿನ ಪ್ರದೇಶ. (೨) ಸಿಂಧುನದಿಯ ದಂಡೆಯ ಪ್ರದೇಶ. (೩) ಭಾಗೀರಥಿ ನದಿಯ ದಂಡೆಯ ಪ್ರದೇಶ. (೪) ಬ್ರಹ್ಮಪುತ್ರ ನದಿಯ ದಂಡೆಯ ಪ್ರದೇಶ. (೫) ದೊಡ್ಡಬೈಲು. (೬) ಮಧ್ಯಹಿಂದುಸ್ತಾನ ಉನ್ನತ ಪ್ರದೇಶ.	ಆಕೃತಿಯ ಮೇಲಿಂದ ಹೆಸರುಗಳನ್ನು ಹೊರಡಿಸುವದು.
(೫) ದಕ್ಷಿಣಹಿಂದುಸ್ಥಾನದ ವಿಶೇಷ ಮಾಹಿತಿ (೧) ಪಶ್ಚಿಮಸಮುದ್ರ.	(೧) ಹೊಳೆಗಳು ಉದ್ದವಾಗಿವೆ ಉದಾಹರಣೆ (೧) ಗೋದಾವರಿ (೨) ಕೃಷ್ಣಾ (೨) ಹವೆಯು ಉಷ್ಣವದೆ. (೨) ಹವೆಯು ಉಷ್ಣವಿರುವದರಿಂದ ಜನರು ಆಲಶ್ಯಗರು—ಉದಾ. ಬೇಸಿಗೆಗಾಲ-ಮಳೆಗಾಲಗಳಲ್ಲಿಯು ಇರವು.	ಪಶ್ಚಿಮದಿಂದ ಪೂರ್ವಕ್ಕೆ ಭೂಮಿಯು ಇಳುಕಲಾಗಿದೆ. ಮತ್ತು ಸಹ್ಯಾದ್ರಿಯು ಅವಿಚ್ಛಿನ್ನವದೆ ಅಂತ ಹೊರಡಿಸುವದು. ನೀರು ಅಗು ಕಾಯುವದಿಲ್ಲ. ಕಾಯು ಲಗು

ಇಂಗ್ಲಿಷ ಉದಾಹರಣೆ ಒಕ್ಕಲಿಗರು ದುಡಿಯುತ್ತಾರೆ.	ಆರುವದಿಲ್ಲ. ಆದ್ದರಿಂದ ಸಮುದ್ರದಂಡೆಯಲ್ಲಿ ಉಷ್ಣ ಹವೆ ಇರುತ್ತದೆ. ಇದಲ್ಲದೆ ಸಹ್ಯಾದ್ರಿಯ ಪರ್ವತವು ಅಡ್ಡ ಇರುವದರಿಂದ ಭೂಮಿಯ ಮೇಲಿನ ತಂಪು ಹವೆಯು ಬರುವದಿಲ್ಲ.
ಒಕ್ಕಲತನವು ಸಾಗುವದಿಲ್ಲ. ವ್ಯಾಪಾರವು ಹೆಚ್ಚಾಗಿ ಸಾಗುತ್ತದೆ. ಜನರು ಗಟ್ಟಿಗರು. ಸೊನ್ನೆಗಾರರ ಉದಾಹರಣೆಯು.	ಇಲ್ಲಿ ಭೂಮಿಯು ಸ್ವಲ್ಪ ಇರುವದರಿಂದ ಒಕ್ಕಲತನವು ಚನ್ನಾಗಿ ಸಾಗುವದಿಲ್ಲ. ಆದ್ದರಿಂದ ಅವರು ಬೇರೆ ಮಾರ್ಗದಿಂದ (ಸಮುದ್ರ ದಂಡೆ ಇರುವದರಿಂದ ವ್ಯಾಪಾರ ಮಾಡಿ) ಹೊಟ್ಟೆ ತುಂಬಿಕೊಳ್ಳುತ್ತಾರೆ. ವ್ಯಾಪಾರವನ್ನು ಮಾಡಿ ಹೊಟ್ಟೆ ತುಂಬಿಕೊಳ್ಳುವದರಿಂದಲೂ ಸಮುದ್ರ ಸಮೀಪದಲ್ಲಿ ಇದ್ದು ಸಮುದ್ರದ ಯಾನವನ್ನು ಮಾಡುವದರಿಂದಲೂ ಜನರು ಘಟ್ಟಿಗರಿರುವರು.
ಮೀನಗಳನ್ನು ಹಿಡಿದು ಕೆಲವರು ಜೀವಿಸುತ್ತಾರೆ ಮತ್ತು ಅವುಗಳ ವ್ಯಾಪಾರ ಮಾಡುತ್ತಾರೆ.	ಸಮುದ್ರದಲ್ಲಿ ಮೀನಗಳು ಇರುತ್ತವೆ. ಆದರಿಂದ ಎಷ್ಟೋ ಜನರು ಮೀನಗಳನ್ನು

		ತಿಂದು ಜೀವಿಸುತ್ತಾರೆ. ಮತ್ತು ಅವುಗಳ ವ್ಯಾಪಾರವನ್ನು ಮಾಡುತ್ತಾರೆ.

ಟೀಪು:—ಸಮುದ್ರ ತೀರವು ಇದು ವ್ಯಾಪಾರಕ್ಕೆ ಅನುಕೂಲ ಇದ್ದದರಿಂದ ಇಂಗ್ಲೀಷರು ಇಲ್ಲಿಯೇ ಬಂದು ವ್ಯಾಪಾರವನ್ನು ಮಾಡಹತ್ತಿದರು. ಎಂಬದನ್ನು ಹೊರಡಿಸುವದು.

(ಬ) ಸಹ್ಯಾದ್ರಿಯ ಮೇಲಿನ ಪ್ರದೇಶ	ಹವೆಯು ಶೀತವದೆ.	ಗುಡ್ಡದಲ್ಲಿ ಮಳೆಯು ಹೆಚ್ಚಾಗಿರುವದರಿಂದಲೂ ಗಿಡಗಳು ಅಧೀಕವಾಗಿರುವದರಿಂದಲೂ ಹವೆಯು ತಂಪು ಅದೆ.
	ಹವೆಯು ತಂಪು ಇರುವದರಿಂದ ಜನರು ಉದ್ಯೋಗಿಗಳು ಇರುತ್ತಾರೆ.	ಹವೆಯು ಶೀತ ಇರುವದರಿಂದ ಜನರು ಯಾವಾಗಲೂ ಉದ್ಯೋಗಗಳನ್ನು ಮಾಡುತ್ತಾರೆ.
	ತೋಟದ ಉದ್ಯೋಗವು ಹೆಚ್ಚಾಗಿರುತ್ತದೆ.	ಉತ್ತಮ ಭೂಮಿ ಇಲ್ಲಿ ಇದ್ದದರಿಂದ ಮಳೆಯು ಹೆಚ್ಚಾಗಿ ಆಗುವದರಿಂದ ಜನರು ತೋಟಗಳನ್ನು ಹೆಚ್ಚಾಗಿ ಬೆಳೆಸುತ್ತಾರೆ.
	ಗುಡ್ಡಗಾಡು ಇರುವದರಿಂದ ಜನರು ಧೈರ್ಯವಾನರು. ಇದಕ್ಕೆ ಮಾವಳೆ ಜನರ ಸಹಾಯದಿಂದ ಶಿವಾಜಿ	ಗುಡ್ಡದಲ್ಲಿ ಭಯಂಕರವಾದ ಅಡವಿ ಇದ್ದು ಅದರಲ್ಲಿ ಕ್ರೂರ ಪಶುಗಳು ಇರುವದ

	ಯ ಅಭ್ಯುದಯವೇ ದೊಡ್ಡ ಉದಾಹರಣೆಯು.	ರಿಂದ ಜನರು ಅವುಗಳ ಸೇವಿಸುತ್ತಿದ್ದು ಧೈರ್ಯವಾನರಿದ್ದಾರೆ.
(ಕ) ನಿಜದಕ್ಷಿಣ	ದೊಡ್ಡ ದೊಡ್ಡ ತೊಲೆಗಳ ವ್ಯಾಪಾರ ಹೆಚ್ಚಾಗಿ ಸಾಗುತ್ತದೆ. ನಮ್ಮಲ್ಲಿಗೆ ತೊಲೆಗಳು ಅಲ್ಲಿಂದಲೇ ಬರುತ್ತವೆ. ಹವೆ ಸಾಧಾರಣ ಉಷ್ಣತೆ ಒಕ್ಕಲತನವು ಹೆಚ್ಚಾಗಿ ಸಾಗುತ್ತದೆ. ಜನರು ಆಲಸ್ಯಗಳಾಗಿರುತ್ತಾರೆ. ಇದಕ್ಕೆ ನಾವೇ ಉದಾಹರಣೆಯಾಗಿರುತ್ತೇವೆ.	ದೊಡ್ಡ ಗಿಡಗಳು ಬೆಳೆಯುವದರಿಂದ ತೊಲೆಗಳ ವ್ಯಾಪಾರ ಹೆಚ್ಚಾಗಿ ಸಾಗುತ್ತದೆ. ಭೂಮಿಯು ಉತ್ತಮವಾದದ್ದು ಇದ್ದು ಪೂರ್ವ ಪಶ್ಚಿಮ ದಿಕ್ಕುಗಳಿಂದ ನಿಯಮಿತ ವೇಳೆಗೆ ಮಳೆಯು ಬರುತ್ತದೆ. ಕಾರಣ ಒಕ್ಕಲತನವು ಹೆಚ್ಚಾಗಿ ಸಾಗುತ್ತದೆ ಹೊಟ್ಟೆ ತುಂಬ ಅನ್ನ ಸಿಗುವದರಿಂದ ಹವೆಯು ಉಷ್ಣ ಇದ್ದದರಿಂದ ಜನರು ಹೆಚ್ಚು ಉದ್ಯೋಗಗಳನ್ನು ಮಾಡುವದಿಲ್ಲ
(ಡ) ಪೂರ್ವಸಮುದ್ರ ತೀರದನಾಡು	ಪಶ್ಚಿಮ ಸಮುದ್ರದ ತಗ್ಗು ನಾಡಿನಂತೆ ಅದೆ. ಕಾವೇರಿಯಿಂದ ಕಾಲ್ವೆಗಳನ್ನು ವೈದಿರುತ್ತಾರೆ. ಅಲ್ಲಿಯೂ ಹಂಪಿಯು ನೆರೆಯಲ್ಲಿಯೂ ಕಬ್ಬು ಮುಂತಾದವುಗಳು ಹೆಚ್ಚು ಬೆಳೆಯುತ್ತವೆ.	

ಉಪಸಂಹಾರ

(೧) ಹಿಂದುಸ್ಥಾನಕ್ಕೆ ಕೋಟೆಯನ್ನು ಯಾರು ಕಟ್ಟಿದ್ದಾರೆ? ಯಾತರಿಂದ ಕಟ್ಟಿದ್ದಾರೆ?

(೨) ಸ್ವಾಭಾವಿಕ ಭಾಗಗಳು ಯಾವವು?

(೩) ಉತ್ತರಹಿಂದುಸ್ಥಾನದಲ್ಲಿ ಭಾಗಗಳೆಷ್ಟು? ಅವು ಯಾವವು?

(೪) ದಕ್ಷಿಣಹಿಂದುಸ್ಥಾನದಲ್ಲಿ ಭಾಗಗಳೆಷ್ಟು? ಅವು ಯಾವವು?

(೫) ಪೂರ್ವಸಮುದ್ರದ ಜನರು ಯಾವ ಉದ್ಯೋಗವನ್ನು ಮಾಡುತ್ತಾರೆ? ಯಾಕೆ?

೩ ರೂಪಾಯಿ! ಆದರೂ ನಮ್ಮ ೨ ರೂಪಾಯಿ ಶಾಯಿ ಕೊಳ್ಳುವವರಿಗೆ ಎರಡೂ ಭಾಗಗಳು ಫುಕಟ!!

ದಿ ಇಂಗ್ಲೀಷ ಮರಾಠಿ ಲೆಟರ ರಾಯ್ಟರ!

ಈಗಿನ ಪರಿಸ್ಥಿತಿಗೆ ಇದು ಸಂಗ್ರಾಹ್ಯಗ್ರಂಥವು. ಕನ್ನಡಿಗರೆಲ್ಲರೂ ಇದನ್ನು ಸಂಗ್ರಹಿಸುವದರಿಂದ ಒಂದೆರಡು ತಿಂಗಳಲ್ಲಿ ಮರಾಠಿಯಲ್ಲಿಯೂ, ಇಂಗ್ಲಿಷದಲ್ಲಿಯೂ ಅನೇಕತರವಾದ ಪತ್ರವ್ಯವಹಾರ, ತಾರ, ವಿಳಾಸ, ಕತಬಿ ಮೊದಲಾದವುಗಳನ್ನೆಲ್ಲ ಬರೆಯಲು ಸಮರ್ಥರಾಗಿ ವ್ಯವಹಾರಜ್ಞರಾಗುವರು. ಕ್ರಯ ೧ ರೂ. ಆದರೂ ನಮ್ಮ ೧ ರೂಪಾಯಿ ಶಾಯಿ ಕೊಳ್ಳುವವರಿಗೆ ಫುಕಟ!!

N. B.:—ಒಮ್ಮೆಲೇ ೩ ರೂಪಾಯಿಯ ಶಾಯಿ ಕೊಳ್ಳುವವರು ಸಂಗ್ರಾಹ್ಯವಾದ ಮೇಲಿನ ೩ ಪುಸ್ತಕಗಳನ್ನು ಪಡೆಯುವರಲ್ಲದೆ "ಭೂಮಿತಿವರೀಲ ಸೋಡವಿಲೆಲೆ ಟೆಪ್ಪಣಿ" ಎಂಬ ಸುಮಾರು ೩೦೦ ಪೃಷ್ಠಗಳಿರುವ ಗವ್ಹರ್ನಮೆಂಟ ಉಪಯುಕ್ತ ಪುಸ್ತಕದ ಬಹುಮಾನ ಹೊಂದುವರು!!!

೪ ರೂ. ಶಾಯಿಗೆ!] ಕನ್ನಡ ಅರೆಬಿಯನ್‌ನಾಯ್ಟ್ಸ! [ಫುಕಟ!!

ವಾಚನೀಯವಾದ ಈ ಸಂಪೂರ್ಣ ಗ್ರಂಥವನ್ನು ಸುವಾಚ್ಯವಾದ ಸುಂದರ ಅಕ್ಷರಗಳಿಂದ ಉತ್ತಮ ಕಾಗದದ ಮೇಲೆ ಪ್ರಿಂಟ ಮಾಡಿಯದೆ. ಇಂದಿನವರೆಗೆ ೬ ರೂ. ಕ್ರಮಕ್ಕೆ ಮಾರಲ್ಪಡುತ್ತಿತ್ತು!! ಈಗ ನಮ್ಮ ೪ ರೂಪಾಯಿ ಶಾಯಿ ಕೊಳ್ಳುವವರಿಗೆ ಫುಕಟ!!!

ನಮ್ಮಲ್ಲಿ "ಗಜಕರ್ಣ" ಆದಿ ಎಲ್ಲ ಚರ್ಮರೋಗಕ್ಕೆ ಅನುಭವಿಕ "ಅವ್ವಾ" ಮಲಮು (ಡಬ್ಬಿಗೆ ೪ ಆ.) ಥಂಡಿ ವಗ್ಗೆರೆ ರೋಗನಾಶಕ "ಗೃಹಸಂಜೀವಿನಿತೈಲ" (ಕುಪ್ಪಿಗೆ ೮ ಆ.) ಉತ್ತಮ "ದಂತರಕ್ಷಕ" (ಡಬ್ಬಿಗೆ ೪ ಆ.), ಶುದ್ಧ "ಹಿಂಗು" (೧೮ ತೊಲೆ ಡಬ್ಬಿಗೆ ೧ರೂ. ೫ಆ.) ಮುಂತಾದವುಂಟು.

ಜಿ. ಎನ್. ತಾರೀಬಾಗಲ; ಮ್ಯಾನೇಜರ.

ಪೋಷ್ಟ ಹೊನ್ನಾವರ, ಜಿಲ್ಲಾ ಕಾನಡಾ.

Registered No. B. 19.

ಹೊಸಪದ್ಧತಿಯ ಭೂಮಿತಿಯು.

ಎ. ಶಾಸ್ತ್ರಗಳಲ್ಲಿ ಗೊತ್ತಾದ ಮೇರೆಗೆ ಭೂಮಿತಿಯು
ಹೊಸಕ್ರಮವನ್ನು ಕಲಿಸಲಿಕ್ಕೆ ಶಾ. ಮಾಸ್ತರರಿಗೂ
ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪ
ಯುಕ್ತವಾದದ್ದು. ಕ್ರಯ–೩ಗ೨ಆ

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮೀಶನ್ ಕೊಡಲಾದೀತು.

ಪಿ. ಎಸ್. ಚಂದಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ. ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆತಂತಾಯಿತು.

ಎಮ್. ಹಿರಿಯಣ್ಣ. ಎಮ್. ಎ. ಎಲ್. ಟಿ. ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣಿತ ಗಣಿತಉಪಪತ್ತಿ, ವಗೈರೆ ಪುಸ್ತಕಗಳೂ ಅವೆ. ಶೋಭೆಯುಳ್ಳ ಮಸಿಗಳ ಬೆಳವಣಿಗೆಯು ತೈಲ. ಹೊಸ ಪುಸ್ತಕಗಳ ಹೊರ್ತಾಗಿ ಕಮೀಶನ್ ರೂ. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್
ಹಮೀದ ಸಾ। ಸೌದಾಗರ

“ಮರಾಠೀ ಶಿಕ್ಷಕ” ಎಂಬ ಪುಸ್ತಕವನ್ನು ಇದೇ
ವರ್ಷದ ಜೂನ ತಿಂಗಳಲ್ಲಿ ಮುದ್ರಿಸಿ, ಗ್ರಾಹ
ಕರಿಗೆ ವ್ಹಿ. ಪಿ. ಯಿಂದ ಕಳಿಸುವೆನು
ಮೇ ಅಖೈರದೊಳಗೆ ಹೆಸರು
ತಿಳಿಸಿದವರಿಗೆ ಬೆಲೆ–೧ಪ್ರತಿಗೆ ೧೦ ಆಣೆ.
ಮುಂದೆ ೧೨ ಆಣೆ. ಟ. ಖ. ಬೇರೆ.

☞ ವ. ಸು. ಬಾಗಲಕಡಕೋಳ, ಪೋ. ಶಿರಹಟ್ಟಿ,
ಜಿ, ಧಾರವಾಡ.

ಶಾಲಾಪತ್ರ.

KANARESE

SCHOOL PAPER.

ಪುಸ್ತಕ ೪೪] ಜೂ ೧೯೦೮ [ಸಂಚಿಕೆ ೬.

ಅನುಕ್ರಮಣಿಕೆ.

ಪುಟ.

೧. ವಿದ್ಯಾಸುಧಾರಣಾ ಸಂಬಂಧಪಟ್ಟ ವೃತ್ತಾಂತಗಳು ೧೨೧-೧೨೪
೨. ಲೋಹಚುಂಬಕ ೧೨೪-೧೨೭
೩. ರಾಜಸ್ಥಾನದ ಇತಿಹಾಸವು. ೧೨೭-೧೩೧
೪. ಎಲವುಗಳು ೧೩೧-೧೩೫
೫. ಪತ್ರವ್ಯವಹಾರವು. ೧೩೫-೧೩೮
೬. ಧಾರವಾಡ ಟ್ರೇನಿಂಗಕಾಲೇಜ ಷಾಣ್ಮಾಸಿಕ... ಪರೀಕ್ಷೆಯ ಪ್ರಶ್ನೆಗಳು ೧೩೮-೧೪೦
೭. ಮಾದರಿಯ ಪಾಠಗಳು ೧೪೧-೧೪೪

CONTENTS.

1. Educational Intelligence and Useful Notes. 121-124
2. Magnet. 124-127
3. The History of Rajasthan. 127-131
4. Bones 131-135
5. Correspondence. 135-138
6. Dharwar Training College Terminal Exmn. 138-140
7. Model Notes 141-144

REGISTERED No. B. 10

DHARWAR:
PRINTED AT THE KARNATIC BOOK DEPOT PRESS,
1908.

ಉಪಯುಕ್ತ ಪುಸ್ತಕಾಲಯ.

ನಮ್ಮಲ್ಲಿ ಶಾಲೋಪಯೋಗಿ ಕನ್ನಡ, ಮರಾಠಿ, ಕ್ರಮಿಕ ವಗೈರೆ ಎಲ್ಲ ಪುಸ್ತಕಗಳೂ; ಮಾದರಿ ಕಿತ್ತಗಳೂ; ೧-೭ನೇ ಇಯತ್ತೆಯ ಹೊಸ ಅರ್ಥಗಳೂ; ಕನ್ನಡ ಗೋಖಲೆ ಗಣಿತದ ಎಲ್ಲ ಭಾಗಗಳೂ; ಹೊಸ ನೇಮದಂತೆ ೭ನೇ ಇಯತ್ತೆಯವರಿಗಾಗಿ ಮುಂಬಯಿ ಕರ್ನಾಟಕ ವರ್ಣನೆಯೂ; ಶಿರಾಳಿಕರ ಇತಿಹಾಸ, ಹೂಲಿಗಣಿತೆ, ಜವಾಬಖಾರ್, ಸುಡಿಗಟ್ಟು, ಹೊಸಕೋಷ್ಟಕ, ಸಿದ್ಧಾಂತ ಭೂಗೋಲ ೧-೨-೩ ನೇ ಭಾಗ, ಕರ್ನಾಟಕ ವರ್ಣನೆ, ಲಘುವ್ಯಾಕರಣ ಮೊದಲಾದವೆಲ್ಲ ಅವೆ. ತುಂಬಾ ಕಮಿಶನ್.

ಪ್ರಕಟ !] ಸಂಗೀತ ನಾಟಕಗಳು.

ಹಿಂದುಸ್ಥಾನದೊಳಗೆಲ್ಲ ಹೆಸರುಗೊಂಡ ನಮ್ಮ ತ್ರೀಕಲರ ನೀಲಿ-ಕಪ್ಪು, ಕೆಂಪು, ಜಾಂಬಳಿ, ಹಸಿರು ಕಲರೂ ಪಾಯಿಯ ಶಾಯಿ ಕೊಳ್ಳುವವರಿಗೆ, ನೂತನವಾಗಿ ರಚಿಸಿದ್ಧ ಮಧಾರಿ ಮನೋಹರವಾದ ಸಂಗೀತ ಶಾರದಾ, ಶಾಕುಂತಲಾ, ಸುಭದ್ರಾ, ಸಾವಿತ್ರಿ, ಸೈರೇಂಧ್ರಿ ಜೋಗಿಭೈರಾಗಿ, ಕಾಮಸೇನರಸಿಕಾ, ವೀರಸೇನಮಂಜರಿ. ವಿಕ್ರಮಶಶಿಕಲಾ, ಮಾಲತಿಮಾಧವ, ಸುಪ್ರಸಿದ್ಧ ೧೨ ಸಂ. ನಾಟಕಗಳೊಳಗಿನ ಪ್ರವೇಶಭಾಗ ೧, ೨, ಈ ೧೨ ಸಂಗೀತ ನಾಟಕಗಳು ಪ್ರಕಟ!! ಅಲ್ಲದೇ (ಮುಕ್ತೇಶ್ವರಕೃತ) "ಶುಕರಂಭಾ ಸಂವಾದ" ಮತ್ತು "ಮೋರೋಪಂತಾಚೀ ವಲೀಂಚೀ ಗಾಣಿ" ಎಂಬೆರಡು ಸಂಗ್ರಾಹ್ಯ ಪುಸ್ತಕಗಳ ಬಹುಮಾನ!!!

ದಿ ಸೆಲ್ಫ ಇಂಗ್ಲೀಷ ಟೀಚರ ಭಾಗ ೧-೨

ಸ್ವಲ್ಪವೂ ಇಂಗ್ಲೀಷ ಓದು ಬರಹ ತಿಳಿಯದವರು ಸಹ ಗುರುಗಳ ಸಹಾಯವಿಲ್ಲದೆ ಈ ಗ್ರಂಥಗಳಿಂದ ಅತ್ಯಲ್ಪಕಾಲದಲಿ ಇಂಗ್ಲೀಷ ಬರೆಯಲಿಕ್ಕೂ, ಓದಲಿಕ್ಕೂ, ಮಾತಾಡ

ಶಾಲಾಪತ್ರಿಕ.

ಪದ್ಯಂ

ಪ್ರಿಯ:ವಿದ್ಯಾಗುರುವರ್ಯರನ್ನತಿಶಯಂ ಸಚ್ಛಿಕ್ಷಣೋತ್ಕರ್ಷದಿಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂ ಚಿತ್ತವನೀಯುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ
ದಯೆಯಿಂದೋಷವತಿದ್ದ ವೇಳ್ವ ಬುಧರೆಲ್ಲಾ ನಾಭಿವೃದ್ಧಿಪ್ರಿಯ:ರೆ॥

ಪುಸ್ತಕ ೪೫.] ಜೂನ ೧೯೦೮. [ಸಂಚಿಕೆ ೬.

EDUCATIONAL INTELLIGENCE AND USEFUL NOTES

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳ ೧೫ನೇ ತಾರೀಖಿನ ದಿವಸ ಹುಬ್ಬಳ್ಳಿ ಮ್ಯುನಸಿಪಾಲಿಟಿಯ ಸ್ಕೂಲಬೋರ್ಡಿನ ಹೊಸ ಅಧಿಕಾರಿಗಳು ತಮ್ಮ ಊರೊಳಗಿನ ಪ್ರಾಥಮಿಕ ದ್ವಿತೀಯಕ ಶಾಲೆಗಳ ಶಿಕ್ಷಕರ ಪರಿಷತ್ತನ್ನು ಕೂಡಿಸಿದ್ದರು ಸ್ಕೂಲಬೋರ್ಡಿನ ಚೇರಮನ್ನರ ಆಮಂತ್ರಣ ಪ್ರಕಾರ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ರಾ. ಬ. ಕರಂದೀಕರ ಸಾ॥ರೂ ಧಾರವಾಡ ಜಿಲ್ಲೆಯ ಎಲ್ಲ ಆಸಿ. ಡಿಪ್ಯುಟಿಯವರೂ ಸಭೆಯನ್ನು ಅಲಂಕರಿಸಿದ್ದರು. ಅಧ್ಯಕ್ಷಸ್ಥಾನವು ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾದ ಮ. ರಾ. ಆಪಟೆ ಶಂಕರರಾಯರಿಗೆ ಕೊಡಲ್ಪಟ್ಟಿತ್ತು. ಸಭೆಗೆ ಊರೊಳಗಿನ ಪ್ರಮುಖ ವಕೀಲರೂ ಶ್ರೀಮಂತರೂ ಯಾವತ್ತು ಶಿಕ್ಷಕ ಶಿಕ್ಷಕಿಯರೂ ಬಂದಿದ್ದರು. ಪ್ರಾರಂಭದಲ್ಲಿ ಮ. ಇನಸ್ಪೆಕ್ಟರ ಸಾಹೇಬರ ಅಪ್ಪಣೆಯ ಪ್ರಕಾರ ಮಿ ಗೋ. ವೆ. ದೇಶಪಾಂಡೆ ಆಕ್ಟಿಂಗ ಅಸಿ. ಡಿ. ಧಾರವಾಡ ಇವರು ಶಿಕ್ಷಣದ ಕೆಲಸದಲ್ಲಿ ಬಹಳ ಸಹಾಯಕಾರಿಗಳಾಗುವ ಹಲವು ಉಪಕರಣಗಳನ್ನು (ಮೂಲಬಣ್ಣಗಳಿಂದ ಮಿಶ್ರ ಬಣ್ಣಗಳನ್ನು ಮಾಡಿ ತೋರಿಸುವ ಬಣ್ಣದ ತಗಡುಗಳನ್ನು, ಒಂದು ಹತ್ತು ನೂರು ಸಾವಿರಗ

ಳ ಮಹತ್ವವು ಬಾಲಕರ ಮನಸಿನಲ್ಲಿ ಬಿಂಬಿಸುವದಕ್ಕೋಸ್ಕರ ರಚಿಸಿದ ಸಂಖ್ಯೆಯ ಪಟವನ್ನೂ, ಅಪೂರ್ಣಾಂಕಗಳ ಯಥಾರ್ಥ ಕಲ್ಪನೆಯನ್ನುಂಟು ಮಾಡುವ ಪಟವನ್ನೂ, ಹತ್ತಿ ಉಣ್ಣೆ ರೇಶಿಮೆ ತೊಗಲು ಮುಂತಾದವುಗಳ ಕಾರಖಾನೆಗಳ ಕ್ರಮವನ್ನೂ ವಿವರಿಸುವ ಪಟಗಳನ್ನೂ) ತೋರಿಸಿ ಅವುಗಳ ಬಗ್ಗೆ ಅವಶ್ಯವಾದ ವಿವರಣೆಯನ್ನು ಮಾಡಿದರು. ತರುವಾಯ ಸ್ಕೂಲಬೋರ್ಡಿನ ಚೇರಮನ್ನರಾದ ಮ. ರಾ. ವಾಳವೇಕರ ಕೃಷ್ಣರಾಯರು ಇಂಗ್ಲಿಶದಲ್ಲಿ ಒಂದು ರಿಪೋರ್ಟನ್ನು ಓದಿದರು. ಅದರ ಭಾವವನ್ನು ರಾ. ಗುತ್ತಲ ಸೀತಾರಾಮಪಂತ ವಕೀಲ ಇವರು ಕನ್ನಡದಲ್ಲಿ ಒಳ್ಳೇ ಸವಿನುಡಿಗಳಿಂದ ವಿವರಿಸಿದರು. ರಿಪೋರ್ಟ ಹಾಗೂ ಭಾಷಣಗಳಿಂದ-"ಇಲ್ಲಿಯ ಶಾಲಾಧ್ಯಾಪಕರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುವದಿಲ್ಲವೆಂತಲೂ ಹೊಸ ಪದ್ಧತಿಗೆ ಶಾಲೆಗಳಲ್ಲಿ ಪ್ರವೇಶವಿಲ್ಲವೆಂತಲೂ ವಿದ್ಯಾರ್ಥಿಗಳ ನೀತಿ ನಡತೆಗಳನ್ನು ತಿದ್ದುವದರ ಕಡೆಗೆ ಶಿಕ್ಷಕರ ಲಕ್ಷವಿಲ್ಲವೆಂತಲೂ" ಧ್ವನಿತವಾಯಿತು. ಆ ಮೇಲೆ ಒಬ್ಬಿಬ್ಬ ಶಿಕ್ಷಕ ಶಿಕ್ಷಕಿಯರು ಬರೆದು ತಂದ ನಿಬಂಧಗಳನ್ನು ಸಭೆಯ ಮುಂದೆ ಓದಿದರು. ಬಳಿಕ ಮ. ಇನಸ್ಪೆಕ್ಟರ ಸಾ. ರು ಸುವಿಚಾರಗಳಿಂದಲೂ ಅನುಭವದಿಂದಲೂ ಯುಕ್ತವಾದ ಅಭಿಪ್ರಾಯವನ್ನು ಕನ್ನಡದಲ್ಲಿ ಸರಸವಾಗಿ ವ್ಯಕ್ತಪಡಿಸಿ ಶಿಕ್ಷಕರಿಗೂ ಸ್ಕೂಲಬೋರ್ಡಿನ ಅಧಿಕಾರಿಗಳಿಗೂ ಪ್ರೇಮದ ಬಳಿಕೆಯು ಹೆಚ್ಚಾಗುವಂತೆಯೂ ಕೆಲಸವು ಸರಸಾಗಿ ಸಾಗುವಂತೆಯೂ ಉಪದೇಶ ಮಾಡಿದರು. ಅವರ ಭಾಷಣದ ಸಾರಾಂಶವೇನಂದರೆ, ೧ ಶಿಕ್ಷಕರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಹೊಸ ಪದ್ಧತಿಗನುಸಾರವಾಗಿ ನಡಿಸಿ, ಚಿಕ್ಕ ಬಾಲಕರ ಶಾರೀರಿಕ ಮಾನಸಿಕ ನೈತಿಕ ಪ್ರವೃತ್ತಿಗಳ ಯೋಗ್ಯ ಬೆಳವಣಿಗೆಯಾಗುವಂತೆ ಸತತೋದ್ಯೋಗವನ್ನು ಮಾಡಲಿಕ್ಕೆ ಬೇಕು

೨. ಸ್ಕೂಲಬೋರ್ಡಿನ ಅಧಿಕಾರಿಗಳು ಈಗಿನ ಕಾಲವನ್ನು ಲಕ್ಷ್ಯಕ್ಕೆ ತಂದು ಬಡಶಿಕ್ಷಕರ ಹೊಟ್ಟೆಬಟ್ಟೆಗಳಿಗೆ ಸಾಲುವಷ್ಟು ಸಂಬಳವನ್ನೂ, ಕಲಿಸಲಿಕ್ಕೆ ಬೇಕಾಗುವ ಉಪಕರಣಗಳನ್ನೂ ತಕ್ಕ ಶಾಲಾಗೃಹಗಳನ್ನೂ ಪೂರಯಿಸಿ

ಕೊಟ್ಟು, ಶಿಕ್ಷಕರನ್ನು ದಯದಿಂದ ನಡಿಸಿಕೊಳ್ಳಬೇಕು.

ಮೇಲಿನ ಉಪದೇಶವು ಉಭಯಪಕ್ಷದವರಿಗೂ ಮಾನ್ಯವಾಯಿತೆಂಬದಿಷ್ಟೇ ಅಲ್ಲ. ಸ್ಕೂಲಬೋರ್ಡ ಅಧಿಕಾರಿಗಳು ಸಾಹೇಬರವರ ಸೂಚನೆಯ ಮೇರೆಗೆ ಹೆಚ್ಚು ಹಣವನ್ನು ಕೊಡಲೊಡಂಬಿಟ್ಟಿರುವರು. ಇನ್ನು ಮೇಲೆ ಕರ್ತವ್ಯಜಾಗರೂಕತೆಯನ್ನು ತೋರಿಸಿ ತಮ್ಮ ಕಲ್ಯಾಣವನ್ನು ಸಾಧಿಸಿಕೊಳ್ಳುವದು ಶಿಕ್ಷಕರ ಕಡೆಗೆ ಉಳಿಯಿತೆಂದು ನಮಗೆ ತೋರುತ್ತದೆ.

ಲೋಕಲ'ಬೋರ್ಡ ಮುನಶಿಪಲ' ಬೋರ್ಡುಗಳಲ್ಲಿ ಕೆಲಸ ಮಾಡುವ ಟ್ರೇಂಡ ರೀಟ್ರೇಂಡ ಶಿಕ್ಷಕರೇ, ಮೇಲಿನ ಸಂಗತಿಯಿಂದ ಯಾವ ಮಾತು ಫಲಿತವಾಗುತ್ತದೆಂಬದನ್ನು ಆಲೋಚಿಸಿರಿ. ಹೊಸಪದ್ಧತಿಯು ಜನರಿಗೆ ಪ್ರಿಯಕರವಾಗುತ್ತ ನಡೆದದೆ. ಅದನ್ನು ಅನುಸರಿಸದಿದ್ದರೆ ಅಧಿಕಾರಿಗಳಷ್ಟೇ ಅಲ್ಲ. ಜನರೂ ನಿಮಗೆ ಅನಾದರ ಮಾಡುವರು. ಆದಕಾರಣ ನೀವು ಆಲಸ್ಯವನ್ನು ತೊರೆಯಿರಿ; ಟ್ರೇನಿಂಗಕಾಲೇಜದಲ್ಲಿದ್ದಾಗ್ಗೆ ಬರೆದುಕೊಂಡ ಇಲ್ಲವೆ ಕೊಂಡುಕೊಂಡ ಪುಸ್ತಕಗಳ ಮೇಲಿನ ಧೂಳವನ್ನೂ ಜಾಡಿಸಿರಿ; ಪುಸ್ತಕದೊಳಗಿನ ತತ್ವಗಳನ್ನು ಪುನಃ ಪುನಃ ಓದಿರಿ; ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ತೋರಿಸಿದ ಮಾದರಿಯ ಪಾಠಗಳನ್ನು ನೆನಪಿಗೆ ತಂದುಕೊಳ್ಳಿರಿ; ನೆರೆಯಲ್ಲಿರುವ ಸಹವ್ಯವಸಾಯಿಗಳೊಡನೆ ಆಲೋಚಿಸಿರಿ. ಸುಮ್ಮನೆ ಹೊತ್ತುಗಳೆದು ನಿಮ್ಮ ಕಾಲಮೇಲೆ ನೀವೇ ಕಲ್ಲು ಹಾಕಿಕೊಳ್ಳಬೇಡಿರಿ. ನಿಮ್ಮ ಕಿವಿಯಲ್ಲಿ ಹೇಳಿದ ನಮ್ಮ ಕಡೆಯ ಈ ಗುರುಮಂತ್ರವನ್ನು ಎಂದೂ ಮರೆಯಬೇಡಿರಿ. ವಿದ್ಯಾಖಾತೆಯ ಅಧಿಕಾರಿಗಳು ನಿಮ ಸಂಬಳಗಳನ್ನು ಹೆಚ್ಚಿಸುವ ವಿಷಯದಲ್ಲಿ ಹಗಲಿರುಳು ಆಲೋಚಿಸುತ್ತಿರುವರು.

ಮಿ. ವಿರೂಪಾಕ್ಷಪ್ಪಾ ಹೂಲಿ ಇವರು ಬರೆದ ಗಣಿತದ ಎರಡೂ ಭಾಗಗಳು ಸದ್ಯಕ್ಕೆ ಪ್ರಚಾರದಲ್ಲಿರುವವಷ್ಟೇ ಈ ಪುಸ್ತಕಗಳಲ್ಲಿ ತರತರದ ಪ್ರಶ್ನಗಳು ವಿಪುಲವಾಗಿರುವವು. ಇವು

ಗಣಿತವಿಷಯಕ ಗ್ರಂಥಗಳ ಸಂಗ್ರಹವನ್ನು ಬೆಳಿಸಿ ಜನರಿಗೆ ಹೆಚ್ಚು ಪ್ರಯೋಜನವನ್ನುಂಟು ಮಾಡಬಹುದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

MAGNET.

ಲೋಹ ಚುಂಬಕ.

೧ ಸಕ್ಕೃತ್‌ಸ್ಪರ್ಶದಿಂದ—ಇಗೋ, ಇದೊಂದು ಉಕ್ಕಿನ ಕಂಬಿಯುಂಟು. ಇದರಲ್ಲಿ ಚುಂಬನಶಕ್ತಿಯನ್ನು ಉಂಟು ಮಾಡುವದದೆ. ಇದನ್ನು ಈ ಮೇಜಿನ ಮೇಲೆ ಹೀಗೆ ಇಡುವೆನು. ಇದು ಎರಡನೇ ಚುಂಬಕ ಕಂಬಿಯುಂಟು. ಈ ಚುಂಬಕ ಕಂಬಿಯ ಉತ್ತರ ಧ್ರುವವನ್ನು ಈ ಮೇಜಿನ ಮೇಲಿಂದ ಉಕ್ಕಿನ ಕಂಬಿಯ ಒಂದು ತುದಿಯ ಮೇಲೆ ಹೀಗೆ ಎಳಯುವೆನು. ಅದು ಆ ಉಕ್ಕಿನ ಕಂಬಿಯನ್ನು ಎಡಗಡೆಯ ಅಂದರೆ ಮತ್ತೊಂದು ತುದಿಯವರೆಗೆ ಬಂದಕೂಡಲೆ ಚುಂಬಕ ಕಂಬಿಯನ್ನು ಎತ್ತಿ ಮತ್ತೆ ಮೊದಲಿನಂತೆ ಉಕ್ಕಿನ ಕಂಬಿಯ ಬಲದುದಿಯ ಕಡೆಗೆ ಒಯ್ದು ಅಲ್ಲಿಂದ ಮತ್ತೆ ಎಡದುದಿಯ ವರೆಗೆ ಎಳೆಯುವೆನು. ಹೀಗೆ ಎಂಟು ಹತ್ತುಸಾರೆ ಉಕ್ಕಿನ ಕಂಬಿಯ ಮೇಲೆ ಚುಂಬಕ ಕಂಬಿಯನ್ನು ಎಳೆಯಲು, ಆ ಉಕ್ಕಿನ ಕಂಬಿಯಲ್ಲಿ ಚುಂಬನ ಶಕ್ತಿಯು ಉಂಟಾಗುವದು ಈ ಮಾತಿನ ಪ್ರತ್ಯಯವನ್ನು ನೀವು ಈ ಉಕ್ಕಿನ ಕಂಬಿಯ ತುದಿಯನ್ನು ಕಬ್ಬಿಣದ ಹೆರಕಲದಲ್ಲಿ ಮುಳಿಗಿಸಿ ಮನಗಾಣಬಹುದು. ಅದರಲ್ಲಿ ಚುಂಬನ ಶಕ್ತಿಯು ಉಂಟಾಗಿದ್ದದರಿಂದಲೇ ಕಬ್ಬಿಣದ ಜಿನಗು ಚೂರುಗಳು ಅದರ ತುದಿಗೆ ಅಂಟಿಕೊಳ್ಳುವವು. ಇದೇ ಮೇರೆಗೆ ಈ ಚುಂಬಕ ಕಂಬಿಯ ಉತ್ತರಧ್ರುವವನ್ನು ಈ ಕೃತ್ರಿಮ ಚುಂಬಕದ ಎಡದುದಿಯ ಬಳಿಗೆ ಒಯ್ಯಲು ಅದು ಹಿಂದೆ ಸರಿಯುವದು. ಬಲದುದಿಯ ಕಡೆಗೆ ಒಯ್ದರೆ ಅಕ

ರ್ಷಿಸುವದು ಇದರಿಂದ ಕೃತ್ರಿಮ ಕಂಬಿಯ ಎಡಗಡೆಯ ತುದಿಯು ಉತ್ತರಧ್ರುವವೆಂತಲೂ ಬಲಗಡೆಯ ತುದಿಯು ದಕ್ಷಿಣಧ್ರುವವೆಂತಲೂ ಗೊತ್ತಾಗುವದಿಲ್ಲವೇ? ಅಂದರೆ ಈ ಉಕ್ಕಿನ ಕಂಬಿಯ ಮೇಲೆ ನಾವು ಚುಂಬಕ ಕಂಬಿಯ ಉತ್ತರಧ್ರುವವನ್ನು ಮೊದಲು ಯಾವ ತುದಿಗೆ ಮುಟ್ಟಿಸುತ್ತಿದ್ದೆವೋ ಅದೇ ಉತ್ತರದಧ್ರುವವೆಂತಲೂ ಎರಡನೆಯದು ದಕ್ಷಿಣಧ್ರುವವೆಂತಲೂ ತಿಳಿಯಬೇಕು. ಸಾರಾಂಶವೇನಂದರೆ ಚುಂಬಕ ಕಂಬಿಯ ಉತ್ತರಧ್ರುವವನ್ನು ಈ ಉಕ್ಕಿನ ಕಂಬಿಯಮೇಲೆ ಒಂದೇ ದಿಕ್ಕಿನಿಂದ ಎಳೆಯಲು ಆ ಉಕ್ಕಿನ ಕಂಬಿಯೊಳಗಿನ ಚುಂಬನದ್ರವವು ಬೇರೆಯಾಗಿ ಅದರ ಎರಡೂ ತುದಿಯಲ್ಲಿ ಜಮೆ ಆದವು. ಆದರೆ ಈ ರೀತಿಯಿಂದ ಕೃತ್ರಿಮ ಚುಂಬಕವನ್ನು ಸಿದ್ಧಮಾಡುವವರು ಉಕ್ಕಿನ ಕಂಬಿಯಮೇಲೆ ಚುಂಬಕ ಕಂಬಿಯನ್ನು ಒಂದೇ ನಿಟ್ಟಿನಿಂದ ಎಳೆಯಬೇಕೆಂಬದನ್ನು ಮರೆಯಲಾಗದು.

ಈ ಕೃತ್ರಿಮ ಚುಂಬಕ ಕಂಬಿಯಲ್ಲಿ ಚುಂಬನ ಶಕ್ತಿಯನ್ನು ವಿಶೇಷವಾಗಿ ಉಂಟುಮಾಡಬೇಕೆಂದು ಬಯಸುತ್ತಿದ್ದರೆ ಚುಂಬಕ ಕಂಬಿಯ ದಕ್ಷಿಣಧ್ರುವವನ್ನು ಮೇಜಿನ ಮೇಲಿನ ಕಂಬಿಯ ಎಡದುದಿಯಲ್ಲಿಟ್ಟು ಬಲಗಡಿಗೆ ಎಳೆಯಬೇಕು. ಬಳಿಕ ಬಲಗಡೆಯ ತುದಿಯ ಮೇಲಿಂದ ಎತ್ತಿ ಮತ್ತೆ ಎಡದುದಿಯಮೇಲಿಟ್ಟು ಮೊದಲಿನಂತೆ ಎಳೆಯುವೆನು. ಹೀಗೆ ಕೆಲಹೊತ್ತು ಕೆಲಸ ನಡಿಸಲು ಆ ಕಂಬಿಯಲ್ಲಿ ಚುಂಬನಶಕ್ತಿಯು ಹೆಚ್ಚು ಬಲಗೊಳ್ಳುವದು. ಇದೇ ಸಕೃತ್ ಸ್ಪರ್ಶದಿಂದ ಕೃತ್ರಿಮ ಚುಂಬಕವನ್ನು ಮಾಡುವ ರೀತಿಯು.

ಪೃಥಕ್‌ಸ್ಪರ್ಶದಿಂದ ಕೃತ್ರಿಮ ಚುಂಬಕವನ್ನು ಮಾಡುವ ರೀತಿಯು.—ಇದಕ್ಕೆ ಡಾಕ್ಟರ ನೈಟ್‌ನ ರೀತಿ ಎಂದು ಅ

ನ್ನುವೆನುಂಟು. ಅದು ಹ್ಯಾಗಂದರೆ— ದ ೫ ಎಂಬದೊಂದು ಉಕ್ಕಿನ ಕಂಬಿಯನ್ನು ಈ ಮೇಜಿನ ಮೇಲೆ ಹೀಗೆ ಇಡು ವೆನು. ಇವೆರಡು ಚುಂಬಕ ಕಂಬಿಗಳು ಉತ್ತರ ದಕ್ಷಿಣ ಧ್ರುವಗಳು ಇಟ್ಟ ಕಂಬಿಯ ಮಧ್ಯದಲ್ಲಿ ಕೂಡುವಂತೆ ಆ ಉಕ್ಕಿನ ಕಂಬಿಯಮೇಲೆ ಇಡುವೆನು. ಬಳಿಕ ಮೇಲಿಟ್ಟ ಎ ರಡೂ ಚುಂಬಕ ಕಂಬಿಗಳನ್ನು ಸಾವಕಾಶವಾಗಿ ಕೆಳಗಿನ ಕಂಬಿಯ ತುದಿ ವರೆಗೆ ಬರುವ ವರೆಗೆ ಎಳೆಯುವೆನು. ಮರ ಳಿ ಚುಂಬಕ ಕಂಬಿಯ ತುದಿಗಳು ಮೂಲಸ್ಥಿತಿಗೆ ಬರುವಂ ತೆ ಇಟ್ಟು ಮತ್ತೆ ಎಳೆಯುವೆನು ಈ ಮೇರೆಗೆ ಕೆಲವು ಸಾರೆ ಎ ಳೆದಾಡಲು ಕೆಳಗಿನ ಕಂಬಿಯಲ್ಲಿ ಚುಂಬನ ಶಕ್ತಿಯು ಉಂ ಟಾಗುವದು. ನಾನು ಐದೇ ಸಾರೆ ಇವುಗಳನ್ನು ಎಳದಾಡಿದೆ ನು. ಅಷ್ಟರಿಂದಲೇ ಕೆಳಗಿನ ಕಂಬಿಯು ಚುಂಬನ ಶಕ್ತಿಯು ಳ್ಳದ್ದಾಯಿತು. ಕೆಳಗಿನ ಕಂಬಿಯ ಅರ್ಧದ ಮೇಲೆ ಚುಂಬ ಕ ಕಂಬಿಯ ಉತ್ತರಧ್ರುವವೂ ಮಿಕ್ಕ ಅರ್ಧದ ಮೇಲೆ ದ ಕ್ಷಿಣಧ್ರುವವೂ ಎಳೆಯಲ್ಪಟ್ಟದ್ದರಿಂದ ಮೊದಲನೇ ತುದಿಯ ಲ್ಲಿ ದಕ್ಷಿಣಧ್ರುವ-ಶಕ್ತಿಯೂ ಎರಡನೇ ತುದಿಯಲ್ಲಿ ಉತ್ತರ ಧ್ರುವ ಶಕ್ತಿಯೂ ಉಂಟಾಯಿತೆಂದು ತಿಳಿಯಬೇಕು.

ದುಹಮೇಲ ಎಂಬುವನ ರೀತಿಯು. ಇದೊಂದು ಲಂಬ ಕಟ್ಟಿಗೆಯ ತುಂಡಿನ ಮೇಲೆ ಈ ಉಕ್ಕಿನ ಕಂಬಿಯನ್ನು ಇ ಡುವೆನು. ಅದರ ತುದಿಯ ಕೆಳಗೆ ಇವೆರಡು ಚುಂಬಕ ಕಂಬಿಗಳ ಉತ್ತರ, ದಕ್ಷಿಣಧ್ರುವಗಳು ಎದುರುಬದರಾಗು ವಂತೆ ಇಡುವೆನು. ಬಳಿಕ ಬೇರೆ ಇವೆರಡು ಚುಂಬಕ ಕಂ ಬಿಗಳನ್ನು ತಕ್ಕೊಂಡು ಅವುಗಳ ಉತ್ತರ, ದಕ್ಷಿಣಧ್ರುವಗ ಳು ಈ ಉಕ್ಕಿನ ಕಂಬಿಯ ನಟ್ಟನಡುವೇ ಆ ಕಂಬಿಗೆ ೩೦° ಕೋನಮಾಡುವಂತೆ ಹಿಡಿಯುವೆನು. ಬಳಿಕ ಇವೆರಡು ಕಂ ಬಿಗಳನ್ನು ಉಕ್ಕಿನ ಕಂಬಿಯ ತುದಿಯ ವರೆಗೆ ಎಳೆಯುವೆ ನು. ಪುನಃ ಎತ್ತಿ ಮೊದಲಿನಂತೆ ಇಟ್ಟು ಮುಂಚಿನಂತೆ ಎಳೆ

ಯುವೆನು. ಹೀಗೆ ಹತ್ತೆಂಟುಸಾರೆ ಎಳೆಯಲು ಆ ಉಕ್ಕಿನ ಕಂಬಿಯಲ್ಲಿ ಚುಂಬಕನ ಶಕ್ತಿಯು ಬರುವದು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

ಮೇಲೆ ಹೇಳಿದಂತೆ ಸಂಗನು ಕಾಳಗದಿಂದ ವಿಮುಖನಾಗಿ ಜಯ ದೊರೆಯದೆ ಚಿತ್ತೋಡ ರಾಜಧಾನಿಯನ್ನು ಪ್ರವೇಶಿಸಲಿಕ್ಕಿಲ್ಲೆಂದು ಶಪಥ ಮಾಡಿ ಮೇವಾಡವ ಗುಡ್ಡವನ್ನು ಸೇರಿದನು. ದೇವರ ದಯೆಯಿಂದ ಅವನು ಇನ್ನೂ ಕೆಲವು ಕಾಲ ಬದುಕಿದ್ದರೆ ಅವನ ಪಂಥವು ಈಡೇರುವ ಸುಸಮಯವು ಪ್ರಾಪ್ತವಾಗಬಹುದಾಗಿತ್ತು. ಆದರೆ ದೇವರು ಅವನ ಹಣೆಯಲ್ಲಿ ಆಯುಷ್ಯಮರ್ಯಾದೆಯನ್ನು ಕೊಂಚ ಕಡಿಮೆಯಾಗಿ ಲೇಖಿಸಿದನೆಂದು ತಿಳಿಯುವದು. ಅವನು ಅದೇ ವರ್ಷ ಮೇವತ ಪ್ರಾಂತದಲ್ಲಿರುವ ಬಸವಾ ಎಂಬಲ್ಲಿ ಮರಣ ಹೊಂದಿದನು. ಇವನು ಮಾಡಿದ ಪಂಥಕ್ಕೆ ಬಹು ಜನ ಸರದಾರರು ಅಸಂತುಷ್ಟರಾಗಿ ಅವನಿಗೆ ವಿಷ ಪ್ರಯೋಗ ಮಾಡಿ ಬಂದರೆಂದು ಜನವಾರ್ತೆಯುಂಟು ಅದು ಹ್ಯಾಗೇ ಇರಲಿ ಅವನು ಸಾಯುವಾಗ ತನ್ನ ಪಂಥವು ಕಡೆಗಾಣಲಿಲ್ಲೆಂದು ಬಹು ವಿಷಾದಗೊಂಡನೆಂಬದಕ್ಕೆ ಸಂದೇಹವಿಲ್ಲ. ಮನಸ್ತಾಪದಲ್ಲಿ ಹೊರಳಾಡುತ್ತಿದ್ದ ಅರಸನ ಅವಸ್ಥೆಯನ್ನು ಕಂಡು ಅವನ ಅಸ್ವಸ್ಥತೆಯ ಇಂಗಿತವನ್ನು ಕುರಿತು ಅವನ ಮಂತ್ರಿಗಳು- ಜೀಯಾ, ತಮ್ಮ ಪಂಥವು ಈಡೇರಲಿಲ್ಲೆಂದು ಖೇದ ಪಡಬೇಡಿರಿ. ನಿನ್ನಡಿಯ ಸೇವಕರಾದ ನಾವು ಅದನ್ನು ಕೊನೆಗಾಣಿಸುವೆವು. ಮನದಳಲನ್ನು ಬಿಟ್ಟು ಸ್ವಸ್ಥಚಿತ್ತದಿಂದ ಪರಮೇಶ್ವರನನ್ನು ಸ್ಮರಿಸುತ್ತ ಶಾಂತಮನಸಿನಿಂದ ಪ್ರಾಣವನ್ನು ಬಿಡಿರೆಂದು ಹೇಳಿದರು. ಮಂತ್ರಿಗಳ ನಂಬಿಗೆಯ ಮಾತುಗಳಿಂದ ಅರಸನ ಚಿತ್ತದ ವ್ಯಗ್ರತೆಯು ಇಲ್ಲದಂತಾಗಿ ಸಮಾಧಾನದಿಂದ ಅವನ ಪ್ರಾಣೋತ್ಕ್ರಮಣವಾಯಿತು.

ಪ್ರಾಚ್ಯ ರಾಷ್ಟ್ರಗಳಲ್ಲಿ ಏಕಪತ್ನೀ ವ್ರತದ ಅಭಾವವು ನಿರ್ಬಾಧವಾಗಿ ನಡೆಯುತ್ತದೆ. ಅರಸನಂತೂ ಅನೇಕ ಜನ

ಪತ್ನಿಯರನ್ನು ಮಾಡಿಕೊಳ್ಳುವನು. ಇದು ಒಂದು ವಿಲಕ್ಷಣಾ ತರವಾದ ಸಂಕಟವೂ ಭಯಂಕರವಾದ ರೋಗವೂ ಸದಾಚರಣಾ ಶರೀರ ರಕ್ಷಣಗಳಿಗೆ ಅತ್ಯಂತ ಘಾತಕವೂ ಆಗಿರುವದು. ಈ ಅನೇಕ ಪತ್ನೀತ್ವದಿಂದ ನಾವು ಉಳಿದ ಮಾತಿನಲ್ಲಿ ಎಷ್ಟೋ ಮುಂದರಿಸಿದ್ದರೂ ಇದೊಂದು ವಿಘಾತಕ ಪದ್ಧತಿಯಿಂದ ಪಾಶ್ಚಾತ್ಯ ದೇಶಗಳನ್ನು ನೋಡಿ ನಾಚಬೇಕಾಗುತ್ತದೆ. ನಮ್ಮಲ್ಲಿ ಆದಿತ್ಯ ಸೋಮ ಮೊದಲಾದ ವಾರ ಸಂಖ್ಯೆಯಂತೆಯೂ ಪ್ರತಿಪದ ದ್ವಿತೀಯಾ ಮುಂತಾದ ತಿಥಿ ಸಂಖ್ಯೆಯಂತೆಯೂ ಹೆಂಡರನ್ನು ಮಾಡಿಕೊಂಡ ಉದಾಹರಣೆಗಳು ಎಷ್ಟೋ ಉಂಟು. ಇದರಿಂದ ಅಂತಃಪುರದಲ್ಲಿ ಬಗೆ ಬಗೆಯ ಪ್ರಾಣಘಾತಕ ಸಂಚುಗಳು ಉದ್ಭವಿಸುವದು ಅರಿದಲ್ಲ. ರಾಣಿಗಳು ತಮ್ಮ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟ ದೊರೆಯಬೇಕೆಂಬ ಇಚ್ಛೆಯಿಂದ ಕೊಲೆಗಡಿಕರಿಂದ, ಅಥವಾ ವಿಷ ಪ್ರಯೋಗದಿಂದ, ಡೊಂಬಿ ಎಬ್ಬಿಸುವದರಿಂದ ತಮ್ಮ ಗಂಡಂದಿರ ಪ್ರಾಣಕ್ಕೆ ಮುನಿಯುವದು ಸ್ವಾಭಾವಿಕವು ಸಂಗರಾಣನು ಸತ್ತ ಕೂಡಲೆ ಅವನ ದ್ವಿತೀಯ ಪತ್ನಿಯು ತನ್ನ ಮಗನಿಗೆ ಚಿತೋಡದ ಅರಸೊತ್ತಿಗೆಯು ದೊರೆಯುವಂತೆ ಮಾಡಿದರೆ ನಿಮಗೆ ರಣಥಂಭೋರ ಮುಂತಾದ ಮಹಾಲುಗಳನ್ನು ಕೊಡುವೆನೆಂತಲೂ ಹಿಂದಿನ ಕಾಳಗದಲ್ಲಿ ನಮ್ಮ ಕೈಯಲ್ಲಿ ಶಿಕ್ಕ ನಿಮ್ಮ ಪತಾಕ ಶಸ್ತ್ರಗಳನ್ನು ನಿಮಗೆ ತಿರಿಗಿ ಕೊಡುವೆನೆಂತಲೂ ಬಾಬರನಿಗೆ ಹೇಳಿ ಕಳಿಸಿದಳು. ಸಂಗನ ಈ ರಾಣಿಯ ಈ ಬಗೆಯ ವರ್ತನವು ಅತ್ಯಂತ ಅಶ್ಲಾಘ್ಯವಾದದ್ದೂ ಅಧಮಾನದ್ದೂ ಎಂಬದರಲ್ಲಿ ಸಂದೇಹವಿಲ್ಲ. ಆದರೂ ಈ ಅಬಲೆಯನ್ನು ದೂಷಿಸುವದಕ್ಕಿಂತ ಇವಳಿಗೆ ಮಂತ್ರಾಲೋಚನೆಯನ್ನು ಹೇಳಿದ ಪ್ರಧಾನನು ಹೆಚ್ಚು ತಿರಸ್ಕಾರಕ್ಕೆ ಪಾತ್ರನೆಂಬದನ್ನು ಮರೆಯಲಾಗದು. ರಾಣಿಯು ಈ ಬಗೆಯಾಗಿ ಸಂಧಾನವನ್ನು ಹಚ್ಚಿದ್ದರೂ ಬಾಬರನು ಈ ಕುಟುಂಬ ಕಲಹದಲ್ಲಿ ಕೈ ಹಾಕುವದಿಲ್ಲೆಂದು ಸ್ಪಷ್ಟವಾಗಿ ಹೇಳಿ ಕಳುಹಿದನು. ಈ ನಿರೋ

ಪದಲ್ಲಿ ಬಾಬರನ ಗೌರವವು ವ್ಯಕ್ತವಾಗುತ್ತಿದ್ದರೂ ಸಂಗನ ವಿಷಯದಲ್ಲಿ ಅವನು ಆದರ ಬುದ್ಧಿಯುಳ್ಳವನಾಗಿದ್ದರೂ ಮೊದಲಿಗೊಮ್ಮೆ ಬಿಸಿಗಂಡವನಾದ್ದರಿಂದ ರಜಪೂತರೊಡನೆ ಹೋರಾಡಲಿಕ್ಕೆ ಅಂಜಿಕೊಂಡನು. ಸಂಗನು ಸ್ವಪರಾಕ್ರಮದಿಂದಲೇ ಬೆಳಕಿಗೆ ಬಂದನೆಂದು ಅವನ ಶತ್ರುವಾದ ಬಾಬರನು ಕೂಡ ತನ್ನ ಆತ್ಮಚರಿತ್ರದಲ್ಲಿ ಬರೆದಿಟ್ಟಿರುವನು. ಸಂಗನನ್ನು ಕೆಣಕುವದೂ ದೆವ್ವಕ್ಕೆ ತೆಕ್ಕೆ ಬೀಳುವದೂ ಒಂದೇ ಎಂದು ಇವನು ಭಾವಿಸುತ್ತಿದ್ದನು. ಅನಿವಾರ್ಯದಿಂದ ಒದಗಿದ ಕಾಳಗದಲ್ಲಿ ದೈವ ವಶದಿಂದ ದೊರೆತ ಜಯದಿಂದ ಸಂತುಷ್ಟನಾಗಿ ಆ ಜಯದ ಸಮಯದಲ್ಲಿ ಪರಾಜಿತನಾದ ಶತ್ರುವಿನಿಂದ ಸಂಪಾದಿಸ ಶಕ್ಯವಾದ ಲಾಭಗಳ ಗೋಜಿಗೆ ಅವನು ಹೋಗಲಿಲ್ಲ. ಯಾಕಂದರೆ ಅವನು ಸಂಗನ ಕಡುಗಲಿತನವನ್ನು ಒಳಿತಾಗಿ ಬಲ್ಲವನಾದ್ದರಿಂದ ಮರಳಿ ತನಗೇ ಜಯ ದೊರಕುವದೆಂಬ ನಂಬಿಗೆಯು ಅವನಲ್ಲಿ ಇದ್ದಿದ್ದಿಲ್ಲ.

ಸಂಗನ ಮೈಕಟ್ಟು ಮಧ್ಯಮತರದ್ದಾಗಿದ್ದರೂ ಅವನು ಕಸುವುಳ್ಳವನಾಗಿದ್ದನು. ಅವನ ಮೈಬಣ್ಣವೂ ವಿಶಾಲವಾದ ನೇತ್ರಗಳೂ ಅವನ ಪೂರ್ವಜರಂತೆ ಇದ್ದವು. ಅವನು ಪೂರ್ವ ವಯಸ್ಸಿನಲ್ಲಿ ತೀರಿದರೂ ಕಾರ್ಯ ಪರಾಕ್ರಮದ ಮೂರ್ತಿಯಂತೆ ಕಂಗೊಳಿಸುವನು. ಪೃಥ್ವೀರಾಜನೊಡನೆ ಹೋರಾಡುವಾಗ ಅವನದೊಂದು ಕಣ್ಣು ಹೋಗಿತ್ತು. ದಿಲ್ಲಿಯ ಬಾದಶಹನಾದ ಲೋದಿಯೊಂದಿಗೆ ಒದಗಿದ ಕಾಳಗದಲ್ಲಿ ಅವನದೊಂದು ಕೈ ಮುರಿದಿತ್ತು. ಬೇರೊಂದು ಯುದ್ಧದಲ್ಲಿ ತೋಫಿನ ಗುಂಡು ಬಡಿದು ಅವನದೊಂದು ಕಾಲು ಅದುವಾಗಿತ್ತು. ಇವನ ಮೈಮೇಲಿನ ಬಗೆಬಗೆಯ ಗಾಯಗಳನ್ನು ಎಣಿಸಿದರೆ ಅವುಗಳ ಎಣಿಕೆಯು ೮೦ಕ್ಕೆ ಮಿಕ್ಕುವದು. ಇವನು ಧೈರ್ಯವಂತನೂ ಯುಕ್ತಿವಂತನೂ ಪರಾಕ್ರಮಿಯೂ ಆಗಿದ್ದರೂ ಕ್ರೂರನಲ್ಲ. ಇವನು ಮಾಳವದ ಬಾದಶಹನನ್ನು ಹಿಡಿದು ತಂದು ರಾಜಧಾನಿಯಲ್ಲಿ ಸೆರೆಯಲ್ಲಿಟ್ಟಿದ್ದನು. ದಿಲ್ಲಿಯ ಬಾದಶಹನೊಡನೆ ಹೋರಾಡಿ ರಣಥಂಭೋರ ನಗರ

ವನ್ನು ಗೆದ್ದುಕೊಂಡನು. ಮೇವಾಡದ ಉತ್ತರ ಅಂಚಿನಲ್ಲಿರುವ ಕಾನವಾ ಎಂಬಲ್ಲಿ ಒಂದು ರಾಜಮಂದಿರವನ್ನು ಕಟ್ಟಿಸಿದ್ದನು. ಒಟ್ಟಿಗೆ ಇವನ ತರುವಾಯ ಇವನಷ್ಟೇ ದೂರದರ್ಶಿಯೂ ನ್ಯಾಯವಂತನೂ ಆದ ರಾಜರು ಚಿತ್ತೂರ ಗದ್ದುಗೆಯನ್ನು ಏರಿದ್ದರೆ ಬಾಬರನ ತರುವಾಯ ಮುಸಲ್ಮಾನರ ರಾಜ್ಯವು ಹಿಂದುಸ್ಥಾನದಲ್ಲಿ ನಾಮಶೇಷವಾಗಬಹುದಾಗಿತ್ತು. ಈ ಕೀರ್ತಿವಂತನಾದ ರಜಪೂತ ರಾಜನ ಶವವನ್ನು ದಹನ ಮಾಡಿದ ಸ್ಥಳದಲ್ಲಿ ಭವ್ಯವಾದದ್ದೊಂದು ಸಮಾಧಿ ಗೃಹವನ್ನು ಕಟ್ಟಿಸಿ ಅಲ್ಲಿ ಇವನ ಚರಿತ್ರವನ್ನು ವರ್ಣಿಸುವ ಶಿಲಾಲೇಖವನ್ನು ಸ್ಥಾಪಿಸಿರುವರು. ಸಂಗನಿಗೆ ಏಳು ಮಂದಿ ಮಕ್ಕಳಿದ್ದರು. ಇವರಲ್ಲಿ ಮೊದಲಿನ ಇಬ್ಬರು ಶೈಶವದಲ್ಲಿಯೇ ಮಡಿದು ಹೋಗಿದ್ದರಿಂದ ಸಂಗನ ತರುವಾಯ ಇವನ ಮೂರನೇ ಮಗನು ಪಟ್ಟದ ಮೇಲೆ ಕುಳಿತನು.

ಸಂಗನ ತರುವಾಯ ಚಿತೋಡದ ಗಾದಿಯನ್ನು ಅಲಂಕರಿಸಿದ ರಾಜಪುತ್ರನ ಹೆಸರು ರತ್ನನೆಂದು ಇರುವದು. ಇವನು ೧೫೮೬ ವಿಕ್ರಮ ಶಕದ ೧೫೮೬ (ಕ್ರಿ. ಶ.) ರಲ್ಲಿ ಪಟ್ಟಕ್ಕೆ ಕುಳಿತನು. ಇವನಾದರೂ ಶೌರ್ಯ ಪರಾಕ್ರಮ ಮುಂತಾದ ಗುಣಗಳಲ್ಲಿ ತಂದೆಯನ್ನು ಮೀರಿದವನೆಂದು ಹೇಳಬಹುದು. ಇವನಾದರೂ ತಂದೆಯಂತೆ ಸಮರ ಭೂಮಿಯನ್ನೇ ರಾಜಧಾನಿಯಾಗಿ ಮಾಡಿಕೊಂಡಿದ್ದನು. ಚಿತೋಡ ಕೋಟೆಯ ಅಗಸಿಯ ಬಾಗಿಲು ಯಾವಾಗಲೂ ತೆರೆದಿರುವಂತೆ ಅಪ್ಪಣೆ ಮಾಡಿದ್ದನು ಚಿತೋಡ ನಗರದ ಮಹಾದ್ವಾರವು ದಿಲ್ಲೀ ಮುಂದೋಡಗಳು ಇರುತ್ತವೆಂದು ಅವನು ಅಭಿಮಾನ ಪೂರ್ವಕವಾಗಿ ಅನ್ನುತ್ತಿದ್ದನು. ಇವನು ಶೂರಸಿದ್ಧಂತೆ ಅಭಿಮಾನಿಯೂ ಸಾಹಸಿಯೂ ಇದ್ದನು. ಆದರೆ ಈ ಗುಣಕ್ಕೆ ಅನುಗುಣವಾದ ಅನುಭವವು ಇವನಲ್ಲಿ ಇದ್ದಿದ್ದಿಲ್ಲ. ಆದ್ದರಿಂದ ತಂದೆಯ ಅತೃಪ್ತ ಇಚ್ಛೆಯನ್ನು ಕೊನೆಗಾಣಿಸಲಿಕ್ಕೂ ಆರ್ಯದೇಶದ ಶತ್ರುಗಳಾದ ಮುಸಲ್ಮಾನರನ್ನು ನಿರ್ಮೂಲ ಮಾಡಲಿಕ್ಕೂ ಅನುವು ದೊರೆಯಲಿಲ್ಲ. ಇವನು ಅಲ್ಪ ಕಾಲದಲ್ಲಿ

ಮತ್ಸರ ಗೋಪ ಜನ್ಯ ದ್ವಂದ್ವ ಯುದ್ಧದಲ್ಲಿ ಶತ್ರುವಿನೊಡನೆ ಮಡಿದು ಹೋದನು. ಅದು ಹ್ಯಾಗಂದರೆ—

(ಸಶೇಷ)

BONES.

ಎಲವುಗಳು.

ಉಚ್ಚಪ್ರತಿಯ ಪ್ರಾಣಿಯ ಶರೀರದಲ್ಲೆಲ್ಲ ಅಸ್ಥಿಪಂಜರವಿದ್ದು ಅದರ ಶರೀರವು ಅದನ್ನೇ ಅವಲಂಬಿಸಿರುತ್ತದೆ. ಜೀವವುಳ್ಳ ಶರೀರದ ಮೇಲೆ ನಾನಾತರದ ವ್ಯಾಪಾರಗಳು ನಡೆದಿರುತ್ತವೆ; ಅವುಗಳಿಂದ ಏನೂ ಧಕ್ಕಿ ಹೊಂದದೆ ಅವುಗಳನ್ನು ಸಹಿಸುವ ಮತ್ತು ಮಣಿಯದೆ ಮುರಿಯದೆ ಮುದುಡಿಕೊಳ್ಳುವ, ಹಿಗ್ಗಿಸುವ ಮತ್ತು ಕಷ್ಟವನ್ನು ತಾಳಿಕೊಳ್ಳುವ ಶಕ್ತಿಯು ಎಲವಿನಲ್ಲಿ ಇರಲಿಕ್ಕೆಬೇಕು. ಇದಕ್ಕೋಸ್ಕರ ಎಲವುಗಳು ಮುಖ್ಯವಾಗಿ ಎರಡು ದ್ರವ್ಯಗಳಿಂದ ಆಗಿರುತ್ತದೆ. ಅವುಗಳಲ್ಲಿ ಒಂದು ಮೃತ್ತಿಕಾವಿಶಿಷ್ಟವಾದ ಪದಾರ್ಥವಿರುತ್ತದೆ. ಅದು ಮುಖ್ಯವಾಗಿ ಸುಣ್ಣದ ಫಾಸ್ಫೇಟಿನಿಂದ ಆಗಿರುವ ಕಾರಣ ಎಲವುಗಳು ಬಿರುಸಾಗಿಯೂ ಘನವುಳ್ಳವಾಗಿಯೂ ಇರುತ್ತವೆ. ಎರಡನೇ ಪದಾರ್ಥವು ಸರೇಸು ಇಲ್ಲವೆ ಜಿಲೆಟಾಯಿನ್‌ನಂತೆ ಪ್ರಾಣಿಜ ಪದಾರ್ಥವಿರುತ್ತದೆ. ಅದರಿಂದ ಎಲವಿನಲ್ಲಿ ಜಿಗಟುತನ ಬಂದಿರುತ್ತದೆ. ಎಲವನ್ನು ಬೆಂಕೆಯಲ್ಲಿ ಸುಟ್ಟರೆ ಅದರೊಳಗಿನ ಜಿಲೆಟಾಯಿನದಂಥ ಪದಾರ್ಥವು ಅರ್ಧಮರ್ಧ ಸುಟ್ಟು ಅದು ಕಪ್ಪಾಗುತ್ತದೆ. ಬೈಲಿನಲ್ಲಿ ಬಹಳ ಹೊತ್ತಿನ ವರೆಗೆ ಎಲವಿಗೆ ಆರಕ್ತೋಷ್ಣತೆಯನ್ನು ಕೊಟ್ಟರೆ ಅದರೊಳಗಿನ ಯಾವತ್ತೂ ಪ್ರಾಣಿಜ ದ್ರವ್ಯವು ಸುಟ್ಟು ಹೋಗಿ ಬಿಳೀ ಮೃತ್ತಿಕಾವಿಶಿಷ್ಟವಾದ ಸುಣ್ಣದ ಫಾಸ್ಫೇಟು ಮಾತ್ರ ಉಳಿಯುತ್ತ

ದೆ. ಇದರ ಆಕಾರವು ಮೊದಲಿನ ಎಲವಿನಂತೆಯೇ ಇರುತ್ತದೆ; ಆದರೆ ಅದರೊಳಗಿನ ಜಿಲೆಟಾಯಿನವು ನಾಶಹೊಂದಿ ದರಿಂದ ಅದು ಲಗು ಒಡೆಯುವಂಥಾದ್ದಾಗಿರುತ್ತದೆ. ಮನುಷ್ಯನ ಹೆಣವು ಸುಟ್ಟಮೇಲೆ ಇಂಥ ಬಿಳೀ ಎಲವುಗಳನ್ನು ಕಾಣಬಹುದು. ಅಲವ್ಮಿಶ್ರಿತ ಕ್ಷಾರದಲ್ಲಿ ಬಹಳ ಹೊತ್ತಿನವರೆಗೆ ಎಲವುಗಳನ್ನು 'ನೆನೆ ಇಟ್ಟರೆ ಅದರೊಳಗಿನ ಮೃತ್ತಿಕಾವಿಶಿಷ್ಟವಾದ ದ್ರವ್ಯವು ವಿದ್ರುತವಾಗುತ್ತದೆ. ಮತ್ತು ಜಿಲೆಟಾಯಿನು ಮೆತ್ತಗಾಗಿಯೂ ಮಣಿಯುವಂಥಾದ್ದಾಗಿಯೂ ಉಳಿದದ್ದು ಕಂಡುಬರುತ್ತದೆ. ಎಲವಿನ ಘಟನೆಯು ಸಾಧಾರಣವಾಗಿ ಕೆಳಗೆ ಬರದ ಪ್ರಕಾರ ಇರುತ್ತದೆ.

ಸೇಂದ್ರಿಯ ದ್ರವ್ಯ, ಮುಖ್ಯವಾಗಿ ಜಿಲೆಟಾಯಿನ	೩೩ ಭಾಗ
ಸುಣ್ಣದ ಫಾಸ್ಫೆಟ	೫೧ ಭಾಗ
ಸುಣ್ಣದ ಕಾರ್ಬೋನೇಟ (ಖಡು)	೧೧ ಭಾಗ
ಬೇರೆ ಖನಿಜ ದ್ರವ್ಯಗಳು	೫ ಭಾಗ
	೧೦೦ ಭಾಗ

ಶರೀರದಲ್ಲಿರುವ ಅಸ್ಥಿಪಂಜರದಿಂದ ಪ್ರಾಣಿಗೆ ಆಗುವ ಉಪಯೋಗಗಳಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಮಾಡಬಹುದು.

(೧) ಎಲವುಗಳು ತಮ್ಮಲ್ಲಿರುವ ಘಟ್ಟತನದಿಂದಲೂ ಶಡವಿನಿಂದಲೂ ಶರೀರವನ್ನು ತೂಗಿ ಹಿಡಿಯುತ್ತವೆ; ಅದರಿಂದ ಶರೀರಕ್ಕೆ ನಿಯಮಿತ ಆಕಾರವು ಪ್ರಾಪ್ತವಾಗಿ ಅವಯವಗಳು ಸೆಟೆದು ನಿಲ್ಲುತ್ತವೆ. (೨) ಸೂಕ್ಷ್ಮ ಹಾಗೂ ಮಹತ್ವದ ಇಂದ್ರಿಯಗಳಿಗೆ ಎಲವುಗಳ ಆಚ್ಛಾದನವಿರುತ್ತದೆ; ಅವು ಆ ಇಂದ್ರಿಯಗಳಿಗೆ ಬಾಹ್ಯ ಕಾರಣಗಳಿಂದ ದಕ್ಕೆ ಆಗಗೊಡುವದಿಲ್ಲ. ಉದಾಹರಣಾರ್ಥ ತಲೆ ಬುರುಡೆ

ಯು ಎಲವುಗಳು ಮಿದುಳನ್ನು ಸಂರಕ್ಷಿಸುತ್ತವೆ. ಎದೆಯ ಎಲವುಗಳು ಹೃದಯವನ್ನು ಇಲ್ಲವೆ ರಕ್ತಾಶಯವನ್ನು ಸಂರಕ್ಷಿಸುತ್ತವೆ. (೩) ಎಲವುಗಳಿದ್ದದರಿಂದ ಸ್ನಾಯುಗಳು ಒಂದಕ್ಕೊಂದು ಕೂಡಿ ಅವುಗಳ ಕಾರ್ಯಗಳು ನಡೆಯುವಂತೆ ಅವುಗಳಿಗೆ ತಕ್ಕ ಸ್ಥಳಗಳು ದೊರೆಯುತ್ತವೆ; ಮತ್ತು ಕೀಲಗಳೂ ಸಂದುಗಳೂ ಎಲವಿನಿಂದಲೇ ಆಗಿರುತ್ತವೆ. ಸ್ನಾಯುಗಳ ಚಲನವಲನಾದಿ ಕಾರ್ಯಗಳು ನಡೆಯುವದಕ್ಕೆ ಸಂದುಗಳು ಬಹಳ ಅವಶ್ಯಕವಾಗಿರುತ್ತವೆ. ಅವಯವಗಳ ಚಲನವಲನೆಗಳು ನಡೆದಿರುವಾಗ್ಯೆ ಎಲವುಗಳ ಯಾವ ಭಾಗದ ಸಂದುಗಳ ಮೇಲೆ ಪರಸ್ಪರ ಘರ್ಷಣ ಕ್ರಿಯೆಯು ನಡೆಯುತ್ತಿರುವದೋ ಆ ಭಾಗದ ಮೇಲೆ ಮೆತ್ತನ್ನ ಹಾಗು ನುಣ್ಣಗಾದ ತೆಳ್ಳನ್ನ ಆಚ್ಛಾದನವಿದ್ದು ಅದು ಯಾವಾಗಲು ಎಣ್ಣೆಯಂಥ ದ್ರವದಲ್ಲಿ ತೊಯ್ದಿರುತ್ತದೆ.

ವಿವಕ್ಷಿತ ಪರಿಮಾಣವುಳ್ಳ ದ್ರವ್ಯಗಳಿಂದಾದ ಘನವಾದ ಕಂಭಕ್ಕಿಂತ ಕೊಳವೆಯ ಆಕಾರದಲ್ಲಿ ಪೊಳ್ಳಾಗಿ ಮಾಡಿದ ಕಂಭವು ಹೆಚ್ಚು ಬಲವುಳ್ಳದ್ದಾಗಿರುತ್ತದೆ. ಈ ನಿಯಮಕ್ಕನುಸರಿಸಿ ಉದ್ದನ್ನ ಎಲವುಗಳು ಪೊಳ್ಳಾದ ಕೊಳವೆಗಳಂತೆ ಇರುತ್ತವೆ. ಮತ್ತು ಭೂಚರ ಪ್ರಾಣಿಗಳ ಎಲವುಗಳ ಟೊಳ್ಳಿನಲ್ಲಿ ಎಣ್ಣೆಯಂಥ ದ್ರವವು ತುಂಬಿರುತ್ತದೆ. ಆದರೆ ಪಕ್ಷಿಗಳಲ್ಲಿ ಈ ಪೊಳ್ಳು ಹವೆಯಿಂದ ತುಂಬಿರುತ್ತದೆ.

ಮನುಷ್ಯರಿಗೆ ಎಲವುಗಳ ಉಪಯೋಗವು—ವಿಲಾಯತಿ ಮತ್ತು ಯುರೋಪಖಂಡದ ಕೂಡ ವ್ಯಾಪಾರವು ನಡೆಯಹತ್ತಿದಂದಿನಿಂದ ವ್ಯಾಪಾರದಲ್ಲಿ ಎಲವು ಒಂದು ಮಹತ್ವದ ಪದಾರ್ಥವಾಗಿರುತ್ತದೆ. ಎಲವುಗಳನ್ನು ನೀರಿನಲ್ಲಿ ಕುದಿಸಿ ಅವುಗಳೊಳಗಿನ ನೆಣವನ್ನು ತೆಗೆಯುತ್ತಾರೆ. ಮತ್ತು ಅದನ್ನು ಸಬಕಾರ ಹಾಗು ಮೇಣಬತ್ತಿಗಳನ್ನು ಮಾ

ಡುವ ಕೆಲಸಕ್ಕೆ ಉಪಯೋಗಿಸುತ್ತಾರೆ. ಆ ಮೇಲೆ ಚಾಕು ಗಳ ಹಿಡಿಕೆಗಳು, ಹಲ್ಲು, ಉಗುರುಗಳನ್ನು ಸ್ವಚ್ಛ ಮಾ ಡುವ (ಬ್ರಶಗಳು) ಕುಂಚಗಳು, ಹಣಿಗೆಗಳು, ಕಾಗದಗ ಳನ್ನು ಕೊಯ್ಯುವ ಚಾಕುಗಳು, ಚಮಚೆಗಳು, ಸಣ್ಣ ಬಿ ರಡಿಗಳು ಮುಂತಾದ ಎಷ್ಟೋ ಸಣ್ಣ ಸಣ್ಣ ಪದಾರ್ಥಗಳ ನ್ನು ಮಾಡುವದಕ್ಕಾಗಿ ದೊಡ್ಡ ಎಲುವುಗಳನ್ನು ಉಪ ಯೋಗಿಸುತ್ತಾರೆ. ಈ ಪದಾರ್ಥಗಳನ್ನು ಮಾಡುತ್ತಿರುವಾ ಗ್ಗೆ ಬಿದ್ದಂಥ ಚೂರುಗಳು ಕೊರೆಯುತ್ತಿರುವಾಗ್ಗೆ ಬಿದ್ದಂಥ ಪುಡಿ ಇವುಗಳನ್ನು ಸರೀಸು ಇಲ್ಲವೆ ಗೊಬ್ಬರವನ್ನು ಮಾ ಡುವದಕ್ಕಾಗಿ ಉಪಯೋಗಿಸುತ್ತಾರೆ. ಕಬ್ಬಿಣ ಪಾತ್ರೆಯಲ್ಲಿ ಎಲುವುಗಳನ್ನು ಹಾಕಿ ಬಾಯಿಯನ್ನು ಗಟ್ಟಿಯಾಗಿ ಮು ಚ್ಚಿ ಅದಕ್ಕೆ ಉಷ್ಣತೆಯನ್ನು ಕೊಟ್ಟರೆ ಎಲುವುಗಳೊಳಗಿನ ಸೇಂದ್ರಿಯ ಪದಾರ್ಥವು ಹೋಗಿ ಅವು ಕರ್‍ರಗಾಗುತ್ತವೆ, ಅ ವುಗಳಿಗೆ ಎಲುವುಗಳ ಇದ್ದಲಿ ಅನ್ನುತ್ತಾರೆ.

ಎಲುವುಗಳು ಗೊಬ್ಬರದಂತೆ ಬಹಳವಾಗಿ ಉಪಯೋ ಗಿಸಲ್ಪಡುತ್ತವೆ. ಎಲುವುಗಳ ಗೊಬ್ಬರ ಮಾಡುವದಕ್ಕಾಗಿ ಈಗ ಎಲ್ಲಕಡೆಗೆ ಇವುಗಳನ್ನು ಕೂಡಹಾಕುವ ಕ್ರಮ ವು ನಡೆದಿರುತ್ತದೆ. ಎಲುವುಗಳ ಪುಡಿ ಸಣ್ಣಾಗಲಿ ಇಲ್ಲವೆ ಉರುಟಾಗಲಿ ಮಾಡಿ ಅದನ್ನು ಭೂಮಿಯ ಮೇಲೆ ಹರವಿ ದರೆ ಇಲ್ಲವೆ ಬೀಜಗಳಲ್ಲಿ ಕೂಡಿಸಿ ಬಿತ್ತಿದರೆ ಭೂಮಿಯು ಕಸುವುಳ್ಳದ್ದಾಗುತ್ತದೆ. ಎಲುವುಗಳ ಮೇಲೆ ಸಲ್ಫ್ಯೂರಿಕ ಆಸಿಡದ ಕಾರ್ಯವನ್ನು ಮಾಡಿದರೆ ಸುಣ್ಣದ ಸುಪರಫಾ ಸ್ಫೇಟವೆಂಬ ಮಹತ್ವವುಳ್ಳ ಹಾಗು ಉಪಯುಕ್ತವಾದ ಗೊ ಬ್ಬರವು ತಯಾರಾಗುತ್ತದೆ.

ಎಲುವುಗಳಲ್ಲಿರುವ ಮೃತ್ತಿಕಾಮಯವಾದ ದ್ರವ್ಯದಲ್ಲಿ ಫಾಸ್ಫರಸ್ ಎಂಬ ಜ್ವಾಲಾಗ್ರಾಹೀ ಪದಾರ್ಥವು ಬಹ್ವಂಶದಿಂದಿರುತ್ತದೆ. ರಸಾಯನ ರೀತಿಯಿಂದ ಈ ಫಾಸ್ಫರಸವನ್ನು ಬೇರೆ ತೆಗೆದು ಅದನ್ನು ದೀಪದ ಕಡ್ಡಿಗಳನ್ನೇ ಮಾಡುವ ಕೆಲಸಕ್ಕೆ ಉಪಯೋಗಿಸುತ್ತಾರೆ. ಸಾಂಪ್ರತ ಎಲುವುಗಳನ್ನು ಕೂಡಹಾಕಿ ಮುಂಬೈಗೆ ಕಳಿಸುತ್ತಾರೆ. ಮತ್ತೂ ಅಲ್ಲಿ ಅದರ ಪುಡಿಮಾಡಿ ಸಾವಿರಾರು ಖಂಡಗಗಟ್ಲೆ ವಿಲಾಯತಿಗೆ ಕಳಿಸುತ್ತಾರೆ.

CORRESPONDENCE.

ಪತ್ರವ್ಯವಹಾರ.

ಗುರುವರ್ಯ ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ದೊರೆಗಳವರ ಸನ್ನಿಧಿಗೆ—

ಸಾ. ನ. ವಿಜ್ಞಾಪನೆಗಳು; ಹಿಂದಕ್ಕೆ ತಮ್ಮ ಪತ್ರಿಕೆಯಲ್ಲಿ ಜೊಂಡಿಂಗ ಹುಳದ ಉತ್ಪತ್ತಿಯ ವಿಷಯವಾಗಿ ಸ್ಥಳವನಿತ್ತಂತೆ, ಈಗಾದರೂ ಕೊಂಚ ಸ್ಥಳವನ್ನಿತ್ತು, ವಿಷಯವನ್ನು ಪೂರ್ಣ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಾನು ಜುಲೈ ತಿಂಗಳ ಶಾಲಾಪತ್ರಿಕೆಯಲ್ಲಿ ಕೊಟ್ಟ ಜೊಂಡಿಂಗ ಹುಳದ ವಿಷಯವಾಗಿ, ಅಗಸ್ಟ ತಿಂಗಳ ಪತ್ರಿಕೆಯಲ್ಲಿ ಹೊಸರಿತ್ತಿಯ ಒಬ್ಬ ತಾರ್ಕಿಕರು “ ಬೆನ್ನು ಬಿರಿದು ಹೊರಡುವದು ಮರಿಯಲ್ಲ, ಜೊಂಡಿಂಗವು ಪರಿ ಬಿಡುತ್ತಿರಬಹುದು,, ಎಂದು ಊಹಿಸಿದ್ದನ್ನು ನೋಡಿ ಸಂತೋಷವಾಯಿತು. ಆದರೆ ಪರಿ ಬಿಡುತ್ತದೆಂಬ ವಿಷಯದಲ್ಲಿ ಒಂದು ಸಂಶಯವು ಬರುತ್ತದೆ. ಏನಂದರೆ —ಹಾವು ಮುಂತಾದ ಕೆಲವು ಪ್ರಾಣಿಗಳು ಪರಿ ಬಿಟ್ಟರೆ, ಆ ಪರಿಯು ಕೇವಲ ತ

ವುಗಳ ಆಕಾರದಂತೆಯೇ ಇರುತ್ತದೆ. ಆದರೆ ನಾವು ನೋಡಿದ ಹುಳಗಳಲ್ಲಿ ಮೊದಲಿನ ಹುಳವು ಗಿಡ್ಡವಾಗಿ ಹೆಚ್ಚು ಗಡುತರವಾಗಿತ್ತೆಂತಲೂ, ಅದಕ್ಕೆ ರೆಕ್ಕೆಗಳಿದ್ದಿಲ್ಲವೆಂತಲೂ (ಈ ಹುಳವು ಹೆಣ್ಣು ಹುಳವಿರಬಹುದೆಂದು ಊಹಿಸಿತ್ತು) ಮುಂದೆ ಅದರಿಂದ ಹೊರಟ ಬಿಳೆ ಹುಳವು ಉದ್ದ ರೆಕ್ಕೆಗಳುಳ್ಳದ್ದಾಗಿ ತೆಳ್ಳಗಿತ್ತೆಂತಲೂ (ಇದು ಗಂಡು ಮರಿ ಇರಬಹುದೆಂದು ಊಹಿಸಿತ್ತು) ಆಗ್ಗೆ ತಿಳಿಸಿದ್ದೇನೆ. ಹೀಗೆ ಪರಿ ಬಿಡುವ ಪೂರ್ವದಲ್ಲಿ ಇದ್ದ ಅದರ ಆಕಾರವು ಪರಿ ಬಿಟ್ಟ ಬಳಿಕ ಭಿನ್ನವಾದ್ದರಿಂದ, ನಾವು ಮುಂತಾದವುಗಳ ಪರಿ ಬಿಡುವಿಕೆಗೆ ಈ ಹುಳದ ಪರಿ ಬಿಡೋಣವು ಹೊಂದುವದಿಲ್ಲ. ಆದರೆ ಆ ತರ್ಕಿಕರು ಜೊಂಡಿಂಗದ ಶಕ್ತಿಗಳೂ ಸಣ್ಣ ಮರಿಗಳೂ ಇರುತ್ತವೆಂದು ಹೇಳುವದರಿಂದ ಅವರ ಊಹೆಯು ನಿಜವಿರಬಹುದೆಂದು ಒಪ್ಪಬೇಕಾಗುತ್ತದೆ. ಆದರೆ ಅವರ ಊಹೆಯೇ ನಿಜವೆಂದು ಒಪ್ಪುವ ಪಕ್ಷದಲ್ಲಿ (೫) ಜೊಂಡಿಂಗಗಳು ಪರಿ ಬಿಡುತ್ತವೆ, ಎಂಬ ಒಂದೇ ಮಾತು ಸಾಲದು. ಅದರ ಜೊತೆಗೆ (೩) ಜೊಂಡಿಂಗಗಳು ಪರಿ ಬಿಟ್ಟು ರೂಪಾಂತರ ಹೊಂದುತ್ತವೆ; ಎಂಬ ಮತ್ತೊಂದು ಮಾತನ್ನು ಜೋಡಿಸಿದರೆ ಮಾತ್ರ ನಮ್ಮ ನಿದರ್ಶನದ ಪ್ರಕಾರ ಅವರ ತರ್ಕವು ನಿಜವಾಗಬಹುದು.

ಕ್ಷಮಾಶೀಲರೇ ಪತ್ರ ವಿಸ್ತಾರಕ್ಕೆ ಕ್ಷಮೆ ಇರಲಿ.

ಮುಂಡರಗಿ
ತಾ॥ ೧೩-೧೧-೦೩೪.

ತಮ್ಮ ಶಿಷ್ಯರಲ್ಲೋರ್ವ
ಯು. ನಿ. ಮರಳೀಹಳ್ಳಿ
ಅ. ಮಾ. ಕನ್ನಡಶಾಲಾ

ರಾವಸಾಹೇಬ ಕನ್ನಡ ಶಾಲಾಪತ್ರಿಕದೆಡಿಟರ ಧಾರವಾಡ ಇವರ ಸನ್ನಿಧಿಗೆ—

ತಮ್ಮ ವಿಧೇಯ ಶಿಷ್ಯನ ಶಿ. ಸಾ. ನ. ವಿ. ವಿಜ್ಞಾಪನೆ;—ತಮ್ಮ ಕರಕಮಲೋದ್ಭವ ಕನ್ನಡ ಶಾಲಾಪತ್ರಕವೆಂಬ ಮಾಸಿಕ ಪುಸ್ತಕವು ಕಾಮಧೇನುವಿನಂತೆ ಕನ್ನಡಿಗರ ಇಷ್ಟಾರ್ಥವನ್ನು ಪೂರೈಸುವದರಿಂದ ನನ್ನ ಕೋರಿಕೆಯಾದರೂ

ಈಡೇರುವದೆಂದು ನೆರೆನಂಬಿ ಬಂದ ಈ ದೀನನನ್ನು ಹಿಂದಕ್ಕೆ ದೂಡದೆ ನಾಲಕ್ಕರು ಪಂಕ್ತಿಗೆ ಇಂಬುಗೊಡುವಿರೆಂದು ಆಶಿಸುತ್ತೇನೆ.

“ ಸುಣ್ಣವ ಕೊಡುವೆನು ಸುರಿಯಲೊ ಮಳೆಯೆ!
ಬಣ್ಣವ ಕೊಡುವೆನು ಬಾರಲೊ ಮಳೆಯೆ,, ॥ಪ॥
(ಎಂಬ ಪದ್ಯದ ಅರ್ಥವು)

ಬಾಲಕರಿಗೆ ಉಪಯುಕ್ತವಾದ ಬಾಲಬೋಧನಿಯು ೧೩ ನೇ ಪಾಠದಲ್ಲಿ ಮಳೆಯು ವಿಷಯುವಾಗಿ ಬರೆದ ಪದದಾರಂಭದಲ್ಲಿ ಮೇಲೆ ಕಾಣಿಸಿರುವ ಪಲ್ಲವಿಯು ಪ್ರಸಿದ್ಧವಾಗಿರುವದಷ್ಟೇ. ಇದರ ಅರ್ಥವನ್ನು ಕೆಲವರು ಭಿನ್ನ ಭಿನ್ನವಾಗಿ ಮಾಡುವದೂ, ಮತ್ತೆ ಕೆಲವರು ಅರ್ಥವಿಲ್ಲದ್ದೆಂದು ಈ ಪಲ್ಲವಿಯನ್ನು ಹಾಕಿದ್ದಕ್ಕೆ ಹಾಸ್ಯ ವಚನಗಳನ್ನಾಡುವದೂ ಬಹಳ ಸಲ ನನ್ನ ಕರ್ಣ ಸಮೀಪದಲ್ಲಿ ಮೆಲ್ಲನೆ ಸುಳಿದಾಡಿ ಹೋಯಿತು. ಆದರೆ ಬಹು ದಿವಸದಿಂದ ಪ್ರಚಾರದಲ್ಲಿದ್ದ ವೃದ್ಧರ ವಚನದ ಬಗ್ಗೆ ಸಂಪೂರ್ಣ ವಿಚಾರವಿಲ್ಲದೆ ಹಲವರು ಹಲವು ಬಗೆಯ ಅಭಿಪ್ರಾಯಪಡುವದೂ, ಬೇರೆ ಕೆಲವರು ಮಾತ್ಸರ್ಯದಿಂದಾಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಅದನ್ನು ಹಾಕಿದ್ದಕ್ಕೇನೇ ಹಾಸ್ಯ ವಚನಗಳನ್ನು ಬಡಬಡಿಸುವದೂ ತಿಳಿದ ಸಭ್ಯರಿಗೆ ಸರಿದೋರದು. ಆ ಬಗೆ ಸಾರಾಸಾರ ವಿಚಾರ ಮಾಡಿ ಅದರ ನಿಜಸ್ವರೂಪವನ್ನು ಬೈಲಿಗೆಳೆಯುವದರಲ್ಲಿಯೇ ಹೆಚ್ಚು ಜಾಣತನವೂ, ಶ್ರೇಯಸ್ಸೂ ಉಂಟೆಂದು ನನ್ನ ಅಲ್ಪ ಮತಿಗೆ ತಿಳಿಯ ಬಂತು. ಆದ್ದರಿಂದ ಈ ಬಗ್ಗೆ ಹಲವರಿಂದೊಂದುಗೂಡಿಸಿದ ನನ್ನ ಅಭಿಪ್ರಾಯ (ಅರ್ಥ)ವನ್ನು ಕೆಳಗೆ ಕೊಟ್ಟಿರುವೆನು ಇದನ್ನು ಸುಜ್ಞರಾದ ತಾವು ಬಹಳ ವಿಚಾರದಿಂದ ಓದಿ ನೋಡಿ, ತಮ್ಮ ಅಭಿಪ್ರಾಯದೊಡನೆ ಸಕಲರ ತಿಳುವಳಿಕೆಯಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಗೊಳಿಸೋಣವಾಗಬೇಕು.

ಅರ್ಥ—ವ್ಯವಹಾರದಲ್ಲಿ “ ಸುವರ್ಣ ಬಂಗಾರ,, “ಬಣ್ಣ ಬಂಗಾರ,, ಎಂದು ಅನ್ನುವ ವಾಡಿಕೆಯುಂಟು. ಸುವರ್ಣಬಂ

ಗಾರವೆಂದರೆ ಕೇವಲ ಬಂಗಾರವು; ಬಣ್ಣಬಂಗಾರವೆಂದರೆ ಮನೋಹರವಾದ ದ್ರವ್ಯಗಳು, ಎಂಬರ್ಥವು. ಇವು ಎಲ್ಲರಿಗೂ ಬಹು ಪ್ರಿಯಕರವಾದುವು ಮಳಿಯು ಜಗಜ್ಜೀವನವೆನಿಸಿರುವದರಿಂದ ಅದರ ಆಗಮನದ ಪ್ರೀತ್ಯರ್ಥ ಇವುಗಳನ್ನು ಕಾಣಿಕೆಯಾಗಿ ಕೊಡುವದು ವಿಹಿತವು ಈ ತತ್ವವನ್ನನುಸರಿಸಿ, ಪೂರ್ವದ ಮಹನೀಯರು ಈ ಪದ್ಯವನ್ನು ರಚಿಸಿದಂತೆ ಕಂಡು ಬರುವದು ಹ್ಯಾಗಂದರೆ:—ಸುವರ್ಣ ಇದರ ತದ್ಭವ "ಸೊನ್ನ,, ವೆಂದಾಗುವದು ಸೊನ್ನ ಹೋಗಿ "ಸುನ್ನ,, ವಾಯಿತು ಆ ಸುನ್ನವು ಬ ಲಕರ ಬಾಯಲ್ಲಿ ಸುಣ್ಣವೆಂದಾಗಿರುವದು ಆದ್ದರಿಂದ ಈ ಪದ್ಯದಲ್ಲಿ ಸುಣ್ಣವೆಂದರೆ 'ಸುವರ್ಣ ಬಂಗಾರವೆಂದೂ,, ಬಣ್ಣವೆಂದರೆ "ಬಣ್ಣಬಂಗಾರವೆಂದೂ,, ತಿಳಿಯುವದು ಹೆಚ್ಚು ಪ್ರಶಸ್ತವು

ಕರಜಗಿ ತಾ॥ ನೆಗಳೂರ ತಾ॥ ೨೯-೩-೦೮ ಇಸ್ವಿ	ತಮ್ಮ ಪ್ರಿಯಶಿಷ್ಯ ಎ ಅ ಮಂಟಗಣಿ ೧ನೇ ಉಪಶಿಕ್ಷಕ ಶಾಲಾ ನೆಗಳೂರ

DHARWAR TRAINING COLLEGE.

Terminal Examination.
1908.

April,

೩ನೆಯ ವರುಷ.

ಕರ್ನಾಟಕ ವ್ಯಾಕರಣ ಮತ್ತು ವಾಕ್ಯರಚನೆ.

ವ್ಯಾಕರಣ.

೧. ನನಗೂ ಕಿಂಚಿತ್ತು ಪುಣ್ಯವು ಬರುವದು, ಕುಡಿವಾಲಂ, ಕೀಳುಬಾಳ್ಕೆಗೋ, ನಮೋಸ್ತುತೇ ಚಂಡೀ, ಮತ್ಪ್ರಾಂತವ ಚಿಂತಾವಿಷದಿಂತೀವುವ. ಮಾತೆಮಕ್ಕಳನೋಡಿದೊಡೆ. ಇವುಗಳಲ್ಲಿ ಶಬ್ದಮಣಿದರ್ಪಣಕ್ಕೆ ವಿರುದ್ಧವಾದ ಪ್ರಯೋಗಗಳೇನು?

೩. ಮೆರೆಗುಂ ಕಾಳಿಮೆಕರಂ, ತಿಳಿನೀರೂಡಿವೆತ್ತ ಕುಲಮುಂ ಕಾಪಂ. ಕುಳಿರ್ವೊರ್ವೀಧರವೇಳ್ಗಂ ಕಡು ದೂರದ ತ್ತಣಿಂ. ಹಿಂಜರಿವುದು. ನೆಸುಜೋಲ್ದುಳ್ದುಡೆಯುಂ. ದಾರ ಕವಲ್ಲನೆಲ್ಲಿದಂ.

ಈ ವಾಕ್ಯಗಳಲ್ಲಿರುವ ವ್ಯಾಕರಣ ವಿಶೇಷಗಳೇನು?

೩. ಆರ್ತೀಕುರಂಗಂ. ಎಲ್ಲರುಮಾಕರ್ಣಾನಂತರೀಚಾಗಿಗಳ್ ಆ ಸತಿಸಜ್ಜನಮಾಳ್ಕೆ. ಊಮನೆಯೊಳ್ಳೂಕೆಗಳೊಯ್ದರ್. ಕಡಲೂನಿನ್ತಂಗೊಳಗಾಗಿರೆ, ಏವಂದರ್. ಸೊಗೆಯಿಸುಗುಮೆಪಲ್ಲಿಲಿವಾಯು. ಮುಯ್ಯೋಳ್ಳೊಳ್ ಕೊಂದಿಕ್ಕಿದಂ.

ಈ ಪ್ರಯೋಗಗಳನ್ನು ದರ್ಪಣಕಾರನು ಯಾವ ಸಂದರ್ಭದಲ್ಲಿ ಉದಹರಿಸಿರುವನು ?

೪ "ಇವರ್ಕೆಲ್ಲಂ ತ್ರಿಪ್ರಯೋಗಮೊಳವು." ಬಹುಳದಿಂ ವ್ಯಂಜನಪರಮಾದಲ್ಲಿಯುಂ ದೀರ್ಘಮಾಯ್ತು.

"ಉಕಾರಾಭಾವಮೆಂಬುದು ಸಲಕ್ಷಣವಾಗಿ ವ್ಯಂಜನಡಕಾರಕ್ಕೀಳ. ಕ ರಾದೇಶವೆಲ್ಲಕ್ಕೆಯುಂ ಬರ್ಪುದು"

"ಬಹುಳದಿಂ ವ್ಯಂಜನ ಪರಮಾದಲ್ಲಿಯುಂ ದೀರ್ಘಮಾಯ್ತು"

"ಪ್ರಯೋಗ ಮುಂಟಾದೊಡಮುಚ್ಚಾರಣಂ ಸುಭಗಮಲ್ತು"

"ಲಕ್ಷಣ ಮುಂಟಾದೊಡಮುಚ್ಚಾರಣಂ ಸುಭಗಮಲ್ತು"

ಮೇಲಿನ ವಾಕ್ಯಾರ್ಥಗಳನ್ನು ಸಂದರ್ಭದೊಡನೆ ವಿವರಿಸಿರಿ.

೫. ಕ್ರಿಯಾಸಮಾಸ. ಗಮಕಸಮಾಸಗಳನ್ನು ಕನ್ನಡದಲ್ಲಿ ಕಲ್ಪಿಸಲು ಕಾರಣವೇನು? ಗಮಕಕ್ಕೆ ಕರ್ಮಧಾರಯದಲ್ಲಿ ಅಂತರ್ಭಾವವನ್ನು ಹೇಳಿದ ಫಲವೇನು?

೬. ಇತರೇತರ ಕ್ರಿಯಾಸಂ ।

ಹತಮಧಾತಾನಾವುದಲ್ಲಿ ಮತ್ತೆ ಬಹುವ್ರೀ ॥

ಹಿತಗುಳ್ಗ ಮಾತ್ರವಿಧಿಸಂ |
ಗತಮಾದಿ ಪದಾಂತ್ಯದಲ್ಲಿ ಚರಮಕ್ಕಿತ್ವಂ ॥
ಜನಿಯಿಸುಗುಂ ಪಚ್ಚ್ವನೆ ಕೆ ।
ಚ್ಚ್ವನೆ ಬೆಚ್ಚ್ವನೆಗಳ ಚಕಾರದೊಳ್ಕತ್ವಂ ಕೆ ॥
ಚ್ಚ್ವನೆಯಾದಿಗೆಚತ್ವಂ ಮೇ ।
ಣನಿತರಮತ್ವಂ ಸುಕಾರಮೆತ್ವಕ್ಕಿತ್ವಂ ॥

ಈ ಸೂತ್ರಾರ್ಥಗಳನ್ನು ಸ್ಫುಟವಾಗಿ ಬರೆದು ಉದಾಹರಣೆ ಕೊಡಿರಿ.

೭ (ಅ) ಕನ್ನಡದಲ್ಲಿ ಅತ್ಯಂತ ಪ್ರಸಿದ್ಧವಾದ ವರ್ಣವೃತ್ತಗಳಾವುವು? ಸಂಸ್ಕೃತದಂತೆ ಭಾಷೆಯಲ್ಲಿ (ಕನ್ನಡದಲ್ಲಿ) ಅಕ್ಷರ ವೃತ್ತಗಳು ಹೆಚ್ಚಾಗಿ ಏಕೆ ಇಲ್ಲ ?

(ಬ) ಕನ್ನಡದ ವೃತ್ತಗಳಲ್ಲಿ ಯತಿ ಭಂಗವು ಪಾದಾಂತದಲ್ಲಿ ಮಾತ್ರವಿರುತ್ತದೆಯೋ ? ಅಥವಾ ಪಾದ ಮಧ್ಯಗಳಲ್ಲಿಯೂ ಉಂಟೆ? ಉದಾಹರಿಸಿರಿ.

ಇವು ಯಾವ ವೃತ್ತದ ಪಾದಗಳು ಅದರ ಲಕ್ಷಣವನ್ನು ಹೇಳಿರಿ :—

" ಕಪಿಸುಗುಮೆನ್ನನಿಂದಕಟ ಮುಳ್ಳುಡಿದುರ್ವಿದ ಗಾಯ
ದಂತೆ ಪ್ರೊಲ್" ।
" ಚಾರುಸುವರ್ಣ ವರ್ಣಪಟನೆಲ್ಲಿದ ನೆಲ್ಲಿದ ನಬ್ಜ ಲೋ
ಚನಂ ॥

ವಾಕ್ಯರಚನೆ (ನಿಬಂಧ)

೮. ಸಸ್ಯ ಪರಿವರ್ತನೆ (ಬೆಳೆಗಳ ಬದಲು ಮಾಡುವಿಕೆ)

ಅಥವಾ

ನೀವು ನೋಡಿದ ಯಾವದಾದರೊಂದು ಜಾತ್ರೆಯ ವರ್ಣನೆ.

ಈ ಯೆರಡರಲ್ಲಿ ಯಾವದ ದರೊಂದು ವಿಷಯವನ್ನು ಕುರಿತು, ಶಬ್ದಸೌಷ್ಠವ ಪದಲಾಲಿತ್ಯ ಮುಂತಾದವುಗಳಿಂದ ಕೂಡಿರುವಂತೆ ಒಂದು ನಿಬಂಧವನ್ನು ಬರೆಯಿರಿ.

೫ನೇ ಇಯತ್ತೆಯು—ವೇಳೆ ೩೦ ಮಿನುಟು.

ವಿಷಯ—೫ನೇ ಪುಸ್ತಕದ ೨೭ ಪಾಠ.

ಪಾಠದ ಉದ್ದೇಶ—ಚನ್ನಾಗಿ ಓದಲಿಕ್ಕೆ ಕಲಿಸುವದು ಮತ್ತು ಯುರೋಪಖಂಡದವರ ಜಲಪರ್ಯಟನದ ಸಾಹಸ, ಮತ್ತು ಅಮೇರಿಕ ಖಂಡದ ಶೋಧ ಇವುಗಳ ವಿಷಯಕ್ಕೆ ಜ್ಞಾನ ಮಾಡಿಕೊಡುವದು.

ಉಪಕರಣ—ಪೃಥ್ವೀನಕಾಶ, ಹಡಗದ ಚಿತ್ರ ಮೊದಲಾದವುಗಳು.

ಭಾಗ.	ವಿಷಯ.	ಕ್ರಮ.
	ಉಪೋದ್ಘಾತ—ಯುರೋಪದ ಜನರು ಎಲ್ಲಕ್ಕೂ ಮೊದಲು ಯಾರು ಎಂದು ಬಂದರೆಂಬದನ್ನು ಕೇಳಿ ವಾಸ್ಕೋಡಗಾಮು ಎಂದು ಉತ್ತರ ಬಂದಬಳಿಕ ಇವನಿಗಿಂತಲು ಪೂರ್ವದಲ್ಲಿ ಕೊಲಂಬಸನೆಂಬ ಸಾಹಸಿಯು ಅಮೇರಿಕಖಂಡವನ್ನು ಗೊತ್ತುಹಚ್ಚಿದನು. ಅವನ ವಿಷಯಕ್ಕೆ ಈಹೊತ್ತಿನ ಪಾಠ ಇರುವದೆಂದು ಹೇಳಿ ವಿಷಯವನ್ನು ಆರಂಭಿಸುವದು.	
೧	ಖಂಡಗಳು.	ಪೃಥ್ವಿಯ ನಕಾಶವನ್ನು ಹಾಕಿ ಸ್ಪೇನ ಅಮೇರಿಕ ಇ

(೧) ಕೋಲಂಬಸನು ಕಡಲಪಯಣ ಮಾಡಿದ್ದು
ಕೋಲಂಬಸನು...... ಹೋಗಿ; ಆಗಿಹೋದನು.
(೨) ಇದರಲ್ಲಿ ಕೋಲಂಬಸನಿಗೆ ಆದ ತೊಂದರೆ
ಕೋಲಂಬಸನು...ಅಂಬಿಗರು...ಅಂಜಹತ್ತಿದರು.
(೩) ಕೋಲಂಬಸನು-ದ್ವೀಪಗಳನ್ನು ಗೊತ್ತುಹಚ್ಚಿದ್ದು.
ಕೋಲಂಬಸನು...ಒಳ್ಳೆದಾಗುವದೆಂದು ಸಾರಿ ಹೇಳಿದನು.
(೪) ಕೋಲಂಬಸನು ಮರಳಿ ಸ್ಪೇನ ದೇಶಕ್ಕೆ ಬಂದದ್ದು
ಬಳಿಕ ಕೋಲಂಬಸನು...ಮುಟ್ಟಿದನು.
(೫) ಕೋಲಂಬಶನಿಗೆ ಆದ ಮರ್ಯಾದೆ.
ಕೋಲಂಬಸನು...ತುಸ್ಸಿಸಿದನು.
(೬) ಅಮೇರಿಕಖಂಡವನ್ನು ಗೊತ್ತು ಹಚ್ಚಿದ್ದು.
ಅವನು...ದಕ್ಷಿಣಅಮೇರಿಕವನ್ನು ಕಂಡುಕೊಂಡನು
ಗುಪ್ತವಿರಾಮ-ಹೋಗಿ; ಹಡಗುಗಳನ್ನೂ

ವುಗಳನ್ನು ತೋರಿಸುವದು.

ಪ್ರತಿ ಒಂದು ಖಂಡವನ್ನು ಒಬ್ಬೊಬ್ಬರಿಂದ ಓದಿಸುವದು ಬರದಿದ್ದರೆ ಸ್ವತಃ ಓದಿ ತೋರಿಸಿ ಅದರಂತೆ ಓದಲಿಕ್ಕೆ ಹೇಳುವದು. ವಿರಾಮಚಿನ್ಹ ಧ್ವನಿಯ ಏರಿಳತ ಶಬ್ದಗಳ ಆಘಾತ ಇವುಗಳ ಕಡಿಗೆ ವಿಶೇಷ ಲಕ್ಷ್ಯ ಕೊಡುವದು. ಮತ್ತು ಶಬ್ದಗಳ ಉಚ್ಚಾರದ ಕಡಿಗೆ ಲಕ್ಷ್ಯ ಕೊಟ್ಟು ತಪ್ಪಿದಲ್ಲಿ ತಿದ್ದುವದು.

ಪ್ರಶ್ನಾರ್ಥಕ ವಾಕ್ಯಗಳಿದ್ದಲ್ಲಿ ಪ್ರಶ್ನೆ ಕೇಳಿದಂತೆ ಓದಲಿಕ್ಕೆ ಹೇಳಿ ಅದರಂತೆ ಓದಿಸುವದು.

ಅರ್ಥದತ್ತ ಕಡಿಗೆ ಚನ್ನಾಗಿ ಲಕ್ಷ್ಯಕೊಟ್ಟು ಅರ್ಥ ವ್ಯತ್ಯಾಸವಾಗದಂತೆ ಓದಿಸುವದು.

ಬಂದ ಹುಡುಗನಿಂದ ಬರದ ಹುಡುಗನಿಗೆ ಅನುಕರಣ ಮಾಡಿಸುವದು.

ಈ ಸ್ಥಳದಲ್ಲಿ ಗುಪ್ತವಿರಾಮಗಳಿದ್ದದರಿಂದ ನಿಲ್ಲಿಸಬೇಕು.

ವ್ಯಕ್ತ ವಿರಾಮ-ನಡಿಸಿ, ಹಿಂದುಸ್ತಾನ, ಮಾಡಿ

ಧ್ವನಿಯ ಬದಲಾವಣೆ-ಯು-ನಾವು ... ಪೀಡಿಸಹತ್ತಿದರು.

ಅಘಾತ—ಕಡಲೇ, ಇಲ್ಲಿಂದಲೇ, ಇನಾಮು ಸವಿಾಪದಲ್ಲಿಯೇ ಪ್ರಖ್ಯಾತನಾವಿಕನು ಇವೇ ಮೊದಲಾದ ಅಘಾತ ಶಬ್ದಗಳು

೩ ಕಠಿಣ ಶಬ್ದಗಳ ಅರ್ಥ.

ಪಡುವಣ=ಪಶ್ಚಿಮ। ಮೂಡಣ=ಪೂರ್ವದಿಕ್ಕು

ಸಂತೈಸಿ=ಸಮಾಧಾನಮಾಡಿ।ಅಭಿಲಾಷೆ=ಇಚ್ಛೆ.

ವ್ಯಾಕರಣ.

೪ ಸುಮಾರು ನಾನೂರುವರ್ಷಗಳ ಹಿಂದೆ ಯುರೋಪಖಂಡದೊಳಗೆ ಕೋಲಂಬಸನೆಂಬವನೊಬ್ಬ ಪ್ರಖ್ಯಾತ ನಾವಿಕನು ಆಗಿಹೋದನು.

ಇಲ್ಲಿ ವ್ಯಕ್ತವಿರಾಮಗಳಿದ್ದದರಿಂದ ನಿಲ್ಲಿಸಿ ಓದಬೇಕು.

ಈ ವಾಕ್ಯದಲ್ಲಿ ಧ್ವನಿಯು ವಿಲಕ್ಷಣಗಳಿದ್ದದರಿಂದ ಧ್ವನಿಯನ್ನು ಬದಲಿಸಿ ಓದುವದು.

ಈ ಶಬ್ದಗಳನ್ನು ವಿಶೇಷ ಒತ್ತಿ ಓದಬೇಕಾದುದರಿಂದ ಈ ಶಬ್ದಗಳನ್ನು ಓದುವಾಗ ಇವಕ್ಕೆ ಅಘಾತ ಕೊಡತಕ್ಕದ್ದು.

ಕಠಿಣ ಶಬ್ದಗಳ ಅರ್ಥವನ್ನು ಕೇಳಿ ಅವುಗಳ ಅರ್ಥ ಬರದಿದ್ದರೆ ಅವುಗಳ ಅರ್ಥವನ್ನು ಬೋರ್ಡಿನ ಮೇಲೆ ಬರೆದು ತಿಳಿಸುವದು ಇಚ್ಛೆಯ ಕಲ್ಪನೆ ಮಾಡಿಕೊಡುವದು

ಈ ವಾಕ್ಯದಲ್ಲಿ ಕರ್ತೃ ಕರ್ಮ ಕ್ರಿಯಾಪದಗಳನ್ನು ಕೇಳಿ ಅವರಿಂದಲೇ ಹೊರಡಿಸುವದು. ಹಾಗು ಗ್ರಂಥದ ಮೇಲಿನ ವ್ಯಾಕರಣ ಮಾಡಿಸುವದು. ಸುಮಾರು (ಅ.) ನಾನೂರು (ಸ.) ವರ್ಷಗಳ (ಕೂ. ನಾ.) ಹಿಂದೆ (ಅ) ಯುರೋಪಖಂಡದೊಳಗೆ (ಅ. ತಿ) ಪ್ರಖ್ಯಾತ (ವಿ) ನಾವಿಕ (ಅನ್ವ)

೪ ನೀತಿಗಳು.

ಕೋಲಂಬಸನು ದೇಶಶೋಧಿಸಿ ಹೆಸರು ಹೊಂದಿದನು. ಇವನು ಧೈರ್ಯದಿಂದ ಜಲಪರ್ಯಟನ ಮಾಡಿದನು. ಇವನು ಎಷ್ಟು ಸಂಕಟ ಬಂದಾಗ್ಯೂ ಧೈರ್ಯತಾಳಿ ಹಿಡದ ಕೆಲಸವನ್ನು ಕೈಗೂಡಿಸಿಕೊಂಡನು. ಈ ಹೊಸ ದೇಶಗಳನ್ನು ಗೊತ್ತು ಹಚ್ಚಿದ್ದರಿಂದ ಅವನಿಗೆ ಮರ್ಯಾದೆ ಬಹಳ ಆಯಿತು.

ಇವುಗಳಿಂದ ಧೈರ್ಯ ತಾಳಬೇಕು ಸಾಹಸ ಮಾಡಬೇಕು. ಹಿಡಿದ ಕೆಲಸವನ್ನು ಕೊನೆಗಾಣಿಸದೆ ಬಿಡಬಾರದು. ಸಂಕಟ ಸಮಯದಲ್ಲಿ ಧೈರ್ಯ ತಾಳಬೇಕು.

ಸಾಹಸ ಮಾಡುವದನ್ನು ಬಿಡಬಾರದು. ಮಾನವಂತನಾಗಿರಬೇಕು. ಇವೇ ಮೊದಲಾದ ನೀತಿಗಳನ್ನು ಗೊತ್ತು ಮಾಡಿಕೊಡುವದು.

ಈ ನೀತಿಗಳು ಅವರಿಗೆ ಗೊತ್ತು ಮಾಡುವದು.

೫ ಉಪಸಂಹಾರ—(೧) ಕೋಲಂಬಸನು ಅಮೇರಿಕಖಂಡವನ್ನು ಗೊತ್ತು ಹಚ್ಚಿದ ಬಗ್ಗೆ ಏನು ಗೊತ್ತು ಅದೆ. (೨) ೧ನೇ ೨ನೇ ೩ನೇ ಪ್ರಯಾಣಗಳಲ್ಲಿ ಕೋಲಂಬಸನು ಯಾವ ಯಾವ ಪ್ರದೇಶಗಳನ್ನು ಗೊತ್ತು ಹಚ್ಚಿದನು? (೩) ವಾಕ್ಯವನ್ನಾಗಲಿ ಖಂಡವನ್ನಾಗಲಿ ಪ್ರತಿಒಬ್ಬ ಹುಡುಗನಿಂದ ಓದಿಸುವದು? (೪) ಇದರಿಂದ ತಿಳಿದ ನೀತಿಗಳೇನು? (೫) ಪ್ರಯಾಣಕ್ಕೆ ತೊಂದರೆಯನ್ನು ಯಾರು ಕೊಟ್ಟರು. (೬) ೧ನೇ ೨ನೇ ೩ನೇ ಪ್ರಯಾಣಗಳನ್ನು ಎಷ್ಟನೆಯ ಇಸವಿಯಲ್ಲಿ ಮಾಡಿದನು.

೧ ರೂಪಾಯಿ! ಆದರೂ ನಮ್ಮ ೨ ರೂಪಾಯಿ ಕಾಯಿ ಕೊಳ್ಳುವವರಿಗೆ ಎರಡೂ ಭಾಗಗಳು ಫುಕಟ!!

ದಿ ಇಂಗ್ಲೀಷ-ಮರಾಠಿ ಲೆಟರ ರಾಯ್ಟರ!

ಈಗಿನ ಪರಿಸ್ಥಿತಿಗೆ ಇದು ಸಂಗ್ರಾಹ್ಯಗ್ರಂಥವು. ಕನ್ನಡಿಗರೆಲ್ಲರೂ ಇದನ್ನು ಸಂಗ್ರಹಿಸುವದರಿಂದ ಒಂದೆರಡು ತಿಂಗಳಲ್ಲಿ ಮರಾಠಿಯಲ್ಲಿಯೂ, ಇಂಗ್ಲಿಷದಲ್ಲಿಯೂ ಅನೇಕತರದ ಪತ್ರವ್ಯವಹಾರ, ತಾರು, ವಿಳಾಸ, ಕತಬಿ ಮೊದಲಾದವುಗಳನ್ನೆಲ್ಲ ಬರೆಯಲು ಸಮರ್ಥರಾಗಿ ವ್ಯವಹಾರಜ್ಞರಾಗುವರು. ಕ್ರಯ ೧ ರೂ. ಆದರೂ ನಮ್ಮ ೧ ರೂಪಾಯಿ ಕಾಯಿ ಕೊಳ್ಳುವವರಿಗೆ ಫುಕಟ!!

N, B:—ಇನ್ನುಮೇಲೆ ೩ ರೂಪಾಯಿಯ ಕಾಯಿ ಕೊಳ್ಳುವವರು ಸಂಗ್ರಾಹ್ಯವಾದ ಮೇಲಿನ ೩ ಪುಸ್ತಕಗಳನ್ನು ಪಡೆಯುವದಲ್ಲದೆ "ಭೂಮಿತಿವರೀಲ ಸೋಡವಿಲೆಲೆ ಪ್ರಶ್ನ" ಎಂಬ ಸುಮಾರು ೩೦೦ ಪೃಷ್ಠಗಳಿರುವ ಗವ್ಹರ್ನಮೆಂಟ ಉಪಯುಕ್ತ ಪುಸ್ತಕದ ಬಹುಮಾನ ಹೊಂದುವರು!!!

೪ ರೂಪಾಯಿಗೆ!]ಕನ್ನಡ ಅರೆಬಿಯನ್ ನಾಯ್ಟ್ಸ! [ಫುಕಟ]!

ವಾಚಕನೀಯವಾದ ಈ ಸಂಪೂರ್ಣ ಗ್ರಂಥವನ್ನು ಸುವಾಚ್ಯವಾದ ಸುಂದರ ಅಕ್ಷರಗಳಿಂದ ಉತ್ತಮ ಕಾಗದದ ಮೇಲೆ ಪ್ರಿಂಟ ಮಾಡಿಯದೆ. ಇಂದಿನವರೆಗೆ ೩ ರೂ. ಕ್ರಯಕ್ಕೆ ಮಾರಲ್ಪಡುತ್ತಿತ್ತು!! ಈಗ ನಮ್ಮ ೪ ರೂಪಾಯಿ ಕಾಯಿ ಕೊಳ್ಳುವವರಿಗೆ ಫುಕಟ!!!

ನಮ್ಮಲ್ಲಿ "ಗಜಕರ್ಣ" ಆದಿ ಎಲ್ಲ ಚರ್ಮರೋಗಕ್ಕೆ ಅನುಭವಿಕ "ಆವ್ಹಾ" ಮಲಮು (ಡಬ್ಬಿಗೆ ೪ಆ.) ಥಂಡಿ ವಗೈರೆ ರೋಗನಾಶಕ "ಗೃಹಸಂಜೀವಿನಿತೈಲ" (ಕುಪ್ಪಿಗೆ ೮ ಆ.) ಉತ್ತಮ "ದಂತರಕ್ಷಕ" (ಡಬ್ಬಿಗೆ ೪ ಆ.), ಶುದ್ಧ "ಹಿಂಗು" (೧ ಕತೊಲೆ ಡಬ್ಬಿಗೆ ೧ರೂ. ೪ಆ.) ಮುಂತಾದವುಂಟು.

ಜಿ. ಎನ್. ಕಾರೀಬಾಗಲ; ಮ್ಯಾನೇಜರ.

REGISTERED No. B. 19.

ಹೊಸಪದ್ಧತಿಯ ಭೂಮಿತಿಯು.

ಎ. ಕಾನ್ಸರಸ್ಸದಲ್ಲಿ ಗೊತ್ತಾದ ಮೇರೆಗೆ ಭೂಮಿತಿಯ ಹೊಸಕ್ರಮವನ್ನು ಕಲಿಸಲಿಕ್ಕೆ ಶಾ. ಮಾಸ್ತರರಿಗೂ ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೂ ಬಹು ಉಪಯುಕ್ತವಾದದ್ದು. ಕ್ರಯ-೬೧೨ಆ.

೧೦ ಅಥವಾ ೧೦ಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಶೇ. ೧೦ ರಂತೆ ಕಮೀಶನ್ ಕೊಡಲಾದೀತು.

ಪಿ. ಎಸ್. ಚಂಡಾವರಕರ, ಬಿ. ಎ. ಹಾಯಸ್ಕೂಲ ಧಾರವಾಡ. ಕನ್ನಡ ಪುಸ್ತಕಗಳು ಇಷ್ಟು ಸೂಕ್ಷ್ಮವಾಗಿ ಸರಿಯಾಗಿಯೂ ಶುದ್ಧವಾಗಿಯೂ ಇರುವದು ಅಪರೂಪ. ಈಗ ನನಗೆ ಭೂಮಿತಿಯನ್ನು ಕಲಿಸುವಲ್ಲಿ ಮೇಲಿಂದ ಮೇಲೆ ನೋಡಿಕೊಳ್ಳಲಿಕ್ಕೆ ಬಹು ಉಪಯುಕ್ತವಾದ ಕನ್ನಡ ಪುಸ್ತಕ ಒಂದು ದೊರೆದಂತಾಯಿತು

ಎಮ್. ಹಿರಿಯಣ್ಣ. ಎಮ್. ಎ. ಎಲ. ಟಿ. ಹೆ. ಮಾ.
ನಾ. ಸ್ಕೂ. ಮೈಸೂರ.

ಸೌದಾಗರ ಬುಕ್‌ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣಿತ ಗಣಿತಉಪಪತ್ತಿ ವಗೈರೆ ಪುಸ್ತಕಗಳೂ ಇವೆ. ಕೋಳಿಯುಳ್ಳ ಮಸಿಗಳ ಬೆಳವಣಿಗೆಯ ತೈಲ. ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್
ಹಮೀದ ಸಾ॥ ಸೌದಾಗರ

"ಮರಾಠೀ ಶಿಕ್ಷಕ" ಎಂಬ ಪುಸ್ತಕವನ್ನು ಇದೇ ವರ್ಷದ ಜೂನ ತಿಂಗಳಲ್ಲಿ ಮುದ್ರಿಸಿ, ಗ್ರಾಹಕರಿಗೆ ವ್ಹಿ. ಪಿ. ಯಿಂದ ಕಳಿಸುವೆನು ಜೂನ ಅಖೈರದೊಳಗೆ ಹೆಸರು ತಿಳಿಸುವವರಿಗೆ ಬೆಲೆ-೧ಪ್ರತಿಗೆ ೧೦ ಆಣೆ. ಮುಂದೆ ೧೨ ಆಣೆ. ಟ. ಖ. ಬೇರೆ.

☞ ನ. ಸು. ಬಾಗಲ ಕೊಡಕೋಳ, ಪೋ. ಶಿರಹಟ್ಟಿ,
ಜಿ. ಧಾರವಾಡ.

ಕನ್ನಡ ಶಾಲಾಪತ್ರ.

KANARESE
SCHOOL PAPER.

ಪುಸ್ತಕ ೪೮] ಜುಲೈ ೧೯೦೮. [ಸಂಚಿಕೆ ೭

ಅನುಕ್ರಮಣಿಕೆ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೧೪೫-೧೪೬

೨. ಹೆಣ್ಣುಮಕ್ಕಳ ಟ್ರೇ. ಕಾ. ಪ್ರವೇಶನಸಮಾರಂಭವು ೧೪೬-೧೫೪

೩. ರಾ. ಬ. ಶ್ರೀನಿವಾಸರಾವ ರೊದ್ದ ಪೇನಶನರ ಇವರ ಸಂಕ್ಷಿಪ್ತ ಚರಿತ್ರವು. ೧೫೪-೧೬೪

೪. ಭೂಗೋಲ. ೧೬೫-೧೬೬

೫. ನೋಟೀಸಗಳು ೧೬೬-೧೬೮

CONTENTS.

1. Educational Intelligence and Useful Notes. 145-146
2. Entrance Ceremony of the Female Training College. ...146-154
3. The Life of R. B. S. K. Rodda. ...154-164
4. Geography. 165-166
5. Departmental Notices. 166-168

REGISTERED No. B. 10

DHARWAR:

PRINTED AT THE KARNATIC BOOK DEPOT PRESS

1908.

ಉಪಯುಕ್ತ ಪುಸ್ತಕಾಲಯ.

ನಮ್ಮಲ್ಲಿ ಶಾಲೋಪಯೋಗಿ ಕನ್ನಡ, ಮರಾಠಿ ಕ್ರಮಿಕ ಪಗ್ಗೆಲೆ ಎಲ್ಲ ಪುಸ್ತಕಗಳೂ; ಮಾದರೀ ಚಿತ್ರಗಳೂ; ೧-೭ ನೇ ಇಯತ್ತೆಯ ಹೊಸ ಅರ್ಥಗಳೂ; ಕನ್ನಡ ಗೋಳಿ ಗಣಿತದ ಎಲ್ಲ ಭಾಗಗಳೂ; ಹೊಸ ನಮುನೆಯಂತೆ ೩ ನೇ ಇಯತ್ತೆಯವರಿಗಾಗಿ ಮುಂಬಯಿ ಕರ್ನಾಟಕ ವರ್ಣನೆಯೂ; ಶಿರಾಳಕರ ಇತಿಹಾಸ, ಕ್ಯಾಲಿಗಣಿತ, ಜಮಾಖರ್ಚು, ನುಡಿಗಟ್ಟು, ಹೊಸ ಕೋಷ್ಟಕ, ಸಿದ್ಧಾಂತ ಭೂಗೋಲ ೧-೨-೩ ನೇ ಭಾಗ, ಕರ್ನಾಟಕ ವರ್ಣನೆ, ಲಘುವ್ಯಾಕರಣ ಮೊದಲಾದವೆಲ್ಲ ಅವೆ. ತುಂಬ ಕಮಿಶನ.

ಹಿಂದುಸ್ಥಾನದೊಳಗೆಲ್ಲ ಹೆಸರುಗೊಂಡ ನಮ್ಮ ೩ ಪೈ ದರದ ಶೀಲಿ-ಕಪ್ಪು, ಕೆಂಪು, ಜಾಂಬಳಿ, ಹಸರು ೧ ರೂಪಾಯಿಯ ಶಾಯೀ ಕೊಳ್ಳುವವರಿಗೆ ನೂತನವಾಗಿ ರಚಿಸಿದ್ದ ಮರಾಠಿ ಮನೋಹರವಾದ ಸಂಗೀತ ಶಾರದಾ, ಶಾಕುಂತಲಾ, ಸುಭದ್ರಾ, ಸಾವಿತ್ರಿ, ಸೈರೇಂಧ್ರಿ, ಡೋಂಗಭ್ಯೆರಾಗಿ, ಕಾಮಸೇನರಸಿಕಾ, ವೀರಸೇನ ಮಂಜರಿ, ವಿಕ್ರಮಶಶಿಕಲಾ, ಮಾಲತೀಮಾಧವ ಸುಪ್ರಸಿದ್ಧ ೧೨ ಸಂ ನಾಟಕಗಳೊಳಗಿನ ಪ್ರವೇಶಭಾಗ ೧, ೨, ಈ ೧೨ ಸಂಗೀತ ನಾಟಕಗಳು ಪ್ರಕಟ!! ಅಲ್ಲದೇ (ಮುಕ್ತೇಶ್ವರಕೃತ) "ಶುಕರಂಭಾ ಸಂವಾದ" ಮತ್ತು "ಮೋರೋಪಂತಾಚೀ ವರ್ಲೀಚಿಗಾಣೇ" ಎಂಬೆರಡು ಸಂಗ್ರಾಹ್ಯ ಪುಸ್ತಕಗಳ ಬಹುಮಾನ!!!

ದಿ ಸೆಲ್ಫ ಇಂಗ್ಲೀಷ ಟೀಚರ ಭಾಗ ೧-೨.

ಸ್ವಲ್ಪವೂ ಇಂಗ್ಲೀಷ ಓದು ಬರಹ ತಿಳಿಯದವರು ಸಹ ಗುರುಗಳ ಸಹಾಯವಿಲ್ಲದೆ ಈ ಗ್ರಂಥಗಳಿಂದ ಅತ್ಯಲ್ಪಕಾಲದಲ್ಲಿ ಇಂಗ್ಲೀಷ ಬರೆಯಲಿಕ್ಕೂ, ಓದಲಿಕ್ಕೂ, ಮಾತಾಡಲಿಕ್ಕೂ ಸುಲಭವಾಗಿ ಕಲಿಯುವರು. ಪ್ರತಿಭಾಗದ ಕ್ರಯ ೧॥ ರೂಪಾಯಿ! ಆದರೂ ನಮ್ಮ ೨ ರೂಪಾಯಿ ಶಾಯೀ ಕೊಳ್ಳುವವರಿಗೆ ಎರಡೂ ಭಾಗಗಳನ್ನು

ದಿ ಇಂಗ್ಲೀಷ ಮಾರ್ಕಂಟೈಲ ಲೆಟರ ರೈಟರು

ಈಗಿನ ಪರಿಸ್ಥಿತಿಗೆ ಇದು ಸಂಗ್ರಾಹ್ಯಗ್ರಂಥವು. ಕನ್ನಡಿಗರೆಲ್ಲ
ಇದನ್ನು ಸಂಗ್ರಹಿಸುವದರಿಂದ ಒಂದೆರಡು ತಿಂಗಳಲ್ಲಿ ಮರಾ
ಠಿಯಲ್ಲಿಯಂತೆ, ಇಂಗ್ಲಿಷಿನಲ್ಲಿಯೂ ಅನೇಕತರವಾದ ಪತ್ರವ್ಯವ
ಹಾರ, ತಾರ, ವಿಳಾಸ, ಕತಬಿ ಮೊದಲಾದವುಗಳನ್ನೆಲ್ಲ ಬರೆಯಲು
ಸಮರ್ಥರಾಗಿ ವ್ಯವಹಾರದಕ್ಷರಾಗುವರು. ಕ್ರಯ ೧ ರೂ. ಆ
ನಮ್ಮ ೧ ರೂಪಾಯಿ ಕಾಯಮ ಕೊಡುವವರಿಗೆ ಪುಕಟ!!

N. B.—ಒಮ್ಮೆಲೇ ೩ ರೂಪಾಯಿಯು ಕಾಯಮ ಕೊಡುವವ
ಸಂಗ್ರಾಹ್ಯವಾದ ಮೇಲಿನ ೩ ಪುಸ್ತಕಗಳನ್ನು ಪಡೆಯುವರ
ತೆ "ಭಿಷಿನ್ವಿತಿವರ್ಗೀಲ ಸಂದೇಶವಿಲಿಲೆ ಟಿಪ್ಪಣಿ" ಎಂಬ ಸುಮಾರು
೦ ಪೃಷ್ಠಗಳಿರುವ ಗವ್ಹರ್ನಮೆಂಟಿನ ಉಪಯುಕ್ತ ಪುಸ್ತಕದ ಬ
ಮಾನ ಹೊಂದುವರು!!!

ರೂ. ಕಾಯಂ!] ಕನ್ನಡ ಅರೇಬಿಯನ್ ನಾಯ್ಟ್ಸ! [ಪುಕಟ!!
ವಾಚನೀಯವಾದ ಈ ಸಂಪೂರ್ಣ ಗ್ರಂಥವನ್ನು ಸುವಾಚ್ಯ
ದ ಸುಂದರ ಅಕ್ಷರಗಳಿಂದ ಉತ್ತಮ ಕಾಗದದ ಮೇಲೆ ಪ್ರಿಂಟ
ಮಾಡಿಸಿದೆ. ಇಂದಿನವರೆಗೆ ೬ ರೂ. ಕ್ರಯಕ್ಕೆ ಮಾರಲ್ಪಡುತ್ತಿ
ತು!! ಈಗ ನಮ್ಮ ೪ ರೂಪಾಯಿ ಕಾಯಮ ಕೊಡುವವರಿಗೆ ಪು

ನಮ್ಮಲ್ಲಿ "ಗಜಕರ್ಣ" ಆದಿ ಎಲ್ಲ ಚರ್ಮರೋಗಕ್ಕೆ ಅನುಭ
ಕ "ಅಮೃತ ಮಲಮು" (ಡಬ್ಬಿಗೆ ೪ ಆ.) ದಂಡಿ ವಗೈರೆ ರೋ
ನಾಶಕ "ಗೃಹಸಂಜೀವಿನಿತೈಲ" (ಕುಪ್ಪಿಗೆ ೮ ಆ.) ಉತ್ತಮ
ದಂತರಕ್ಷಕ" (ಡಬ್ಬಿಗೆ ೪ ಆ.), ಶುದ್ಧ "ಹಿಂಗು" (೧೪ ತೊಲಿ
ಬ್ಬಿಗೆ ೧ ರೂ. ೫ ಆ.) ಮುಂತಾದವುಂಟು.

ಜಿ. ಎನ್. ಕಾರೇಬಾಗಲ; ಮ್ಯಾನೇಜರ್.
ಪೋಷ್ಟ ಹೊನ್ನಾವರ, ಜಿಲ್ಲಾ ಕಾನಡಾ.

ದಿ ಶಿವಲಿಂಗರ ಬುಕ್ ಡಿಪೋ.

REGISTERED No. B. 29.

ನಮ್ಮಲ್ಲಿ ಹೊಸತು ಶಾಲಾ ಪುಸ್ತಕಗಳಿಗೆ ದ ಉತ್ತಮ ಮುಖಪುಡಿ ಸ್ಟೇಶನರಿ ಸಾಮಾನಗಳಿಗೆ ವೆ ವಾಚ್, ಛತ್ರಿಯವರ ವಗೈರೆ ಹೊಸತು ಸಾಮಾನಗಳಿಗೆ ರೀತಿ ಪ್ರಕಾರ ಯೋಗ್ಯ ಕಮಿಶನ್ ಸಿಗುತ್ತದೆ, ತರಿಸಿ ಪರೀಕ್ಷಿಸಿರಿ. ಮತ್ತು ಡ್ರಾಯಿಂಗ ಪುಸ್ತಕಗಳೂ ವ ಸಾಮಾನವೂ ಗೋಲಿ ಬಳ್ಳಿ, ಹೂಲಿ ಗಣಿತಗಳೂ ಸಿಗುತ್ತವೆ.

ವ್ಯಾಪಾರಸ್ಥರಿಗೆ—ಖಾತೆ ಕೀರ್ದಿ ವಹಿಗಳು ಸಹ ಇವೆ

ಧಾರವಾಡ. } ಮಹಮ್ಮದ ಅಬ್ದುಲ ಹಮೀದ ಶಾ ಸೌದಾಗರ

ಹೊಸದಾಗಿ ಸುಧಾರಿಸಲ್ಪಟ್ಟ ದಿವ್ಯಶಾಯಿ

ಕೆಟ್ಟದಾದರೆ ಹಣವು ತಿರಿಗಿ ಸಿಗುವದು.

೩—೧೦ ಕ್ಕೆ ರೋಸಕೋಪ ಸ್ಟೀಮವಾಚು, ೫೦೦ ದಿವ್ಯಶಾಯಿ ಬೀಟುಗಳು ಸರಪಳಿ ಹೋಕಾಯಂತ್ರ ಸ್ಪ್ರಿಂಗ ಕನ್ನಡಿ ಪೆಟ್ಟಿಗೆ ಸಹ ಟಪಾಲ ಮಾಫ.

೨—೧೦ ಕ್ಕೆ Pocket "ಬಿ" ಟೈಂಪೀಸು ೪೦೦ ದಿವ್ಯಶಾಯಿ ಬೀಟಗಳು, ಟಪಾಲ ಮಾಫಿ.

೧—೧ಕ್ಕೆ ೧೦೦ ಶಾಯಿ ಬೀಟುಗಳು, ೧೦೦ ಕಾರ್ಡುಗಳು ೧ ಸೂಕ್ಷ್ಮ ದರ್ಶಕ ಯಂತ್ರವು ಹೋಕಾಯಂತ್ರವು ೧ ಲೋಹ ಚುಂಬಕವು ಟಪಾಲ ಮಾಫಿ

☞ ರಘುನಾಥ ಜೀವಾಜಿ ಕುಲಕರ್ಣಿ ಪೊ. ಹಿಪ್ಪರಗಿ

ವಿಜಾಪೂರ.

ಕನ್ನಡ ಶಾಲಾಪತ್ರ

KANARESE
SCHOOL PAPER.

ಪುಸ್ತಕ ೪೪] ಆಗಸ್ಟ ೧೯೦೮. [ಸಂಚಿಕೆ ೮

ಅನುಕ್ರಮಣಿಕೆ ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೧೬೯-೧೭೩
೨. ರಾಜಸ್ಥಾನದ ಇತಿಹಾಸವು. ೧೭೪-೧೭೯
೩. ಶಾಸ್ತ್ರೀಯ ಜ್ಞಾನವು ೧೭೯-೧೮೩
೪. ಹೊಸಕವಿತೆ. ೧೮೩-೧೮೭
೫. ನೋಟೀಸುಗಳು. ೧೮೭-೧೯೨

CONTENTS.

1. Educational Intelligence and Useful Notes169-173
2. The History of Rajasthan 174-179
3. Science. 179-183
4. New Poetry 183-187
5. Departmental Notices. 187-192

DHARWAR:
PRINTED AT THE KARNATIC BOOK DEPOT PRESS.
1908.

REGISTERED No. B. 19

ಶಾಲಾಪತ್ರಿಕೆ.

ಪದ್ಯಂ

ಪ್ರಿಯ:ವಿದ್ಯಾಗುರುವರ್ಯರುನ್ನತಿಕೆಯಿಂ ಸಚ್ಛಿಕ್ಷಣೋತ್ಕರ್ಷದಿಂ.
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಮಂ ಮುದ್ರಿಸಿ ॥
ನಯದಿಂ ಶಿಕ್ಷಕವೃಂದವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ
ದಯೆಯಿಂದೊಪ್ಪಿಸಿದ್ದ ವೇಳ್ವುದು ಬುಧರಿಜ್ಞಾನಾಭಿವೃದ್ಧಿಪ್ರಿಯ:॥೧

ಪುಸ್ತಕ ೪೫.] ಅಗಸ್ಟ-೧೯೦೮. [ಸಂಚಿಕೆ ೮

EDUCATIONAL INTELLIGENCE AND USEFUL NOTES

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಧಾರವಾಡ ಜಿಲ್ಲೆಯ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಕೆರೂರ ಬಾಬಾಚಾರ್ಯರು ಕಳೆದ ತಿಂಗಳ ೧ನೇ ತಾರೀಖಿನ ದಿವಸ ವೈಕುಂಠವಾಸಿಗಳಾದ್ದರಿಂದ ನಮಗೆ ಪರಮಾವಧಿ ವ್ಯಸನವಾಗುತ್ತದೆ. ಇವರು ಬಿಜಾಪುರ ಜಿಲ್ಹೆಯೊಳಗಿನ ಕೆರೂರ ಗ್ರಾಮದ ನಿವಾಸಿಗಳು. ಪ್ರಸ್ತುತಕ್ಕೆ ಬಾಗಲಕೋಟೆಯಲ್ಲಿ ಮನೆ ಮಾಡಿರುವರು. ಪ್ರಸಿದ್ಧ ಮನೆತನದವರು. ಇವರಿಗೆ ಐದು ಮಂದಿ ಸಹೋದರರು. ಇವರ ಸಹೋದರರಲ್ಲಿ ಒಬ್ಬರಾದ ಸ್ವಾಮಿರಾಯಾಚಾರ್ಯರೆಂಬವರು ವೇದಾಂತ—ನ್ಯಾಯಶಾಸ್ತ್ರಗಳಲ್ಲಿ ಕರ್ನಾಟಕದೊಳಗೆ ಅದ್ವಿತೀಯಪಂಡಿತರೆಂದು ಹೆಸರು ಹೊಂದಿದ್ದರು. ಇವರಾದರೂ ಮನೆತನದ ವೈದಿಕ ವಿದ್ಯೆಯಲ್ಲಿ ತಕ್ಕಷ್ಟು ನೈಪುಣ್ಯವನ್ನು ಪಡೆದಿದ್ದರೂ ಲೌಕಿಕ ವಿದ್ಯೆಯಲ್ಲಿ ವಿಶೇಷ ಪರಿಶ್ರಮ ಮಾಡಿ, ಬಿ. ಎ. ವರ್ಗದವರೆಗೆ ಅಂ

ಗ್ಲೀಷ ಭಾಷೆಯ ಅಭ್ಯಾಸವನ್ನು ಮಾಡಿದ್ದರು. ಆದರೆ ಆ ಪದವಿಯನ್ನು ಮಾತ್ರ ಪಡೆಯಲಿಲ್ಲ. ಕೆಲ ಅಪರಿಹಾರ್ಯ ಕಾರಣಗಳಿಂದ ಆ ಅಭ್ಯಾಸವನ್ನು ಅಷ್ಟಕ್ಕೆ ಬಿಟ್ಟು ಬಂದಿದ್ದರು. ಆದರೂ ಇಂಗ್ಲಿಷದಲ್ಲಿ ಇವರು ಬಿ. ಎ. ಪದವೀಧರರಿಗಿಂತ ಕಡಿಮೆ ಇದ್ದಿಲ್ಲ. ಇವರು ಸನ್ ೧೮೮೦ನೇ ಇಸವಿಯ ಮೊದಲು ಕೆಲವು ದಿವಸ ಹಾಯಸ್ಕೂಲಲ್ಲಿ ಉಪಶಿಕ್ಷಕರಾಗಿದ್ದರು. ತರುವಾಯ ಧಾರವಾಡ ಜಿಲ್ಹೆಗೆ ೨ನೇ ಅಸಿಸ್ಟಂಟ ಡಿಪ್ಯೂಟಿಯ ಸ್ಥಳವನ್ನು ಕೊಡುವದು ಗೊತ್ತಾಗಲು, ಆ ಸ್ಥಲಕ್ಕೆ ಇವರ ನೇಮಣೂಕ ಆಯಿತು. ಮುಂದೆ ಕ್ರಮವಾಗಿ ಇವರು ಕಾರವಾರ, ಬಿಜಾಪೂರ, ಬೆಳಗಾವ ಜಿಲ್ಹೆಗಳಲ್ಲಿ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ, ಸವಣೂರ ರಾಮಚಂದ್ರರಾಯರು ಪೆನ್‌ಶನ್ ತಕ್ಕೊಂಡ ಬಳಿಕ ಧಾರವಾಡ ಜಿಲ್ಹೆಯ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದರು. ಈ ಸ್ಥಲದ ಸಂಬಳವು ೧೯೦೭ನೇ ಎಪ್ರೀಲದಿಂದ ಮುನ್ನೂರು ರೂಪಾಯಿಯಾಗಿತ್ತು. ಇವರು ನಾಲ್ಕೂ ಜಿಲ್ಹೆಯಲ್ಲಿ ಕೆಲಸ ಮಾಡಿದ್ದರಿಂದ ದಕ್ಷಿಣ ಭಾಗದ ಯಾವತ್ತೂ ಅಧ್ಯಾಪಕರಿಗೂ ಇವರ ಪರಿಚಯವಿರುವದೆಂಬದಕ್ಕೆ ಸಂಶಯವಿಲ್ಲ. ಆದರೂ ಅವರಲ್ಲಿರತಕ್ಕದ್ದೊಂದು ವಿಶೇಷ ಗುಣವನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆವು. ಅದು ಯಾವದೆಂದರೆ—ಅವರ ಬುದ್ಧಿಸಾಮರ್ಥ್ಯವು. “ಒಂದು ಒಕ್ಕಾಲು ಬುದ್ಧಿ ಮುಕ್ಕಾಲೆಂಬ” ನಾಣ್ಣುಡಿಯು ಇಂಥವರ ಉದಾಹರಣೆಯಿಂದಲೇ ಪ್ರಚಾರದಲ್ಲಿ ಬಂದಿರಬಹುದೆಂದು ತರ್ಕಿಸಲಿಕ್ಕೆ ಆಸ್ಪದವುಂಟು. ಕೆಲವು ವರ್ಷಗಳಿಂದ ಕಾಲೇಜದ ವಾರ್ಷಿಕ ಪರೀಕ್ಷೆಯಲ್ಲಿ ಇವರಿಗೆ ಕನ್ನಡ ಸಂಸ್ಕೃತ ವಿಷಯಗಳ ಪರೀಕ್ಷಕರನ್ನಾಗಿ ನೇಮಿಸಲಾತಂ

ಭಿಸಿದರು. ಇವರು ಕಾಲೇಜದ ಹಾಗೂ ಮನೆಯೊಳಗಿನ ಸಂಸ್ಕಾರಗಳಿಂದ ಸಂಸ್ಕೃತದಲ್ಲಿ ನಿಪುಣತೆಯನ್ನು ಸಂಪಾದಿಸಿದವರಾದ್ದರಿಂದ ಸಂಸ್ಕೃತ ಭಾಷೆಯ ಪ್ರಶ್ನೆಗಳನ್ನು ತೆಗೆಯುವದೇನು ಇವರಿಗೆಅಸಾಧ್ಯವಾಗಿ ತೋರಲಿಲ್ಲ. ಆದರೆ ಹಳೆಗನ್ನಡ ವ್ಯಾಕರಣವಾದ ಶಬ್ದಮಣಿದರ್ಪಣವನ್ನು ಕೂಡ ಓದಿ ತಿಳಕೊಂಡು ಅದರಲ್ಲಿ ಮಾರ್ಮಿಕ ಪ್ರಶ್ನೆಗಳನ್ನು ತೆಗೆಯುತ್ತಿದ್ದರು. ಇದರಿಂದ ಎಂಥ ಅಪರಿಚಿತ ವಿಷಯವಾದರೂ ಅದನ್ನು ಇವರು ತಮ್ಮ ಮೇಧಾಶಕ್ತಿಯ ಬಲದಿಂದ ಗ್ರಹಿಸಿಕೊಳ್ಳಲು ಸಮರ್ಥರಾಗಿದ್ದರು. ಇದೇನು ಬುದ್ಧಿ ಬಲದ ಸಾಮಾನ್ಯ ಸಂಗತಿಯಲ್ಲ.

ಇವರ ಆಡಳಿತೆಯ ವಿಷಯವಾಗಿ ವಿಶೇಷ ಬರೆಯುವ ಕಾರಣವಿಲ್ಲ. ಎಲ್ಲರಿಗೂ ತಿಳಿದ ಸಂಗತಿಯೇ ಇರುವದು. ಕಾಲಕಾಲದ ಇನಸ್ಪೆಕ್ಟರ ಸಾಹೇಬರು ತಮ್ಮ ರಿಪೋರ್ಟಿನಲ್ಲಿ ಇವರನ್ನು ಹೊಗಳಿರುವರು.

ಸದ್ಯಕ್ಕೆ ಇವರ ಕುಟುಂಬದಲ್ಲಿ ಹೆಂಡತಿಯೂ ಒಬ್ಬ ಹೆಣ್ಣುಮಗಳೂ ಪ್ರಬುದ್ಧನೂ ಪದವೀಧರನೂ ಆದ ಒಬ್ಬ ಮಗನೂ ಇರುವರು. ಇವರ ಮರಣದಿಂದ ಇವರ ಕುಟುಂಬಕ್ಕಾದ ದುಃಖವನ್ನು ಬಣ್ಣಿಸಲಸಾಧ್ಯವು. ಹುಟ್ಟಿದವನಿಗೆ ಮೃತಿಯು ತಪ್ಪದೆಂಬದು ಸರ್ವಶ್ರುತವಾದ್ದರಿಂದ ಸಂಸಾರದಲ್ಲಿ ಒದಗುವ ಸುಖ ದುಃಖಗಳಿಗೆ ಎದೆಗೊಟ್ಟು ದೇವರನ್ನು ಸ್ಮರಿಸುತ್ತಾ ಕಾಲಕ್ಷೇಪ ಮಾಡುವದೇ ಮಾನವನ ಕರ್ತವ್ಯವು. ಆದ್ದರಿಂದ ನಾವೂ ಪರಮಾತ್ಮನ ಅಗಾಧ ಮಹಿಮೆಗೆ ತಲೆಬೊಗ್ಗಿಸಿ, ಬಾಬಾಚಾರ್ಯರಿಗೆ ದೇವರು ಮುಕ್ತಿ ಸುಖವನ್ನೀಯಲೆಂದು ಪ್ರಾರ್ಥಿಸಿ ಈ ಲೇಖವನ್ನು ಮುಗಿಸುತ್ತೇವೆ.

ಹೆಣ್ಣುಮಕ್ಕಳ ಕಾಲೇಜದ ೩ನೇ ಅಸಿಸ್ಟಂಟಳಾದ ರಮಾ ಬಾಯಿಯು ವಿದ್ಯೆಯಿಂದ ತನ್ನ ಯೋಗ್ಯತೆಯನ್ನು ಹೆಚ್ಚಿಸಿ ಕೊಳ್ಳುವದಕ್ಕಾಗಿ ಇಂಗ್ಲಿಷ ಅಭ್ಯಾಸವನ್ನು ಆರಂಭಿಸಿ ಮೈಸೂರ ಮಹಾರಾಣಿ ಬಾಲಿಕಾ ಪಾಠಶಾಲೆಗೆ ಹೋಗಿರು ವಳು. ಇವಳು ಎರಡು ಟರ್ಮುಗಳ ವರೆಗೆ ಒಂದು ಟ ರ್ಮ ಅರ್ಧ ಪಗಾರದೊಂದಿಗೆಯೂ ಒಂದು ಟರ್ಮ ಬಿನ್ ಪಗಾರದೊಂದಿಗೆಯೂ ರಜೆಯನ್ನು ಪಡೆದು ಅಭ್ಯಾಸ ಮಾ ಡಿದಳು. ಆದರೆ ಈ ಜೂನ ತಿಂಗಳಲ್ಲಿ ಎರಡು ವರ್ಷದ ಬಿನ್ ಪಗಾರಿಯ ರಜೆಯನ್ನು ಪಡೆದುಕೊಂಡು ಹೋಗಿರು ವಳು. ಮೈಸೂರಲ್ಲಿ ಇವಳಿಗೆ ಹನ್ನೆರಡು ರೂಪಾಯಿ ಸ್ಕಾ ಲರಶಿಪ್ಪು ದೊರೆಯುತ್ತದೆ. ನಮ್ಮ ಭಾಗದ ಎಜ್ಯುಕೇಶನ ಲ್ ಇನಸ್ಪೆಕ್ಟರರಾದ ಮೆಹರ್ಬಾನ್ ಕರಂದೀಕರ ದೊರೆ ಗಳು ಈ ಹೆಣ್ಣುಮಗಳಿಗೆ ಇಂಗ್ಲಿಷ ಅಭ್ಯಾಸದ ಮಹತಿಯ ನ್ನು ತಿಳಿಸಿ ಅದರ ಅಭಿರುಚಿಯನ್ನು ಹಚ್ಚಿಕೊಟ್ಟಿದ್ದರು. ಅದರಿಂದ ಈಕೆಯು ಹೆಚ್ಚಿಗೆ ಕಲಿಯಬೇಕೆಂಬ ಹವ್ಯಾಸ ದಿಂದ ಮೆ. ಇನಸ್ಪೆಕ್ಟರ ಸಾಹೇಬರಿಗೆ ಈ ಇಲಾಖೆಯಿಂದ ಕಿಂಚಿತ್ ಸಹಾಯ ದೊರಕಿಸಿ ಕೊಡಬೇಕೆಂದು ಬೇಡಿಕೊ ಳ್ಳಲು, ಸಾಹೇಬರು ಪ್ರಯತ್ನ ಪಟ್ಟು ಎರಡು ವರ್ಷ ಕಲಿ ಯಲಿಕ್ಕೆ ಇನ್ನೂರು ರೂಪಾಯಿಗಳ ಸಹಾಯವನ್ನು ಸಂ ಪಾದಿಸಿ ಕೊಟ್ಟರು. ಆ ಸಹಾಯದಿಂದ ಈಕೆಗೆ ಎರಡು ವರ್ಷವಂತೂ ನಿಶ್ಚಿಂತೆಯಿಂದ ಕಲಿಯಲು ಅನುಕೂಲವಾ ಯಿತು. ಈಕೆಯು ಕಲಿತ ಬಳಿಕ ಈ ಇಲಾಖೆಯ ವಿದ್ಯಾ ಖಾತೆಯಲ್ಲಿ ಐದು ವರ್ಷ ಕೆಲಸ ಮಾಡಬೇಕೆಂದು ನಿರ್ಬಂ ಧವುಂಟು. ದೇವರ ದಯದಿಂದ ಎಲ್ಲ ಅನುಕೂಲಗಳೊದ ಗಿರಲು, ಇವಳು ಚನ್ನಾಗಿ ಕಲಿತು ಬಂದರೆ ಇಲ್ಲಿ ಸ್ಥಾಪಿತ ವಾದ ಹೆಣ್ಣುಮಕ್ಕಳ ಕಾಲೇಜಕ್ಕೆ ಉಪಯೋಗವಾಗುವದು,

ಕರ್ನಾಟಕದಲ್ಲಿ ಧೈರ್ಯದಿಂದ ಮುಂದರಿಯುವವರು ಕಡಿಮೆ; ಅದರಲ್ಲಿ ಈಕೆಯು ಹೆಣ್ಣುಮಗಳು. ಇಂಥಾದ್ದರಲ್ಲಿ ಈಕೆಯು ಮುಂದೆ ಹೋದದ್ದು ಪ್ರಶಂಸನೀಯವಾದದ್ದು. ಈಕೆಯ ಉದಾಹರಣೆಯನ್ನು ಬೇರೆ ಹೆಣ್ಣುಮಕ್ಕಳೂ ಅನುಸರಿಸಲುದ್ಯುಕ್ತರಾಗಬೇಕೆಂದು ಬಯಸುತ್ತೇವೆ.

ಸ್ವಿತ್ಸರ್ಲಂಡದಲ್ಲಿ ಫೋರಾತವೆಂಬದೊಂದು ಸರೋವರವುಂಟು. ಅದರ ನೀರು ಪ್ರತಿ ಹತ್ತು ವರ್ಷಕ್ಕೊಮ್ಮೆ ಕೆಂಪಾಗುವದು. ಹೀಗಾಗುವದಕ್ಕೆ ಅದರಲ್ಲಿ ಬೆಳೆಯುವ ಅಂತರಗಂಗೆಯಂಥ ಕೆಂಪು ವನಸ್ಪತಿಯೇ ಕಾರಣವೆಂದು ಬಲ್ಲವರ ಅಭಿಪ್ರಾಯವಿದೆ. ಈ ವನಸ್ಪತಿಯು ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರ ದೃಷ್ಟಿಗೋಚರವಾಗುವದು.

ಧಾರವಾಡದ ಡಿಪ್ಯೂಟಿಯವರಾದ ರಾವಸಾಹೇಬ ಕೆರೂರ ಬಾಬಾಚಾರ್ಯರ ಕೆಲಸವನ್ನು ಸದ್ಯಕ್ಕೆ ೧ನೇ ಅ. ಡಿ. ಯವರಾದಪಠಾಣ ಸಾಹೇಬರು ನೋಡುತ್ತಾರೆ. ರಾ. ಸಾ. ಕೆರೂರ ಇವರು ರಜೆ ತಕ್ಕೊಂಡ ಕೂಡಲೆ ಇವರೇ ಆ ಕೆಲಸವನ್ನುವಹಿಸಿದ್ದರು. ಕಡೇಸು ಸ್ಥಲಕ್ಕೆ ವಾಡಿಕೆಯಂತೆ ಮಿ. ದೇಶಪಾಂಡೆ (ಪ್ರಾ. ಸ್ಕೂಲ ಮಾಸ್ತರ) ಯವರ ನೇಮಣೂಕಆಗಿರುವದು. ಕಾಯಮ ನೇಮಣೂಕಗಳು ತೀವ್ರ ಆಗಬಹುದು.

THE HISTORY OF RAJASTHAN.
ರಾಜಾಸ್ಥಾನದ ಇತಿಹಾಸವು.

ರತ್ನಸಿಂಗನು ಸಿಂಹಾಸನಾರೂಢನಾಗುವ ಮೊದಲೇ ಅಂಭೀರ ರಾಜಕನ್ಯೆಯನ್ನು ಬೇಡಿದ್ದನು. ಮುಂದೆ ರಾಜನಾದ ತರುವಾಯ ತನ್ನ ಕಠಾರಿಯನ್ನು ಅವಳೆಡೆಗೆ ಕಳುಹಿಕೊಟ್ಟು ತಾನು ಅವಳನ್ನು ವರಿಸಿರುವೆನೆಂಬ ಸಂಗತಿಯನ್ನು ದೃಢಪಡಿಸಿದನು. ಈ ವರ್ತಮಾನವನ್ನು ತಿಳಿಯದೆ ಬುಂದಿಯರಾಜನು ಆ ಕನ್ಯೆಯನ್ನು ವರಿಸಿದನು. ಆ ಹುಡಿಗಿಯಾದರೂ ತಾನು ಪೂರ್ವದಲ್ಲಿಯೇ ರಾಣಾನೊಡನೆ ವಿವಾಹವನ್ನು ಮಾಡಿಕೊಂಡೆನೆಂಬ ಸಂಗತಿಯನ್ನು ಹೊರಗೆಡವದೆ ಗುಪ್ತವಾಗಿ ಇಟ್ಟುಕೊಂಡಳು. ಇದರಿಂದ ಬುಂದಿಯ ಅರಸನ ಕೂಡ ಆಕೆಯ ವಿವಾಹವು ಪ್ರಸಿದ್ಧ ರೀತಿಯಿಂದ ಜರಗಿತು. ಇದರಲ್ಲಿ ರಾಜಕನ್ಯೆಯ ದೋಷವು ವಿಶೇಷವಿರುವದೆಂದು ಎಣಿಸಕೂಡದು. ರಾಜಪುತ್ರನಾದ ರತ್ನಸಿಂಗನು ಗಾದಿಯ ಮೇಲೆ ಕುಳಿತನಂತರ ತನ್ನ ಗುಪ್ತವಿವಾಹವನ್ನು ಪ್ರಕಟಿಸತಕ್ಕದ್ದಿತ್ತು. ಹಾಗೂ ಆಕೆಯನ್ನು ತನ್ನ ರಾಜಮಂದಿರದಲ್ಲಿ ಕರೆತಂದು ಆಕೆಯ ವೈಭವೇಚ್ಛೆಯನ್ನು ತೃಪ್ತಿಪಡಿಸತಕ್ಕದ್ದಿತ್ತು. ಆದರೆ ಈ ಕೆಲಸವು ಇವನಿಂದ ಘಟಿಸಲಿಲ್ಲ. ಪಟ್ಟಕ್ಕೆ ಕುಳಿತ ಬಳಿಕ ವಂದಿಗಳ ಸ್ತುತಿಪಾಠದಿಂದ ಮೈಮರೆತು ತಾನು ಕೊಟ್ಟ ಗುಪ್ತ ವಚನವನ್ನು ಮರೆತು ಬಿಟ್ಟು ಆ ರಾಜಕನ್ಯೆಯನ್ನು ಮೂಗಿಗೆ ತುಪ್ಪ ಹಚ್ಚಿ ಕೂಡ್ರಿಸಿದನು. ತರುವಾಯ ಬುಂದಿಯ ರಾಜಪುತ್ರನ ಕೂಡ ಆಕೆಯ ಪಾಣಿಗ್ರಹಣ ವಿಧಿಯು ನಡೆದ ಬಳಿಕ ಚಿತೋಡದ ರಾಜಪುತ್ರನಿಗೆ ಎಚ್ಚರವಾಯಿತು. ರಾಜಪುತ್ರಿಯು ಚಿತೋಡದ ಅಧಿಪತಿಯು ತನ್ನನ್ನು ಇಂದು ಕರಿಸುವನು, ನಾಳೆ ಕರಿಸುವನೆಂದು ಕೆಲವು ದಿವಸ ಹಾ

ದಿನೇ ಓಡಿದಳು. ಈ ಅವಧಿಯಲ್ಲಿ ಬುಂದಿಯ ರಾಜನು ತನ್ನನ್ನು ವರಿಸಬೇಕೆಂದು ಸನ್ಮಾನದಿಂದ ನಿರೋಪ ಕಳಿಸಿದನು. ಈ ರಾಜಪುತ್ರನಾದರೂ ಮಾನದಿಂದಲೂ ಪರಾಕ್ರಮದಿಂದಲೂ ಕುಲದಿಂದಲೂ ಕಡಿಮೆಯುವನಾಗಿದ್ದಿಲ್ಲ. ಮೇಲಾಗಿ ಇವರೀರ್ವರ ಪೂರ್ವಜರು ಜೀವದ ಗೆಳೆಯರಾಗಿ ಶಾಬುದ್ದೀನ ಘೋರಿಯ ಕೂಡ ಕುರುಕ್ಷೇತ್ರದಲ್ಲಿ ಸಮಾನಸ್ಕಂಧರಾಗಿಯೂ ಒಮ್ಮನಸಿನವರಾಗಿಯೂ ಹೋರಾಡಿದ್ದರು. ಇದರಿಂದ ಈ ಉಭಯ ವಂಶದ ಸ್ನೇಹ ಸಂಬಂಧವು ಅತಿ ನಿಕಟವಾಗಿ ಇತ್ತು. ಬುಂದಿಯ ಹಾಡಿಯ ರಾಜನು ಮೇವಾಡದ ಮಾಂಡಲಿಕನಲ್ಲದಿದ್ದರೂ ಆ ದೇಶದ ಪಟ್ಟಕ್ಕೆ ಶ್ರೇಷ್ಠತೆಯ ಮಾನವನ್ನು ಕೊಡುತ್ತಿದ್ದನು. ಮತ್ತು ಯಾವಾಗಲೂ ಆ ಗಾದಿಯ ರಕ್ಷಣಕ್ಕಾಗಿ ತನ್ನ ರಕ್ತವನ್ನು ವ್ಯಯ ಮಾಡಲಿಕ್ಕೆ ಸಿದ್ಧನಾಗಿದ್ದನು. ಈ ಬಗೆಯಾಗಿ ಇವರ ಹಳೆ ಸ್ನೇಹವಿದ್ದದರಿಂದ ಬುಂದಿಯ ರಾಜನು ಬೇಕೆಂದು ಚಿತೋಡರಾಜನ ಅಪಮಾನ ಮಾಡಬೇಕೆಂಬ ಹವಣಿಕೆಯನ್ನು ಕೈಕೊಂಡನೆಂದು ಹೇಳುವದು ಸರಿಯಲ್ಲ. ಅವನಿಗೆ ಈ ಮೊದಲೇ ಆ ರಾಜಕನ್ಯೆಯು ಅಥವಾ ರಾಣಾನು ಈ ಗುಪ್ತವಿವಾಹವನ್ನು ಪ್ರಕಟ ಮಾಡಿದ್ದರೆ ಈ ಕೆಲಸಕ್ಕೆ ಅವನು ಕೈಯೇ ಹಾಕುತ್ತಿದ್ದಿಲ್ಲ. ಪುನ-ರುದ್ವಾಹದಂಥ ಅಪಮಾನಕರವಾದ ಮಾತಿಗೆ ಅವನು ಮನಸು ಮಾಡುತ್ತಿದ್ದಿಲ್ಲ. ವಸ್ತುತಃ ಈ ದೋಷವು ಸ್ವತಃ ರತ್ನಸಿಂಗನದೇ ಇದ್ದು ಅವನು ಅವಿಚಾರದಿಂದ ಹಾಡಿಯಾ ರಾಜನೊಡನೆ ಮತ್ಸರ ಮಾಡತೊಡಗಿದನು. ಒಂದು ದಿವಸ ಈ ಉಭಯ ರಾಜರು ಬೇಟೆಗೆ ಹೋಗಿರಲು ಅಲ್ಲಿಯೇ ದ್ವಂದ್ವ ಯುದ್ಧವನ್ನು ಆರಂಭಿಸಿ ಅದರಲ್ಲಿ ಉಭಯರು ಪರಸ್ಪರರ ಶಸ್ತ್ರಾಘಾತದಿಂದ ಮಡಿದು ಹೋದರು. ರತ್ನಸಿಂಗನು ಐ

ದೇ ವರುಷ ರಾಜ್ಯವಾಳಿದರೂ ಬಾಬರನನ್ನು ಮುಂದೆ ಬರಗೊಡದೆ ಮೇವಾಡದ ರಾಜಮರ್ಯಾದೆಯನ್ನು ಕಾಯ್ದುಕೊಂಡನು. ಇವನ ತರುವಾಯ ಇವನ ಚಿಕ್ಕ ತಮ್ಮನಾದ ವಿಕ್ರಮಾಜಿತನು ಚಿತೋಡದ ಪಟ್ಟಕ್ಕೆ ಕುಳಿತನು.

ಇವನು ೧೫೩೫ ರಲ್ಲಿ ರಾಜ್ಯಾರೂಢನಾದನು. ವಿಕ್ರಮಾಜಿತನು ಹೇಡಿಯೂ ಅಯೋಗ್ಯನೂ ವಂಶಕ್ಕೆ ಕುಂದು ತರುವವನೂ ರಾಜ್ಯವೈಭವನನ್ನು ಕಳಕೊಳ್ಳುವವನೂ ಆದನು. ಇಲ್ಲಿಯ ವರೆಗೆ ಚಿತೋಡದ ರಾಜವಂಶದಲ್ಲಿ ಇಂಥ ಅಯೋಗ್ಯ ಪುರುಷನು ಜನಿಸಿದ್ದಿಲ್ಲ. ನೀಚರ ಸಹವಾಸದಲ್ಲಿ ಸೇರಿ ಸರದಾರ ಮುತ್ಸದ್ದಿಗಳ ಅನಾದರಕ್ಕೆ ಪಾತ್ರನಾದನು. ಇವನು ಮಲ್ಲ ಕಾಳಗದಲ್ಲಿ ಆಸಕ್ತನಾಗಿ ದಂಡಿನ ವ್ಯವಸ್ಥೆಯನ್ನು ಮರೆತು ಶತ್ರುಗಳ ಸಂಚುಗಳನ್ನು ಅರಿತುಕೊಳ್ಳುವದನ್ನು ದುರ್ಲಕ್ಷಿಸಿದನು. ರಾಹುತರ ಸಂಖ್ಯೆಯನ್ನು ಕಡಿಮೆ ಮಾಡಿ ಕೇವಲ ಕಾಲಾಳನ್ನು ಬೆಳಿಸಿದನು. ಮುಸಲ್ಮಾನರು ತೋಫು ತುಬಾಕಿಗಳ ವೃದ್ಧಿಯನ್ನು ತಮ್ಮ ಸೈನ್ಯದಲ್ಲಿ ಪ್ರಸಾರಗೊಳಿಸುತ್ತಿರುವದನ್ನು ಅಲಕ್ಷಿಸಿದನು. ಭಾಲೆ, ಕತ್ತಿ, ಬಿಲ್ಲು, ಬಾಣ ಮುಂತಾದ ಪ್ರಾಚೀನ ಆಯುಧಗಳನ್ನೇ ನೆರೆನಂಬಿ ಸ್ವಸೈನ್ಯವನ್ನು ದುರ್ಬಲವಾಗಿ ಮಾಡಿಕೊಂಡನು. ಈ ಬಗೆಯಾಗಿ ವಿಕ್ರಮಾಜಿತನ ಆಳಿಕೆಯಲ್ಲಿ ಸಾಮ್ರಾಜ್ಯದ ಬಾಹುಬಲವು ಕುಂದಣಿಗೆಯನ್ನು ಪಡಿಯಲಾರಂಭಿಸಿದ್ದರಿಂದ ಭಿಲ್ಲ, ಮೇರ ಮುಂತಾದ ಗುಡ್ಡಗಾಡ ಜನರು ಕೂಡಾ ರಾಜ್ಯದಲ್ಲಿ ಸೇರಿ ಕೊಲೆ ಸುಲಿಗೆಗಳನ್ನು ನಿರಾತಂಕವಾಗಿ ನಡಿಸ ತೊಡಗಿದರು. ದನಗಳನ್ನು ತಿರಿವಿಕೊಂಡು ಹೋಗುವರು. ಈ ಅಕ್ರಮನ್ನು ನಿವಾರಿಸುವದಕ್ಕೆ ಅರಸನು ಸ್ವಾರರಿಗೆ ಅಪ್ಪಣೆ ಕೊಡಲು ಅವರು ಕಾಲಾಳನ್ನು ಕಳಿಸಿರಿ, ಅವರು ಶತ್ರುಗಳ ಪಾರುಪತ್ಯವನ್ನು

ಮಾಡುವರು, ಎಂದು ಉಪಹಾಸದಿಂದ ನುಡಿಯುವರು.

ಜನರು ವಿಕ್ರಮಾಜಿತನ ರಾಜ್ಯಕ್ಕೆ ಪಪಾಬಾಯಿಯ ರಾಜ್ಯವೆಂದು ಸಂಬೋಧಿಸತೊಡಗಿದರು. ಗುಜರಾಥ ಪ್ರಾಂತದ ಸುಲ್ತಾನನಾದ ಬಹದ್ದೂರಶಹನು ಈ ಸಂಧಿಯನ್ನು ಸಾಧಿಸಿ ಲಾಭ ಮಾಡಿಕೊಳ್ಳಬೇಕೆಂದು ಚಿತೋಡಕ್ಕೆ ದಾಳಿ ಇಡಬೇಕೆಂದು ಮನಸು ಮಾಡಿದನು. ಇದಕ್ಕಾಗಿ ಅವನು ಒಂದು ನೆವವನ್ನು ಹುಡುಕುತ್ತಿದ್ದನು. ಅದು ಕೂಡಲೆ ಪ್ರಾಪ್ತವಾಯಿತು. ತನ್ನ ಮೊದಲು ಪಟ್ಟಾಧಿಕಾರಿಯಾಗಿದ್ದ ಮುಜಫರ ಸುಲ್ತಾನನನ್ನು ಪೃಥ್ವೀರಾಜನು ಸಮರದಲ್ಲಿ ಸೆರೆ ಹಿಡಿದು ರಾಯಮಲ್ಲನ ಕಡೆಗೆ ಒಯ್ದಿದ್ದನು. ರಾಯಮಲ್ಲನು ಈ ಸುಲ್ತಾನನಿಂದ ಏಳುನೂರು ಕುದುರೆಗಳನ್ನೂ ವಿಪುಲ ದ್ರವ್ಯವನ್ನೂ ತಕ್ಕೊಂಡು, ಅವನ ಬಂಧಮೋಚನೆಯನ್ನು ಮಾಡಿದ್ದನು. ಈ ಮುಯ್ಯವನ್ನು ತೀರಿಸಿಕೊಳ್ಳುವದಕ್ಕೆ ಈ ಸಮಯವು ತಕ್ಕದ್ದೆಂದು ಬಗೆದು ಚಿತೋಡದ ಮೇಲೆ ದಂಡೆತ್ತಿ ಹೊರಟನು. ಮಂದೋಡದ ಠಾಕುರನು ಸುಲ್ತಾನನಿಗೆ ನೆರವಾದನು. ಉಭಯರ ದಂಡಿನೊಡನೆ ಸುಲ್ತಾನನು ಬುಂದೀ ಪರಗಣೆಯೊಳಗಿನ ಲೋಯಿ ಎಂಬಲ್ಲಿ ತಳವೂರಿದನು. ಇತ್ತ ವಿಕ್ರಮಾಜಿತನಾದರೂ ತನ್ನ ಸೇನೆಯೊಡನೆ ಸುಲ್ತಾನನಿಗೆದುರಾಗಿ ಹೊರಟು ಅಲ್ಲಿಗೇ ಬಂದನು. ರಾವುತರೂ ಸಿಲೇದಾರರೂ ಚಿತೋಡವನ್ನು ರಕ್ಷಿಸುವದಕ್ಕೆಂದು ತಿರಿಗಿ ಹೋಗಲು, ಬರೇ ಇವನ ಕಾಲ್ಬಲವು ಶತ್ರುವನ್ನು ಜಯಿಸಲಿಕ್ಕೆ ಅಸಮರ್ಥವಾಯಿತು.

ಚಿತೋಡದ ಗಾದಿಯ ಅಭಿಮಾನವು ಯಾವತ್ತೂ ರಜಪೂತರಲ್ಲಿ ಮೊದಲಿನಿಂದ ಜಾಗ್ರತವಾಗಿತ್ತು. ಅದರಿಂದ ನೆರೆಹೊರೆಯ ಮಾಂಡಲಿಕ ರಾಜರೂ, ಠಾಕೂರರೂ ಪ್ರಸ್ತುತದ ದಾಳಿಯ ನಿವಾರಣೆಗೋಸ್ಕರ ತಮ್ಮ ತಮ್ಮ ದಂಡಿನೊಡನೆ

ಚಿತೋಡಕ್ಕೆ ಬಂದರು. ದೇವಾಳ ಎಂಬಲ್ಲಿಯ ಸುರಜಮಲ್ಲನ ವಂಶಸ್ಥನಾದ ರಾಜಪುತ್ರನು ತನ್ನ ಉತ್ಕಟವಾದ ಸ್ವಾಮಿನಿಷ್ಠೆಯಿಂದ ಪ್ರೇರಿತನಾಗಿ ತನ್ನ ದಂಡನ್ನು ಮೊದಲಿಗೆ ಕಳಿಸಿದನು. ಬುಂದಿಯ ಹಾಡಿಯ ಜಾತಿಯ ಠಾಕುರನು ಕಡುಗಲಿಗಳಾದ ಐನೂರ ಮಂದಿಯದೊಂದು ಟೋಳಿಯನ್ನು ವಿಕ್ರಮಾಜಿತನ ನೆರವಿಗೆ ಕಳಿಸಿದನು. ಇದೇ ಮೇರೆಗೆ ಸೋನೀಗಡ, ಝಾಲವಾಡ, ಅಬೂ, ರಾವ ಮೊದಲಾದ ಅನೇಕ ಸ್ಥಲದ ಅಧಿಕಾರಿಗಳು ತಮ್ಮ ತಮ್ಮ ದಂಡನ್ನು ಚಿತೋಡವನ್ನು ರಕ್ಷಿಸುವದಕ್ಕಾಗಿ ಕಳಿಸಿದರು. ಆದರೆ ಇಷ್ಟೆಲ್ಲ ದಂಡಿನಿಂದಲೂ ಸುಲ್ತಾನನ್ನು ಹಿಂದಕ್ಕಟ್ಟುವದು ಅಸಾಧ್ಯವೆಂದು ತೋರಿತು. ಯಾಕೆಂದರೆ, ಸುಲ್ತಾನನು ಲಾಬ್ರೀಖಾನ ಫಿರಂಗಿಯೆಂಬ ಪೋರ್ತುಗೀಸ ನಾಯಕನನ್ನು ಇಟ್ಟುಕೊಂಡು ತನ್ನ ದಂಡಿಗೆ ಯುದ್ಧ ವಿದ್ಯೆಯನ್ನು ಕಲಿಸಿದ್ದನು. ಪ್ರಸ್ತುತದ ಕಾಳಗದಲ್ಲಿ ಈ ಸರದಾರನೇ ಸರ್ವ ಸೇನಾಧಿಪತ್ಯವನ್ನು ಸ್ವೀಕರಿಸಿ ತನ್ನ ಯುದ್ಧ ವಿದ್ಯೆಯ ನಿಪುಣತ್ವದಿಂದ ರಜಪೂತರನ್ನು ಪರಾಭವಗೊಳಿಸಿದನು. ಕಡೆಗೆ ಕೋಟೆಯ ಗೋಡೆಯ ಬುಡದಲ್ಲಿ ಅಲ್ಲಲ್ಲಿ ಸುರಂಗಗಳನ್ನು ಹಾರಿಸಿ ಗೋಡೆಯನ್ನು ಕೆಡವಿ ಒಳಸೇರಲಿಕ್ಕೆ ಮಾರ್ಗವನ್ನು ಮಾಡಿದನು. ಇಂಥಾದ್ದೊಂದು ಸುರಂಗಕ್ಕೆ ಹಾಡಿಯಾ ಜನರ ಐನೂರ ಮಂದಿಯೂ ಆಹುತಿಯಾಯಿತು. ಚೊಂಡಾವತ ವಂಶದ ಸರದಾರರಾದ ಮೆರ್ಗಾರಾವ, ಸತೂದುದೂ ಮೊದಲಾದವರು ಆವೇಶದಿಂದ ಕಾದಿ ಏರಿ ಬರುವ ಶತ್ರುಗಳನ್ನು ನಾಲ್ಕೈದು ಸಾರೆ ಹಿಮ್ಮೆಟ್ಟಿಸಿದರು. ಈ ಸರದಾರರಿಗೆ ವಿಕ್ರಮಾಜಿತನ ತಾಯಿಯಾದ ರಾಠೋಡ ಮನೆತನದ ಜವಾಹೀರಬಾಯಿಯು ಪುರುಷ ವೇಷವನ್ನು ಧರಿಸಿ ಸ್ವತಃ ಸೇನಾನಿಯಾಗಿ ಹುರಿದುಂಬಿಸುತ್ತಿದ್ದಳು. ಆದರೂ ರ

ಜಪೂತರಿಗೆ ಯಶ ದೊರೆಯಲಿಲ್ಲ. ರಾಣಿಯು ಮಾತ್ರ ರಣಬಲಿಗೆ ಗುರಿಯಾದಳು. ಸುಲ್ತಾನನು ಚಿತೋಡದ ಮುತ್ತಿಗೆಯನ್ನು ಬಲಿಸಿ ಒಳಗಿನವರನ್ನು ಹಣ್ಣಿಗೆ ತಂದನು. ಆಗ ಕೋಟೆಯಲ್ಲಿದ್ದ ಜನರು ಹ್ಯಾಗಾದರೂ ಮಾಡಿ ರಾಜವಂಶವನ್ನು ಉಳಿಸಿ ತಾವು ರಣಾಂಗಣದಲ್ಲಿ ದೇಹತ್ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ, ಸಂಗರಾಣಾನ ಮಗನಾದ ಉದಯಸಿಂಗನೆಂಬ ಶಿಶುವನ್ನು ಬುಂದಿಯ ಸೂರತಾನನೆಂಬ ರಾವನ ವಶಕ್ಕೆ ಕೊಟ್ಟು, ವಾಡಿಕೆಯಂತೆ ದೊಡ್ಡದೊಂದು ಕಿಚ್ಚು ಮಾಡಿ ಅದರಲ್ಲಿ ಹೆಂಡರು ಮಕ್ಕಳನ್ನು ಅಗ್ನಿನಾರಾಯಣನಿಗೆ ಅರ್ಪಿಸಿ ತಾವು ರಣಾಂಗಣದಲ್ಲಿ ಮಡಿಯಲಿಕ್ಕೆ ಸಿದ್ಧವಾದರು. ಇದು ಚಿತೋಡದಲ್ಲಿ ನಡೆದ ಎರಡನೇ ಜೋಹಾರವು. ಇದರಲ್ಲಿ ಹದಿಮೂರು ಸಾವಿರ ಬಾಲಾಬಲೆಯರು ಮಡಿದು ಹೋದರು. ಬಳಿಕ ದೇವಾಳದ ಠಾಕುರನು ಮುಂದಾಳಾಗಿ ಮಾಡಿಕೊಂಡು ಎಲ್ಲರೂ ಸುಲ್ತಾನನ ಸೈನ್ಯದ ಮೇಲೆ ಬಿದ್ದು ವೀರಸ್ವರ್ಗವನ್ನು ಐದಿದರು.

SCIENCE

ಶಾಸ್ತ್ರೀಯ ಜ್ಞಾನವು.

ಗುರುತ್ವಾಕರ್ಷಣ ಮತ್ತು ರೇಡಿಯಮ್ ಉತ್ಸರ್ಗ. ಮಾಡಮ್ ಕ್ಯೂರಿ ಇವರು ಗುರುತ್ವಾಕರ್ಷಣ ಹಾಗು ರೇಡಿಯಮ್ ಉತ್ಸರ್ಗ ಇವುಗಳಲ್ಲಿರುವ ವಿಲಕ್ಷಣವಾದ ಸಂಬಂಧವನ್ನು ಕುರಿತು ಇತ್ತಿತ್ತ ಅಭ್ಯಾಸಮಾಡುತ್ತಿದ್ದರು. ಪ್ರೋ. ಕ್ಯೂರಿ ಇವರು ಕೆಲವು ವರ್ಷಗಳ ಹಿಂದೆ ಕಂಡು ಹಿಡಿದದ್ದೇನಂದರೆ, ಒಂದು ಕಾಜಿನ ದೊಡ್ಡ ಗುಂಡು ತಕ್ಕೊಂಡು ಅದರ ಒಳಮೈಯನ್ನು ಯಾವದಾದರೊಂದು ಸ್ಫುರಪ್ರಕಾಶಿತ ಪದಾರ್ಥದಿಂದ ಸವರಿ ಅದರಲ್ಲಿ ರೇಡಿಯಮ್ ಉತ್ಸ

ರ್ಗವನ್ನು ಹಾಕಲು ಅದರಿಂದ ಅಲ್ಲಿ ಉಂಟಾಗುವ ಪ್ರಕಾ ಶವು ಯಾವಾಗಲು ಆ ಗುಂಡಿನ ಬುಡದಲ್ಲಿಯೇ ಕಾಣುತ್ತ ದೆ. ಮತ್ತು ಆ ಗುಂಡನ್ನು ಬುಡಮೇಲುಮಾಡಿ ಹಿಡಿದರೆ ಆ ಪ್ರಕಾಶವು ಜಡವಸ್ತುವಿನಂತೆ ಕೆಳಗೆ ಗುಂಡಿನ ಬಾಯಿ ಗೆ ಬಂದು ಕೂಡುತ್ತದೆ. ಪ್ರೊ. ಕ್ಯೂರಿ ಇವರು ತರ್ಕಿಸಿ ದ್ದೇನಂದರೆ, ಗುಂಡಿನಲ್ಲಿ ಸಂಚರಿಸುತ್ತಿರುವ ಧೂಲಿಕಣಗ ಳು ಪ್ರಕಾಶಿತವಾಗಿ ಕೆಳಗೆ ಕೂಡುತ್ತವೆ; ಮತ್ತು ಆ ಗುಂ ಡನ್ನು ಬುಡಮೇಲುಮಾಡಿ ಹಿಡಿಯಲು ಅವು ಗುರುತ್ವಾಕರ್ಷ ಣದ ಮೂಲಕ ಕೆಳಗೆ ಬೀಳುತ್ತವೆ. ಈ ವಿಷಯವನ್ನು ಕುರಿತು ತಾವು ಮಾಡಿದ ಪ್ರಯೋಗಗಳ ವರ್ಣನೆಯನ್ನು ಮ್ಯಾಡಮ್ ಕ್ಯೂರಿ ಇವರು "ಪ್ಯಾರಿಸ್ ಆಕ್ಯಾಡಮಿ ಆಫ್ ಸಾಯನ್ಸ್"ದ "ಕಾಮ್‌ಟರೆಂಡಸ್" ಎಂಬ ಮಾಸಿಕ ಪು ಸ್ತಕದಲ್ಲಿ ಕೊಟ್ಟಿದ್ದಾರೆ. ಅದರ ತಾತ್ಪರ್ಯವೇನಂದರೆ ಮೇಲೆ ವಿವರಿಸಿದ ಕಾಜಿನ ಗುಂಡಿನಲ್ಲಿ ಸಂಭವಿಸುವ ಅ ದ್ಭುತ ಚಮತ್ಕಾರವನ್ನು ಮೊದಲು ಪ್ರೊಫೆಸರ ಕ್ಯೂರಿ ಇ ವರು ಕಂಡು ಹಿಡಿದರು. ಅದಕ್ಕೂ ಧೂಲಿಕಣಗಳಿಗೂ ಸಂ ಬಂಧವಿರುವದೊ ಇಲ್ಲವೋ ಎಂಬದು ಮುಂದಿನ ಪ್ರಯೋ ಗದಿಂದ ತಿಳಿಯಬರುವದು. ಗುಂಡಿನಲ್ಲಿ ಮೇಲೆ ಹೇ ಳಿದ ಪ್ರಕಾಶವು ಕಾಣಬೇಕಾದರೆ ಅದರಲ್ಲಿ ಯಾವದಾದ ರೊಂದು ವಾಯುವು ಇರಬೇಕಾಗುತ್ತದೆ. ವಾತಾಕರ್ಷಕ ಯಂತ್ರದಿಂದ ವಾಯುವನ್ನು ಹೀರಿಕೊಂಡರೆ ಪ್ರಕಾಶವೂ ಕಾಣುವದಿಲ್ಲ. ಮೇಲಿಂದ ಕೆಳಗೂ ಬೀಳುವದಿಲ್ಲ; ಆದರೆ ಧೂಲಿಕಣರಹಿತವಾದ ವಾಯುವನ್ನು ಕಾಜಿನ ಗುಂಡಿನಲ್ಲಿ ಹಾಕಿ ಪ್ರಯೋಗಮಾಡಿದರೂ ಪ್ರಕಾಶವು ಮೊದಲಿನಂತೆ ಬುಡದಲ್ಲಿಯೇ ಕಾಣುತ್ತದೆ. ಮತ್ತು ಗುಂಡನ್ನು ಬುಡ ಮೇಲುಮಾಡಿ ಹಿಡಿದರೆ ಕೆಳಗೆ ಬೀಳುತ್ತದೆ. ಇದರಿಂದ ಧೂ

ಲಿಕಣಗಳಿಗೂ ಪ್ರಕಾಶಕ್ಕೂ ಸಂಬಂಧವದೆಂದೆನ್ನುವದು ತಪ್ಪಾಗುವದು; ಆದರೆ ಈ ಪ್ರಯೋಗಗಳನ್ನು ಮಾಡುತ್ತಿರಲು ಕಂಡುಬಂದ ಇನ್ನೊಂದು ಸಂಗತಿಯು ಯಾವದೆಂದರೆ, ಕಾಜಿನ ಗುಂಡಿನಲ್ಲಿರುವಂಥ ಹವೆಯು ಸ್ವಲ್ಪತ್ಯಾವು ಇರಬೇಕಾಗುತ್ತದೆ. ಹಾಗೆ ಇರದೆ ಒಣ ಹವೆಯು ಇದ್ದರೆ ಮೇಲೆ ನಿರ್ದಿಷ್ಟವಾದ ಚಮತ್ಕಾರವು ಕಾಣುವದಿಲ್ಲ; ಒಂದು ವೇಳೆಕಂಡರೂ ಅದು ತೀರ ಮಸಮಸಕಾಗಿ ಕಾಣುವದು. ಕಾಜಿನಗುಂಡಿನಲ್ಲಿ ಕಾರ್ಬಾನಿಕ್ ಆಸಿಡ್ ವಾಯು ಇಲ್ಲವೆ ಶುದ್ಧವಾದ ಹಾಯಡ್ರೋಜನ್‌ವಾಯು ಇದ್ದರೂ ಸಹ ಈ ಚಮತ್ಕಾರವು ದೃಷ್ಟಿಗೋಚರವಾಗುತ್ತದೆ. ಆದರೆ ಈ ಎರಡೂ ವಾಯುಗಳಲ್ಲಿ ಸ್ವಲ್ಪ ಆರ್ದ್ರತ್ವವು ಇರಬೇಕಾಗುತ್ತದೆ. ಆರ್ದ್ರತ್ವವಿಲ್ಲದಿದ್ದರೆ ಪ್ರಯೋಗಗಳು ಸಿದ್ಧಿಗೆ ಹೋಗುವದಿಲ್ಲ. ಇಷ್ಟರಿಂದ ಸಿದ್ಧವಾಗುವದೇನಂದರೆ, ರೇಡಿಯಮ್ ಉತ್ಸರ್ಗದ ಪ್ರಕಾಶವು ಕೆಳಗೆಬೀಳುವ ಚಮತ್ಕಾರಕ್ಕೂ ಧೂಲಿಕಣಗಳಿಗೂ ಏನೂ ಸಂಬಂಧವಿಲ್ಲ. ಹಾಗಾದರೆ, ಈ ಚಮತ್ಕಾರವು ಯಾತರಿಂದ ಆಗುತ್ತದೆಂಬ ಗೂಢವು ಇನ್ನು ಹಾಗೇ ಉಳಿದಿರುತ್ತದೆ. ಈ ಗೂಢವನ್ನು ಬಿಚ್ಚಿಬೈಲಿಗೆತಂದು ತಮ್ಮ ಬುದ್ಧಿ ಪ್ರಭಾವವನ್ನು ತೋರಿಸುವದಕ್ಕೆ ರಸಾಯನ ಶಾಸ್ತ್ರಜ್ಞರಿಗೆ ಇದೊಂದು ಒಳ್ಳೇ ಸಂಧಿ ಇರುತ್ತದೆ.

ಹುಲ್ಲಿನಿಂದ ಉಷ್ಣತೆಯನ್ನು ಕಾಯುವ ಹಂಚಿಕೆಯು:—

ಯಾರಾದರು ಬೇನೆಯುವರಿದ್ದದರಿಂದ ಇಲ್ಲವೆ ಸಣ್ಣ ಹುಡುಗರಿಗೆ ಮೊಲೆಹಾಲು ಸಿಗದಂತಿದ್ದದರಿಂದ ರಾತ್ರಿ ಅಪರಾತ್ರಿಯಲ್ಲಿ ಅವರಿಗೆ ಹಾಲು ಕೊಡಬೇಕಾದರೆ ಆ ಹೊತ್ತಿನಲ್ಲಿ ಅದನ್ನು ಕಾಸಿಕೊಡಬೇಕಾಗುತ್ತದೆ. ಆದ್ದರಿಂದ ಜನರಿಗೆ ಬಹಳ ತ್ರಾಸವಾಗುತ್ತದೆ. ಒಮ್ಮೊಮ್ಮೆಯಂತೂ ಹಸಿಹಾಲು

ಹಾಗೇ ಇಟ್ಟರೆ ಕೆಟ್ಟುಹೋಗುತ್ತವೆ. ಈ ತರದ ತೊಂದರೆ ಯೂ ಕಷ್ಟವೂ ಆಗಬಾರದೆಂದು ಜನರ ಮನಸ್ಸಿದ್ದರೆ ಅ ವರು ಬಣಹುಲ್ಲಿನಲ್ಲಿರುವ ಉಷ್ಣತೆಯನ್ನು ಕಾಯ್ದಿಡುವ ಧ ರ್ಮದ ಕಡೆಗೆ ಲಕ್ಷ್ಯಕೊಟ್ಟು ಅದರ ಉಪಯೋಗವನ್ನು ಮಾಡಿಕೊಂಡರೆ ಬಳ್ಳೇದಾಗುವದು. ಈ ಮಾತು ಬಹು ಸುಲಭವಾಗಿದ್ದು ಹೆಣ್ಣುಮಕ್ಕಳಿಗೆ ಸಹ ತಿಳಿಯುವಂತಿದೆ. ಬಣಹುಲ್ಲು ಉಷ್ಣತಾವಾಹಕವಿರುವದಿಲ್ಲ. ಅಂದರೆ ಹುಲ್ಲಿನ ಸಮೀಪಕ್ಕೆ ಯಾವದಾದರೊಂದು ಕಾಯ್ದ ಪದಾರ್ಥವನ್ನಿ ಟ್ಟರೆ ಅದು ಆ ಪದಾರ್ಥದಲ್ಲಿರುವ ಉಷ್ಣತೆಯನ್ನು ಹೀರಿ ಕೊಂಡು ತಾನು ಕಾಯುವದಿಲ್ಲ. ಸರ್ವಸಾಧಾರಣವಾಗಿ ಈಗ ಉಪಯೋಗದಲ್ಲಿರುವ ಇದೇತರದ ಉಷ್ಣತಾರಕ್ಷ ಕ ಪದಾರ್ಥಗಳು ಯಾವದಂದರೆ ಚಿನೀಮಣ್ಣಿನ ಪಾತ್ರೆಗಳು. ಇವುಗಳಲ್ಲಿ ಬಳ್ಳೇ ಬಿಸಿಬಿಸಿ ಚಹಾ ಸುರುವಿದರೂ ಇವು ಕಾಯುವದಿಲ್ಲ. ಮತ್ತು ಏನೂ ತ್ರಾಸವಿಲ್ಲದೆ ಚಹಾ ಕುಡಿಯ ಬಹುದು. ಆದರೆ ಹಿತ್ತಾಳಿಯ ಪಾತ್ರೆಯಲ್ಲಿ ಚಹಾ ಸುರುವಿ ದರೆ ಮಾತ್ರ ಆ ಪಾತ್ರೆಯನ್ನು ಬಾಯಿಗೆ ಹಚ್ಚುವದು ಸಹ ಅಸಾಧ್ಯವಾಗುತ್ತದೆ. ಇದರ ಕಾರಣವೇನಂದರೆ, ಹಿತ್ತಾಳಿ ಯು ಉಷ್ಣತಾವಾಹಕವಿರುವದರಿಂದ ಅದು ಚಹಾದೊಳಗಿ ನ ಉಷ್ಣತೆಯನ್ನು ಹೀರಿಕೊಂಡು ತಾನೇ ಕಾಯುತ್ತದೆ; ಆ ದರೆ ಚಿನೀಮಣ್ಣು ಉಷ್ಣತಾವಾಹಕವಿರದಿರುವದರಿಂದ ಆ ದರ ಪಾತ್ರೆಗಳು ಕಾಯುವದಿಲ್ಲ. ಅದರಂತೆಯೇ ಎಸರು ಬಂದ ನೀರು ಹಿತ್ತಾಳಿಯ ಪಾತ್ರೆಯಲ್ಲಿಹಾಕಿ ಆ ಪಾತ್ರೆಯ ನ್ನು ಹುಲ್ಲಿನಲ್ಲಿ ಸುತ್ತಿ ಇಟ್ಟರೆ ಆ ನೀರು ಆರದೆ ಹಾಗೇ ಬಿ ಸಿ ಉಳಿಯುತ್ತವೆ; ಯಾಕಂದರೆ ಹುಲ್ಲು ಉಷ್ಣತೆಯನ್ನು ಹೊರಹೋಗಗೊಡದೆ ಅದನ್ನು ಕಾಯುತ್ತದೆ. ಹುಲ್ಲಿನಲ್ಲಿರು ವ ಈ ಗುಣದ ಉಪಯೋಗವನ್ನು ವ್ಯಾವಹಾರದಲ್ಲಿ ಮಾ

ಡಿಕೊಳ್ಳುವದಕ್ಕಾಗಿ ಕಟ್ಟಿಗೆಯ ಸಂದುಕವನ್ನುಮಾಡಿ ಅ ದರ ಒಳಮೈಯಲ್ಲಿ ನಾಲ್ಕುಕಡೆಗೆ ಹುಲ್ಲುಹಚ್ಚಿ ಅದರಲ್ಲಿ ಪಾತ್ರೆಯು ಹೋಗುವಷ್ಟು ಬಾಯಿಯನ್ನು ಇಡುತ್ತಾ ರೆ. ಯಾವ ಪದಾರ್ಥವನ್ನು ಬೆಚ್ಚಗಾಗಿ ಇಡಬೇಕಾಗಿ ರುವದೋ (ಉದಾಹರಣಾರ್ಥವಾಗಿ ಹಾಲು) ಅದ ನ್ನು ಪಾತ್ರೆಯಲ್ಲಿ ಕಾಸಿ ಆ ಪಾತ್ರೆಯನ್ನು ಪೆಟ್ಟಿಗೆಯ ಲ್ಲಿಟ್ಟು, ಅದನ್ನು ಮುಚ್ಚುತ್ತಾರೆ. ಇಂಥ ಪೆಟ್ಟಿಗೆಯನ್ನು ಎಷ್ಟು ಹೊತ್ತಿನವರೆಗೆ ಇಟ್ಟಾಗ್ಯೂ ಒಳಗಿನ ಪದಾರ್ಥವು ಬೆಚ್ಚಗೆ ಉಳಿಯುತ್ತದೆ. ಎಷ್ಟೋ ಜನರಿಗೆ ಹುಲ್ಲಿನಲ್ಲಿರು ವ ಈ ಗುಣದ ಉಪಯೋಗವು ಆಗುವಂತಿದೆ. ಕೂಲಿಕಾ ರರು ಕೆಲಸದ ಮೇಲೆ ಹೋಗುವಾಗ ಸಂಗಡ ಬುತ್ತೀ ಕಟ್ಟಿಕೊಂಡು ಹೋಗಬೇಕಾಗುತ್ತದೆ. ಅವರು ಅದನ್ನು ಉಣ್ಣುವ ಹೊತ್ತಿಗೆ ಅದು ತೀರ ಆರಿ ತಣ್ಣಗಾಗುತ್ತದೆ. ಅ ವರು ಮೇಲೆ ಹೇಳಿದಂಥ ಪೆಟ್ಟಿಗೆಯಲ್ಲಿ ತಮ್ಮ ಬುತ್ತಿಯ ನ್ನು ಒಯ್ದರೆ ಅವರಿಗೆ ಪ್ರತಿದಿನ ಬಿಸಿ ಅನ್ನವನ್ನು ಉಣ್ಣಲಿ ಕ್ಕೆ ಸಿಗುವದು. ಜರ್ಮನಿಯಲ್ಲಿ ಈ ತರದ ಸಣ್ಣ ದೊಡ್ಡ ಪೆಟ್ಟಿಗೆಗಳನ್ನು ಮಾರಾಟಕ್ಕೆ ಇಟ್ಟಿರುತ್ತಾರೆ. ಅಂಥ ಪೆಟ್ಟಿ ಗೆಗಳನ್ನು ಇಲ್ಲಿ ಯಾರಾದರು ಶಿಲ್ಪಿಗರು ತಯಾರಮಾಡಿದರೆ ಜನರಿಗೆ ಅನುಕೂಲವಾಗುವದಲ್ಲದೆ ಅವರಿಗೆ ಲಾಭವೂ ಆ ಗುವದು.

NEW POETRY.

ಶ್ರೀಗುರುಪ್ರಸನ್ನ.

ಶ್ರೀಮದ್ಗುರುವರ್ಯರಾದ ಶ್ರೀನಿವಾಸರಾವ ರೊದ್ದ ಪ್ರಿನ್ಸಿಪಾ ಲ ಟ್ರೇನಿಂಗಕಾಲೇಜ ಧಾರವಾಡ ಇವರ ವಿಷಯವಾಗಿ ಬಸಯ್ಯ ಚೆನ್ನಬಸಯ್ಯ ಕಂಬೀ ರೀಟ್ರೇನಿಂಗ ಮಾಸ್ತರರು ರಚಿಸಿದ—

ಪದ್ಯನವರತ್ನ.

॥ ವಸಂತತಿಲಕಾವೃತ್ತಂ ॥

ಆವಂ ಜಗತ್ರಯದೊಳೊರ್ವನೆ ಕರ್ತನೋರ್ವೇಶ್ ।
ಆವಂ ಲಸತ್ಸುರನರೋರಗವಂದ್ಯಮಾನಂ ॥
ಆವಾತನಾಜ್ಞೆಯೊಳಗಿರ್ಪುದು ಲೋಕವೆಲ್ಲಂ ।
ದೇವೋತ್ತಮಂ ಸತತ ಕಾವುದು ನಿಮ್ಮನಾತಂ ॥ ೧ ॥

॥ ಮತ್ತೇಭವಿಕ್ರೀಡಿತವೃತ್ತಂ ॥

ಪ್ರಿಯವಿದ್ಯಾರ್ಥಿಗಳೆಲ್ಲರನ್ನಭಯದಿಂದಾನಂದದಿಂ ಸನ್ನುತಾ।
ಶ್ರಯದಿಂ ಜೀವನಮಾರ್ಗದೊಳ್ ತೊಡಗಿಸುತ್ತಂ ಪೂರ್ಣ ಕಾರುಣ್ಯದಿಂ ॥
ನಯದಿಂಬೇಡುವರಿಷ್ಟಮಂ ಸಲಿಸುತಂ ಸತ್ಕೀರ್ತಿಯಂ ತಾಳ್ದಿರ್ಪೆ ।
ದಯೆಯೊಳ್ ನಿಮ್ಮ ಸಮಾನಮೊರ್ವಮಹನೀಯರ್ ಕಾಣರೈಧಾತ್ರಿಯೊಳ್ ॥ ೨ ॥
ಪರಕಲ್ಯಾಣವೆ ನಿಮ್ಮಗುಟ್ಟು ಪರತೇಜೋರಾಶಿಯೇ ಸ್ವೋನ್ನತಿ ।
ಪರಸಂತೋಷವೆ ಸಂತಸಂ ಪರಹಿತಂ ಸ್ವಾರ್ಥಂ ತದಾನಂದವೈ ॥
ಪರಸೌಜನ್ಯವೆ ಮಾಳ್ಪಸಂಚಿತಮಿದೆಂದುತ್ಸಾಹಸಚ್ಚಿತ್ರದಿಂ।
ಪರಮಾಯುಷ್ಯವನೆಲ್ಲಮಂ ಕಳೆದಿರ್ಪೆ ಔದಾರ್ಯದಿಂ ಧೈರ್ಯದಿಂ ॥ ೩ ॥

॥ ಉತ್ಪಲಮಾಲಾವೃತ್ತಂ ॥

ಸಂತಸದೀಡು ಸೌಖ್ಯಗಳಬೀಡು ವಿನೋದದನಾಡು ಮತ್ತೆನಿ।
ಶ್ಚಿಂತೆಯುಮಟ್ಟು ಶಿಕ್ಷಣದಕಟ್ಟು ಸುವಿದ್ಯೆಯಗುಟ್ಟು ನಿರ್ಮಲಾ ॥

ನಂತಫಲಂಗಳಾಗರಮುದಾತ್ತದಯಾಕರ ನಿಮ್ಮಯಾಳ್ಕೆ
ಯೆಂ- ।
ದಿಂತುಪೊಗಳ್ವರಾತುರದೊಳೆಲ್ಲರು ನಿಮ್ಮನದೇಂ ಕೃತಾ
ರ್ಥರೋ! ॥ ೪ ॥

॥ ಕಂದಪದ್ಯ ॥

ನಿಮ್ಮೌದಾರ್ಯದಬಗೆಯಂ । ನಿಮ್ಮಯಸದ್ಧರ್ಮಕಾರ್ಯ
ತತ್ಪರತೆಯನು ॥
ನಿಮ್ಮಸದುದಾತ್ತಮನಮಂ । ಸಮ್ಮುದದಿಂದಿಟ್ಟ ಪ್ರಪೆಯು
ತೋರುತ್ತಿರ್ಕುಂ ॥ ೫ ॥

॥ ವಾರ್ಧಿಕಷಟ್ಪದಿ ॥

ಕಲಿಯಲಿಂಬಾದಮಂದಿರಗಳಿಂ ಮರಗಳಿಂ ।
ಬಲಿದವಿದ್ಯಾರ್ಥಿಗಳನೆರವಿನಿಂ ಬರವಿನಿಂ ।
ಸುಲಲಿತಸುಧೀಮಂತ ಶಿಕ್ಷಕರ ರಕ್ಷಕರಪೇರ್ಚಿನಿಂ ನಿ
ಮ್ಮಾಳ್ಕೆಯು ॥
ತಿಳಿಯಲಿಂಪಾದ ಶುಭಗಾನದಿಂ ಧ್ಯಾನದಿಂ ।
ಚಲುವಾದ ಲತೆಯಮಂಟಪಗಳಿಂ ಪ್ರಪೆಗಳಿಂ ।
ಹಲವುತೆರನಾಗಿ ಘನವೃದ್ಧಿಯಿಂ ಶೋಭಿಪುದು ಕಾಲೇ
ಜವು ॥ ೬ ॥

॥ ಮಾಲಿನೀವೃತ್ತಂ ॥

ಸರಸಗುಣಕಲಾಪಂ ದಿವ್ಯಕಾರುಣ್ಯರೂಪಂ ।
ಗುರುಗಳವರರೂಪಂ ಬಾಹ್ಯದೊಳ್ಭೀಕರಂ ತಾಂ ।
ಅರಿಯಲತುಲಸತ್ಯಂ ಕೋಮಲಂ ಸ್ವಾಂತರಾತ್ಮಂ ।
ಸುರುಚಿರ ಪರಿಪಕ್ವಂ ಸತ್ಫಲಂ ತೆಂಗಿನಂತೆ ॥ ೭ ॥

॥ ಕಂದಪದ್ಯ ॥

ಭಾವಿಸಲು ನೀವು ಸನ್ನುತ । ಕೋವಿದರೆಂದಿತ್ತರಲ್ತೆ ಸರಕಾ
ರದವರ್ ॥

ರಾವಬಹದೂರಪದವಿಯ । ಸೇವೆಳ್ವೆನು ಗುರುವೆ ನಿಮ್ಮ
ಘನತೆಯ ಬಲಮಂ ॥ ೮ ॥

॥ ಶಾರ್ದೂಲವಿಕ್ರೀಡಿತವೃತ್ತಂ ॥

ಲೇಸೈ ನಿಮ್ಮಯಕಾರ್ಯಪಜ್ಞಸುಭಗಂ ನಿಮ್ಮಾಳ್ಕೆಯಿಂದೆಂ
ದಿಗುಂ ।
ಲೇಸೆಂದೆಲ್ಲರುಮಂತರಂಗದೊಳುತಾಂ ಕೊಂಡಾಡುವರ್
ಮೋದದಿಂ ॥
ಈಶಂ ಸಂತಸದಿನ್ನೆಗಂ ಸುಖವನಿತ್ತಂತಾತನಂ ನಿಮ್ಮಯಾ।
ಶೇಷಾಯುಷ್ಯಕೆ ಶಾಂತಿಯಂ ಕೊಡಲೆನುತ್ತಾಂ ಬೇಡುವೇಂ
ಭಕ್ತಿಯಿಂ ॥ ೯ ॥

॥ ೧ ॥ ಪದ ॥

॥ ಧಾಟಿ "ಏನೇನಾಡುವಿರಿ। ಮಕ್ಕಳಿರಾ" ।–ಎಂಬಂತೆ

ತೊರೆದು ಪೋಗುವಿರೆಮ್ಮನ್ನು। ಶ್ರೀಗುರುಗಳೆ । ತೊರೆದು
ಪೋಗುವಿರೆಮ್ಮನ್ನು ॥ ಪಲ್ಲ ॥
ತೊರೆದು ಪೋಗುವಿರೆಂದು । ಪರಮವ್ಯಸನವಾಗಿ । ತರಹರಿ
ರಿಸದಮನ । ಕರುಣಾಸಾಗರರೆ! ॥ ಅ. ಪ. ॥
ಪರಮದಯಾಳುಗಳೇ।ದೀನಾನಾಥ। ಸುರತರುಸಮದಾತರೆ॥
ಶರಣು ಬಂದವರನು। ಪರಿರಕ್ಷಿಸುವದು । ಪರತರಧರ್ಮ
ವೆಂ । ದರಿವಮಹನೀಯರೆ ॥ ೧ ॥
ಛಾತ್ರವರ್ಗವನುನಿಮ್ಮಾ।ಸದಾಶ್ರಯ।ಛತ್ರದನೆರಳಿನೊಳು॥
ಪುತ್ರರಸಮವಿದ್ಯಾ। ಕ್ಷೇತ್ರದೊಳ್ಪೊರೆಯುವ। ಧಾತ್ರಿಯೊ
ಳ್ಮೆರೆವ ಚ। ರಿತ್ರನಾಯಕರೆ ॥ ೨ ॥
ಹೆಚ್ಚಿತುಕಾಲೇಜವು । ನಿಮ್ಮಾಳ್ಕೆಯೊಳ್ ಹೆಚ್ಚಿತುಶಿಕ್ಷಣವು॥
ಕೊಚ್ಚಿತಜ್ಞಾನವು। ನೀಚ್ಚಳವಿದ್ಯೆಯ। ಹೆಚ್ಚಳವನುಕಂಡು
ಮೆಚ್ಚಿತು ಸರಕಾರ ॥ ೩ ॥
ಘನತರವಿದುಷಿಗಳು। ಘನವಂತರು। ಘನಸತ್ಯಶಾಲಿಗಳು॥

ಘೆನತರಧಾರ್ಮಿಕ। ರೆನುತನಿಮ್ಮನುನಾಡ। ಜನಗಳು ಮನ
ದೊಳ। ಗನುದಿನನೆನೆವರು ॥ ೪ ॥
ಆಯುರಾರೋಗ್ಯಭಾಗ್ಯ। ಶ್ರೀಯಂಗಳ। ಶ್ರೇಯೋವಿರಾಜಿ
ಕೆಯಾ ॥
ಕಾಯಜಾಂತಕನಿವು। ಗೀಯಲಿಟಿರಕಾಲ। ಕಾಯಲಿನಿಮ್ಮ
ನ್ನು। ನ್ಯಾಯನಿಧಿಗಳೇ ॥ ೫ ॥

॥ ೨ ॥ ಪದ ॥

॥ ಧಾಟ ॥ "ನವಮಲ್ಲಿಕಾದಿ ಕುಸುಮಗಳಿಗೆ" ಎಂಬಂತೆ
ವಿಜಯವಿರಲಿ ಗುರುವರರಿಗೆಯೆನುತ ಸಂತತಂ।
ಭಜಿಪವುಹಗಲಿರುಳು ನಾವು ತ್ರಿಜಗದೀಶನಂ ॥ ಪಲ್ಲವಿ ॥
ಅಖಂಡಕಾಲ ಕಾರ್ಯಗೈದ ಪುಣ್ಯವಂತರ್ರೈ।
ಸುಖಸಂಪದದಿಂದ ನೀವು ಧನ್ಯಧನ್ಯರ್ರೈ ॥ ೧ ॥
ಮಾನವಂತ ಶ್ರೀನಿವಾಸರಾಯರೆನ್ನುತಂ।
ಜ್ಞಾನಿಗಳೊಲಿದಾಡುವರ್ರೈ ಸಾನುರಾಗದಿಂ ॥ ೨ ॥
ಎಂದಿನಂತೆ ಮುಂದೆ ನಿಮಗೆ ಸೌಖ್ಯವಾಗಲಿ।
ಚಂದದಿಂದ ನಿಮ್ಮಕೀರ್ತಿಧ್ವಜವು ಮೆರೆಯುಲಿ ॥ ೩ ॥

DEPARTMENTAL NOTICES.

ನೋಟೀಸು.

ಧಾರವಾಡ ಗಂಡುಮಕ್ಕಳ ಕಾಲೇಜದ ಸರಟಿಫಿಕೇಟ ಪರೀಕ್ಷೆಯು ತಾರೀಖು ೨೮ನೇ ಸಪ್ಟೆಂಬರ ೧೯೦೮ನೇ ಇಸವಿಯಿಂದ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರಲಪೇಕ್ಷಿಸುವವರು ಮೆಹರ್ಬಾನ್ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆ ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ತಿಳಿಯುವದು ತಾರೀಖು ೨೩ನೇ ಜುಲಾಯಿ ಸನ್ ೧೯೦೮ನೇ ಇಸವಿ.

V. B. JOSHI,
ಪ್ರಿನ್ಸಿಪಾಲ

II

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಸರಟಿಫಿಕೀಟ ಪರೀಕ್ಷೆಯು ೧ನೇ ಅಕ್ಟೋಬರ ೧೯೦೮ ನೇ ಇಸವಿ ದಿವಸ ಪ್ರಾರಂಭವಾಗುವದು. ಹೊರಗಿಂದ ಪರೀಕ್ಷೆಗೆ ಬರುವವರು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆ ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ತಾರೀಖ ೨೩-೭-೧೯೦೮

V. B. JOSHI,
ಪ್ರಿನ್ಸಿಪಾಲ

KHAJI SHAHABUDDIN SCHOLARSHIPS EXAMINATION. NOTICE.

ಖಾಜೀಶಾಹಾಬುದ್ದೀನ ಇವ ಸ್ಕಾಲರ ಶಿಪ್ಪುಗಳಬಗ್ಗೆ ನೋಟೀಸು.

ಖಾಜೀಶಾಹಾಬುದ್ದೀನ ಸಾಹೇಬರು ಮುಸಲ್ಮಾನ ವಿದ್ಯಾರ್ಥಿಗಳಿಗಾಗಿ ಇಟ್ಟ ಎಂಡೌಮೆಂಟ ಫಂಡಿನಿಂದ ಸ್ಕಾಲರಶಿಪ್‌ಗಳನ್ನು ಪಡಿಯಲಪೇಕ್ಷಿಸುವ ವಿದ್ಯಾರ್ಥಿಗಳ ಪರೀಕ್ಷೆಯು ತಾ|| ೧೪ನೇ ಸಪ್ಟಂಬರ ೧೯೦೮ನೇ ಇಸ್ವಿಯ ೧೧ ಘಂಟೆಗೆ ಧಾರವಾಡ, ವಿಜಾಪೂರ ಹಾಯಸ್ಕೂಲಗಳಲ್ಲಿ ಪ್ರಾರಂಭವಾಗುವದು. ಈ ಪರೀಕ್ಷೆಯ ಸಂಬಂಧದ ನಿಯಮಗಳೆಲ್ಲಾ ಮುಂಬಯಿ ಸರಕಾರದ ೨೬-೫-೧೯೦೪ನೇ ಇಸ್ವಿಯ ಗ್ಯಾಝಿಟನ ೧ನೇ ಭಾಗದ ೬೩೭ ಮತ್ತು ೬೩೮ನೇ ಪಾನುಗಳಲ್ಲಿ ಪ್ರಸಿದ್ಧವಾಗಿರುವವು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಬೇಕಾದ ಹಾಯಸ್ಕೂಲುಗಳಲ್ಲಿ ಅಥವಾ ಸ್ಪೆಶಲಸ್ಕೂಲುಗಳಲ್ಲಿ ಕಲಿಯಬಹುದು. ಅವರಿಗೆ ಐದ್ಯೈದು ರೂಪಾಯದ ಎರಡು ಸ್ಕಾಲರ ಶಿಪ್ಪುಗಳು ಇರುವವು.

ಈ ಪರೀಕ್ಷೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳು ತಮ್ಮ ಅ

ರ್ಜಿಗಳನ್ನು ಮುದ್ರಿಸಿದ ನಮೂನೆಯ ಮೇಲೆ ಬರೆದು ಕಮಿಟಿಯ ಅಧ್ಯಕ್ಷರ ಕಡಿಗೆ ೧೯೦೮ನೇ ಇಸ್ವಿಯ ಅಗಸ್ಟ ೧೫ನೇ ತಾರೀಖಿನೊಳಗಾಗಿ ಬಂದು ಮುಟ್ಟುವಂತೆ ಕಳಿಸಬೇಕು. ಈ ನಮೂನೆಗಳು ರೊಕ್ಕವಿಲ್ಲದೆ ಆಯಾ ಸೆಂಟರದ ಅಧ್ಯಕ್ಷರ ಕಡೆಗೆ ಶಿಗುವವು. ಕಮಿಟಿಯ ಅಧ್ಯಕ್ಷರು ಆ ಆ ಹಾಯಸ್ಕೂಲಗಳ ಹೆಡ್ಡಮಾಸ್ತರರಿರುವರು.

ಪರೀಕ್ಷೆಯ ಫೀಯು ಎರಡು ರೂಪಾಯಿ. ಈ ಹಣವನ್ನು ಪರೀಕ್ಷೆಯ ವೇಳೆಯಲ್ಲಿ ಆಯಾ ಭಾಗದ ಪರೀಕ್ಷೆಯ ಕಮಿಟಿಯವರಿಗೆ ಕೊಡಬೇಕು.

ಧಾರವಾಡ.
ತಾ ॥ ೨೯-೫ ೧೯೦೮. } R. B. KARANDIKAR
E. I. S. D.

MIDDLE SCHOOL SCHOLAR-SHIP EXAMINATION.

ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು

೧೭ನೇ ಜನವರಿ ೧೯೦೭ನೇ ಇಸವಿಯ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ಒಂದನೇ ಭಾಗದ ೯೫, ೯೬ನೇ ಪಾನಿನಲ್ಲಿ ಛಾಪಿಸಿದಂತೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪಗಳ ಸಂಬಂಧದ ಪರೀಕ್ಷೆಯು ಸೋಮವಾರ ೧೪ನೇ ಸಪ್ಟಂಬರ ೧೯೦೮ ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಸ್ಟಾಂಡರ್ಡ ಕಾಲಮಾನದ ೧೧ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

ಧಾರವಾಡ ಹೈಸ್ಕೂಲ
ಬೆಳಗಾವ ಹೈಸ್ಕೂಲ
ವಿಜಾಪೂರ ಹೈಸ್ಕೂಲ
ಕಾರವಾರ ಹೈಸ್ಕೂಲ
ಅಲೀಬಾಗ ಜಾನ್
ಎಲ್‌ಫಿನಸ್ಟನ್ ಮಿಶನ್‌ಹೈಸ್ಕೂಲ

ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೇನ ಇಸ್ರಾಯಲ್, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡಭಾಷೆಯ ಮುಖಾಂತರರಾಗಿಯೂ ಅಲೀಬಾಗ ಸೆಂಟರದಲ್ಲಿ ಮರಾಠೀ ಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮೀಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷಾ ಕಮೀಟಿಯ ಅಧ್ಯಕ್ಷರು ಅಲ್ಲಿಯ ಡೆಪ್ಯೂಟೀ ಎಜ್ಯುಕೇಶನಲ್ ಇನಸ್ಪೆಕ್ಟರರು. ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲ ಹೆಡ್‌ಮಾಸ್ತರರು ಪರೀಕ್ಷಾ ಕಮೀಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾರರು ಅರ್ಜಿಗಳನ್ನು ೧೫ನೇ ಅಗಸ್ಟ ೧೯೦೮ನೇ ಇಸವಿಯ ಒಳಗಾಗಿ ತಮ್ಮತಮ್ಮ ಜಿಲ್ಹೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ.

ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಪರೀಕ್ಷಾ, ಫೀ, ಮುಂತಾದ

ಧಾರವಾಡ ಟ್ರೇನಿಂಗ ಕಾಲೇಜದ ಗಾಯನ ಶಿಕ್ಷಕರು ಸದ್ಯಕ್ಕೆ ಒಂದು ವರ್ಷದ ರಜೆಯನ್ನು ತಕ್ಕೊಂಡಿರುವದರಿಂದ ಅವರ ಸ್ಥಳಕ್ಕೆ ಯೋಗ್ಯ ಶಿಕ್ಷಕರನ್ನು ನೇಮಿಸತಕ್ಕದ್ದಿರುತ್ತದೆ. ಆದಕಾರಣ ಗಾಯನದಲ್ಲಿ ಕೆಳಗೆ ಬರೆದ ಯೋಗ್ಯತೆಯುವರಿದ್ದು, ಸದರೀ ಸ್ಥಳವನ್ನು ಅಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೧೯೦೮ ನೇ ಇಸವಿಯ ಡಿಶಂಬರ ಅಖೈರದೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಬೇಕು:—

೧. ಕರ್ನಾಟಕ ಅಥವಾ ಹಿಂದುಸ್ತಾನಿ ಗಾಯನಶಾಸ್ತ್ರದ ಸಂಪೂರ್ಣ ಜ್ಞಾನ, ಮೃದಂಗ, ಮತ್ತು ಫಿಡಲ್ ಹಾಗೂ ವೀಣಾ ಇವುಗಳನ್ನು ಬಾರಿಸುವದು ಸಹಿತ. ಕರ್ನಾಟಕ ಗಾಯನ ಬಲ್ಲವರ ಅವಶ್ಯಕತೆ ಹೆಚ್ಚು ಇರುವದು.

೨. ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಯಾವತ್ತೂ ಪದ್ಯಗಳನ್ನು ಸರಿಯಾದ ರಾಗಗಳಿಂದ ಅನ್ನೋಣ.

೩. ತಕ್ಕಮಟ್ಟಿಗೆ ಈ ದೇಶದ ಮತ್ತು ಯುರೋಪದ ಗಾಯನ ಶಾಸ್ತ್ರಗಳ ತಾರತಮ್ಯಜ್ಞಾನ. ಈ ಜ್ಞಾನವು ಇದ್ದರೆ ಒಳ್ಳೇದು; ಇಲ್ಲದಿದ್ದರೂ ಪ್ರತಿಬಂಧಕವಿಲ್ಲ.

ಅವಶ್ಯ ಕಂಡರೆ, ಉಮೇದವಾರರ ಪರೀಕ್ಷೆಯನ್ನು ಕಮಿಟಿಯ ಮುಖಾಂತರ ತಕ್ಕೊಂಡು, ಯೋಗ್ಯರೆಂದು ಕಂಡುಬಂದವರನ್ನು ನೇಮಿಸಲಾಗುವದು.

ಪರೀಕ್ಷೆಯ ತಾರೀಖು ಹಿಂದಿನಿಂದ ತಿಳಿಸಲ್ಪಡುವದು. ಸದರೀ ಸ್ಥಳದ ಈಗಿನ ಸಂಬಳವು ತಿಂಗಳಿಗೆ ೩೫ ರೂ. ಇರುತ್ತದೆ. ಮುಂದೆ ೫೦ ರೂ. ಆಗುವ ಸಂಭವವಿರುತ್ತದೆ.

ಧಾರವಾಡ ಟ್ರೇನಿಂಗಕಾಲೇಜ
ತಾ ೨೨-೯-೧೯೦೮ ಇ.

V. B. JOSHI,
ಪ್ರಿನ್ಸಿಪಾಲ

ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ನಮ್ಮ ಕಡೆಗಾಗಲಿ ಪರೀಕ್ಷಾ ಕಮಿಟಿಯು ಕಡೆಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಸಿಗುವದು.

ಧಾರವಾಡ ತಾ॥ ೨೯-೬-೦೭ } R. B. KARANDIKAR *E. I. S. D.*

HIGH SCHOOL SCHOLARSHIP-EXAMINATION.

ಹೈಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು.

೧೩ ನೇ ಜನವರಿ ೧೯೦೩ ನೇ ಇಸವಿಯ ಸರಕಾರಿ ಗ್ಯಾಝೀಟಿನ ೯೬, ೯೭ ನೇ ಪಾನಿನಲ್ಲಿ ಪ್ರಸಿದ್ಧವಾದಂತೆ ಮೂರು ಹೈಸ್ಕೂಲ ಸ್ಕಾಲರಶಿಪ್ಪಗಳ ಸಂಬಂಧದ ಪರೀಕ್ಷೆಯು ಬುಧವಾರ ತಾ॥ ೧೬ ಸಪ್ಟಂಬರ ೧೯೦೭ ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಮದ್ರಾಸ ಕಾಲಮಾನದ ೧೧ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

ಧಾರವಾಡ ಹೈಸ್ಕೂಲ
ಬೆಳಗಾವಿ ಹೈಸ್ಕೂಲ
ವಿಜಾಪೂರ ಹೈಸ್ಕೂಲ
ಕಾರವಾರ ಹೈಸ್ಕೂಲ
ಅಲೀಬಾಗ ಹೈಸ್ಕೂಲ
ಎಲ್ಫಿನಸ್ಟನ್ ಮಿಶನ್ ಹೈಸ್ಕೂಲ

ಈ ಮೂರು ಸ್ಕಾಲರಶಿಪ್ಪಗಳಲ್ಲಿ ಒಂದು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂಗ್ಲಿಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್, ಕುಣಬಿ, ಕೋಲಿಕ ರ ಮುಂತಾದ ಜಾತಿಯವರಿಗಾಗಿ ಕಾದಿಟ್ಟದ್ದು ಆವರಲ್ಲಿ ಉತ್ಕೃಷ್ಟನಾದವನಿಗೆ ದೊರೆಯುವದು. ಮೂರನೇದು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟದೆ. ಆ ಜಾ

ತಿಯು ವಿದ್ಯಾರ್ಥಿಗಳಲ್ಲಿ ಉತ್ಕೃತನಾದವನಿಗೆ ದೊರೆಯುವದು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠೀ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ, ಅಲೀಬಾಗ ಸೆಂಟರಿನಲ್ಲಿ ಮರಾಠೀ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷೆಯ ಕಮೀಟಿಯ ಅಧ್ಯಕ್ಷರು ಅಲ್ಲಿಯ ಡೆಪ್ಯೂಟೀ ಎಜ್ಯುಕೇಶನಲ್ ಇನಸ್ಪೆಕ್ಟರರು. ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹಾಯಸ್ಕೂಲಿನ ಹೆಡ್‍ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನು ಛಾಪೀ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾರರು ಅರ್ಜಿಗಳನ್ನು ತಾ|| ೧೫ನೇ ಅಗಸ್ಟ ೧೯೦೮ನೇ ಇಸ್ವಿಯ ಒಳಗಾಗಿ ತಲಪುವಂತೆ ತಮ್ಮ ತಮ್ಮ ಜಿಲ್ಲೆಯ ಕಮಿಟಿಯ ಅಧ್ಯಕ್ಷರ ಕಡೆಗೆ ಕಳಿಸಿ ಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

ಉಮೇದವಾರರ ವಯಸ್ಸು, ಪರೀಕ್ಷಾವಿಷಯಗಳು, ಸ್ಕಾಲರಸಿಪ್ಪಿನ ರಕಮು, ಮತ್ತು ಅವಧಿ, ಪರಿಕ್ಷೆಯ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ನಮ್ಮ ಕಡೆಗಾಗಲಿ ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗಾಗಲಿ ಅರ್ಜಿಮಾಡಿದರೆ ಹಣದ ವೆಚ್ಚವಿಲ್ಲದೆ ಶಿಗುವದು.

ಧಾರವಾಡ
ತಾ|| ೨೫-೬-೧೯೦೮ } R, B. KARANDIKAR.
E. I. S. D.

ಸೌದಾಗರ ಬುಕ್ ಡಿಪೋ.

ನಮ್ಮಲ್ಲಿ ಯಾವತ್ತು ಶಾಲಾ ಪುಸ್ತಕಗಳಿಗೆ ವ ಉತ್ತಮ ಮಸಿ ಪುಡಿ ಸ್ಟೇಶನರಿ ಸಾಮಾನಗಳಿಗೆ ವ ವಾಚ್, ಘಡಿಯಾಳ ವಗೈರೆ ಯಾವತ್ತು ಸಾಮಾನಗಳಿಗೆ ರೀತಿಪ್ರಕಾರ ಯೋಗ್ಯ ಕಮಿಶನ್ ಸಿಗುತ್ತದೆ. ಖರೀದಿಸಿ ಪರೀಕ್ಷಿಸಿರಿ. ಮತ್ತು ಡ್ರಾಯಿಂಗ ಪುಸ್ತಕಗಳೂ ವ ಸಾಮಾನವೂ ಗೋಪಿಲೆ, ಹೂಲಿ ಗಣಿತ್ರಗಳೂ ಸಿಗುತ್ತವೆ

ವ್ಯಾಪಾರಸ್ಥರಿಗೆ—ಖಾತೆ ಕೀರ್ದಿ ವಹಿಗಳು ಸಹ ಇವೆ.

ಧಾರವಾಡ. } ಮಹಮ್ಮದ ವ. ಅಬ್ದುಲ್
ಹಮೀದ ಸಾ|| ಸೌದಾಗರ.

“ಮರಾಠೀ ಶಿಕ್ಷಕ” ಎಂಬ ಪುಸ್ತಕವನ್ನು ಇದೇ ವರ್ಷದ ಸಪ್ಟೆಂಬರ ತಿಂಗಳಲ್ಲಿ ಮುದ್ರಿಸಿ, ಗ್ರಾಹಕರಿಗೆ ವ್ಹಿ. ಪಿ. ಯಿಂದ ಕಳಿಸುವೆನು. ಸಪ್ಟೆಂಬರ ಆಖೈರ ದೊಳಗೆ ಹೆಸರು ತಿಳಿಸಿದವರಿಗೆ

ಬೆಲೆ—೧ ಪ್ರತಿಗೆ ೧೦ ಅಣೆ.

ಮುಂದೆ ೧—೦ ಆಣೆ. ಟ. ಖ. ಬೇರೆ

☞ ವ. ಮು. ಬಾಗಲ ಕಡಕೋಳ, ಪೋ. ಶಿರಹಟ್ಟಿ
ಜಿ. ಧಾರವಾಡ.

ಕನ್ನಡಶಾಲಾಪತ್ರ.

KANARESE
SCHOOLPAPER

ಪುಸ್ತಕ ೪೪, ಸಪ್ಟೆಂಬರ, ಅಕ್ಟೋಬರ ೧೯೦೮. ಸಂ. ೯-೧೦.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೧೯೩-೧೯೬

೨. ರಾಜಸ್ಥಾನದ ಇತಿಹಾಸವು. ೧೯೭-೨೦೦

೩. ಭೂಗೋಲ ೨೦೧-೨೦೩

೪ ಪತ್ರವ್ಯವಹಾರ. ೨೦೩-೨೦೫

೫ ಕನ್ನಡ ಪ್ರಾಥಮಿಕ ಶಾಲೆಗಳಿಗೋಸ್ಕರ ಶಾರೀರಿಕ ಶಿಕ್ಷಣಕ್ರಮ. ೨೦೬-೨೩೭

೬ ಧೂಮಕೇತುವಿನ ಉದಯ ... ೨೩೮-೨೪೦

CONTENTS.

1 Educational Intelligence and Useful Notes 193-196

2 The History of Rajasthan 197-200

3 Geography 201-203

4. Correspondence 203-205

5. Drill 206-237

6 Hallay's Comet 238-240

DHARWAR:

PRINTED AT THE KARNATIC BOOK DEPOT PRESS

1908.

GISTERED No. B. 10

ಕನ್ನಡ ಶಾಲಾಪತ್ರಿಕದ ವರ್ಗಣಿ ವರ್ಷಕ್ಕೆ ಮುಂಗಡ
೨ಎಂದು ಸಂಚಿಕೆಗೆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ	೪ ಪಂಕ್ತಿಗಳವರೆಗೆ		೧ ರೂ.
ಮೂರು ಸಾರೆ ಇಟ್ಟರೆ	೬	,,	೧ ರೂ.
ಆರು ಸಾರೆ ಇಟ್ಟರೆ	೮		೨ ರೂ.

ಸೂಚನೆಗಳು.

೧. ಶಾಲಾಪತ್ರಿಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಸಿಗಲಾರದು.

V. B. JOSHI
ಮ್ಯಾನೇಜರ ಶಾಲಾಪತ್ರಿಕ

ಶಾಲಾಪತ್ರ.

ಪದ್ಯಂ

ಪ್ರಿಯವಿದ್ಯಾಗುರುವರ್ಯರಾನ್ನತಿಕೆಯಿಂ ಸಚ್ಛಿಕ್ಷಕೋತ್ಕರ್ಷದಿಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸದ್ಯಾದಿಂ ಚಿತ್ರ ಪತ್ರೋದರಾವರ್ಗಮಾಗಲುಂ ತೋರಲ್ಕೈ ಕೈಕೊಂಬುದೈ
ದಯೆಯಿಂ ದೋಷವ ತಿದ್ದವೇಳ್ವ ಬುಧರಿಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೪೫.] ಸಪ್ಟ್ಂಬರ ೧೯೦೮. [ಸಂಚಿಕೆ ೯

EDUCATIONAL INTELLIGENCE AND USEFUL NOTES

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆರೂರ ಬಾಬಾಚಾರ್ಯರು ತೀರಲು, ತೆರವಾದ ಅವರ ಧಾರವಾಡ ಜಿಲ್ಹೆಯ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಥಳಕ್ಕೆ ಬೆಳಗಾವಿಯ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಬೆಂಡಿಗೇರಿ ಕೃಷ್ಣರಾಯರೂ ಅವರ ಸ್ಥಳಕ್ಕೆ ಆನೀಖಿಂಡಿ ಶಂಭೂರಾಯರೂ ಅವರ ಸ್ಥಳಕ್ಕೆ ಜಾಲೀಹಾಳ ಅಣ್ಣಾರಾಯರೂ ಅವರ ಸ್ಥಳಕ್ಕೆ ಕಾರವಾರದ ೧ನೇ ಅಸಿಸ್ಟಂಟ ಡಿಪ್ಯೂಟಿಯವರಾದ ಮಿ. ಫರ್ನಾಂಡೀಜ ಇವರೂ ನೇಮಿಸಲ್ಪಟ್ಟಿರುವರು.

ಪ್ರತಿ ಒಂದು ದೇಶದಲ್ಲಿ ಸಮಾಜದಲ್ಲಿ ಒಬ್ಬರಕೂಡೊಬ್ಬರು ನಡಕೊಳ್ಳುವ ಹಲವು ರೀತಿಗಳಿರುತ್ತವೆ. ಅವುಗಳಿಗೆ ಶಿಷ್ಟ ಸಾಂಪ್ರದಾಯಗಳೆನ್ನುವರು. ಆದರೆ ಅರ್ವಾಚೀನಕಾಲದಲ್ಲಿ ಜಗದೊಳಗಿನ ಬೇರೆ ಬೇರೆ ದೇಶಗಳ ಜನರಲ್ಲಿ ಬಳಿಕೆಯು ಬೆಳೆಯಲಾರಂಭಿಸಿರುವದರಿಂದ ಬೇರೆ ಬೇರೆ ದೇಶಗಳ ಜನರ ಶಿಷ್ಟಸಾಂಪ್ರದಾಯಗಳನ್ನು ಆಯಾ ದೇಶಗಳಿಗೆ ಹೋಗುವವರು ಅರಿತುಕೊಳ್ಳುವದು ಅವಶ್ಯವಾಗಿದೆ. ಜಪಾನದಲ್ಲಿಂತೂ, ಅಮೇರಿಕಾ, ಇಂಗ್ಲಂಡ, ಜರ್ಮನಿ, ಫ್ರಾನ್ಸ, ಹಿಂದುಸ್ಥಾನ, ಚೀನ ಮುಂತಾದ ಯಾವತ್ತೂ ಭೂಪ್ರದೇಶದ ಜನರು ತಮ್ಮ ತಮ್ಮ ಇಷ್ಟಕಾರ್ಯಕ್ಕಾಗಿ ಹೋಗಿ ನಿಂತಿರುವರು. ಈ ಪರಕೀಯರಿಗೆ ತಮ್ಮ ದೇಶದ ತರುಣರಿಂದ ತೊಂದರೆಯೂ ಅವಮಾನವೂ ತಟ್ಟಬಾರದೆಂಬ ಬಗ್ಗೆ ಜಪಾನ ದೇಶದ ಸಾಲೆಗಳಲ್ಲಿ ಕೆಲವು ಶಿಷ್ಟಾಚಾರದ ಮಾತುಗಳನ್ನು ಕಲಿಸುತ್ತಿರುವರು. ಆ ಸಂಬಂಧದ ನಿಯಮಗಳು ಅದೇ ದೇಶದಲ್ಲಿ ಪ್ರಕಟವಾಗುತ್ತಿದ್ದದ್ದೊಂದು ಇಂಗ್ಲಿಷ ಭಾಷೆಯ ವೃತ್ತಪತ್ರದಲ್ಲಿ ಪ್ರಸಿದ್ಧವಾಗಿರುವವು. ಅವುಗಳನ್ನು ವಾಚಕರಿಗೋಸ್ಕರ ಇದರಡಿಯಲ್ಲಿ ಉಲ್ಲೇಖಿಸಿದ್ದೇವೆ.

" ಪರದೇಶದ ಗೃಹಸ್ಥರು ಹಾದಿಗುಂಟ ಹೋಗುವಾಗ ಅವರನ್ನು ಒದರುತ್ತ ಗುಂಪಾಗಿ ಹಿಂಬಾಲಿಸಬಾರದು. ಅವರು ನಿಮಗೆ ಯಾವದೊಂದು ಸಂಗತಿಯನ್ನು ಕುರಿತು ಕೇಳಿದರೆ, ನೀವು ಸಭ್ಯ ನುಡಿಗಳಿಂದ ಸರಿಯಾದ ಉತ್ತರಕೊಡಬೇಕು. ಆ ಸಂಗತಿಯು ನಿಮಗೆ ಗೊತ್ತಿಲ್ಲದಿದ್ದರೆ ಅವರಿಗೆ ಪೋಲೀಸರ ಸಹಾಯವನ್ನು ದೊರಕಿಸಿಕೊಟ್ಟು ಅವರ ತೊಂದರೆಯನ್ನು ಪರಿಹರಿಸುವ ಎತ್ತುಗಡೆ ಮಾಡಬೇಕು. ಪರಕೀಯರು ನಿಷ್ಕಾರಣವಾಗಿ ಏನಾದರೂ ಇನಾಮುಕೊಟ್ಟರೆ ಅದನ್ನು ಸ್ವೀಕರಿಸಬಾರದು. ಹಾಗೂ ಅವರಿಗೆ ಏನಾದರೂ ಪದಾರ್ಥ

ಗಳನ್ನು ನೋಡಿದರೆ ಅವರು ಅರಿಯದವರೆಂದು ಅವರಿಂದ ವಾಸ್ತವಿಕ ಕ್ರಿಯಕ್ಕಿಂತ ಹೆಚ್ಚು ತಕ್ಕೊಳ್ಳಬಾರದು. ಪರದೇಶದವರು ಏನೊಂದು ಉಡವೆಯನ್ನು ಕೊಳ್ಳುತ್ತಿರಲು, ಅವರ ಸುತ್ತು ನೆರದು ಗೊಂದಲವೆಬ್ಬಿಸಿ ಅವರಿಗೆ ತ್ರಾಸಕೊಡಕೂಡದು. ಇಂಥ ನಡತೆಯಿಂದ ನಮ್ಮ ಜನಾಂಗಕ್ಕೆ ಕುಂದುಬರುವದು. ಲೋಕದೊಳಗಿನ ಯಾವತ್ತು ಜನರು ನಮ್ಮ ಬಂಧುಗಳಾಗಿರುವದರಿಂದ ನಾವು ಪರಕೀಯರಿಗೆ ಅಂಜುವ ಕಾರಣವಿಲ್ಲ. ಅವರು ನಿಮಗೆ ಸರಿಕರೆಂದು ಭಾವಿಸಿ ಯಾವತ್ತು ವ್ಯವಹಾರದಲ್ಲಿ ಅವರೊಡನೆ ಪ್ರಾಮಾಣಿಕತನದಿಂದ ವರ್ತಿಸಬೇಕು. ನೀವು ಕೇವಲ ಶ್ರೇಷ್ಠರೆಂದು ತಿಳಿದು ಅವರೊಡನೆ ಉದ್ದಾಮತನದಿಂದ ನಡಿಯಬಾರದು, ಹಾಗೂ ನಿಮಗೆ ಲಘುತ್ವ ಬರುವಂತೆ ತೀರ ದೈನ್ಯದಿಂದಲೂ ನಡಕೊಳ್ಳಬಾರದು. ಕೇವಲ ಪರಕೀಯರೆಂಬ ಕಾರಣದಿಂದ ಅವರ ವಿರುದ್ಧವಾಗಿ ಒಳಸಂಚು ನಡಿಸಬಾರದು. ಪ್ರತಿಯೊಬ್ಬ ಮನುಷ್ಯನ ಬಗ್ಗೆ ನಮ್ಮ ಅಭಿಪ್ರಾಯವು ಅವನ ಸ್ವಂತ ಗುಣಾವಗುಣಗಳನ್ನು ಅವಲಂಬಿಸಬೇಕೇ ಹೊರ್ತು ಅವನು ಯಾವದೇಶದವನೆಂಬದನ್ನು ಅವಲಂಬಿಸಬಾರದು. ಪರದೇಶದವರ ಕೂಡ ಬಹುಕಾಲ ನಿಕಟ ಸಹವಾಸವಿಡುವದರಿಂದ ಜಪಾನದ ಜನರು ಅವರ ನಡೆನುಡಿಗಳಿಗೆ ಮೆಚ್ಚಿ ತಮ್ಮ ಪೂರ್ವಿಕರ ಎಷ್ಟೋ ಚಲೋ ನಡತೆಗಳನ್ನು ಬಿಡುವ ಮನಸ್ಸುಳ್ಳವರಾಗಬಹುದು. ಕಾರಣ ಇಂಥ ಘಾತಕ ಪ್ರಸಂಗವು ಒದಗದಂತೆ ಬಹು ಎಚ್ಚರಪಡಬೇಕು. ಪರಕೀಯರನ್ನು ವಂದಿಸಬೇಕಾದರೆ ಟೊಪ್ಪಿಗೆಯನ್ನು ತೆಗೆದರೆ ಸಾಕು. ಶರೀರವನ್ನು ಬೊಗ್ಗಿಸಿ ಮಾನಕೊಡುವ ನಮ್ಮ ದೇಶದ ಸಾಂಪ್ರದಾಯದ ಅವಶ್ಯಕತೆ ಇಲ್ಲ. ಪರಕೀಯರನ್ನು ಕಂಡ ಕೂಡಲೆ ನಿನ್ನ ತೆರದ ಮೈಯನ್ನು ಮುಚ್ಚಿಕೊಳ್ಳಬೇಕು. ನೀವು ನಿಮ್ಮ ಪೂರ್ವಜರನ್ನು ಬಹು ಭಕ್ತಿಯಿಂ

ದ ಪ್ರೋಜಿಸಿರಿ, ಮತ್ತು ನಿಮ್ಮ ಬಂಧು ಬಳಗದವರ ಕೂಡ ಬಹಳ ಪ್ರೇಮದಿಂದ ನಡೆಯಿರಿ. ಆದರೂ ಪರಕೀಯರನ್ನು ಕ್ರಿಸ್ತಿಯನ್ನರೆಂದು ದ್ವೇಷಿಸಬೇಡಿರಿ. ದೇಶಸಂಚಾರ ಮಾಡುವವರಿಗೆ ಪರಭಾಷೆಯ ಜ್ಞಾನವು ಅತ್ಯವಶ್ಯವಿರುತ್ತದೆ. ಆದರೆ ನೀವು ನಿಮ್ಮ ಆತ್ಮವನ್ನು ಪರಕೀಯರಿಗೆ ಮಾರಿ ಅವರ ದಾಸಾನುದಾಸರಾಗಬೇಡಿರಿ. ಅವರಿಗೆ ನಿಮ್ಮ ದೇಶದ ಹೊಲಗಳನ್ನಾಗಲಿ ಮನೆಗಳನ್ನಾಗಲಿ ಮಾರಬೇಡಿರಿ. ಪರದೇಶದವರೊಡನೆ ನಡೆಯುವ (ವ್ಯಾಪಾರ ಮುಂತಾದ) ಸ್ಪರ್ಧೆಯಲ್ಲಿ ಎಂದೂ ಸೋಲಬಾರದೆಂಬ ಹೇವವನ್ನು ಹಿಡಿಯಿರಿ. ರಾಜಭಕ್ತಿಯೂ ಪಿತೃಭಕ್ತಿಯೂ ನಮ್ಮ ಜನಾಂಗದವರ ಅಮೂಲ್ಯವಾದ ಗುಣಗಳಿರುವವೆಂಬುದನ್ನು ಮರೆಯಬೇಡಿರಿ. ಮತ್ತು ಈ ಗುಣಗಳಿಗೆ ಕುಂದುಬರುವಂತೆ ನಡೆಯಬೇಡಿರಿ."

ಈ ವರ್ಷದ ವ್ಹರ್ನ್ಯಾಕ್ಯುಲರ ಸ್ಕೂಲ ಫಾಯನಲ್ ಅಂದರೆ ಮುಲ್ಕೀ ಪರೀಕ್ಷೆಗೆ ಧಾರವಾಡ ಜಿಲ್ಹೆಯಲ್ಲಿ ಮೂರುನೂರಾ ಅರುವತ್ತಾರು ಜನ ಉಮೇದವಾರರು ಕೂಡಿದ್ದರು. ಇವರಲ್ಲಿ ಎಂಬತ್ತು ನಾಲ್ಕು ಜನ ಗಣಿತದಲ್ಲಿ ನಾಪಾಸಾದರು. ಗಣಿತದ ಕಾಗದವು ಹುಡುಗರ ಯೋಗ್ಯತೆಗೆ ತಕ್ಕದ್ದಾಗಿತ್ತು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

ಈ ಮೇರೆಗೆ ರಜಪೂತರು ಹತಾಶರಾಗಿ ಸಮರದೇವತೆಗೆ ಬಲಿಯಾಗಲು, ಸುಲ್ತಾನನು ವಿಜಯಶಾಲಿಯಾಗಿ ದುರ್ಗವನ್ನು ಪ್ರವೇಶಿಸಿದನು. ಅವನಿಗೆ ಕೋಟೆಯಲ್ಲಿ ಒಂದಾದರೂ ಜೀವಂತ ಪ್ರಾಣಿಯು ಕಾಣಲಿಲ್ಲ. ಎಷ್ಟೋ ಜನರು ಸುಟ್ಟುಕೊಂಡು, ಎಷ್ಟೋ ಜನರು ವಿಷಪ್ರಯೋಗ ಶಸ್ತ್ರಪ್ರಯೋಗಗಳಿಂದ ಸತ್ತು ಹೋಗಿದ್ದರು. ಇದನ್ನು ನೋಡಿ ಅವನು ಹಿಂದೂ ಜನರ, ವಿಶೇಷವಾಗಿ ರಜಪೂತರ ಧರ್ಮಾಭಿಮಾನ-ಕುಲಾಭಿಮಾನಗಳಿಗೆ ಬೊಟ್ಟು ಕಚ್ಚಿಕೊಂಡನು. ಈ ಕಾಳಗವು ಸರ್ ೧೫೩೩ ರಲ್ಲಿ ಆಯಿತು. ಸಮರದಲ್ಲಿ ಮೂವತ್ತೆರಡು ಸಾವಿರ ಜನರು ಕೊಲೆಪಟ್ಟರು.

ಬಹಾದ್ದೂರ ಸುಲತಾನನು ಚಿತೋಡವನ್ನು ತಕ್ಕೊಂಡದ್ದು ನಿಜವು. ಆದರೆ ಅದರಿಂದ ಲಭ್ಯಾಂಶವೇನೂ ಪ್ರಾಪ್ತವಾಗಲಿಲ್ಲ, ಇಷ್ಟೇ ಅಲ್ಲ; ವಿಜಯಾನಂದದಿಂದ ಸ್ವಲ್ಪಕಾಲ ಆರಾಮವನ್ನು ಅನುಭವಿಸುತ್ತಿರುವಷ್ಟರಲ್ಲಿ ಬಂಗಾಲದಿಂದ ಬಂದ ಹುಮಾಯೂನನ್ನು ಪ್ರತಿಭಟಿಸುವ ಪ್ರಸಂಗ ಬಂತು. ಹುಮಾಯೂನನು ಇವನೊಡನೆ ಸಂಗ್ರಾಮ ಹೂಡಿದ ಕಾರಣವು ಬಹು ಸೋಜಿಗವಾಗಿದೆ. ಅದೇನಂದರೆ,- ಹುಮಾಯೂನನು ಬಾಬರನ ಮಗನು. ಬಾಬರನಂತೂ ಸಂಗರಾಣಾನ ಕಡುಹಗೆಯು. ಬಾಬರನು ಗುಣಗ್ರಾಹಿಯಾದ್ದರಿಂದ ತನ್ನ ವೈರಿಯಾದ ಸಂಗರಾಣಾನ ಸುಗುಣಗಳನ್ನು ತನ್ನ ರೋಜನಿಶಿಯಲ್ಲಿ ವಿಸ್ತಾರವಾಗಿ ವರ್ಣಿಸಿ ಬರೆದಿಟ್ಟನು. ಆ ಲೇಖವನ್ನು ಹುಮಾಯುನನು ಓದಿದ್ದನು. ಇ

ದಲ್ಲದೆ ಬಿಯಾನಾದಲ್ಲಿ ಸಂಗರಾಣಾನೊಡನೆ ಒದಗಿದ ಕಾಳಗದಲ್ಲಿ ಬಾಬರನೊಂದಿಗೆ ಹುಮಾಯುನನೂ ಇದ್ದನು. ಆದ್ದರಿಂದ ಧೀರೋದಾತ್ತನಾದ ಹುಮಾಯುನನು ಸಂಗರಾಣಾನನ್ನೂ ಅವನ ವಂಶದವರನ್ನೂ ಮಾನ್ಯರೆಂದು ಎಣಿಸುವನು. ಸುಲ್ತಾನ ಬಹಾದ್ದೂರನು ಚಿತೋಡವನ್ನು ಮುತ್ತುವ ಸೌರಣೆ ಮಾಡಿಕೊಂಡು ರಾಣಾನನ್ನು ಪರಾಭವಗೊಳಿಸುವ ಪ್ರಸಂಗವನ್ನು ತರಲು, ಕರ್ನಾವತೀ ರಾಣಿಯು ರಕ್ಷೆಯದಾರವನ್ನು ಅವನ ಕಡೆಗೆ ಕಳಿಸಿ ಇಂದಿನಿಂದ ನಾನು ತಮ್ಮನ್ನು ಸಹೋದರರೆಂದು ಭಾವಿಸುತ್ತೇನೆ, ಎಂಬ ಅಭಿಪ್ರಾಯವನ್ನು ಸೂಚಿಸಿದಳು. ಹಾಗೂ ಬಂಧುಪ್ರೇಮಕ್ಕನುಸರಿಸಿ ಸದ್ಯಕ್ಕೆ ಒದಗಿದ ಸಂಕಟ ನಿವಾರಣೆಗೆ ನೆರವಾಗಬೇಕೆಂದು ಬಿನ್ನಹ ಮಾಡಿಕೊಂಡಳು. ಹುಮಾಯುನನು ಈ ರಾಖಿಯಿಂದ ಸಂತುಷ್ಟನಾಗಿ ರಾಣಿಗೆ ಪ್ರತ್ಯುತ್ತರವನ್ನು ಬರೆದನು. ಅದರಲ್ಲಿ ನಾನು ಇಂದಿನಿಂದ ತಮ್ಮ ರಕ್ಷಾಸಹೋದರನಾಗಿದ್ದೇನೆ, ಪ್ರಸ್ತುತಕ್ಕೊದಗಿದ ಸಂಕಟಕ್ಕೆ ಬೆದರುವ ಕಾರಣವಿಲ್ಲ. ತೀವ್ರವಾಗಿ ಹೆಬ್ಬಲದೊಂದಿಗೆ ಸಹಾಯಕ್ಕೆ ಬರುತ್ತೇನೆ, ಎಂದು ಕಾಣಿಸಿದ್ದನು.

ಪತ್ರದಂತೆ ಹುಮಾಯುನನು ಮಹಾಸೇನೆಯೊಂದಿಗೆ ಬರುವಷ್ಟರಲ್ಲಿ ಜೋಹಾರವನ್ನು ಮಾಡಿ ರಜಪೂತ ವೀರರೆಲ್ಲ ಸಮರದಲ್ಲಿ ಮಡಿದು ಹೋಗಿದ್ದರು. ಚಿತೋಡವು ರಣಗುಡುತ್ತಿತ್ತು. ಆದರೂ ಅವನು ಮುಂದೋಡದಲ್ಲಿ ಬೀಡು ಬಿಟ್ಟುಕೊಂಡು ಇದ್ದ ಬಹಾದ್ದೂರನನ್ನು ಮುತ್ತಿ ಸೋಲಿಸಿ ಹಿಂದಕ್ಕಟ್ಟಿ ಚಿತೋಡನಗರವನ್ನು ತಕ್ಕೊಂಡನು. ಕೊಲೆಯಿಂದ ಪಾರಾಗಿ ಉಳಿದಿದ್ದ ವಿಕ್ರಮಾದಿತ್ಯನನ್ನು ಮರಳಿ ಚಿತೋಡದ ಗಾದಿಯಮೇಲೆ ಕುಳ್ಳಿರಿಸಿದನು. ಇದು ರಜ

ಪೂತರಲ್ಲಿರುವ * ರಾಖೀಬಂಧನದ ಮಾಹಾತ್ಮೆಯು. ರಜಪೂತರ ಕಡು ಹಗೆಯಾದ ಅವರಂಗಜೇಬನು ಕೂಡ ಉದೇಪುರದ ರಾಣಿಯ ರಾಖೀಬಂಧ ಬಂಧುವಾಗಿದ್ದನು.

ವಿಕ್ರಮಾಜಿತನು ಹುಮಾಯೂನನ ಸಹಾಯದಿಂದ ಮರಳಿ ತನ್ನ ಪೂರ್ವದ ಅಧಿಕಾರವನ್ನು ಪಡೆದರೂ ಬಹು ದಿವಸ ಆ ಅಧಿಕಾರದ ಸುಖವನ್ನು ಅನುಭವಿಸಲಿಲ್ಲ. ಇವನು ಹೇಡಿಯೂ, ಅಯೋಗ್ಯನೂ ಇದ್ದನೆಂದು ಆರಂಭದಲ್ಲಿಯೇ ಹೇಳಿದ್ದೇವಷ್ಟೇ. ಮರಳಿ ಪಟ್ಟ ದೊರೆತ ಬಳಿಕ ಇವನು ಅತಿ ನಿಂದ್ಯ ಕಾರ್ಯಗಳನ್ನು ಮಾಡತೊಡಗಿದನು. ಇವನ ನೀಚ ಕೃತ್ಯಗಳಿಂದ ವಂಶಪರಂಪರೆಯಿಂದ ಅರಸನು ವಿಷ್ಣುವಿಗೆ ಸರಿಯೆಂದು ಎಣಿಸುತ್ತ, ರಾಜದ್ರೋಹವು ದೈವದ್ರೋಹದಷ್ಟು ಮಹಾಪಾತಕವೆಂದು ಬಗೆಯುತ್ತ ಬಂದ ಸಿಸೋದೆ ಜನರಲ್ಲಿ ಕೂಡ ಇವನನ್ನು ಕೊಲ್ಲಬೇಕೆಂಬ ಆಲೋಚನೆಯು ಉದ್ಭವವಾಯಿತು. ಇದರಿಂದ ಇವನು ಎಸಗಿದ ನೀಚಕೃತ್ಯಗಳು ಎಷ್ಟು ಕೆಟ್ಟವಾಗಿರಬೇಕೆಂಬದು ಸ್ಪಷ್ಟವಾಗುತ್ತದೆ. ಅವುಗಳಲ್ಲೊಂದನ್ನು ಇಲ್ಲಿ ಹೇಳಿದರೆ ವಾಚಕರಿಗೆ ಅವನ ಕೃತ್ಯಗಳ ಜ್ಞಾನವಾಗುವದು. ಸಂಗರಾಣಾನು ಅಣ್ಣತಮ್ಮಂದಿರೊಡನೆ ಬಡದಾಡಿ ದೇಶಾಂತರ

---

*ಟೀಪು: ರಜಪೂತರಲ್ಲಿ ಸ್ತ್ರೀಯರು ಬಂದು ದಾರವನ್ನು ತಮ್ಮ ಮಾನಸಿಗೆ ಬಂದ ಬಟ್ಟ ಸುಗುಣ ಸಂಪನ್ನನಾದ ಗೃಹಸ್ಥನಿಗೆ ಕಳಿಸುವ ಸಂಪ್ರದಾಯವುಂಟು. ಅವನು ತಮ್ಮ ಕುಲದವನೇ ಇರಬೇಕೆಂಬ ನಿರ್ಬಂಧವಿಲ್ಲ. ಅವನು ಆ ದಾರವನ್ನು ಸ್ವೀಕರಿಸಿದರೆ ಅದನ್ನು ಕಳಿಸಿದ ಸ್ತ್ರೀಯನ್ನು ಭಗಿನಿಯೆಂದು ಭಾವಿಸಿ ಪ್ರತಿಯಾಗಿ ಕುಪ್ಪಸವನ್ನು ಕಳಿಸುವದಲ್ಲದೆ ಅವಳಿಗೆ ಇಹಲೋಕದಲ್ಲಿ ಒದಗಿದ ಯಾವತ್ತು ಸಂಕಟಗಳಲ್ಲಿ ನೆರವಾಗಬೇಕು. ಇದೇ ರಕ್ಷಾಬಂಧನ ವಿಧಿಯು ಮಾರ್ಗವು. ಈ ಇತಿಹಾಸವನ್ನು ಬರೆದ ಕರ್ನಲ್ ಟಾಡ್‌ನೆಂಬ ಪೊಲಿಟಿಕಲ್ ಏಜಂಟನು, ಉದೇಪುರ, ಬೂಂದಿ ಕೋಟಾಗಳ ರಾಣಿಯರ ರಾಖೀಬಂಧ ಬಂಧುವಾಗಿದ್ದನು.

ವೆಸಗಿದಾಗ ಇವನಿಗೆ ಆಶ್ರಯಕೊಟ್ಟ ಕರ್ಮಚಂದ್ರನ ನನ್ನು ಈ ನರಾಧಮನಾದ ವಿಕ್ರಮಾಜಿತನು ತುಂಬಿದ ಓಲಗದಲ್ಲಿ ಕಡಿಸಿ ಚಲ್ಲಿಸಿದನು. ಈ ಭಯಂಕರ ಕೃತ್ಯವನ್ನು ಕಂಡ ಕೂಡಲೆ ಯಾವತ್ತೂ ಠಾಕುರರೂ ರಾವಳರೂ ಸರದಾರರೂ, ಎದ್ದು ಮನೆಗೆ ಹೋಗಲಿಕ್ಕೆ ಸಿದ್ಧರಾದರು. ಇವರಲ್ಲಿ ಚೊಂಡಾವತ ಸರದಾರನೊಬ್ಬನು ಅರಸನನ್ನು ಬೊಟ್ಟು ಮಾಡಿ ತೋರಿಸಿ, ಮಿಕ್ಕ ಸರದಾರರನ್ನುದ್ದೇಶಿಸಿ-ಎಲೈ ಸರದಾರರೇ, ನಮಗೆ ಇನ್ನು ರಾಜ್ಯಭಾರದ ಪಕ್ವಫಲಗಳು ಪ್ರಾಪ್ತವಾದಾವೆಂದು ಬಗೆದಿದ್ದೆವು. ಆದರೆ ಕಗ್ಗಾಯಿಯನ್ನು ತಿನ್ನುವದೇ ನಮ್ಮ ಹಣೆಯಲ್ಲಿ ಬರೆದಿರುವಂತೆ ತೋರುವದು ಎಂದು ನುಡಿದನು. ಅದನ್ನು ಕೇಳಿದ ಕೂಡಲೆ ಅರಸನು-'ಒಳ್ಳೇದು, ಇದರ ಫಲವನ್ನು ನೀವು ನಾಳೆ ಉಣ್ಣುವಿರಿ' ಎಂದು ನುಡಿದನು. ಸರದಾರರೆಲ್ಲರೂ ಮನೆಗೆ ಹೋದರು.

ಇತ್ತ ಓಲಗದಿಂದ ಹೊರಬಿದ್ದ ಸರದಾರರೆಲ್ಲ ಒಟ್ಟಗೂಡಿ ಮುಂದೇನುಗತಿ? ನಮ್ಮ ಮಾನಾಪಮಾನಗಳ ಅವಸ್ಥೆಯೇನು? ಚಿತೋಡದ ಗೌರವದ ಪರಿಣಾಮವೇನು? ಪ್ರಸ್ತುತದಲ್ಲಿ ನಡೆದ ಅವಿಚಾರವನ್ನೇ ಮುಂದೆ ಎಷ್ಟು ದಿವಸಗಳ ವರೆಗೆ ನಡೇನುಗೊಡಬೇಕು? ಮುಂತಾದವುಗಳ ಬಗ್ಗೆ ಚರ್ಚಿಸಿ ಕಡೆಯಲ್ಲಿ ಪೃಥ್ವೀರಾಜನ ದಾಸೀಪುತ್ರನಾದ ಬನಬೀರನನ್ನು ಮುಂದೆ ಮಾಡಿಕೊಂಡು, ಅವನನ್ನು ಪಟ್ಟಕ್ಕೆ ಕೂಡಿಸಬೇಕೆಂದು ನಿಶ್ಚಯಿಸಿ ಹೊತ್ತು ನೋಡಿಕೊಂಡು ಬನಬೀರನಿಂದ ವಿಕ್ರಮಾಜಿತನನ್ನು ಕೊಲ್ಲಿಸಿದರು. ಇದರಿಂದ ರಾಷ್ಟ್ರದಲ್ಲೇನೂ ವಿಶೇಷ ಗಡಿಬಿಡಿಯಾಗಲಿಲ್ಲ. ಅಂತಃಪುರವು ಮಾತ್ರ ಶೋಕಸಾಗರದಲ್ಲಿ ಮುಳುಗಿತು. ಆದರೂ ಸರದಾರರೆಲ್ಲ ಮುಂದಿನ ಪರಿಣಾಮವನ್ನು ಮನಂದಂದು ಈ ಶೋಕಕ್ಕೆ ವಿಶೇಷ ಲಕ್ಷ್ಯ ಕೊಡಲಿಲ್ಲ.

GEOGRAPHY,

ಭೂಗೋಲ.

ಈ ಪ್ರಕಾರ ಭೂಭಾಗದ ಮಾದರಿಯು ಸಿದ್ಧವಾದ ಮೇಲೆ ಅದಕ್ಕೆ ಬಣ್ಣವನ್ನು ಕೊಡತಕ್ಕದ್ದು. ಪೇಟಿಯಲ್ಲಿ ಎಣ್ಣಿ ಕೂಡಿದ ಬಣ್ಣದ ಡಬ್ಬಿಗಳು ಅಗತ್ಯಾಣಿಗೆ ಬಂದಹಂತೆ ದೊರೆಯುವವು. ಅವುಗಳಲ್ಲಿ ಒಂದೊಂದು ಪೌಂಡ ಬಣ್ಣವಿರುವದು. ಮೂರು ಮೂಲ ಬಣ್ಣಗಳು, ಬಿಳೇ, ಕರೇ, ಹೀಗೆ ಅಯ್ದು ಪ್ರಕಾರದ ಬಣ್ಣಗಳನ್ನು ತೆಗೆದುಕೊಂಡರೆ ಸಾಕು. ಹಳದೀ ನೀಲೀ ಬಣ್ಣಗಳನ್ನು ಯೋಗ್ಯ ಪ್ರಮಾಣದಿಂದ ಕೂಡಿಸಿ ಹಸರು ಬಣ್ಣವನ್ನು ಮಾಡಿಕೊಂಡು, ಗುಡ್ಡಗಳಿಗೆ ಕೊಡಬೇಕು. ಅದರ ಮೇಲೆ ಅಲ್ಲಲ್ಲಿಗೆ ಕರೇ ಬಣ್ಣದ ಛಾಯೆಯನ್ನು ಹುಟ್ಟಿಸಬೇಕು. ಆಕಾಶದಂತೆ ತಿಳಿ ನೀಲೀ ಬಣ್ಣವನ್ನು ಮಾಡಿಕೊಂಡು ನದಿ, ಸಮುದ್ರ, ಸರೋವರ ಮುಂತಾದ ನೀರಿನ ಭಾಗಗಳಿಗೆ ಕೊಡಬೇಕು. ಇವಾದ ಬಳಿಕ ಭೂಮಿಯು ಮಣ್ಣಿನಂಥ ಬಣ್ಣವನ್ನು ಮಾಡಿಕೊಂಡು ತಕ್ಕ ಸ್ಥಳದಲ್ಲಿ ಕೊಡತಕ್ಕದ್ದು. ಒಂದೊಂದು ಬಣ್ಣವು ಪೂರ್ಣವಾಗಿ ಒಣಗಿ ಅದರ ಮೇಲೆ ಮತ್ತೆ ಒಂದೆರಡು ಕೈ ಆಡದೆ, ಎರಡನೇ ಬಣ್ಣವನ್ನು ಕೊಡಬಾರದು. ನೆಲದ ಬಣ್ಣವು ಒಣಗಿದ ಬಳಿಕ ಅದರಮೇಲೆ ಹಳದೀ ಬಣ್ಣದಿಂದಾಗಲಿ, ಕೆಂಪು ಬಣ್ಣದಿಂದಾಗಲಿ ಗೆರೆಗಳನ್ನು ತೆಗೆದು ಮಾರ್ಗಗಳನ್ನು ತೋರಿಸಬೇಕು. ಪಟ್ಟಣಗಳ ಹೆಸರುಗಳನ್ನು ಬರೆಯದೆ ಬಿಳೀ ಬಣ್ಣದ ಟಿಮ್ಕಿಗಳಿಂದ ಪಟ್ಟಣಗಳನು ತೋರಿಸಬೇಕು. ಒಂದು ಬಣ್ಣದ ಮೇಲೆ ಮತ್ತೊಂದು ಬಣ್ಣದ ಕಲೆ ಬಿದ್ದರೆ ಅದು ಟರಪೆನ್ ಎಣ್ಣೆಯಿಂದ ಹೋಗುವದು.

ಇನ್ನು ಮೆತ್ತಲಿಕ್ಕೆ ಬೇಕಾಗುವ ಮೇಲೆ ಹೇಳಿದ ಜಿಗಟು ಪದಾರ್ಥವನ್ನು ಮಾಡುವ ರೀತಿಯನ್ನು ಹೇಳಿ ಮೊದಲಿನ ವಿಷಯದ ಕಡೆಗೆ ತಿರುಗುತ್ತೇನೆ.

ಈ ಪದಾರ್ಥವನ್ನು ನಾನಾ ಪ್ರಕಾರದಿಂದ ಸಿದ್ಧಮಾಡುವರು. ಕೆಲವರು ಕಾಗದವನ್ನು ನೆನೆ ಇಟ್ಟು ಕೊಳೆತ ಬಳಿಕ ಕುಟ್ಟಿ ಸಿದ್ಧ ಮಾಡುತ್ತಾರೆ. ಇದು ಹಗುರಾಗಿದ್ದರೂ ಇದರ ಮೇಲೆ ಬಣ್ಣ

ಷ್ಟು ಚೆನ್ನಾಗಿ ಮಾಡುವದಿಲ್ಲ. ಕೆಲವರು ಮಣ್ಣಿನಲ್ಲಿ ಅರಳೀ ಹಾಕಿ ಕಟ್ಟಿ ಸಿದ್ಧ ಮಾಡುತ್ತಾರೆ. ಇದು ಬಿರಿಯುತ್ತದೆ. ಕೆಲವರು ಸುಣ್ಣ, ಬೆಲ್ಲ, [illegible] ಇಟ್ಟಿ ಎಂಜ ಪುಡಿ, ಮೆತ್ತು, ಉಗಸೀ ಎಣ್ಣೆ ಇವುಗಳಿಂದ ಒಂದು ಪ್ರಕಾರದ ಪದಾರ್ಥವನ್ನು ಮಾಡುತ್ತಾರೆ. ಇದಕ್ಕಿಂತಲೂ ಮೆದು ಸೀಮೆ [illegible]ಪುಡಿ, ವಾರನೀಸ ಎಣ್ಣೆ ಇವುಗಳಿಂದ ಸಿದ್ಧ ಮಾಡಿದ ಪದಾರ್ಥವು ಮೇಲಾದದ್ದು.

ಪ್ರತ್ಯಕ್ಷ ಪ್ರಯೋಗದ ಸಲುವಾಗಿ ಹಾಕಿದ ನೀರು ಹರಿದು ಹೋಗುವದಕ್ಕಾಗಿ ಒಂದು ಛಿದ್ರವನ್ನೂ ಅದಕ್ಕೆ ಒಂದು ಬೆಣೆಯನ್ನೂ ಮೊದಲೇ ಸಿದ್ಧ ಮಾಡಿರಬೇಕು. ಮಾಡುತ್ತ ಹೋದಂತೆ ಆಗಾಗ್ಗೆ ತಟ್ಟುವ ಎಡರುಗಳನ್ನು ದೂರ ಮಾಡುವ ಹಂಚಿಕೆಗಳು ಸೂಚಿಸುವವು.

(೩) ಹಿಂದೆ ಹೇಳಿದ ಯಾವತ್ತು ಸಂಗತಿಗಳು ಹುಡುಗರಿಗೆ ಸುಲಭವಾಗಿ ತಿಳಿಯುವ ತಕ್ಕಂಥವುಗಳೇ ಇರತಕ್ಕದ್ದು. ಸಣ್ಣ ಪುಟ್ಟ ಸಂಗತಿಗಳನ್ನೂ ಕಠಿಣ ಸಂಗತಿಗಳನ್ನೂ ಹುಡುಗರಿಗೆ ಹೇಳಬಾರದು ಶಿಕ್ಷಕರು ಪಯಣಗಳಿಂದಲೂ, ಸೃಷ್ಟಿಯ ಅವಲೋಕನದಿಂದಲೂ ಹೊರಟ ಸಂಗತಿಗಳನ್ನು ಬರೆದಿಡಬೇಕು; ಗ್ರಾಮಸ್ಥರಿಂದ ಊರ ಜನಸಂಖ್ಯೆ, ವಸೂಲಿಯ ಹಣ ಇವುಗಳ ಸಂಬಂಧದ ಸಂಗತಿಗಳನ್ನು ದೂರಕಿಸಿಕೊಳ್ಳಬೇಕು; ಊರು ಇರುವ ಜಾಗೆಯ ನಕಾಶವನ್ನು ತೆಗೆದಿಡಬೇಕು; ತಕ್ಕ ಪ್ರಸಂಗದಲ್ಲಿ ಈ ಎಲ್ಲ ಸಂಗತಿಗಳನ್ನು ಉಪಯೋಗಿಸಿಕೊಳ್ಳಬೇಕು.

ಹಿಂದೆ ಹೇಳಿದ ವಿಷಯಗಳ ಜ್ಞಾನವು ತಕ್ಕಮಟ್ಟಿಗೆ ಆದಬಳಿಕ ಮುಂದಿನ ವಿಷಯಗಳನ್ನು ಕಲಿಸಲಾರಂಭಿಸತಕ್ಕದ್ದು.

ಸ್ಕೇಲು—ಮೊದಲು ಎಂದೂ ನೋಡದೆ ಇದ್ದಂಥ ಒಂದು ತೋಟದ ಪ್ಲಾನವನ್ನಾಗಲಿ, ನಕಾಶವನ್ನಾಗಲಿ ಹುಡುಗರಿಗೆ ತೋರಿಸಿ, ಈ ತೋಟದ ಉದ್ದಗಲಳತೆಗಳನ್ನು ಹೇಳಿರೆಂದು ವಿದ್ಯಾರ್ಥಿಗಳಿಗೆ ಪ್ರಶ್ನೆ ಮಾಡಿದರೆ ಅವರು, ಸ್ಕೇಲು, ಅಥವಾ ಅಂತರ ಪ್ರಮಾಣವು ಗೊತ್ತಾಗದೆ ಹೇಳಲಿಕ್ಕೆ ಬರಲಾರದೆಂದು ಹೇಳುವರು. ಈ ಬ

ಗೆಯಾಗಿ ಹುಡುಗರಿಗೆ ಸ್ಕೇಲಿನ ಅವಶ್ಯಕತೆಯ ಜ್ಞಾನವನ್ನು ಮಾಡಿಕೊಡತಕ್ಕದ್ದು.

ಬೇರೆ ಬೇರೆ ಸ್ಕೇಲುಗಳನ್ನು ಕೊಟ್ಟು, ಬೇರೆ ಬೇರೆ ಅಂತರದ ರೇಖೆಗಳನ್ನು ವಿದ್ಯಾರ್ಥಿಗಳಿಂದ ತೆಗಿ ಬೇಕು.

ಕರೇ ಹಲಿಗೆಯ ಮೇಲೆ ಒಂದು ಹೊಲದ ನಕಾಶವನ್ನಾಗಲಿ ಒಂದು ಇಮಾರತಿಯ ಪ್ಲಾನವನ್ನಾಗಲಿ ತೆಗೆದು, ಅದರ ಬೇರೆ ಬೇರೆ ಅಳತೆಗಳನ್ನು ಸ್ಕೇಲಿನ ಸಹಾಯದಿಂದ ತೆಗೆಯ ಹೇಳುವದು.

CORRESPONDENCE.

ಪ ತ್ರ ವ್ಯ ವ ಹಾ ರ.

ಶ್ರೀಯುತ ಕರ್ನಾಟಕ ಶಾಲಾಪತ್ರಕದ ಮಹಾಶಯರ ಸನ್ನಿಧಿಗೆ—

ಕೃತಾನೇಕ ಸವಿನಯ ಸಾ. ನ. ವಿ. ವಿ. ಪೂಜ್ಯರೇ, ನಿಶ್ಚಲವಾದ ಗುರುಭಕ್ತಿಯಿಂದೊಡಗೂಡಿ ತಮ್ಮೆಡೆಗೆ ಬಂದಿದ್ದೇನೆ. ಅನಾದರಿಸದೆ ಇಂಬುಗೊಡುವಿರೆಂದು ಆಶಿಸುತ್ತೇನೆ.

ಶ್ರೀಗುರುಭ್ಯೋನಮಃ

ಶ್ರೀಯುತ ದೊಡ್ಡ ಶ್ರೀನಿವಾಸರಾಯರ ವಿಷಯವಾಗಿ
ನವಲಗುಂದದ ೧ನೇ ಅಸಿಸ್ಟಂಟ ಮಾಸ್ತರ ನೀಲ
ಕಂಠ ಶಂಕರ ಸಾವಕಾರ (ಪ್ರಾಣೇಶೋಪಾ
ಸಕಂ) ಇವರಿಂದ ರಚಿತವಾದ

ಶ್ರೀನಿವಾಸ ಪಂಚಕಂ

ಮತ್ತೇಭವಿಕ್ರೀಡಿತಂ.

ಉರಗಂಶಯ್ಯೆಗೃಹಂಪಯೋಧಿ ನಿರುತಂ ತಾಂವಾಹನಂ ಪ
ಕ್ಷಿಯೋ ।
ಸಿರಿಯರ್ಧಾಂಗಿಯಪಾರಚಂಚಲೆಯಪೂಜ್ಯಂ ಲೋಕದೊ
ಳ್ಪತ್ರನೆಂ ॥

ಮುತೆನೊಂದಾಹರಿ ಥ್ರಾವಾಪ ಪುರದೊಳ್ತ್ರಾಸಿಪರ್ಣಂಬಂ
ಜದಿಂ ।
ಮೆರೆವಂ ಸದ್ಗುಣಭೂಷಣಂ ಗುರುವರೇಂದ್ರಂ ಶ್ರೀನಿವಾ
ಸಾಭಿದಂ ॥೧॥

ಚಪಲಂ ಮೇಘದ ಮಿಂಚಿನಿಂದಮಚಲಂ ಹೇಮಾದ್ರಿಯಿಂ
ಕೋಮಲಂ ।
ಸುಮಯೋಜಾತದೆಸಳ್ಗಳಿಂದೆ ಕಠಿಣಂ ತಾಂ ವಜ್ರದಿಂದಾ
ವಗಂ ॥
ದ್ವಿಪದಿಂಮಂದಗಭೀರಯಾನನತಿಶುದ್ಧಂ ದೇವಗಂಗಾಂ
ಬುವಿಂ ।
ಕೃಪೆಗಾವಾಸನನಾಥಬಂಧು ಗುರುವರ್ಯಂ ಶ್ರೀನಿವಾಸಾ
ಭಿದಂ ॥೨॥

ಧರೆಯಂ ಪೋಲ್ವಕ್ಷಮಾಯುತಂ ವಿಮಲವಿದ್ಯಾಭೂಷಣಂ
ಮೇಣ್ಯುಧಿ ।
ಷ್ಠಿರನಂ ಪೋಲ್ವ ಸುವೃತ್ತನತ್ಯಧಿಕಧೀರೋದಾತ್ತನಾ
ರ್ಯಂ ದಯಾ ॥
ಪರನುಂ ವೈಷ್ಣವ ಪುಂಗವಂ ವಿಬುಧಮಾನ್ಯಂ ಶ್ರೀಷ್ಮಕ
ರ್ನಾಟದೊಳ್ ।
ಪರಮೌದಾರ್ಯದ ಜನ್ಮಭೂಮಿಯೆನಿಪಂ ತಾಂ ಶ್ರೀನಿವಾ
ಸಾಭಿದಂ ॥೩॥

ನಡೆದಂ ಸತ್ಪಥದಿಂ ಪ್ರಭುತ್ವಬಲಸಂಪದ್ಯುಕ್ತನಾಗಿ
ದುರ್ಗ ಕ ।
ನ್ನಡ ಶಾಲಾಭ್ಯುದಯಕ್ಕೆ ಕಾರಣನಿವಂ ಕಾಲೇಜಮುಂ
ಖ್ಯಾತಿಯಂ ॥
ಪಡೆಸುತ್ತಂ ಸಲೆ ಛಾತ್ರವರ್ಗಕೆ ಸುವಿದ್ಯಾದಾನಮಂ ಗೆ
ಯ್ಯುತಂ ।

ಪಡೆದಂ ದಾವಣಗೆರದ್ದ ರಾಖ್ಯಬಿರುದಂ ಶಾಂ ಶ್ರೀನಿವಾ
ಭಿದಂ ॥೪॥

ಒದವಿತ್ತೈ ಛಕುಕಾಲವೀತಗೆ ಪರೀಕ್ಷಾಕಾರ್ಯಭಾರಂ
ಬಳಿ ।
ಕ್ಕಧಿ ಕಾರತ್ವದ ಸೀಮೆಯಾಗಿಹ ಗುರುತ್ವಂ ಬಂದು ಕೈ
ಸೇರಲು ॥
ಅದರೊಳ್ಕತ್ತೆ ನವಾಬ್ದಮಂ ಕಳೆಯುತಂ ವಿಶ್ರಾಂತಿಯಂ
ಪೊಂದಿದಂ ।
ಮುದದಿಂ ಭೂವಸುಮೂರ್ತಿ ಬಿಂದುಶಕದೊಳ್ ಶಾಂ
ಶ್ರೀನಿವಾಸಾಭಿದಂ ॥೫॥

ಪದ॥ ಏನು ಮೋಸವಾಯಿತಯ್ಯೋ । ಪ್ರಾಣನಾಥನೇ॥
ಎಂಬಂತೆ.

ಮರೆಯುದಿರ್ಕೈ ಗುರುವರೇಂದ್ರ । ಪರಮಶಿಷ್ಯರಂ ॥ಪ॥
ವರಪುಂಗವನೆನಿಸಿ ಧಾರಾ । ಪುರದೊಳ್ ಪ್ರಖ್ಯಾತನಾಗಿ
ಮೆರೆವನಿನ್ನ ಚರಣಯುಗಕೆ । ಎರಗುತಿರ್ಪೆವು ॥೧॥
ಕನ್ನಡ ಕಾಲೇಜದೊಳಗೆ । ಉನ್ನತಿಯಂ ಪೊಂದಿದಂಥ ।
ಸನ್ನುತಾಂಗ ರಾಜಿಸುವುದು । ನಿನ್ನ ಕೀರ್ತಿಯು ॥೨॥
ಪಕ್ಷಪಾತಿಯೆನಿಸದೆನೀಂ । ಶಿಕ್ಷಣವಿತ್ತೆಮ್ಮನಿಳೆಯೊಳ್ ।
ರಕ್ಷಿಸಿರುವಿ ಪೊರೆಗೆ ನಿನ್ನ । ನಕ್ಷಯಾತ್ಮನು ॥೩॥

ಕಂದ॥ ದೇಶಹಿತಕಾರ್ಯಭಾರವ
ತೋಷದೆ ಕಳಗಿಳುಪಿಪೋದರ್ಕೈ ವಿಶ್ರಮಿಸಲ್॥
ಪೋಷಿಸುಗೆ ಕರುಣದಿಂ ಪ್ರಾ
ಣೇಶಂ ಸೌಭಾಗ್ಯ ಶಾಂತಿಗಳನಿತ್ತಿವರಂ॥೧॥

ತಮ್ಮ ಶಿಷ್ಯ.
ನೀ. ಶ. ಸಾವಕಾರ

ಕನ್ನಡ ಪ್ರಾಥಮಿಕಶಾಲೆಗಳಿಗೋಸ್ಕರ ಶಾರೀರಿಕಶಿಕ್ಷಣಕ್ರಮ.

ಹಳ್ಳಿಗಳಲ್ಲಿರುವ ಕನ್ನಡ ಶಾಲೆಗಳಲ್ಲಿ ಡ್ರಿಲ್, ಅಂಗಸಾಧನೆ, ಆಟಗಳು ಮೊದಲಾದ ಶಾರೀರಿಕ ಶಿಕ್ಷಣದ ಬಗ್ಗೆ ಕೆಲವು ನಿಯಮಗಳಿರುವದು ಅವಶ್ಯ ತೋರಿದ್ದರಿಂದ ಮೆ॥ ಡಾಯರೆಕ್ಟರ ಸಾಹೇಬರವರು ಕೆಳಗೆ ಬರೆದ ಶಾರೀರಿಕ ಶಿಕ್ಷಣದ ಕ್ರಮವನ್ನು ಸದ್ಯಕ್ಕೆ ಮಂಜೂರ ಮಾಡಿದ್ದಾರೆ.

ಡ್ರಿಲ್

ಪ್ರಾರಂಭದ ಸೂಚನೆಗಳು.

೧. ಡ್ರಿಲ್ಲು ಮಾಡಿಸತಕ್ಕ ಸ್ಥಳದಲ್ಲಿ ನಾಲ್ಕು ನಾಲ್ಕು ಫೂಟುಗಳ ಅಂತರದಿಂದ ಸಮಾಂತರವಾಗಿ ಕೆಲವು ಗೆರೆಗಳನ್ನು ಹಾಕಿರಬೇಕು. ಡ್ರಿಲ್ಲು ಪ್ರಾರಂಭವಾಗುವದಕ್ಕೆ ಮೊದಲು ಪ್ರತಿಯೊಬ್ಬನು ನಿಲ್ಲತಕ್ಕ ಸ್ಥಳವನ್ನು ಗೊತ್ತು ಮಾಡಿ ಕೊಡಬೇಕು. ಇದರಿಂದ ಪ್ರಾರಂಭದಲ್ಲಿ ಡ್ರಿಲ್ಲು ಕಲಿಯುವ ಹುಡುಗರಿಗೆ ಬಹಳ ಪ್ರಯೋಜನವಾಗುವದು.

೨. ಡ್ರಿಲ್ಲು ಮಾಡುವಾಗ ಹುಡುಗರು ಪರಸ್ಪರರ ನಡುವೆ, ಒಂದೊಂದು ಮೊಳ ಅಂತರ ಬಿಟ್ಟು ಎತ್ತರದ ಅನುಕ್ರಮದಿಂದ ಸಾಲಾಗಿ ನಿಲ್ಲಬೇಕು. ಹುಡುಗರು ಹೆಚ್ಚು ಹೆಚ್ಚು ಇದ್ದಂತೆ ಎರಡೆರಡು ಮೂರು ಮೂರು ಸಾಲುಗಳನ್ನು ಮಾಡಿ ನಿಲ್ಲಿಸಬಹುದು. ಪ್ರಾರಂಭದಲ್ಲಿ ಪ್ರತಿಯೊಂದು ಸಾಲಿನಲ್ಲಿ ೧೨ ಅಥವಾ ೧೬ ಕ್ಕಿಂತ ಹೆಚ್ಚು ಹುಡುಗರು ಇರಬಾರದು.

೩. ಪ್ರತಿಯೊಬ್ಬ ಹುಡುಗನು ತನ್ನ ಎದುರಿಗೆ ಒಂದು ನಿಯಮಿತ ಸ್ಥಳವನ್ನು ಗೊತ್ತು ಮಾಡಿಕೊಂಡು, ಅದರ ಕಡೆಗೇ ನೋಡುತ್ತ, ಎರಡೂ ಕೈಗಳನ್ನು ತೊಡೆಗೆ ಹಚ್ಚಿ, ಎರಡೂ ಕಾಲುಗಳ ಹಿಂಬಡಗಳನ್ನು ಕೂಡಿಸಿ ೪೫ ಅಂಶ ಕೋನವಾಗುವಂತೆ ನಿಲ್ಲಬೇಕು.

೪. ಡ್ರಿಲ್ಲು ಮಾಡುವಾಗ ತುರಿಸಿಕೊಳ್ಳುವದು, ಮಾತಾಡುವದು, ಕೆಮ್ಮುವದು, ಖ್ಯಾಕರಿಸುವದು ಮುಂತಾದ ಸ್ವೇಚ್ಛೆಯ ಕೆಲಸಗಳಿಗೆ ಸ್ವಲ್ಪವೂ ಆಸ್ಪದ ಕೊಡಬಾರದು.

೫. ಡ್ರಿಲ್ಲಿನ ಸ್ಥಳಕ್ಕೆ ಹುಡುಗರು ಬರುವಾಗಲೂ ಹೋಗುವಾಗಲೂ ಪೂರ್ಣ ವ್ಯವಸ್ಥೆಯನ್ನು ಇಡಬೇಕು. “ಡ್ರಿಲ್ಲಿನ ಸ್ಥಳಕ್ಕೆ ಹೋಗಿರಿ” ಅಂದ ಕೂಡಲೆ ಎಲ್ಲರೂ ಡ್ರಿಲ್ಲಿನ ಸ್ಥಳಕ್ಕೆ ಹೋಗಿ ಸರಿಯಾಗಿ ನಿಂತುಕೊಳ್ಳಬೇಕು. ಡ್ರಿಲ್ಲ ನಡೆದಾಗ ಡ್ರಿಲ್ಲಿನ ಸಾಲುಗಳ ಮಧ್ಯದಲ್ಲಿ ಯಾರೂ ಹೋಗಬಾರದು.

೬. ಮಾಸ್ತರನು ಡ್ರಿಲ್ಲಿನ ಅಪ್ಪಣೆಗಳನ್ನು ಗಟ್ಟಿಸಿ ಸ್ಪಷ್ಟವಾಗಿ ತಿಳಿಯುವಂತೆ, ಆಘಾತ ಕೊಡತಕ್ಕ ಶಬ್ದಗಳ ಅಥವಾ ಅಕ್ಷರಗಳ ಮೇಲೆ ಆಘಾತ ಕೊಟ್ಟು, ಉಚ್ಚರಿಸಬೇಕು. ಅಪ್ಪಣೆಯನ್ನು ಕೊಟ್ಟ ಕೂಡಲೆ ಎಲ್ಲ ಹುಡುಗರು ಒಮ್ಮೆಲೇ ಕೃತಿಗಳನ್ನು ಮಾಡುತ್ತಾರೋ ಇಲ್ಲವೋ ಎಂಬದನ್ನು ನೋಡುತ್ತಿರಬೇಕು.

ಬಾಲಕರ ಕವಾಯತ್ತಿಯ ಡ್ರಿಲ್ಲಿನ ಪಾಠಗಳು.

ಅಪ್ಪಣೆಗಳು.	ಹುಡುಗರು ಮಾಡತಕ್ಕ ಕೃತಿಗಳು.
	೧ನೇ ಪಾಠ.
ಸಿದ್ಧರಾಗಿರಿ	ಹುಡುಗರು ಎತ್ತರದ ಪ್ರಮಾಣದಿಂದ ಸಾಲಾಗಿ ನಿಲ್ಲಬೇಕು.
ಸರಿಯಾಗಿನಿಲ್ಲಿರಿ	ಎಲ್ಲರೂ ಕೈಗಳನ್ನು ತೊಡೆಗೆ ಹಚ್ಚಿ ಎರಡೂ ಕಾಲುಗಳ ಹಿಂಬಡಗಳನ್ನು ಕೂಡಿಸಿ ೪೫ ಅಂಶದ ಕೋನವನ್ನು ಮಾಡಿ, ಕೈಕಾಲುಗಳನ್ನು ಚಲಿಸದೆ ಎದುರಿಗೆ ನೋಡುತ್ತ ನಿಲ್ಲಬೇಕು.
ಎದುರಿಗೆ ನೋಡಿರಿ.	ಎಲ್ಲರೂ ಎದುರಿಗೆ ನೋಡಬೇಕು.
ಬಲಕ್ಕೆ	ಗೋಣು ಮಾತ್ರ ಬಲಕ್ಕೆ ತಿರುಗಿಸಿ, ಕಣ್ಣುಗುಡ್ಡೆಗಳನ್ನು ಬಲಗಡೆಯ ಮೂಲಿಗೆ ಹೊರಳಿಸಿ ಬಲಕ್ಕೆ ನೋಡಬೇಕು.
ಎದುರಿಗೆ	ಮೊದಲಿನಂತೆ ಎದುರಿಗೆ ನೋಡಬೇಕು.
ಎಡಕ್ಕೆ	(ಬಲಗಡೆಗೆ ನೋಡಿದ ಹಾಗೆ) ಎಡಗಡೆಗೆ ನೋಡಬೇಕು.
ಮೊದಲಿನಂತೆ	ಮೊದಲಿನಂತೆ ಎದುರಿಗೆ ನೋಡುತ್ತ ನಿಲ್ಲಬೇಕು.
	೨ನೇ ಪಾಠ.
ಬಲಗೈ	ಮುಂದೆ ಹೇಳಿದ ಕೃತಿಗಳನ್ನು ಮಾ

	ಡಲಿಕ್ಕೆ ಬಲಗೈಯು ಸಿದ್ಧವಾಗಿರಬೇಕು.
ಮುಂದೆ	ಬಲಗೈಯನ್ನು ಭುಜಕ್ಕೆ ಸಮಾಂತರವಾಗಿ ನೆಟ್ಟಗೆ ಮುಂದಕ್ಕೆ ಚಾಚಬೇಕು.
ಮೇಲೆ	ಬಲಗೈಯನ್ನು ನೀಟಾಗಿ ಎತ್ತಬೇಕು.
ಮುಂದೆ	,, ಮುಂದೆ ಮಾಡಬೇಕು.
ಕೆಳಗೆ	ಬಲಗೈಯನ್ನು ಮೊದಲಿನಂತೆ ತೊಡೆಗೆ ಹಚ್ಚಬೇಕು.
	* ಈ ಗುರುತು ಮಾಡಿದ ಅಪ್ಪಣೆಯನ್ನು ಒಮ್ಮೊಮ್ಮೆ ಬಿಟ್ಟು ಡ್ರಿಲ್ಲು ಮಾಡಿಸಬಹುದು. ಆಗ ಕೈಗಳು ಅರ್ಧ ವರ್ತುಲದಂತೆ ತಿರುಗಬೇಕು.
ಎಡಗೈ	(ಎಚ್ಚರಿಕೆಯ ಬಗ್ಗೆ)
ಮುಂದೆ	ಮೊದಲು ಬಲಗೈಯಿಂದ ಮಾಡಿದಂತೆ ಈಗ ಎಡಗೈಯಿಂದ ಮಾಡಬೇಕು.
ಮೇಲೆ	,,
ಕೆಳಗೆ	,,
ಎರಡೂ	(ಎಚ್ಚರಿಕೆಯ ಬಗ್ಗೆ)
ಮುಂದೆ	ಮೊದಲಿನಂತೆ ಎರಡೂ ಕೈಗಳನ್ನು ಚಾಚಬೇಕು.
ಮೇಲೆ	,, ಎತ್ತಬೇಕು.
ಕೆಳಗೆ	,, ಜೋಲು ಬಿಡಬೇಕು.

೧ನೇ ಪಾಠ. (ಅ)

ಚಪ್ಪಾಳಿ	(ಎಚ್ಚರಿಕೆಯ ಬಗ್ಗೆ)
ಒಂದು	ಚಪ್ಪಾಳಿಯನ್ನು ಹೊಡೆಯುವಂತೆ ಬಲಗೈಯನ್ನು ಎದೆಯ ಹತ್ತರ, ಎಡಗೈ

	ಯನ್ನು ಹೊಕ್ಕಳ ಹತ್ತರ, ಹಿಡಿದು ನಿಲ್ಲಬೇಕು.
ಎರಡು	ಎಲ್ಲರೂ ಒಮ್ಮೆಲೆ ಚಪ್ಪಾಳೆಯನ್ನು ಹೊಡೆದು, ಎರಡು ಕೈಗಳನ್ನು ಜೋಡಿಸಿ, ಮುಂಬದಿಯಲ್ಲಿಯೋ ಕೆಳಗೆ ಜೋಲು ಬಿಡಬೇಕು.
ಮೂರು	ಮೊದಲಿನಂತೆ ಸರಿಯಾಗಿ ನಿಲ್ಲಬೇಕು
ಕೂಡ್ರುವದು	(ಎಚ್ಚರಿಕೆಯ ಬಗ್ಗೆ) (೪)
ಒಂದು	ಎರಡೂ ಕೈಗಳನ್ನು ಉದ್ದವಾಗಿ ಚಾಚಿ ಮೊಳಕಾಲುಗಳ ಮೇಲೆ ಇಟ್ಟು ಕೂಡ್ರಬೇಕು.
ಎರಡು	ಎಲ್ಲರೂ ಎದ್ದು ಮೊದಲಿನಂತೆ ನಿಲ್ಲಬೇಕು.
	(ಹೀಗೆ ಕೆಲವು ಸಾರೆ ಮಾಡಿಸಬಹುದು)

೪ನೇ ಪಾಠ.

ಎರಡೂ ಕೈ	(ಎಚ್ಚರಿಕೆಯ ಬಗ್ಗೆ)
ಮೇಲೆ	ಬೆರಳುಗಳನ್ನು ಜೋಡಿಸಿ ಎರಡೂ ಕೈಗಳನ್ನು ಸಮಾಂತರವಾಗಿ ಎರಡು ಅಂಗೈಗಳು ಎದುರು ಬದುರು ಆಗುವಂತೆ ಮೇಲಕ್ಕೆ ಎತ್ತಬೇಕು.
ತಲೆ	ಎರಡೂ ಕೈಗಳ ಮುಷ್ಟಿಯನ್ನು ಮಾಡಿ, ಹೆಬ್ಬೆರಳನ್ನು ಮಾತ್ರ ಕಡೆಗೆ ತೆಗೆದು, ಅವುಗಳಿಂದ ತಲೆಯನ್ನು ಮುಟ್ಟಬೇಕು.

ಭುಜ	ಹೆಬ್ಬೆರಳುಗಳಿಂದಲೇ ಭುಜವನ್ನು ಮುಟ್ಟಬೇಕು.
ಎದೆ	ಎರಡೂ ಮೊಲೆಗಳ ಮೂಗುಗಳನ್ನು ಮುಟ್ಟಬೇಕು.
ಟೊಂಕ	ಟೊಂಕವನ್ನು ಮುಟ್ಟಬೇಕು.
ಮೊಣಕಾಲು	ಬಗ್ಗಿ ಎರಡೂ ಮೊಣಕಾಲ ಪರಟೆಗಳಿಗೆ ಎರಡೂ ಅಂಗೈಗಳನ್ನು ಹಚ್ಚಬೇಕು.
ಕಾಲು	ಎರಡೂ ಕೈಗಳಿಂದ ಎರಡು ಕಾಲುಗಳ ಹೆಬ್ಬೆರಳನ್ನು ಹಿಡಿಯಬೇಕು.
ಮೊದಲಿನಂತೆ	ಮೊದಲಿನಂತೆ ಸರಿಯಾಗಿ ನಿಲ್ಲಬೇಕು.
	೫ನೇ ಪಾಠ.
ನಂಬರು	(ಎಚ್ಚರಿಕೆಯ ಬಗ್ಗೆ)
ಎಣಿಸಿರಿ	ಎಲ್ಲರೂ ಅನುಕ್ರಮವಾಗಿ ಎಡಗಡೆಯಿಂದ ಪ್ರಾರಂಭ ಮಾಡಿ ೧-೨-೩ ಹೀಗೆ ನಂಬರುಗಳನ್ನು ಎಣಿಸಬೇಕು. ನಂಬರು ಎಣಿಸುವಾಗ ಮೊದಲನೆಯವನು ತನ್ನ ಮೋರೆಯನ್ನು ಎರಡನೆಯವನ ಕಡೆಗೆ, ಎರಡನೆಯವನು ಮೂರನೆಯವನ ಕಡೆಗೆ, ಹೀಗೆಯೇ ಪ್ರತಿಯೊಬ್ಬರು ಮಾಡುತ್ತ ಎಣಿಸಬೇಕು. ಕಡೆಯವನು ಮಾತ್ರ ಮೋರೆ ತಿರುಗಿಸಬಾರದು.
ಸಲಾಮ್	(ಎಚ್ಚರಿಕೆಯ ಬಗ್ಗೆ)
ಬಲಗೈ	ಬಲಗೈ ಬೆರಳುಗಳನ್ನು ಜೋಡಿಸಿ,

	ಹೆಬ್ಬೆರಳನ್ನು ಹುಬ್ಬಿಗೆ ಹಚ್ಚಿ ಸಲಾಮು ಮಾಡಬೇಕು.
ಒಂದು	ಎರಡೂ ಕೈಯನ್ನು ಕೆಳಗೆ ಮಾಡಬೇಕು.
ಎಡಗೈ	ಬಲಗೈಯಂತೆ ಎಡಗೈಯಿಂದ ಸಲಾಮು ಮಾಡಬೇಕು.
ಒಂದು	ಎರಡೂ ಕೈಯನ್ನು ಕೆಳಗೆ ಮಾಡಬೇಕು.
ಹೋಗಿರಿ.	ಎಲ್ಲರೂ ಗದ್ದಲ ಮಾಡದೆ, ಬಲಗೈಯಿಂದ ಸಲಾಮು ಮಾಡಿ, ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕು.

ಮೊದಲನೇ ಇಯತ್ತೆಯ ಡ್ರಿಲ್ಲಿನ ಪಾಠಗಳು.

ಅಪ್ಪಣೆಗಳು.	ಹುಡುಗರು ಮಾಡತಕ್ಕ ಕೃತಿಗಳು.
	೧ನೇ ಪಾಠ.
	(ಹುಡುಗರನ್ನು ಸಾಲಾಗಿ ನಿಲ್ಲಿಸಿ ನಂಬರುಗಳನ್ನು ಎಣಿಸಲಿಕ್ಕೆ ಹೇಳುವದು)
ನಡೆಯುವದು ಒಂದು ಹೆಜ್ಜೆ ಮುಂದೆ	(ಎಚ್ಚರಿಕೆಯ ಬಗ್ಗೆ)
ಒಂದು	ಕೂಡಲೇ ಎಲ್ಲರೂ ಎಡಗಾಲನ್ನು ಎತ್ತಿ, ಗೇಣು ಅಂತರದ ಮೇಲೆ ಮುಂದೆ ಇಡಬೇಕು.
ಎರಡು	ಬಲಗಾಲನ್ನು ಎತ್ತಿ ಎಡಗಾಲಿಗೆ ಹೊಂದಿಸಿ ಸಾಲಾಗಿ ನಿಲ್ಲಬೇಕು.
	ಟೀಪು–ಮೊದಲನೇ ಸಾರೆ ಎಲ್ಲರೂ ಸರಿಯಾಗಿ ಮಾಡುವದು ಅಸಂಭವವಾದ ಕಾರಣ

	ತಪ್ಪಿದಾಗ ("ಮೊದಲಿನಂತೆ") ಈ ಅಪ್ಪಣೆ ಕೊಟ್ಟು ಎಲ್ಲರೂ ಸರಿಯಾಗಿನಿಲ್ಲುವಂತೆ ಮಾಡಿಕೊಳ್ಳಬಹುದು. ಮುಂದೆ ಪ್ರತಿಯೊಂದು ಪಾಠದಲ್ಲಿಯೂ ಆವಶ್ಯಕಂಪಾಗ ಈ ಅಪ್ಪಣೆಯನ್ನು ಉಪಯೋಗ ಮಾಡಿಕೊಳ್ಳಬೇಕು.
ಒಂದು ಹೆಜ್ಜೆ ಹಿಂದೆ	(ಎಚ್ಚರಿಕೆಯ ಬಗ್ಗೆ)
ಒಂದು	ಬಲಗಾಲನ್ನು ಎತ್ತಿ, ಒಂದು ಗೇಣು ಅಂತರದ ಮೇಲೆ ಎಡಗಾಲ ಹಿಂದೆ ಇಡಬೇಕು.
ಎರಡು	ಎಡಗಾಲನ್ನು ಎತ್ತಿ ಬಲಗಾಲಿಗೆ ಹೊಂದಿಕೆಯಾಗುವಂತೆ ಹಿಂದೆ ತೆಗೆದುಕೊಂಡು ಸರಿಯಾಗಿ ನಿಲ್ಲಬೇಕು.
ಮೊದಲಿನಂತೆ	(ಎಚ್ಚರಿಕೆಯ ಬಗ್ಗೆ)
ಒಂದು	ಬಲಗಾಲನ್ನು ಎತ್ತಿ ಮುಂದಕ್ಕೆ ಇಡಬೇಕು.
ಎರಡು	ಎಡಗಾಲನ್ನು ಎತ್ತಿ ಮುಂದಕ್ಕಿಟ್ಟು ಪ್ರಾರಂಭಕ್ಕೆ ನಿಂತ ಸ್ಥಳದಲ್ಲಿ ಸರಿಯಾಗಿ ನಿಲ್ಲಬೇಕು.

ಅನೇಕಪಾಠ.

ಬಲಕ್ಕೆ ತಿರುಗುವದು. (ನಂಬರಿನಂತೆ)	(ಎಚ್ಚರಿಕೆಯ ಬಗ್ಗೆ)
ಒಂದು	ಎಲ್ಲರೂ ಬಲಗಾಲನ್ನು ಅದರ ಪೊಳ್ಳ ಭಾಗವು ಎಡ ಹಿಮ್ಮಡಕ್ಕೆ ಹತ್ತುವಂತೆ ಅರ್ಧ ಹಿಂದಕ್ಕೆ ಸರಿಸಿಕೊಳ್ಳಬೇಕು.

ಎರಡು	ಹಿಮ್ಮಡಗಳಿಂದ ಗರ್ರನೆ ಬಲಮಗ್ಗಲು ತಿರುಗಿ ನಿಲ್ಲಬೇಕು.
ಎಡಕ್ಕೆ ತಿರುಗುವದು (ನಂಬರಿನಂತೆ)	(ಎಚ್ಚರಿಕೆಯ ಬಗ್ಗೆ)
ಒಂದು	ಎಲ್ಲರೂ ಬಲಗಾಲನ್ನು ಎತ್ತಿ ಅದರ ಹಿಮ್ಮಡವು ಎಡಗಾಲಿನ ಪೊಳ್ಳಿನ ಮುಂದೆ ಬರುವಂತೆ ಇಡಬೇಕು.
ಎರಡು	ಹಿಂಬಡಗಳನ್ನು ಊರಿ ಗರ್ರನೆ ಎಡಕ್ಕೆ ತಿರುಗಬೇಕು.
ಪೂರಾ ಬಲಕ್ಕೆ ತಿರುಗುವದು	(ಎಚ್ಚರಿಕೆಯ ಬಗ್ಗೆ)
ಒಂದು	ಬಲಗಾಲನ್ನು ಪೂರ್ಣ ಹಿಂದೆ, ಅಂದರೆ ಎಡಗಾಲ ಹಿಮ್ಮಡಕ್ಕೆ ಬಲಗಾಲ ಹೆಬ್ಬೆರಳುಗಳು ಹತ್ತುವ ಹಾಗೆ ಇಡಬೇಕು.
ಎರಡು	ಬಲಗಡೆಯಿಂದ ಪೂರ್ಣ ಹಿಂಬದಿಗೆ ತಿರುಗಿ ನಿಲ್ಲಬೇಕು.
ಮೂರು	ಮುಂದೆ ಇರುವ ಬಲಗಾಲನ್ನು ಸರಿಯಾಗಿ ತೆಗೆದುಕೊಂಡು ನಿಲ್ಲಬೇಕು.
ಪೂರಾ ಎಡಕ್ಕೆ ತಿರುಗುವದು	(ಎಚ್ಚರಿಕೆಯ ಬಗ್ಗೆ)
ಒಂದು	ಬಲಗಾಲನ್ನು ಎತ್ತಿ ಎಡಗಾಲ ಮುಂದೆ ಹೆಬ್ಬೆರಳಿಗೆ ಹತ್ತುವ ಹಾಗೆ ಇಡಬೇಕು.

ಎರಡು	ಎಡಗಡೆಯಿಂದ ಪೂರ್ಣ ಹಿಂಬದಿಗೆ ತಿರುಗಬೇಕು.
ಮೂರು	ಹಿಂದೆ ಇರುವ ಬಲಗಾಲನ್ನು ಸರಿಯಾಗಿ ತೆಗೆದುಕೊಂಡು ನಿಲ್ಲಬೇಕು.

೩ನೇ ಪಾಠ.

ಕಾಲುಬಡೆಯುವದು	(ಎಚ್ಚರಿಕೆಯ ಬಗ್ಗೆ)
ಎಡ	ಎಲ್ಲರೂ ಒಮ್ಮೆಲೇ ಎಡಗಾಲು ಎತ್ತಿ ಬಡಿಯಬೇಕು.
ಬಲ	ಸದರ ಬಲಗಾಲು

ಟೀಪು:-ಎಲ್ಲರ ಸಪ್ಪಳಗಳೂ ಒಮ್ಮೆಲೇ ಆಗಬೇಕು. ಎಡ—ಬಲ ಅಂದಾಗ ಎಲ್ಲರೂ ಆ-ಆ ಕಾಲುಗಳನ್ನೇ ಎತ್ತಿ ಬಡೆಯುತ್ತಿರಬೇಕು. ಮುಂದೆ ಸ್ವಲ್ಪ ರೂಢಿಯಾದ ಮೇಲೆ ಎಡ=ಒಂದು, ಬಲ=ಎರಡು. ಈ ಅಪ್ಪಣೆಗಳನ್ನು ಉಪಯೋಗಿಸಬೇಕು.

ಬಲಕ್ಕೆ ತಿರುಗಿರಿ	ಕಾಲುಗಳನ್ನು ಬಡೆಯುತ್ತಲೇ ಬಲಕ್ಕೆ ತಿರುಗಬೇಕು. (ಈ ಅಪ್ಪಣೆಯನ್ನು ನಾಲ್ಕು ಸಾರೆ ಕೊಟ್ಟರೆ ಒಂದು ಸುತ್ತು ಪೂರ್ಣವಾಗುವದು.)
* ನಿಲ್ಲಿರಿ	ಎಲ್ಲರೂ ಕಾಲು ಬಡಿಯುವದನ್ನು ಬಿಟ್ಟು ಸುಮ್ಮನೇ ನಿಂತುಕೊಳ್ಳಬೇಕು.

ಟೀಪು:—*ಈ ಅಪ್ಪಣೆಯನ್ನು ಹುಡುಗರು ತಪ್ಪಿದ ಕೂಡಲೇ ಪುನಃ ಕೊಟ್ಟು ಪಾಠಗಳನ್ನು ಪ್ರಾರಂಭಿಸಬೇಕು.

ಎಡಕ್ಕೆ ತಿರುಗಿರಿ	ಬಲಕ್ಕೆ ತಿರುಗಿದ ಹಾಗೆಯೇ ಎಡಕ್ಕೆ ತಿರುಗಬೇಕು.

ಮೊದಲಿನಂತೆ	ಪುನಃ ಎಲ್ಲರೂ ಮೊದಲಿನಂತೆ ಕಾ ಲು ಬಡಿಯುತ್ತ ನಿಲ್ಲಬೇಕು
ಪೂರಾ ಬಲಕ್ಕೆ ತಿರುಗಿರಿ	ಕಾಲುಗಳನ್ನು ಬಡಿಯುತ್ತಲೇ ಪೂ ರ್ಣ ಬಲಕ್ಕೆ ತಿರುಗಬೇಕು
ಪೂರಾ ಎಡಕ್ಕೆ ತಿರುಗಿರಿ.	,, ,, ಎಡಕ್ಕೆ ,,
ನಿಲ್ಲಿರಿ	ಕಾಲು ಬಡೆಯುವದನ್ನು ನಿಲ್ಲಿಸಿ ಸರಿ ಯಾಗಿ ನಿಂತುಕೊಳ್ಳಬೇಕು.

೪ನೇ ಪಾಠ.

(ಹುಡುಗರು ಸರಿಯಾಗಿ ನಿಂತ ಮೇಲೆ)

ಬಲಕ್ಕೆ (ಅಥ ವಾ ಎಡಕ್ಕೆ) ತಿ ರುಗಿರಿ	ಹಿಂದಿನ ಕ್ರಮದಂತೆ ಬಲಮಗ್ಗಲು (ಅಥವಾ ಎಡಮಗ್ಗಲು) ಹುಡುಗರನ್ನು ತಿರುಗಿಸಿ ನಿಲ್ಲಿಸಬೇಕು.
ಕಾಲುಬಡೆಯು ವದು.	(ಎಚ್ಚರಿಕೆಯ ಬಗ್ಗೆ)
ಒಂದು	ಹಿಂದಿನಂತೆ
ಎರಡು	,,
ಮುಂದೆ ನಡೆ ಯಿರಿ.	ಎಲ್ಲರೂ ಸ್ವಲ್ಪ ಸಾವಕಾಶ ಕಾಲು ಬ ಡೆಯುತ್ತ ಮುಂದೆ ನಡೆಯಬೇಕು
ನಿಲ್ಲಿರಿ	ಎಲ್ಲರೂ ಒಮ್ಮೇಲೆ ನಿಂತುಕೊಳ್ಳ ಬೇಕು.
ತಿರುಗಿರಿ	ಪೂರ್ಣ ಹಿಂಬದಿಗೆ ತಿರುಗಬೇಕು. (ಹೀಗೆಯೇ ಕೆಲವು ಸಾರೆ ತಿರುಗಿಸು ತ್ತ ಸರಳವಾಗಿ ನಡೆಯಬೇಕು.

ತೀವ್ರ ನಡೆಯಿರಿ	ಎಲ್ಲರೂ ಮುಷ್ಟಿಯನ್ನು ಮಾಡಿ ಮೊಲೆಯ ಹತ್ತರ ಹಿಡಿದು ಎಡ, ಬಲ, ಹೀಗೆ ಮನಸ್ಸಿನಲ್ಲಿ ಅನ್ನುತ್ತ, ಕುಕ್ಕುರೋಟದಂತೆ ಓಡಬೇಕು.
ನಿಲ್ಲಿರಿ	ಎಲ್ಲರೂ ಒಮ್ಮೇಲೆ ನಿಂತುಕೊಳ್ಳಬೇಕು.
ತಿರುಗಿರಿ	ಪೂರ್ಣ ತಿರುಗಿ ಓಡಬೇಕು. ● ಆ ಮೇಲೆ ಹುಡುಗರನ್ನು ಎದುರಿಗೆ ತಿರುಗಿಸಿ, "ಹೋಗಿರಿ" ಎಂದು ಅಪ್ಪಣೆಯನ್ನು ಕೊಡಬೇಕು. ಮಧ್ಯದಲ್ಲಿ ಗುರ್ತಿನ ಬಗ್ಗೆ ಒಂದು ಗೂಟವನ್ನು ಒಡೆದು, ಎಲ್ಲರೂ ಗೂಟದ ಕಡೆಗೇ ದೃಷ್ಟಿಯನ್ನು ಇಟ್ಟು, ಕುದುರೆಯನ್ನು ಫೇರಿ ತಿರುಗಿಸಿದಂತೆ ಓಡಲಿಕ್ಕೂ ಹೇಳಬಹುದು.

೨ ನೆಯ ಇಯತ್ತೆಯ ಡ್ರಿಲ್ಲಿನ ಪಾಠಗಳು

ಅಪ್ಪಣೆ.	ಹುಡುಗರು ಮಾಡತಕ್ಕ ಕೃತಿಗಳು.
ಸಿದ್ಧರಾಗಿರಿ	ಎಲ್ಲರೂ ಸರಿಯಾಗಿ ನಿಂತುಕೊಳ್ಳಬೇಕು.
ಒಂದು ಹೆಜ್ಜೆ ಎಡಕ್ಕೆ ಸರಿಯುವದು ನಂಬರಿನಂತೆ	(ಎಚ್ಚರಿಕೆಯ ಬಗ್ಗೆ)

ಒಂದು	ಎಡಗಾಲು ಎತ್ತಿ ಗೇಣು ಎಡಕ್ಕೆ ಇಡಬೇಕು.
ಎರಡು	ಬಲಗಾಲು ಎಡಗಾಲಿಗೆ ಹಚ್ಚಿ ಸರಿಯಾಗಿ ನಿಲ್ಲಬೇಕು.
ಒಂದುಹೆಜ್ಜೆ ಬಲಕ್ಕೆ ಹೋಗುವದು.	(ಎಚ್ಚರಿಕೆಯ ಬಗ್ಗೆ)
ಒಂದು	ಬಲಗಾಲು ಎತ್ತಿ ಬಲಕ್ಕೆ ಗೇಣು ಅಂತರದ ಮೇಲೆ ಇಡಬೇಕು.
ಎರಡು	ಎಡಗಾಲು ಸರಿಯಾಗಿ ತೆಗೆದುಕೊಂಡು ನಿಲ್ಲಬೇಕು.
	೩ನೆಯ ಪಾಠ.
ಸಿದ್ಧರಾಗಿರಿ	ಎಲ್ಲರೂ ಸರಿಯಾಗಿ ನಿಂತುಕೊಳ್ಳಬೇಕು.
ಸರಿಬೆಸಗಳನ್ನು	(ಎಚ್ಚರಿಕೆಯ ಬಗ್ಗೆ)
ಎಣಿಸಿರಿ	ಬೆಸ, ಸರಿ; ಬೆಸ, ಸರಿ; ಹೀಗೆ ಎಲ್ಲರೂ ಎಣಿಸಬೇಕು.
ಸರಿನಂಬರಿನವರು ಒಂದು ಹೆಜ್ಜೆ ಮುಂದೆ	(ಎಚ್ಚರಿಕೆಯ ಬಗ್ಗೆ)
ಒಂದು ಎರಡು	ಮೊದಲು ಕಲಿತ ಕ್ರಮದಂತೆ ಒಂದು ಹೆಜ್ಜೆ ಮುಂದೆ ಹೋಗಬೇಕು.
ಮೊದಲಿನಂತೆ	
ಒಂದು ಎರಡು	ಮೊದಲು ಕಲಿತ ಕ್ರಮದಂತೆ ಹಿಂದೆ ಹೋಗಬೇಕು.

ವಿಷಮ ನಂಬ ರಿನವರು ಒಂ ದು ಹೆಜ್ಜೆ ಹಿಂ ದೆ	(ಎಚ್ಚರಿಕೆಯ ಬಗ್ಗೆ)
ಒಂದು ಎರಡು	ಮೊದಲಿನ ಕ್ರಮದಿಂದ ನಿಲ್ಲಿಸಬೇಕು
ಹಿಂದಿನ ಸಾಲಿ ನವರು ಒಂದು ಹೆಜ್ಜೆ ಬಲಕ್ಕೆ	(ಎಚ್ಚರಿಕೆಯ ಬಗ್ಗೆ)
ಒಂದು ಎರಡು	ಮೊದಲು ಕಲಿಸಿಹಂತೆ ಕೃತಿಗಳನ್ನು ಮಾಡಿಸಬೇಕು.
	ಟೀಪು—ಈಗ ಎರಡು ಸಾಲುಗಳಾದಷ್ಟು, ಹಿಂದೆ ಕಲಿತಪಾಠಗಳನ್ನು ಎರಡೂ ಸಾಲಿನ ವರು ಸರಿಯಾಗಿ ಮಾಡುವಂತೆ ಕಲಿಸಬ ಹುದು.

೩ನೆಯ ಪಾಠ.

ಹುಡುಗರನ್ನು ಎರಡುಸಾಲಾಗಿ ನಿಲ್ಲಿಸಬೇಕು.

ಬಲಕ್ಕೆತಿರುಗಿ. (ನಂಬರಿನಂತೆ) ಒಂದು ಎರಡು	ಹಿಂದೆ ಕಲಿತಂತೆ ಕೃತಿಗಳನ್ನು ಮಾಡಬೇಕು.
ಕಾಲು ಬಡೆಯು ವದು.	ಎಚ್ಚರಿಕೆಯ ಬಗ್ಗೆ
ಒಂದು ಎರಡು	ಹಿಂದೆ ಕಲಿತ ಹಾಗೆ ಕೃತಿಗಳು.
ಮುಂದೆ ನಿಲ್ಲಿರಿ.	ಎಲ್ಲರೂ ಕಾಲು ಬಡಿಯುವದನ್ನು ಬಿಟ್ಟು ಗಕ್ಕನೆ ನಿಲ್ಲಬೇಕು.

ಟೀಪು — ಹೀಗೆ ಎರಡೂ ಸಾಲಿನವರನ್ನು "ಹಿಂದೆ" "ಮುಂದೆ" ಈ ಅಪ್ಪಣೆಗಳಿಂದ ತಿರುಗಿಸುತ್ತ ನಡಿಸಬೇಕು

* ಎಡಕ್ಕೂ ತಿರುಗಿಸಬಹುದು.

೪ ನೆಯ ಪಾಠ.

ಎಲ್ಲಾ ಹುಡುಗರನ್ನು ಒಂದೇ ಸಾಲಾಗಿ ನಡಿಸಲಿಕ್ಕೆ ಬಲಮಗ್ಗಲು ಅಥವಾ ಎಡಮಗ್ಗಲು ತಿರುಗಿಸಿ ಒಬ್ಬರಹಿಂದೊಬ್ಬರನ್ನಾಗಿ ನಿಲ್ಲಿಸಬೇಕು.

ಮುಂದೆ ನಡೆಯಿರಿ — ಎಚ್ಚರಿಕೆಯಬಗ್ಗೆ

ಒಂದು — "ಎಡ" ಎಂಬ ಶಬ್ದವನ್ನು ಪ್ರತಿಯೊಬ್ಬರು ಮೆಲ್ಲಗೆ ಅನ್ನುತ್ತ ಎಡಗಾಲು ಮುಂದೆ ಇಡಬೇಕು.

ಎರಡು — "ಬಲ" ಎಂಬ ಶಬ್ದವನ್ನು ಮನಸ್ಸಿನಲ್ಲಿ ಅನ್ನುತ್ತ ಬಲಗಾಲು ಮುಂದೆ ಇಡಬೇಕು.

(ಟೀಪು) ಹೀಗೆಯೇ ಎಡ, ಬಲ, ವೆಂದು ಅನ್ನುತ್ತ ಮುಂದಕ್ಕೆ ಸಾಗಬೇಕು.

ನಡೆಯುತ್ತ ಇರುವಾಗ್ಗೆ

ಎಡಕ್ಕೆ ಹೊರಳಿರಿ — ಮುಂದಿನವನೊಬ್ಬನು ಮಾತ್ರ ಎಡಕ್ಕೆ ತಿರುಗಿ ಇಡೀ ಸಾಲಿಗೆ ಲಂಬರೂಪವಾಗಿ ನಡೆಯಬೇಕು.

ಇದರಂತೆ ಬಲಕ್ಕೆ ತಿರುಗಲಿಕ್ಕೆ ಹೇಳಬಹುದು.

ಮುಂದೆ, ಎಡಕ್ಕೆ, ಬಲಕ್ಕೆ, ಹೀಗೆ ಅಪ್ಪಣೆಗಳನ್ನು ಕೊಡುತ್ತ ಕೆಳಗೆ ತೋರಿಸಿದ ಚಿತ್ರದಂತೆ ನಡೆಯಲಿಕ್ಕೆ ಹಚ್ಚಬೇಕು.

ಇಲ್ಲಿಂದ ಹೊರಡುವದು



ಎರಡು ಸಾಲುಗಳನ್ನು ಮಾಡಿ ನಡೆಯಲಿಕ್ಕೆ ಹಚ್ಚಿ, ಕೆಳಗಿನ ಅಪ್ಪಣೆಗಳನ್ನು ಕೊಡುತ್ತ ಕೆಳಗೆ ತೋರಿಸಿದ ಆಕೃತಿಗಳಂತೆ ನಡಿಯಲಿಕ್ಕೆ ಹೇಳುವದು.

ಎಡಕ್ಕೆ
ಬಲಕ್ಕೆ

ಈ ಅಪ್ಪಣೆಗಳಿಂದಲೇ ಕೆಳಗಿನ ಚಿತ್ರದಂತೆ ನಡೆಯಲಿಕ್ಕೆ ಬರುತ್ತದೆ.



೧ನೇ ಸಾಲು

೨ನೇ ಸಾಲು

ಎಡ ಸಾಲಿನವರು ಎಡಕ್ಕೆ, ಬಲ ಸಾಲಿನವರು ಬಲಕ್ಕೆ ನಡೆಯುವದು (ನಂಬರಿನಂತೆ) ಒಂದು ಎರಡು ಮೂರು ಮುಂದೆ

ಈ ಅಪ್ಪಣೆಗಳಿಂದ ಬದಿಯ ಆಕೃತಿಯಂತೆ ನಡೆಯಬೇಕು



ಎರಡೂ ಸಾಲುಗಳು ಉದ್ದಕ್ಕೆ ನಡೆಯುತ್ತಿರುವಾಗ

ಘುಂಡಗೆ ನಡೆಯುವದು — ಎಚ್ಚರಿಕೆಯ ಬಗ್ಗೆ ಶಿಕ್ಷಕನು ನಿಲ್ಲಬೇಕು.

ಒಂದು — ಪ್ರತಿಯೊಂದು ಸಾಲಿನ ಮೊದಲನೇ ನಂಬರಿನವರು ಸಾಲಿನ ಮಧ್ಯಭಾಗಕ್ಕೆ ಬದಿಗೆ ತೋರಿಸಿದಂತೆ ಹೋಗಿ ನಿಲ್ಲಬೇಕು.

ಉಳಿದವರೆಲ್ಲ ನಿಂತುಕೊಳ್ಳಬೇಕು.

ಹುಡುಗರ ಸಾಲು



ಎರಡು — ಉಳಿದವರು ಅವರನ್ನು ಮಧ್ಯಬಿಂದುವನ್ನಾಗಿ ಮಾಡಿಕೊಂಡು ನಡೆಯಬೇಕು.

ಹೋಗಿರಿ — ಹುಡುಗರು ಸ್ವೇಚ್ಛೆಯಿಂದ ಬೇಕಾದ ಕಡೆಗೆ ಹೋಗಬೇಕು.

ಸಿದ್ಧರಾಗಿರಿ	ಮೊದಲಿನಂತೆ ಉದ್ದ ಸಾಲಾಗಿ ನಿಲ್ಲಬೇಕು. ಟೀಪು—ಎರಡೂ ಸಾಲುಗಳು ಎರಡು ವರ್ಗಗಳಾಗಬೇಕು.

೩ ನೇಯ ಇಯತ್ತೆಯ ಡ್ರಿಲ್ಲಿನ ಪಾಠಗಳು.

ಅಪ್ಪಣೆಗಳು.	ಹುಡುಗರು ಮಾಡತಕ್ಕ ಕೃತಿಗಳು.
	೧ ನೆಯ ಪಾಠ.
ಕಾಲು ಬಡಿಯುವದು	ಎಚ್ಚರಿಕೆಯ ಬಗ್ಗೆ
ಒಂದು ಎರಡು	ಎಡ. ಬಲ. ಅನ್ನುತ್ತ ಕಾಲುಗಳನ್ನು ಬಡಿಯಬೇಕು.
ಮುಂದೆ	ಮುಂದೆ ನಡೆಯಬೇಕು.
ಎಡಕ್ಕೆ ಬಲಕ್ಕೆ ಪೂರ್ಣ ಬಲಕ್ಕೆ ಪೂರ್ಣ ಎಡಕ್ಕೆ	ಈ ಅಪ್ಪಣೆಗಳಿಂದ ಎಲ್ಲರನ್ನೂ ತಿರುಗಿಸುತ್ತ ಸಾಲಾಗಿ ನಡಿಸಬೇಕು.
	೨ ನೇ ಪಾಠ.
	ಎಲ್ಲರೂ ಸರಿಯಾಗಿ ನಿಂತಮೇಲೆ
ಸರಿಬೆಸಗಳನ್ನು	ಎಚ್ಚರಿಕೆಯ ಬಗ್ಗೆ
ಎಣಿಸಿರಿ	ಸರಿ. ಬೆಸ. ಹೀಗೆ ಎಣಿಸಲಿಕ್ಕೆ ಪ್ರಾರಂಭಿಸಬೇಕು.

ಸರಿ ನಂಬರದವರು ಒಂದು ಹೆಜ್ಜೆ ಮುಂದೆ, ವಿಷಮ ನಂಬರದವರು ಒಂದು ಹೆಜ್ಜೆ ಹಿಂದೆ,	ಎಚ್ಚರಿಕೆಯ ಬಗ್ಗೆ.
ಒಂದು	ಸರಿ ನಂಬರದವರು ಮುಂದೆ ಹೋಗುವಾಗ ಮಾಡುವಂತೆಯೂ ವಿಷಮ ನಂಬರದವರು ಹಿಂದೆ ಹೋಗುವಾಗ ಮಾಡುವಂತೆಯೂ ಕೃತಿಗಳನ್ನು ಮಾಡಬೇಕು.
ಎರಡು	,, ,, ,, ,,
ಹಿಂದಿನ ಸಾಲಿನವರು ಒಂದು ಹೆಜ್ಜೆ ಎಡಕ್ಕೆ	ಎಚ್ಚರಿಕೆಯ ಬಗ್ಗೆ.
ಒಂದು ಎರಡು	ಎಡಕ್ಕೆ ಹೋಗುವ ಕೃತಿಗಳಂತೆ ಹೋಗಬೇಕು. ಈಗ ಪೂರ್ಣ ಎರಡುಸಾಲುಗಳಾದವು.
ಎಡಕ್ಕೆ ಬಲಕ್ಕೆ ಪೂರ್ಣ ಬಲಕ್ಕೆ ಪೂರ್ಣ ಎಡಕ್ಕೆ	ಈ ಅಪ್ಪಣೆಗಳಿಂದ ಎರಡೂ ಸಾಲುಗಳನ್ನು ಸರಿಯಾಗಿ ನಡಿಸಬೇಕು.

೩ ನೇ ಪಾಠ.

	ಎಲ್ಲರೂ ಎರಡು ಸಾಲುಗಳಾಗಿ ನಿಂತ ಬಳಿಕ.
ನಂಬರುಗಳನ್ನು	ಎಚ್ಚರಿಕೆಯ ಬಗ್ಗೆ.

ಎಣಿಸಿರಿ	(ಗೊತ್ತಿದ್ದ ಕ್ರಮದಂತೆ ಎಣಿಸಬೇಕು.)
ಸರಿ ನಂಬರಿನವರು ಒಂದು ಹೆಜ್ಜೆ ಮುಂದೆ, ವಿಷಮ ನಂಬರಿನವರು ಒಂದು ಹೆಜ್ಜೆ ಹಿಂದೆ	
ಒಂದು	ಈ ಅಪ್ಪಣೆಗಳಿಂದ ನಾಲ್ಕು ಸಾಲುಗಳನ್ನು ಮಾಡಿಸಬೇಕು.
ಎರಡು	
ಹಿಂದಿನ ಸಾಲಿನವರು ಒಂದು ಹೆಜ್ಜೆ ಎಡಕ್ಕೆ	
ಒಂದು	ಟೀಪು—೨ ನೆಯ ಪಾಠದ ಕಡೆಯ ಅಪ್ಪಣೆಗಳಂತೆ ಇಲ್ಲಿಯೂ ನಡಿಸಬಹುದು.
ಎರಡು	
	೪ ನೇ ಪಾಠ.
	ಎಲ್ಲರೂ ಒಂದೇ ಸಾಲಾಗಿ ನಿಂತುಕೊಳ್ಳಬೇಕು.
ಅರ್ಧ ಬಲಕ್ಕೆ ತಿರುಗುವದು	ಎಚ್ಚರಿಕೆಯ ಬಗ್ಗೆ.
ಒಂದು	ಬಲಗಾಲು ಅರ್ಧ ಹಿಂದೆ ತೆಗೆದುಕೊಳ್ಳಬೇಕು.
ಎರಡು	ಅರ್ಧ ಬಲಕ್ಕೆ ತಿರುಗಬೇಕು.
ಅರ್ಧ ಎಡಕ್ಕೆ ತಿರುಗುವದು.	ಎಚ್ಚರಿಕೆಯ ಬಗ್ಗೆ.
ಒಂದು	ಬಲಗಾಲು ಅರ್ಧ ಮುಂದೆ ಇಡಬೇಕು.
ಎರಡು	ಅರ್ಧ ಎಡಕ್ಕೆ ತಿರುಗಬೇಕು.
	ಟೀಪು— ಹುಡುಗರನ್ನು ಎರಡು ಅಥವಾ ನಾಲ್ಕು ಸಾಲುಗಳಾಗಿ ನಿಲ್ಲಿಸಿ ಈ ಕೃತಿಗಳನ್ನು ಮಾಡಿಸಬಹುದು.

೪ನೇ ಇಯತ್ತೆಯ ಬಗ್ಗೆ

ಫಿಜಿಕಲ್ ಟ್ರೇನಿಂಗ

೧–ರಿಂದ ೫ ಪಾಠಗಳು ಪೂರ್ಣ

(ಮೈಸೂರಲ್ಲಿ ಆರ್. ಶ್ಯಾಮಸುಬ್ಬಯ್ಯನವರಿಂದ ರಚಿಸಲ್ಪಟ್ಟ "ಡ್ರಿಲ್ಲ ಪುಸ್ತಕ" ದಲ್ಲಿ ಹೇಳಿದಂತೆ)

೫ನೇ ಇಯತ್ತೆಯ ಬಗ್ಗೆ

೬–ರಿಂದ ೯ ಪಾಠಗಳು ಪೂರ್ಣ

(ಮೇಲೆ ಬರೆದ ಪುಸ್ತಕದಲ್ಲಿ ಹೇಳಿದಂತೆ)

೬ ಮತ್ತು ೭ನೇ ಇಯತ್ತೆಗಳ ಬಗ್ಗೆ

(ಮೇಲೆ ಬರೆದ ಪುಸ್ತಕದಲ್ಲಿ ೫೬ನೇ ಪುಟದಿಂದ ಕೊನೆಯ ವರೆಗೆ ಹೇಳಿದಂತೆ)

೧. ಎಕ್ಸಟೆನಶನ್ ಮೋಶನ್
೨. ಡಂಬೆಲ್ಸ ಎಕ್ಸರಸಾಯಿಜ

ಪಾಠಗಳು–ಪೂರ್ಣ

ಬಾಲಕರ ಇಯತ್ತೆಯಿಂದ ೩ನೇ ಇಯತ್ತೆಯವರೆಗೆ ವಿದ್ಯಾರ್ಥಿಗಳು ಆಡತಕ್ಕ ಆಟಗಳು.

ಇಯತ್ತೆಗಳು.	ಆಟಗಳು.
ಬಾಲಕರ ಇಯತ್ತೆ	೧ ಗಂಗಾಳವುರಿಗೆಯ ಆಟ ೨ √ ಕಣ್ಣುಮುಚ್ಚಣಿಕೆಯ ಆಟ
೧ ನೆಯ ಇಯತ್ತೆ.	೧ ಕಂಬ ಕಂಬಾಟ ೨ √ ಕಣ್ಣು ಮುಚ್ಚಣಿಕೆಯ ಆಟ ೩ ಕುಂಟ ಹಲಪಿಯ ಆಟ
೨ನೇ ೩ನೇ ಇಯತ್ತೆಗಳು	೧ ಕಾನಕಾನ ಉತ್ರಾತ್ರಿ ೨ × ಚಂಡು ಹೊಡೆದಾಡುವದು ೩ ಚಿಣೀ ಫಣೀ ೪ ಗುಂಡು ಹೊಡದಾಡುವದು (ಡೀಕುವದು) ೫ ಗಜಗ ಮಿಕಲೀ ಆಟ ೬ ● ತಿಳ್ಳಿ

೬ನೇ ೭ನೇ ಇಯತ್ತೆಗಳು	೧ ಗಿಡಮಂಗನ ಆಟ ೨ ಹುಡತ ಹುಡತೆ (ಹೂತೂತು) ೩ × ಚಂಡು ಹೊಡೆದಾಡುವದು ೪ ಫಣೀಚಂಡು ೫ ● ತ್ರಿಳ್ಳಿ
೪ನೇ ೫ನೇ ಇಯತ್ತೆಗಳು	೧ ● ತ್ರಿಳ್ಳಿ ೨ ಖೋ

* ಈ ಆಟವು ೨ನೇ ಇಯತ್ತೆಯಿಂದ ಕಡೆಯುವರೆಗೆ.

× ಈ ಆಟವು ೨-೩-೪-೫ ಇಯತ್ತೆಗಳಿಗೆ

V ಈ ಆಟವು ಮೊದಲನೇ, ಬಾಲಕರ ಇಯತ್ತೆಗಳಿಗೆ.

ಪ್ರಾಥಮಿಕ ಶಾಲೆಗಳಲ್ಲಿ ಕಲಿಸತಕ್ಕ ವ್ಯಾಯಾಮದ ತರಗತಿ.

೪ ನೇ ಇಯತ್ತೆ.

ಸಾಮುಗಳು—(೧) ಎರಡೂ ಕೈಗಳ ಮೇಲೆ ಭಾರಹಾಕಿ ತೆಗೆಯುವ ಸಾಮು.

(೨) ಒಂದೊಂದೇ ಕೈಮೇಲೆ ಭಾರಹಾಕಿ ತೆಗೆಯುವ ಸಾಮು.

ಉಠಾಬೈಸ—(೧) ಸಾದಾ ಉಠಾಬೈಸ.

(೨) ಒಮ್ಮೆ ಎಡಗಾಲು ಒಮ್ಮೆ ಬಲಗಾಲು ಮುಂದೆ ಇಟ್ಟು ಉಠಾಬೈಸ ತೆಗೆಯುವದು.

ಲೋಡು—(೧) ಬಗಲಿ-ಸಿಂಗಲ್ (ಒಂದೊಂದೇ ಲೋಡನ್ನು ಹೆಗಲಮೇಲಿಂದ ಹಿಂಬದಿಗೆ ಒಯ್ದು ಬಗಲಲ್ಲಿ ತರುವದು ಪುನಃ ಹೆಗಲ ಮೇಲಿಂದ ಮುಂಬದಿಗೆ ತರುವದು.)

(೨) ಬಗಲಿ-ಡಬಲ್ (ಮೇಲಿನಂತೆ ಎರಡೂ ಕೈಗಳು).

(೩) ಬಗಲ (ಸಿಂಗಲ್) ಚೇಂಜ (ಒಂದು ಲೋಡು ಹಿಂದೆ ಒಂದು ಲೋಡು ಮುಂದೆ).

(೪) ಬಗಲಿ-ಡಬಲ್-ಚೇಂಜ (ಎರಡೂ ಲೋಡುಗಳು ಹಿಂದೆ ಮುಂದೆ).

---

೫ ನೇ ಇಯತ್ತೆ.

ಹಿಂದಿನವಿಷಯಗಳಲ್ಲದೆ ಕೆಳಗೆ ಬರೆದ ವಿಷಯಗಳನ್ನು ಕಲಿಸತಕ್ಕದ್ದು.

ಸಾಮು—(೧) ಎರಡೂ ಕಾಲುಗಳನ್ನು ಹಿಂದೆ ಮೇಲಕ್ಕೆ ಹಾರಿಸಿ, ಮುಂದೆ ತಂದು ಸಾಮು ತೆಗೆಯುವದು

ಉತಾಬೈಸ—(೧) ಎರಡೂ ಕಾಲುಗಳಿಂದ ಮುಂದಕ್ಕೆ ಜಿ
ಗಿದು ಉತಾಬೈಸ ತೆಗೆಯುವದು.

ಲೋಡು—(೧) ಮುಂಡಿ (ಲೋಡುಗಳನ್ನು ಹೆಗಲಿಗೆ ಹಚ್ಚಿ
ದಂತೆ ಭುಜಗಳ ಸುತ್ತು ಮುತ್ತು ಚಕ್ರಾಕಾರ
ವಾಗಿ ತಿರುಗಿಸುವದು).

(೨) ಡಬಲ್—(ಎರಡೂ ಲೋಡುಗಳನ್ನು ಸ
ಮಾಂತರವಾಗಿ ಹೆಗಲಮೇಲೆ ಹಿಡಿದು ಹಿಂ
ಬದಿಗೆ ಅಷ್ಟೇ ಅಂತರದಿಂದ ಎಡದಿಂದ ಬ
ಲಕ್ಕೂ ಬಲದಿಂದ ಎಡಕ್ಕೂ ಮಾಡಿ ಮುಂ
ದೆ ತರುವದು).

(೩) ರುಮಾಲಿ—ಎರಡೂ ಲೋಡಗಳನ್ನು ಕ್ರ
ಮವಾಗಿ ರುಮಾಲಸುತ್ತುವಂತೆ ತಲೆಸು
ಸುತ್ತು ಸರಳವಾಗಿ ಹಿಡಿದು ತಿರುವುವದು.

(೪) ಉಲಟರುಮಾಲಿ—ಲೋಡುಗಳನ್ನು ನೆಲ
ಕ್ಕೆ ಇಟ್ಟು ಮುಷ್ಠಿಯಿಂದ ಅವುಗಳ ಹಿಡಿ
ಕೆಯನ್ನು ಹಿಡಿದು ತೋಳು ನೆಗಹಿ ತಿರು
ವುವದು.

ಅನುಕೂಲವಿದ್ದರೆ ಮಲಕಂಬದ ಕೃತಿಗಳನ್ನು ಇದ
ಕ್ಕೂ ಕೆಳಗಿನ ಇಯತ್ತೆಯಲ್ಲಿ ಕಲಿಸಬಹುದು.

ಮಲಖಂಬ—(೧) ಎಡಗೈ ಭುಜಕ್ಕೆ ಮಲಖಂಬವನ್ನು ಹ
ಚ್ಚಿ ಹಿಡಿದು ಮೇಲಕ್ಕೆ ಹಾರಿ ಅದನ್ನು ತೊ
ಡಿಯಿಂದ ಹಿಡಿಯುವದು. ಮತ್ತು ಕೈಬಿಟ್ಟು
ನೆಲಕ್ಕೆ ಜಿಗಿಯುವದು.

(೨) ಮೇಲಿನಂತೆ ಮಲಖಂಬವನ್ನು ಹತ್ತಿ
ಕಾಲುಬಿಟ್ಟು ಮತ್ತೊಂದು ಸಾರೆ ಮೇಲೆ ಹ
ತ್ತುವದು.

೬ ನೇ ಇಯತ್ತೆ.

ಹಿಂದಿನ ವಿಷಯಗಳಲ್ಲದೆ ಕೆಳಗಿನ ವಿಷಯಗಳನ್ನು ಕ
ಲಿತಕ್ಕದ್ದು.

ಸಾಮು—ಚಕ್ರಸಾಮು.

ಲಾಭ್ಯಸ—ಎಲ್ಲ ಪ್ರಕಾರಗಳು.

ಓಡುಗಳು—(೧) ಏಕೇರಿಕಾಡಣಿ.
(೨) ದುಹೇರಿ ಕಾಡಣಿ.
(೪) ಬಾಹೇರೀಲಫೇಕ.

ಮಲಖಂಬ— (೧) ಬಗಲಿ-ಬಗಲಲ್ಲಿ ಮಲಖಂಬವನ್ನು ಹಿ
ಡಿದು ಮೇಲಕ್ಕೆ ಹಾರಿ ಕಾಲಿನಿಂದ ಮಲ
ಖಂಬವನ್ನು ಗಟ್ಟಿಯಾಗಿ ಹಿಡಿದು ಕೈಬಿ
ಟ್ಟು ಮೇಲಕ್ಕೆ ಹತ್ತುವದು.
(೨) ಉಲಟಬಗಲಿ—೫ ನೇ ಇಯತ್ತೆಯಲ್ಲಿ
ಹೇಳಿದಂತೆ ಮಲಖಂಬವನ್ನು ಹಿಡಿದು
ಮೇಲಕ್ಕೆ ಹಾರಿ ೧ ನೇ ಪ್ರಕಾರದಲ್ಲಿ ಹೇಳಿ
ದಂತೆ ಕಾಲಿನಿಂದ ಹಿಡಿದು ಕೈಬಿಟ್ಟು ಮೇ
ಲಕ್ಕೆ ಹತ್ತುವದು.

---

೭ ನೇ ಇಯತ್ತೆ.

ಹಿಂದಿನ ಯಾವತ್ತು ವಿಷಯಗಳನ್ನು ವಿಶೇಷವಾಗಿ ರೂ
ಢಿಮಾಡುವದು. ಮತ್ತು ಚಟುವಟಿಕೆಯಿಂದ ಮಾಡುವದು.

ಸೂಚನೆ:—ಅವಶ್ಯಕಂಡರೆ ಮಲಖಂಬದಲ್ಲಿ ಹೆಚ್ಚಿಗೆ ಕ
ಠಿಣವಾದ ಪೇಚುಗಳನ್ನು ಹೇಳಬಹುದು.

ಓಡುಗಳ ತೂಕವು ಕೆಳಗೆ ಹೇಳಿದ ಕ್ರಮದಂತೆ ಇ
ರತಕ್ಕದ್ದು.

ಹುಡುಗನ ವಯಸ್ಸು	ಲೋಡಿನ ಜೋಡಿಯ ತೂಕ
೮	೧¼ ಪೌಂಡು
೯	೧½ ,,
೧೦ ಮತ್ತು ೧೧	೨ ,,
೧೨ ಮತ್ತು ೧೩	೨ ಅಥವಾ ೨½ ಪೌಂಡು
೧೪ ಮತ್ತು ೧೫	೨½ ಅಥವಾ ೩ ,,

ಬೇರೆ ಬೇರೆ ಇಯತ್ತೆಗಳ ಹುಡುಗರ ಸಲುವಾಗಿ ಗೊತ್ತು ಮಾಡಿದ

ಆಟಗಳು.

ಬಾಲಕರ ವರ್ಗವು.

೧. ಗಂಗಾಳ ಮುರಿಗೆಯ ಆಟವು.

ಆಡತಕ್ಕ ಹುಡುಗರಲ್ಲಿ ಒಬ್ಬನನ್ನು ಬಿಟ್ಟು, ಉಳಿದವರೆಲ್ಲರು ದುಂಡಗೆ ಕೂತ ಬಳಿಕ, ಉಳಿದವನೊಬ್ಬನು ಮುರಿಗೇ ಹಾಕಿದ ೧ಮೊಳ ಉದ್ದವಾದ ಅರಿವೆಯನ್ನು (ಲಡ್ಡು) ಕೈಯಲ್ಲಿ ಹಿಡಿದುಕೊಂಡು, ಕೂತವರ ಸುತ್ತಲೆ ಹಿಂಬದಿಯಲ್ಲಿ ತಿರುಗುತ್ತಿದ್ದು, ಒಬ್ಬನ ಹಿಂದೆ, ಅವನು ಅರಿಯದಂತೆ ಅದನ್ನು ಇಟ್ಟು, ಹಾಗೇ ತಿರುಗುತ್ತಿರಬೇಕು. ಯಾರ ಹಿಂದೆ ಲಡ್ಡು ಇಡಲ್ಪಟ್ಟಿರುವದೋ ಅವನು, ತಿರುಗುವವನು ತನ್ನ ಹತ್ತರ ಬರುವದರೊಳಗೆ ಎದ್ದು, ಲಡ್ಡು ಕೈಯಲ್ಲಿ ತೆಗೆದುಕೊಂಡು, ತಿರುಗುವನನ ಬೆನ್ನು ಹತ್ತಿದನೆಂದರೆ, ತಿರುಗುವವನು ಓಡಿ ಬಂದು, ತೆರವಾದ ಸ್ಥಳದಲ್ಲಿ ಕುಳಿತುಕೊಳ್ಳಬೇಕು. ಯಾರ ಹಿಂದೆ ಲಡ್ಡು ಇಡಲ್ಪಟ್ಟಿರುವದೋ ಅವನಿಗೆ ತಿರುಗುವವನು ತನ್ನ ಹತ್ತರ ಬರುವ ವರೆಗೆ ಲಡ್ಡು ಇಟ್ಟದ್ದು ಗೊತ್ತಾಗದಿದ್ದರೆ, ತಿರುಗುವವನು ಲಡ್ಡಿನಿಂದ

ಅವನನ್ನು ಹೊಡೆಯುತ್ತ ತೆರವಾದ ಸ್ಥಳದ ವರೆಗೆ ಬೆನ್ನಹತ್ತಿ, ತೆರವಾದ ಸ್ಥಳದಲ್ಲಿ ಕುಳಿತುಕೊಳ್ಳಬೇಕು. ಲಡ್ಡು ಅರಿಯದಂತೆ ತಮ್ಮ ಬೆನ್ನ ಹಿಂದೆ ಉಳಿಯಬಾರದೆಂದು ಎಲ್ಲರೂ ಎಚ್ಚರಾಗಿರುವರು.

೨. V ಕಣ್ಣು ಮುಚ್ಚಣಿಕೆಯ ಆಟವು— ಇದರ ಕೃತಿಯು ೧ನೇ ಪುಸ್ತಕದ ೧೬ನೇ ಪಾಠದಲ್ಲಿ ವಿವರಿಸಿರುತ್ತದೆ.

೧ನೇ ಇಯತ್ತೆ

೧. ಕಂಬಕಂಬಾಟ,—

ಒಬ್ಬೊಬ್ಬನು ಒಂದೊಂದು ಕಂಬವನ್ನು ಹಿಡುಕೊಂಡು ನಿಲ್ಲಬೇಕು. ಯಾರಿಗೆ ಕಂಬವು ಸಿಗುವದಿಲ್ಲವೋ ಅವನು ತಿರುಗುತ್ತಿರಬೇಕು. ಕಂಬವನ್ನು ಹಿಡಿದವನು, ಅದನ್ನು ಬಿಟ್ಟು, ಒಬ್ಬನ ಕಂಬವನ್ನು ಮತ್ತೊಬ್ಬನು ಹಿಡಿಯುತ್ತ, ಆಡುತ್ತಿರುವಾಗ್ಗ ತೆರವಾದ ಕಂಬವನ್ನು ತಿರುಗುವವನು ಹಿಡಿದು ಕೊಳ್ಳುವನು. ಯಾರಿಗೆ ಕಂಬವು ಸಿಗುವದಿಲ್ಲವೋ ಅವನು ತಿರುಗಬೇಕು.

(ಕಂಬಗಳುಳ್ಳ ಸಾಲೇಮನೆಯಲ್ಲಿ ಈ ಆಟವನ್ನು ಆಡಿಸಬಹುದು. ಆದರೆ ಕಂಬಗಳಿಲ್ಲದಲ್ಲಿ ಬೈಲೊಳಗೆ ತಕ್ಕಷ್ಟು ಅಂತರದಿಂದ ನೆಲದಮೇಲೆ ಕಲ್ಲುಗಳನ್ನು ಸಮಾಂತರವಾಗಿ ಕೆಲವು ಸಾಲು ಕಲ್ಲುಗಳನ್ನು ಇಟ್ಟು, ಈ ಆಟವನ್ನು ಆಡಿಸ ಬಹುದು.)

೨. ಕಣ್ಣುಮುಚ್ಚಣಿಕೆಯ ಆಟ—೧ನೇ ಪುಸ್ತಕದ ೧೬ನೇ ಪಾಠದಲ್ಲಿ ಈ ಆಟದ ಕ್ರಮವು ವಿವರಿಸಲ್ಪಟ್ಟಿರುವದು.

೩. ಕುಂಟ ಹಲಿಪಿಯ ಆಟ.

ಬೈಲೊಳಗೆ ಒಂದರ ಮೇಲೊಂದರಂತೆ ೭ ಮನೆಗಳನ್ನು ಕೊರೆಯಬೇಕು. ಆಡುವವನು ಹಲಿಪೆಯನ್ನು

೧ನೇ ಮನೆಯೊಳಗೆ ಚಲ್ಲಿ, ಒಂದೇ ಕಾಲಿನಿಂದ ಕುಂಟುತ್ತ, ಆ ಹಲಿಪೆಯು ೨ನೇ ಮನೆಯೊಳಗೆ ಕಾಲಿನಿಂದ ದೂಡಬೇಕು. ಹೀಗೆಯೇ ೭ನೇ ಮನೆಯೊಳಗೆ ಆ ಹಲಿಪೆಯು ಹೋಗುವ ವರೆಗೆ ದೂಡಿದರೆ, ಅವನು ಗೆದ್ದನೆಂದು ತಿಳಿಯುವರು.

೨ನೇ ೩ನೇ ಇಯತ್ತೆಗಳು.

೧. ಕಾನಕಾಲು ಉತ್ತರುತ್ತಿಯು.

ಈ ಆಟದಲ್ಲಿ ಒಬ್ಬ ಹುಡುಗನು ಕಾಲು ಚಾಚಿ, ಪಾದವನ್ನು ಎತ್ತರಿಸಿ ಕೂಡ್ರುವನು. ಉಳಿದವರು ಒಬ್ಬರ ಹಿಂದೊಬ್ಬರಂತೆ ಪಾದಕ್ಕೆ ತಗಲದಂತೆ ಹಾರಿ ಹೋಗುವರು. ಯಾರಕಾಲು ತಾಕುವದೋ ಅವನು ಕೂಡ್ರಬೇಕಾಗುವದು. ಕುಳಿತವನು ಮೊದಲು ಒಂದು ಪಾದವನ್ನು ಎತ್ತರಿಸಿ ಕೂಡ್ರುವನು. ಬಳಿಕ ಒಂದರಮೇಲೊಂದು ಪಾದಗಳನ್ನು ಎತ್ತರಿಸಿ ಇಡುವನು. ಆಮೇಲೆ ೨ ಪಾದಗಳಮೇಲೆ ಒಂದು ಗೇಣನ್ನು, ತರುವಾಯ ಮತ್ತೊಂದು ಗೇಣನ್ನು ಎತ್ತರಿಸಿ ಹಿಡಿಯುವನು. ಬಳಿಕ ಹುಡುಗನು ಬೊಗ್ಗಿ ನೆಲಕ್ಕೆಹತ್ತಿ, ತರುವಾಯ ಸ್ವಲ್ಪ ಮೇಲಕ್ಕೇರಿ, ಆಮೇಲೆ ಒಂಟೆಯಂತೆ ಹೆಚ್ಚು ಎತ್ತರವಾಗಿ ಕೂಡ್ರುವನು. ಕುಳಿತವನಿಗೆ ತಾಕದಂತೆ ಹಾರಿದವನೇ ಗೆದ್ದನೆಂದು ತಿಳಿಯಲ್ಪಡುವದು.

೨. ● ಚೆಂಡಿನ ಆಟವು. ಹೊಡೆದಾಟದ ಚೆಂಡು

೩. ಚಿಣೀಫಣಿಯ ಆಟವು.

ಈ ಆಟದಲ್ಲಿ ಸಾಧಾರಣ ೧ ಮೊಳ ಉದ್ದವಾದದ್ದೊಂದು, ೪ ಬೆರಳು ಉದ್ದವಾದದ್ದೊಂದು, ಹೀಗೆ ೨ ಕಟ್ಟಿಗೆಯ ತುಂಡುಗಳು ಇರುವವು. ಉದ್ದ ತುಂಡಿಗೆ "ಫಣಿ"ಯೆಂತಲೂ ಸಣ್ಣದಕ್ಕೆ "ಚಿಣಿ"ಯೆಂತಲೂ

ಅನ್ನುವರು. ಆಡುವವರು ಎರಡು ಬಣಗಳಾದ ಬಳಿಕ ಒಂದು ಬಣದವರು ಆಡುವರು, ಮುತ್ತೊಂದು ಬಣದವರು ಹಿಡಿಯುವರು.

೪. ಗುಂಡಿನ ಆಟವು-ಡೀಕುವ ಆಟ.

೫. ಗಜಗ-ಮಿಕಲೀ ಆಟ.

× ೬. ತಿಳ್ಳಿಗ ಆಟವು. ಈ ಆಟವು ನಮ್ಮ ದೇಶದಲ್ಲಿ ಪ್ರಸಿದ್ಧವಾಗಿರುವದು. (ಇದರ ಕೃತಿಯು ದಿಗ್ದರ್ಶನವು ೧ನೇ ಪುಸ್ತಕದ ೧೨ನೇ ಪಾಠದಲ್ಲಿ ಮಾಡಲ್ಪಟ್ಟಿರುವದು.)

೪ನೇ ೫ನೇ ಇಯತ್ತೆಗಳು.

೧. ಗಿಡಮಂಗನ ಆಟವು.

ಈ ಆಟದಲ್ಲಿ ಒಬ್ಬನನ್ನು ಬಿಟ್ಟು ಉಳಿದವರೆಲ್ಲರು ಗಿಡದ ಟೊಂಗೆಗಳ ಮೇಲೆ, ಮಂಗಗಳಂತೆ ಕೂಡ್ರುವರು. ಕೆಳಗೆ ನಿಂತವನು, ನೆಲದ ಮೇಲೆ ಇಟ್ಟ ಕೋಲನ್ನು, ಮೇಲೆ ಕುಳಿತವರು ತೆಗೆದುಕೊಳ್ಳದಂತೆ ಕಾಯುತ್ತಿರುವನು. ಮೇಲಿನವರು ಆ ಕೋಲು ತೆಗೆದುಕೊಳ್ಳುವದಕ್ಕೆ ಬಗೆಬಗೆಯಿಂದ ಯತ್ನ ನಡಿಸುವರು. ಕೋಲು ತೆಗೆದುಕೊಳ್ಳಲಿಕ್ಕೆ ಬಂದವನು ಕಾಯುವವನ ಕಯ್ಯೊಳಗೆ ಸಿಕ್ಕರೆ, ಕಾಯುವ ಕೆಲಸವು ಸಿಕ್ಕವನ ಕಡೆಗೆ ಬರುವದು. ಮೊದಲಿನವನು ಚಟ್ಟನೆ ಟೊಂಗೆಯನ್ನೇರಿ ಕೂಡ್ರುವನು.

೨. ಹುಡತ ಹುಡುತ್ತಿನ ಆಟವು.

೩.● ಚಂಡಿನ ಆಟವು. ಚಂಡು ಹೊಡೆದಾಡುವದು.

೪. ಫಣಿಚಂಡು- ಚಿಣೀ ಫಣಿಯ ಆಟದಂತೆ ಈ ಆಟದಲ್ಲಿಯೂ ಹುಡುಗರಲ್ಲಿ ಎರಡು ಬಣಗಳಾದ ಬಳಿಕ, ಒಂದು ಬಣದವರು ಆಡುವರು. ಮುತ್ತೊಂದು ಬಣದವರು ಹಿಡಿಯುವರು. ನೆಲದ ಮೇಲೆ ಎರಡು ಕಲ್ಲುಗಳನ್ನು ಇ

ಟ್ಟು. ಅವುಗಳ ಮೇಲೆ "ಫಣಿ" (ಮೊಳ ಉದ್ದವಾದ ಕಟ್ಟಿಗೆ, ಯನ್ನಿಟ್ಟು, ಒಂದು ಬಣದವರು ಚಂಡು ಫಣಿಗೆ ತಾಕುವಂತೆ ಒಗೆಯುವರು. ಇನ್ನೊಂದು ಬಣದವರು ಚಂಡನ್ನು ಹಿಡಿಯುವರು. ಚಂಡಿನ ಹೊಡತದಿಂದ ಫಣಿಯು ಬಿದ್ದರೆ, ಹಿಡಿಯುವ ಬಣದೊಳಗಿನವನೊಬ್ಬನು ಕಡೆಗೆ ಹೋಗಬೇಕು. ಒಗೆದ ಚಂಡನ್ನು ಎದುರಿನ ಬಣದವರು ಹಿಡಿದರೆ, ಒಗೆದವನು ಕಡೆಗೆ ಆಗಬೇಕು.

೫.× ತಿಳ್ಳಿಯ ಆಟವು.

೬ನೇ ೭ನೇ ಇಯತ್ತೆ.

೧. ತಿಳ್ಳಿಯ ಆಟವು.

೨. ‘ಟಿಪೋ,- ಈ ಆಟವು ಬಹುಶಃ ತಿಳ್ಳಿಯ ಆಟದಂತೆ ಇರುವದು.

✓ ಈ ಗುರುತು ಮಾಡಿದ ಆಟವು ಮೊದಲನೇ ಇಯತ್ತೆ ಬಾಲಕರ ಇಯತ್ತೆಗಳಿಗೆ ಗೊತ್ತು ಮಾಡಲ್ಪಟ್ಟಿರುವದು.

● ಈ ಗುರ್ತು ಮಾಡಿದ ಆಟವು ೨,೩,೪,೫ನೇ ಇಯತ್ತೆಗಳಿಗೆ ಗೊತ್ತು ಮಾಡಲ್ಪಟ್ಟಿರುವದು.

× ಗುರುತು ಮಾಡಿದ ಆಟವು ೨ನೇ ಇಯತ್ತೆಯಿಂದ ಕಡೆಯವರೆಗೆ ಗೊತ್ತು ಮಾಡಲ್ಪಟ್ಟಿರುವದು

ಶಾರೀರಿಕ ಶಿಕ್ಷಣದಬಗ್ಗೆ ವೇಳಾಪತ್ರಿಕೆಯು ಈವಿಷಯದ ಪ್ರತಿ ಒಂದುವಾರಕ್ಕೆ ಸಿದ್ಧತೆಯ ವೇಳೆ ಸಹಿತವಾಗಿ ಮುಕ್ಕಾಲುತಾಸು ಕೊಡಬೇಕು.

ಇಯತ್ತೆಗಳು.	ಸೋಮವಾರ.	ಮಂಗಳವಾರ	ಬುಧವಾರ.	ಗುರವಾರ.	ಶುಕ್ರವಾರ.	ಶನಿವಾರ.
೧ನೇ ಇಯತ್ತೆ	ಡ್ರಿಲ್	• ಸಂತೆಯ ಸಲುವಾಗಿ ಅರ್ಧದಿವಸ ಸೂಟಿಯು.	ಅಂಗಸಾಧನ.	ಆಟಗಳು	ಡ್ರಿಲ್	ಅಂಗಸಾಧನೆ
೨ನೇ ಇಯತ್ತೆ	ಸದರ		ಸದರ	ಸದರ	ಸದರ	ಸದರ
೩ನೇ ಇಯತ್ತೆ	ಅಂಗಸಾಧನೆ		ಡ್ರಿಲ್	ಅಂಗಸಾಧನೆ	ಆಟಗಳು	ಡ್ರಿಲ್
೪ನೇ ಇಯತ್ತೆ	ಸದರ		ಸದರ	ಸದರ	ಸದರ	ಸದರ
೫ನೇ ಇಯತ್ತೆ	ಆಟಗಳು		ಡ್ರಿಲ್	ಡ್ರಿಲ್	ಡ್ರಿಲ್	ಆಟಗಳು
೬ನೇ ಇಯತ್ತೆ	ಸದರ		ಸದರ	ಸದರ	ಸದರ	ಸದರ
೭ನೇ ಇಯತ್ತೆ	ಡ್ರಿಲ್		ಆಟಗಳು	ಡ್ರಿಲ್	ಆಟಗಳು	ಡ್ರಿಲ್
ಬಾಲಕರವರ್ಗ	ಸದರ		ಸದರ	ಸದರ	ಸದರ	ಸದರ

• ಸೂಚನೆ:– ಪ್ರತಿಒಂದು ಸಾಲೆಗೆ ವಾರದಲ್ಲಿ ಅರ್ಧದಿವಸ ಸೂಟಿ ಇರುತ್ತದೆ. ಆದಕಾರಣ ಮಂಗಳವಾರದ ವಹಿವಾಟೀ ಪ್ರಕಾರ ಬೇರೆ ಅರ್ಧದಿನದ ಸೂಟಿಯ ದಿವಸವೆಂದು ತಿಳಿಯಬೇಕು.

ಧೂಮಕೇತುವಿನ ಉದಯು.

ಧೂಮಕೇತು ಅಥವಾ ಚಂಡಿಕೆಯ ನಕ್ಷತ್ರವು ಜ್ಯೋತಿಷಿಗಳಿಗಷ್ಟೇ ಅಲ್ಲ, ಇಡೀ ಜಗತ್ತಿಗೇ ಸೋಜಿಗವನ್ನುಂಟು ಮಾಡುವಂಥ ಸಂಗತಿಯಾಗಿರುತ್ತದೆ. ಇಂಥಾದ್ದೊಂದು ನಕ್ಷತ್ರವು ಸ್ವಲ್ಪ ದಿವಸಗಳಲ್ಲಿ ನಮ್ಮನ್ನು ಕಾಣಲಿಕ್ಕೆ ಬರುತ್ತಿರುವದು. ಬಹುದಿವಸದವರೆಗೆ ಧೂಮಕೇತುಗಳೆಂಬರೆ, ತಮ್ಮ ಮನಸಿಗೆ ಬಂದಾಗ ಸೂರ್ಯಮಾಲೆಯನ್ನು ಕಾಣಲಿಕ್ಕೆ ಬರುವ ಅತಿಥಿಗಳೆಂದು ಎಲ್ಲರ ಕಲ್ಪನೆಯಿತ್ತು, ಮತ್ತು ಕೆಲವು ಮೂಢರು ಪಾಪಿಷ್ಠರ ಮೇಲೆ ಪರಮೇಶ್ವರನು ಕೋಪಿಸಿದನೆಂದರೆ ಆತನು ತನಗೆ ಬಂದ ಕೋಪದ ಸೂಚನೆಗಾಗಿ ಚಂಡಿಕೆಯ ನಕ್ಷತ್ರಗಳಂಥ ಚಿಹ್ನಗಳನ್ನು ಕಳಿಸುವನೆಂದು ತಿಳಿಯುತ್ತಿದ್ದರು. ಆದರೆ ಬೇರೆ ನಕ್ಷತ್ರಗಳಂತೆ ಧೂಮಕೇತುಗಳೂ ಗುರುತ್ವಾಕರ್ಷಣದ ನಿಯಮದಿಂದ ಬದ್ಧವಾಗಿರುತ್ತವೆಂದು ನ್ಯೂಟನನು ಸಿದ್ಧ ಮಾಡಿ ತೋರಿಸಿದನು. ತರುವಾಯ ಹಾಲೆ ಎಂಬ ಒಬ್ಬ ಇಂಗ್ಲಿಷ ಜ್ಯೋತಿಷಿಯು ಹಲವು ಧೂಮಕೇತುಗಳ ಕಕ್ಷೆಗಳ ನಕಾಶಗಳನ್ನು ತೆಗೆದು, ಅವುಗಳಲ್ಲಿ ಮೂರು ಧೂಮಕೇತುಗಳ ಕಕ್ಷೆಯು ಒಂದೇ ಇರುತ್ತದೆಂತಲೂ ಈ ಮೂರು ಧೂಮಕೇತುಗಳು ಬೇರೆಬೇರೆಯಾಗಿರದೆ ಒಂದೇ ಧೂಮಕೇತುವಿನ ಬೇರೆ ಬೇರೆ ಉದಯುಗಳಿರುತ್ತವೆಂತಲೂ ಸಿದ್ಧ ಮಾಡಿದನು. ಆದಕಾರಣ ಈ ಧೂಮಕೇತುವಿಗೆ ಹಾಲೆ ಸಾಹೇಬರ ಧೂಮಕೇತುವೆಂಬ ಹೆಸರು ಕೊಡಲ್ಪಟ್ಟಿತು. ಈ ಧೂಮಕೇತುವಿನ ವೇಧವನ್ನು ಮೊದಲು ಹಾಲೆ ಸಾಹೇಬರು ೧೬೮೨ ರಲ್ಲಿ ತಕ್ಕೊಂಡರು. ತರುವಾಯ ಅವರು ಈ ಧೂಮಕೇತುವು ಮುಂದೆ ೭೬ ವರ್ಷಗಳ ಮೇಲೆ ಮತ್ತೆ ಉದಯುವಾಗುವದೆಂದು ಭವಿಷ್ಯವನ್ನು ವರ್ತಿಸಿದರು.

ಆದರೆ ಆ ಪ್ರಕಾರ ೧೭೫೮ರಲ್ಲಿ ಆಗುವ ಆ ಉದಯವನ್ನು ತಾವು ನೋಡುವ ಸಂಭವವಿಲ್ಲದಿದ್ದದರಿಂದ ತಮ್ಮ ಭವಿಷ್ಯವು ನಿಜವಾದಲ್ಲಿ ಒಬ್ಬ ಇಂಗ್ಲಿಷ ಜ್ಯೋತಿಷಿಯು ಮುಟ್ಟಿಮೊದಲು ಅದರ ಭವಿಷ್ಯವನ್ನು ವರ್ತಿಸಿದ್ದಕ್ಕಾಗಿ ಮುಂದಿನ ಸಂತತಿಯವರು ಅಭಿಮಾನ ಪಡುವರೆಂದು ಬರೆದಿಟ್ಟರು. ಅವರ ಭವಿಷ್ಯದಂತೆ ಸ್ವಲ್ಪ ಹೆಚ್ಚು ಕಡಿಮೆಯಾಗಿ, ಅಂದರೆ ೧೭೫೮ರಲ್ಲಿ ಆಗತಕ್ಕದ್ದರ ಬದಲಾಗಿ ೧೭೫೯ರಲ್ಲಿ ಆ ಧೂಮಕೇತುವಿನ ಉದಯವಾಯಿತು. ಅದರ ತರುವಾಯದ ಉದಯವನ್ನು ಅಂದರೆ ೧೮೩೫ರಲ್ಲಿ ಆಗುವ ಉದಯವನ್ನು 'ಪಾಟೆಕೂಲಾ' ಎಂಬ ಗಣಿತಜ್ಞನು ಬರೆದಿಟ್ಟದ್ದನು. ಅವನು ಬರೆದಿಟ್ಟಂತೆ ೩ನೇ ಉದಯವೂ ಕಾಲಕ್ಕನುಸರಿಸಿ ಆಯಿತು. ಅದೇ ಗಣಿತಜ್ಞನು ಇನ್ನು ಮುಂದೆ ೧೯೧೦ನೇ ಇಸವಿಯ ಮೇ ತಿಂಗಳ ೨೪ನೇ ತಾರೀಖಿನ ದಿವಸ ಆ ಧೂಮಕೇತುವು ಮತ್ತೆ ಉದಯವಾಗುವದೆಂದು ಬರೆದಿಟ್ಟಿರುತ್ತಾನೆ.

ಧೂಮಕೇತುಗಳು ಉದಯವಾಗುವವರೆಗೆ ಸುಮ್ಮನೆ ಕೂಡ್ರದೆ ಜ್ಯೋತಿಶ್ಶಾಸ್ತ್ರಜ್ಞರು ಅವುಗಳ ಶೋಧದ ಕಾರ್ಯದಲ್ಲಿ ಬಹಳ ಮೊದಲೇ ತೊಡಗುವರು. ಅದರಂತೆ 'ಕಾವೆಲ' 'ಕ್ರೋಮೆಲಿನ' ಎಂಬ ಹೆಸರಿನ ಇಬ್ಬರು ಇಂಗ್ಲಿಷ ಜ್ಯೋತಿಷಿಗಳು ಈಗ ಯತ್ನ ನಡಿಸಿರುವರು. ಅವರ ಯತ್ನವು ಕೆಲಮಟ್ಟಿಗೆ ಸಾಧ್ಯವಾದಂತೆಯೂ ತೋರುತ್ತದೆ. ಅವರ ಅನುಮಾನಗಳು "ಪಾಟೆಕುಲಾ" ನ ಅನುಮಾನಗಳಿಗೆ ಹೊಂದಹತ್ತಿವೆ; ಅದರಿಂದ ಹ್ಯಾಲೆ ಸಾಹೇಬರ ಧೂಮಕೇತುವು ೧೯೧೦ನೇ ಇಸವಿಯ ಮೇ ತಿಂಗಳಲ್ಲಿ ರವಿ-ನೀಚಸ್ಥಾನದಲ್ಲಿ ಬಂದು ಮುಟ್ಟಬಹುದೆಂದು ಅವರಿಗೆ ನಂಬಿಗೆಯಾಗಹತ್ತಿದೆ. ಆದರೆ ಈ ಧೂಮಕೇತುವಿ

ನ ಮೊದಲನೆಯ ವೇಧವನ್ನು ತಕ್ಕೊಳ್ಳುವದಕ್ಕಾಗಿ ಜ್ಯೋತಿಷಿಗಳು (೧೯೧೦) ರ ವರೆಗೆ ಹಾದಿಯ ನೋಡುವರೆಂದು ಎಷ್ಟು ಮಾತ್ರವೂ ತಿಳಿಯಲಾಗದು. ಪ್ರೋ. 'ಪೆಂಡೆಲ' ನು 'ಪಾಟೆಕೂಲಾ' ನ ಗಣಿತದಂತೆ ಒಂದು ಗ್ರಹಸ್ಥಿತಿ ಪತ್ರಿಕೆಯನ್ನು ಸಿದ್ಧಪಡಿಸಿ ಆ ಪತ್ರಿಕೆಯಿಂದ ಸದ್ಯಕ್ಕೆ ಈ ಧೂಮಕೇತುವು ಸೂರ್ಯನಿಂದ ಶನಿಯವರೆಗೆ ಇರುವ ಅಂತರಕ್ಕಿಂತ ಕಡಿಮೆ ಅಂತರದಲ್ಲಿ ಇರುತ್ತದೆಂದು ತರ್ಕಿಸುತ್ತಾನೆ. ಸದ್ಯಕ್ಕೆ ಅದು ಮೃಗಶೀರ್ಷವೆಂಬ ತಾರಕಾಪುಂಜದ ಉತ್ತರದ ಕಡೆಗೆ ಇರುತ್ತದೆ; ಆದರೆ ಅದು ದೊಡ್ಡ ದುರ್ಬಿನಿಯೊಳಗಿಂದಲೂ ಕಾಣಲಾರದು.

ಕಕ್ಷೆಯನ್ನೂ, ಅಂತರವನ್ನೂ ಕುರಿತು ವಿಚಾರಿಸಿದರೆ ಸದ್ಯಕ್ಕೆ ಧೂಮಕೇತುವು ಸರಳರೇಷೆಯಿಂದ ಸೂರ್ಯನ ಕಡೆಗೆ ಬರುತ್ತದೆಂದು ಅನುಮಾನವಾಗುತ್ತದೆ, ಆದ್ದರಿಂದ ಸೂರ್ಯನ ಮೇಲಿಂದ ನೋಡುವವರಿಗೆ ಅದು ಸ್ಥಿರವಾಗಿದ್ದಂತೆ ಕಾಣಬಹುದು. ಆದರೆ ಪೃಥ್ವಿಯ ಗತಿಯ ಮೂಲಕವಾಗಿ ಮುಂದಿನ ಒಂದುವರೆ ವರ್ಷದಲ್ಲಿ ಅದು ಮೃಗಶೀರ್ಷ, ಮಿಥುನ, ವೃಷಭ ಈ ರಾಶಿಗಳೊಳಗಿಂದ ಹಿಂದೆ ಮುಂದೆ ಅಲೆದಾಡುತ್ತಿರುವಂತೆ ಕಾಣಬಹುದು. ಅದು ೧೯೦೯ ನೇ ಇಸವಿಯ ಅಗಟೋಬರ ತಿಂಗಳ ೧ ನೇ ತಾರೀಖಿನ ಸುಮಾರಕ್ಕೆ ಅದು ಬಹಳ ವೇಗದಿಂದ ಕ್ರಮಿಸಹತ್ತಿ ೧೯೧೦ ನೇ ಇಸವಿಯ ಜನವರಿ ತಿಂಗಳ ಸುಮಾರಕ್ಕೆ ಪೃಥ್ವಿಯಿಂದ ಅದರ ಅಂತರವು ಪೃಥ್ವಿಯಿಂದ ಗುರುವಿಗಿರುವ ಅಂತರದಷ್ಟು ಆಗಬಹುದು; ಮತ್ತು ಅದೇ ವರ್ಷದ ಆಗಟೋಬರದ ಸುಮಾರಕ್ಕೆ ಅದು ೩೦ ಕೋಟಿ ಮೈಲಿನ ವರೆಗೆ ಸಮೀಪಿಸಿ ನಮಗೆ ಬರಿಗಣ್ಣಿಗೆ ಕಾಣಬಹುದು.

ಧಾರವಾಡ ಟ್ರೇನಿಂಗಕಾಲೇಜ ಪ್ರವೇಶಪರೀಕ್ಷೆ.

೧ ಧಾರವಾಡ ಟ್ರೇನಿಂಗಕಾಲೇಜದ ಪ್ರವೇಶಪರೀಕ್ಷೆಯು, ಬರುವ ದಿಸೆಂಬರ ತಿಂಗಳ ೭ ನೇ ತಾರೀಖಿನ ಬುಧವಾರ ದಿವಸ ೧೧ ಘಂಟೆಗೆ ಪ್ರಾರಂಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂಗ ಕಾಲೇಜದಲ್ಲಿ ಹಾಜರ ಇರಬೇಕು.

೨. ಈ ಪರೀಕ್ಷೆಯು ವ್ಹರ್ನಾಕ್ಯುಲರ ಫಾಯನಲ (ಅಂದರೆ ದೇಶ ಭಾಷೆಯ ಕಡೆಯ ಪರೀಕ್ಷೆ) ಇದ್ದ ವಿಷಯದಲ್ಲಿ ಆಗುವದು. ಮುಖ್ಯವಾಗಿ ವ್ಯಾಕರಣ, ಗಣಿತ, ಅಕ್ಷರ, ಶುದ್ಧಬರಹ ಇವುಗಳ ಕಡೆಗೆ ವಿಶೇಷ ಲಕ್ಷ್ಯ ಕೊಡಲಾದೀತು.

೩. ಉಮೇದವಾರರು ವರ್ಗೋಚ್ಚಾರ, ದೃಷ್ಟಿ ಇವುಗಳ ಸಂಬಂಧದ ವ್ಯಂಗರಹಿತರಾಗಿರಬೇಕು. ೫ ಫೂಟಗಿಂತ ಕಡಿಮೆ ಎತ್ತರವುಳ್ಳವರನ್ನು ವ್ಯಂಗವುಳ್ಳವರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ.

೪. ಉಮೇದವಾರರು ವ್ಹರ್ನಾಕ್ಯುಲರ ಫಾಯನಲ ಪರೀಕ್ಷೆಯಲ್ಲಿ ಪಾಸಾದ ಬಗ್ಗೆ ಸರಟೀಫಿಕೇಟನ್ನು ಸಂಗಡ ತರತಕ್ಕದ್ದು.

೫. ತಕ್ಕಷ್ಟು ಅರಿವೆ ಅಂಚಡಿಗಳೂ ಹಾಸಿಗೆ ಹುಪ್ಪಡಿಗಳೂ ಪ್ರತಿಯೊಬ್ಬ ಉಮೇದವಾರನಲ್ಲಿ ಇರತಕ್ಕದ್ದು. ಪ್ರತಿ ಒಬ್ಬನಿಗೆ ಮೇಲಿನ ಅಂಗಿ ಅಥವಾ ಕೋಟಗಳು ಮೂರು, ಒಳಗಿನ ಪೈರನಗಳು ಅಥವಾ ಬಗಲಬಂಡಿ ಮೂರು, ಒಂದು ಹಚ್ಚಡ, ಒಂದು ಕಂಬಳಿ, ಇವು ಅತ್ಯವಶ್ಯವಾಗಿ ಇರಲಿಕ್ಕೇ ಬೇಕು.

೬. ಅದೇ ಪ್ರಕಾರ ಪ್ರತಿಯೊಬ್ಬ ಉಮೇದವಾರನ ಬಳಿಯಲ್ಲಿ ೧ ನೇ ಇಯತ್ತೆಯಿಂದ ೭ ನೇ ಇಯತ್ತೆಯ ವರೆಗೆ ಎಲ್ಲ ಕ್ರಮಿಕ ವಾಚನ ಪುಸ್ತಕಗಳು ಇರತಕ್ಕದ್ದು.

೭. ಮೇಲೆ ಬರೆದ ಪುಸ್ತಕಗಳನ್ನು ಬಿಟ್ಟು ಬೇರೆ ಅವಶ್ಯಕ ಪುಸ್ತಕಗಳನ್ನು ಚಿತ್ರಕಲೆಯ ಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕೆ ೫ ರೂಪಾಯಿಗಳು ಬೇಕಾಗುವವು. ಮತ್ತು ಬೋರ್ಡಿಂಗಿನ ಊಟದ ಸಲುವಾಗಿ ೧೦ ರೂಪಾಯಿ ಅಡ್ವಾನ್ಸ ಇಡಬೇಕಾಗುವದು; ಆದಕಾರಣ ಪ್ರತಿಯೊಬ್ಬ ಉಮೇದವಾರನು ೧೫ ರೂಪಾಯಿಗಳನ್ನು

REGISTERED No. B. 19.

ದ್ದರ ನಮ್ಮಲ್ಲಿ ಇಟ್ಟ ರೂಪಾಯಿಗಳು ತಿ[illegible] ಕೊಡಲ್ಪಡುವವು.

ಧಾರವಾಡ ಟ್ರೇನಿಂಗಕಾಲೇಜ
ತಾ. ೧೬|೯|೧೭

V. B. JOSHI.
ಪ್ರಿನ್ಸಿಪಾಲ.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಪ್ರವೇಶ ಪರೀಕ್ಷೆ.

೧. ಈ ಪರೀಕ್ಷೆಯು ಬರುವ ಡಿಸೆಂಬರ ೪ ತಾರೀಖು ಶುಕ್ರವಾರ ದಿವಸ ೧೧ ಘಂಟೆಗೆ ಸರಿಯಾಗಿ ಧಾರವಾಡ ಹೆಣ್ಣುಮಕ್ಕಳ ಕಾಲೇಜದಲ್ಲಿ ಹೆಣ್ಣುಮಕ್ಕಳ ೫ ನೇ ಇಯತ್ತೆಯ ವಿಷಯಗಳಲ್ಲಿ ಆಗುವದು. ಪರೀಕ್ಷೆಯ ಯಾವತ್ತು ನಿಯಮಗಳು ಕಳೆದ ವರ್ಷದಂತೆ.

ಧಾರವಾಡ.
ತಾ|| ೧೦-೯-೧೭

V. B. JOSHI,
ಪ್ರಿನ್ಸಿಪಾಲ

ಸೌದಾಗರ ಬುಕ್‌ಡಿಪೋ.

ನಮ್ಮಲ್ಲಿ ಯಾವತ್ತು ಶಾಲಾ ಪುಸ್ತಕಗಳಿಗೆ ವ ಉತ್ತಮ ಮಸಿ ಪುಡಿ ಸ್ಟೇಶನರಿ ಸಾಮಾನಗಳಿಗೆ ವ ವಾಚ, ಘಡಿಯಾಳ ವಗೈರೆ ಯಾವತ್ತು ಸಾಮಾನಗಳಿಗೆ ರೀತಪ್ರಕಾರ ಯೋಗ್ಯ ಕಮಿಶನ್ ಸಿಗುತ್ತದೆ ತರಿಸಿ ಪರೀಕ್ಷಿಸಿರಿ. ಮತ್ತು ಹಾಯಿಗ ಪುಸ್ತಕಗಳೂ ವ ಸಾಮಾನವು ಗೋಳಿಗಳು, ಹೂಲಿ ಗಣಿತಗಳೂ ಸಿಗುತ್ತವ.

ವ್ಯಾಪಾರಸ್ಥರಿಗೆ—ಖಾತೆ ಕೀರ್ದಿ ವಹಿಗಳು ಸಹ ಅವೆ.

ಧಾರ:

ಮಹಮ್ಮದ ವ. ಅಬ್ದುಲ್
ಹಮೀದ ಸಾ|| ಸೌದಾಗರ.

ಶಾಲಾಪತ್ರ

KANARESE SCHOOL PAPER.

ಪುಸ್ತಕ ೪೪] ನವಂಬರ ೧೯೦೮ [ಸಂ. ೧೧.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೨೪೧-೨೪೪

೨. ಶಾಲೆಯೊಳಗಿನ ಮತ್ತು ಕಾಲೇಜುಗಳೊಳಗಿನ ಶಿಸ್ತು ೨೪೫-೨೫೪

೩. ರಾಜಸ್ಥಾನದ ಇತಿಹಾಸವು. ೨೫೫-೨೫೮

೪. ನೋಟೀಸುಗಳು ೨೫೯-೨೬೩

೫. ಬಂದಪತ್ರಗಳ ಸಾರಾಂಶ ... -೨೬೪

CONTENTS.

1. Educational Intelligence and Useful Notes 241-244

2. Discipline in Schools and Colleges ... 245-254

3. The History of Rajasthan 255-258

4. Departmental Notices 259-263

5. Correspondence ... ... -264

DHARWAR:

PRINTED AT THE KARNATIC BOOK DEPOT PRESS.

1908.

REGISTERED No. R. 10

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ

ಒಂದು ಸಂಚಿಕೆಗೆ ... ...

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ	೪ ಪಂಕ್ತಿಗಳವರೆಗೆ	೧ ರೂ.
ಮೂರು ಸಾರೆ ಇಟ್ಟರೆ	೬ ,,	೧ ರೂ.
ಆರು ಸಾರೆ ಇಟ್ಟರೆ	೮ ,,	೧ ರೂ.

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೆ ಅಪೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯು ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಸಿಗಲಾರದು.

V. B. JOSHI,
ಮ್ಯಾನೇಜರ ಶಾಲಾಪತ್ರಕ.

ಶಾಲಾಪತ್ರಿಕೆ

ಪದ್ಯಂ

ಪ್ರಿಯದಿಂ ವಿದ್ಯಾಗುರುವರ್ಯರುನ್ನತಿಶಯಂ ಸಚ್ಛಿಷ್ಯೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗಳೊಳಿಂದೀಪತ್ರಮಂ ಮುದ್ರಿಸಿ ॥
ನಯದಿಂ ಚಿತ್ರಪದ್ಯೋಪಮಾರ್ಗಸುಗುಣಂ ತೋರಲ್ಕೆ ಕೈಕೊಂಡುದ್ಯ
ಮಯಿಯಿಂದೋಪಪತಿದ್ದವೇಳ್ವುದು ಬುಧರಿಜ್ಞಾನಾಭಿವೃದ್ಧಿಪ್ರಿಯರ್

ಪುಸ್ತಕ ೪೪.] ನವಂಬರ-೧೯೦೮. [ಸಂಚಿಕೆ ೧೧

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ನಮ್ಮ ಇಲಾಖೆಯ ಡಾಯರೆಕ್ಟರಸಾಹೇಬರಾದ ನಾಮ ದಾರ ಸೆಲ್ಬಿದೊರೆಗಳಿಗೆ ಮುಂಬಯಿಯ ವಿಶ್ವವಿದ್ಯಾಲಯದ ವರು ಎಲ್, ಎಲ್, ಡಿ (ಡಾಕ್ಟರ ಆಫ್‌ಲಾಜ) ಎಂಬ ಘನ ವಿದ್ವತ್ತೆಯನ್ನು ಸೂಚಿಸುವ ಬಹುಮಾನದ ಪದವಿಯನ್ನು ಕೊಟ್ಟಿರುವರು. ಈ ಗೌರವದ ಪದವಿಯನ್ನು ಮುಂಬಯಿ ವಿಶ್ವವಿದ್ಯಾಲಯದವರು ಈ ಮೊದಲು ಲಾರ್ಡರಿಪನ್, ವ್ಹಯಿಲ್ಯಮ್ ವರ್ಡ್ಸ್‌ವರ್ಥ, ಸರ್‌ರೇಮಂಡ ವೆಸ್ಟ, ಡಾಕ್ಟರ ಭಾಂಡಾರಕರ ಈ ನಾಲ್ವರಿಗೆ ಮಾತ್ರ ಕೊಟ್ಟಿರುವರು.

ಲೋಕಲ್‌ಬೋರ್ಡ ಮತ್ತು ಮ್ಯುನಸಿಪಲ್ ಪ್ರಾಥಮಿಕ ಶಾಲೆಗಳೊಳಗಿನ ಕಡೆಯ ತರಗತಿಯ ಅಂಟ್ರೇಂಡ ಶಿಕ್ಷ ಕರ ಸಂಬಳವು ಈ ವರೆಗೆ ತಿಂಗಳಿಗೆ ೭ ಅಥವಾ ೮ ರೂ ಪಾಯಿ ಇದ್ದದ್ದನ್ನು ೯ ರೂಪಾಯಿ ಮಾಡುವ ಬಗ್ಗೆಯೂ, ೫ ವರ್ಷಕ್ಕಿಂತ ಹೆಚ್ಚು ನೌಕರಿಯುಳ್ಳ ಅಂಟ್ರೇಂಡ ಶಿಕ್ಷಕ ರಿಗೆ ೧೦ ರೂಪಾಯಿ ಸಂಬಳಕೊಡುವ ಬಗ್ಗೆಯೂ, ಹೆಡ್

ಮಾಸ್ತರರ ಜಾಗಾದ ಕನಿಷ್ಟ. ಪಗಾರವನ್ನು **೧೨ರೂಪಾ**ಯಿ ಮಾಡುವಬಗ್ಗೆಯೂ, ಮೆಹರ್ಬಾನ ಡಾಯರೆಕ್ಟರ ಸಾಹೇಬರವರು ಸರಕಾರಕ್ಕೆ ಶಿಫಾರಸು ಮಾಡಿದ್ದರ ಮೇಲಿಂದ ಸರಕಾರದವರು ವಿದ್ಯಾಖಾತೆಯ ಸರಕಾರ ಠರಾವ ನಂಬರ $\frac{೨೪[illegible]}{೭-೧೦-೦೬}$ ದ ಮೇರೆಗೆ ಠರಾವ ಮಾಡಿರುವದೇನಂದರೆ:—ತಾರೀಖು ೧ ನೇ ಸಪಟಂಬರ ೧೯೦೬ರಿಂದ ಯಾವತ್ತೂ ಲೋಕಲ್‌ಬೋರ್ಡ ಮತ್ತು ಮ್ಯುನಸಿಪಲ್ ಪ್ರಾಥಮಿಕಶಾಲೆಗಳೊಳಗಿನ ಕಡೆಯ ಅಸಿ॥ರ ಸ್ಥಳದ ಪಗಾರವು ೯ ರೂಪಾಯಿ ಮಾಡಲ್ಪಡುವದು. ಈ ಪ್ರಕಾರ ಸಂಬಳವನ್ನು ಏರಿಸಿದ್ದರಿಂದ ಪ್ರತಿವರ್ಷ ತಗಲುವ ೯೬,೩೬೪ ರೂಪಾಯಿ ಹೆಚ್ಚು ಖರ್ಚನ್ನು ಮೂರು ವರ್ಷಗಳ ವರೆಗೆ ಸಂಪೂರ್ಣವಾಗಿ ಸರಕಾರದವರೇ ಕೊಡುವರು. ಮೂರು ವರ್ಷದ ತರುವಾಯ ಈ ಹೆಚ್ಚಿನ ಖರ್ಚಿನೊಳಗಿನ ಅರ್ಧ ಖರ್ಚನ್ನು ಆಯಾ ಲೋಕಲ್‌ಬೋರ್ಡಿನವರೂ ಮ್ಯುನಿಸಿಪಾಲಿಟಿಯವರೂ ಕೊಡಬೇಕಾಗುವದು. ೫ ವರ್ಷಕ್ಕಿಂತ ಹೆಚ್ಚು ನೌಕರಿಯುಳ್ಳ ಅಟ್ರೇಂಡ ಶಿಕ್ಷಕರ ಪಗಾರವನ್ನು ೧೦ ರೂಪಾಯಿ ಮಾಡುವ ಬಗ್ಗೆ ಮೆಹರ್ಬಾನ ಡಾಯರೆಕ್ಟರ ಸಾಹೇಬರವರು ಮಾಡಿದ ಸೂಚನೆಯು ಸರಕಾರದವರಿಗೆ ಮಾನ್ಯವದೆ. ಅದೂ ಹಣದ ಅನುಕೂಲ್ಯತೆಯ ಪ್ರಕಾರ ಅಮಲಿನಲ್ಲಿ ತರಲ್ಪಡುವದು ಮತ್ತು ಈ ಬಗ್ಗೆ ತಗಲುವ ೪೨,೩೦೦ ರೂಪಾಯಿಗಳ ರಕಮು ವಿಚಾರದ ಬಗ್ಗೆ ಬರುವ ವರ್ಷದ ಖರ್ಚಿನ ಅಂದಾಜ ಪತ್ರಿಕೆಯಲ್ಲಿ ಸೇರಿಸಲ್ಪಡುವದು. ಇದಲ್ಲದೆ ಟ್ರೇಂಡ ಶಿಕ್ಷಕಜನರಿಗೆ ಶಾಲಾ ಕೋಡಿನಂತೆ ಪಗಾರಕೊಡುವ ಬಗ್ಗೆಯೂ ವಿಚಾರ ನಡಿದದೆ.

ಹಲವು ವರ್ಷಗಳ ಅನುಭವದಿಂದ ಪ್ಲೇಗಬೇನೆಯ ಸಂಬಂಧವಾಗಿ ಕೆಳಗೆ ಬರೆದ ಸಂಗತಿಗಳು ಗೊತ್ತಾಗಿರುತ್ತವೆ:—

೧. ಈ ಬೇನೆ ಬಂದವರೊಳಗೆ ಗಂಟು ಏಳದಿದ್ದವರು ಬಹು ಸ್ವಲ್ಪ ಜನರು; ಇವರ ಸಂಖ್ಯೆಯು ೧೦೦ಕ್ಕೆ ೩ ಸಹ ಇರುವದಿಲ್ಲ.

೨. ಗಂಟು ಏಳುವ ಪ್ಲೇಗರೋಗವು ಇಲಿಗಳ ಮೈಮೇಲಿನ ಚಿಕ್ಕಾಡುಗಳಿಂದ ಉತ್ಪನ್ನವಾಗುತ್ತದೆ.

೩. ಪ್ಲೇಗರೋಗದ ಸಂಸರ್ಗವು, ಮೊದಲು ಇಲಿಗಳಿಂದ ಇಲಿಗಳಿಗೆ ಆಗಿ, ಆ ಮೇಲೆ ಅವುಗಳಿಂದ ಮನುಷ್ಯರಿಗೆ ಆಗುತ್ತದೆ.

೪. ಗಂಟು ಏಳುವ ಪ್ಲೇಗರೋಗವು ಸ್ಪರ್ಶಜನ್ಯವಲ್ಲ.

೫. ಈ ರೋಗವು ಬೇರೆ ಬೇರೆ ಮನೆಗಳಲ್ಲಿ ಬೇರೆ ಬೇರೆ ಕಾಲಕ್ಕೆ ಉದ್ಭವಿಸುವದು; ಮತ್ತು ಒಂದೇ ಮನೆಯಲ್ಲಿ ಅನೇಕರಿಗೆ ಒಂದೇ ಕಾಲಕ್ಕೆ ಬರುವದು.

೬. ವಾಡಿಕೆಯಾಗಿ ಇಲಿಗಳ ಮೈಮೇಲಿನ ಚಿಕ್ಕಾಡುಗಳು ಮನುಷ್ಯರ ಮೈಮೇಲಿಂದಾಗಲಿ, ಕಾಳುಕಡಿ ಮೊದಲಾದ ಪದಾರ್ಥಗಳೊಳಗಿಂದಾಗಲಿ ಬೇರೆ ಬೇರೆ ಕಡೆಗೆ ಹೋಗಿ ಅವುಗಳಿಂದ ಈ ಬೇನೆಯು ಪಸರಿಸುತ್ತದೆ.

೭. ಇಲಿಗಳ ಹೊಲಸಿನ ಹೊರತು ಬೇರೆ ಯಾವತರದ ಹೊಲಸಿಗೂ ಪ್ಲೇಗಿಗೂ ಸಂಬಂಧವಿಲ್ಲ.

ಹಿಂದುಸ್ಥಾನದ ಗವ್ಹರ್ನರ ಜನರಲ್ (ವ್ಹಾಯಿಸರಾಯ) ರಿಗೆ ಪ್ರತಿವರ್ಷಕ್ಕೆ ಸರಕಾರದವರಿಂದ ಸಿಗುವ ಸಂಬಳ ಮುಂತಾದ ಹಣವು ಕೆಳಗೆ ಬರೆದ ಪ್ರಕಾರ ಇರುತ್ತದೆ:—

ವರ್ಷದ ಸಂಬಳದಬಗ್ಗೆ	೨೫,೦೮,೦೧	ರೂ.
,, ಖಾಸಗಿ ಖರ್ಚಿನಬಗ್ಗೆ	೨,೭೧,೨೦೦	ರೂ.
,, ದರಬಾರ ಖರ್ಚಿನಬಗ್ಗೆ	೨,೦೪,೦೦೦	ರೂ.
,, ಪ್ರವಾಸದ ಖರ್ಚು	೪,೦೦,೦೦೦	ರೂ.

ಅಂತು ವರ್ಷದ ಖರ್ಚು ರೂಪಾಯಿ ೧೧,೨೬,೦೦೦

ಇದರಲ್ಲಿ ಪ್ರವಾಸದ ಖರ್ಚು ವರ್ಷ ವರ್ಷಕ್ಕೆ ಹೆಚ್ಚಾಗುತ್ತಿರುವದು. ಇ. ಸ. ೧೮೯೮ ರಲ್ಲಿ ಆ ಖರ್ಚು ಎರಡೂವರೆ ಲಕ್ಷಕ್ಕಿಂತ ತುಸು ಹೆಚ್ಚಾಗಿತ್ತು; ಇ. ಸ. ೧೯೦೨-೦೩ ರಲ್ಲಿ ಅದು ಅಯ್ದುವರೆ ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಯಿತು. ಇ. ಸ. ೧೯೦೫-೦೬ ರಲ್ಲಿ ಅದು ಏಳೂಮುಕ್ಕಾಲು ಲಕ್ಷಕ್ಕಿಂತ ಹೆಚ್ಚಾಯಿತು.

ಹಿಂದುಸ್ತಾನದಲ್ಲಿ ಸದ್ಯಕ್ಕೆ ೨೯ ಕೋಟಿ ೪೦ ಲಕ್ಷ ಜನರ ವಸತಿಯುಂಟು. ಇವರಲ್ಲಿ ನಾಲ್ಕೂವರಿಕೋಟಿ ಹುಡುಗರು ಸಾಲೆಗೆ ಹೋಗುವ ವಯಸ್ಸಿನವರಿರುವರು. ಈ ಹುಡುಗರಲ್ಲಿ ಬರೇ ಐವತ್ತುಮೂರು ಲಕ್ಷ ಹುಡುಗರು ಮಾತ್ರ ಶಾಲೆಯಲ್ಲಿ ಕಲಿಯುತ್ತಾರೆ. ಮಿಕ್ಕ ಮೂರುಕೋಟಿ ತೊಂಬತ್ತೇಳುಲಕ್ಷ ಹುಡುಗರು ಉಡಾಳರಾಗಿ ತಿರಗುವರು. ಇಡೀ ಹಿಂದುಸ್ತಾನದಲ್ಲಿ ಓದುಬರಹ ಬಲ್ಲವರ ಸಂಖ್ಯೆಯು ಕೇವಲ ಒಂದೂವರೆ ಕೋಟಿ ಇರುತ್ತದೆ. ಉಳಿದ ಇಪ್ಪತ್ತೇಳುಕೋಟಿ ತೊಂಬತ್ತುಲಕ್ಷ ಜನರು ಅಕ್ಷರಶತ್ರುಗಳಾಗಿರುವರು.

ಶಾಲೆಗಳೊಳಗಿನ ಮತ್ತು ಕಾಲೇಜಗಳೊಳಗಿನ ಶಿಸ್ತು.

ಶಾಲೆಗಳ ಮತ್ತು ಕಾಲೇಜಗಳ ವಿದ್ಯಾರ್ಥಿಗಳು ರಾಜಕೀಯ ವ್ಯವಹಾರಗಳಲ್ಲಿ ಸೇರುವದರಿಂದ ಉಂಟಾಗುವ ಕೇಡುಗಳಿಂದ ಅವರನ್ನು ರಕ್ಷಿಸುವ ಉಪಾಯಗಳನ್ನು ಕುರಿತು ಮುಂಬಯಿ ಸರಕಾರದವರು ವಿದ್ಯಾಖಾತೆಯ ನ. ೨೩೯೫ ಮತ್ತು ೨೩೯೬ ತಾ. ೩೦ ಸಪ್ಟಂಬರ ೧೯೦೮ನೇ ಠರಾವುಗಳನ್ನು ಪ್ರಸಿದ್ಧ ಮಾಡಿದ್ದಾರೆ. ಅವುಗಳ ಅಭಿಪ್ರಾಯವು ಕನ್ನಡ ಶಾಲೆಗಳ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ತಿಳಿಯುವದು ಅವಶ್ಯವಿರುವಕಾರಣ ಅವುಗಳನ್ನು ಇದರಡಿಯಲ್ಲಿ ಕೊಡುತ್ತೇವೆ:-

ಸರಕಾರಠರಾವ ನಂಬರ ೨೩೯೫.

ಇಲಾಖೆಯ ಉತ್ಪನ್ನದೊಳಗಿಂದ ಬಹಳ ಹಣವನ್ನು ಸರಕಾರದವರು ಯಾವ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಖರ್ಚು ಮಾಡುತ್ತಿರುವರೋ ಆ ಶಿಕ್ಷಣದ ಅಭಿವೃದ್ಧಿಯೊಡನೆಯೇ ಶಾಲೆಗಳಲ್ಲಿಯೂ ಕಾಲೇಜಗಳಲ್ಲಿಯೂ ಇಲತಕ್ಕ ಶಿಸ್ತು ಸಡಿಲಾದದ್ದನ್ನೂ ಮಾನಮರ್ಯಾದೆಗಳ ಮಟ್ಟು ಕೀಳ್ಮರಕ್ಕಿಳಿಸಿದ್ದನ್ನೂ ನೋಡಿ ಗವ್ಹರ್ನರ ಇನ್‌ಕೌನ್ಸಿಲ್ ದೊರೆಗಳಿಗೆ ಅತ್ಯಂತ ವ್ಯಸನವಾಗುತ್ತದೆ. ಇದರ ಪರ್ಯವಸಾನವು ಇತ್ತಲಾಗಿ ಶಾಲೆಗಳ ನಿಯಮಗಳನ್ನು ಅಕ್ಷಮ್ಯವಾದ ರೀತಿಯಿಂದ ಮುರಿಯುವದರಲ್ಲಿ ಆಗಿರುವದಲ್ಲದೆ, ಶಾಲೆಗಳ ಹೊರಗೆ ಜಾಹೀರ ಸ್ಥಳಗಳಲ್ಲಿ ಸಹ ಹುಡುಗರ ಉದ್ಧಟತನದ ಬಗ್ಗೆಯೂ ಅಸಭ್ಯ ತನದ ನಡಾವಳಿಯ ಬಗ್ಗೆಯೂ ತಕರಾರುಗಳು ಮೇಲಿಂದಮೇಲೆ ಕಿವಿಗೆ ಬೀಳಲಾರಂಭಿಸಿವೆ.

೨. ಕುಟುಂಬವಿಘಾತವಾಗಬೇಕೆಂತಲೂ ಹಿರಿಯರ ಆಜ್ಞೆಗಳನ್ನು ತಿರಸ್ಕರಿಸಬೇಕೆಂತಲೂ ಮತ್ತು ಇದರಿಂದ ಮುಂದೆ ಅರಾಜಕತನದ ದಾರಿ ಸಿದ್ಧವಾಗಬೇಕೆಂತಲೂ ಯಾವ ತಂದೆತಾಯಿಗಳೂ ಬಯಸುವದಿಲ್ಲವೆಂಬ ಮಾತು ಗವರ್ನರ ಇನ್ ಕೌನ್ಸಿಲ್‌ದೊರೆಗಳಿಗೆ ಮನವರಿಕೆಯದೆ. ಆದರೆ ಹುಡುಗರು ದೊಡ್ಡವರಾದ ಬಳಿಕ ಅವರಿಗೆ ದೊರೆಯುವ ಸ್ವಾತಂತ್ರ್ಯದ ಯೋಗ್ಯವಾದ ಉಪಯೋಗವನ್ನು ಮಾಡಿಕೊಳ್ಳುವದಕ್ಕೆ ಬೇಕಾದ ಪೂರ್ವಸಿದ್ಧತೆಗೆ ಯಾವ ಶಿಸ್ತು ಜಾಣರಾದ ಪೂರ್ವಾತ್ಯರು ಅತ್ಯಂತ ಅವಶ್ಯಕವಾದದ್ದೆಂದು ತಿಳಿಯುತ್ತ ಬಂದಿರುವರೋ ಆ ಶಿಸ್ತು ಸಡಿಲಾಗುವದರಿಂದ ಮೇಲೆ ವಿವರಿಸಿದಂಥ ದುಷ್ಪರಿಣಾಮಗಳು ಖಂಡಿತವಾಗಿ ಆಗುವವು. ತರುಣರಿಗೆ ನಾಗರಿಕರ ಕರ್ತವ್ಯಗಳ ಮತ್ತು ಜವಾಬುದಾರಿಗಳ ಯೋಗ್ಯ ಶಿಕ್ಷಣವು ಸುವ್ಯಸ್ಥಿತವಾದ ಕುಟುಂಬಗಳಲ್ಲಿಯೂ ಶಾಲೆಗಳಲ್ಲಿಯೂ ಕಾಲೇಜಗಳಲ್ಲಿಯೂ ಮಾತ್ರ ದೊರೆಯಬಹುದೇ ಹೊರ್ತು, ಬೇರೆ ಕಡೆಯಲ್ಲಿ ದೊರೆಯಲಾರದು. ವ್ಯವಸ್ಥಿತವಾದ ಸಮಾಜದ ಅಸ್ತಿತ್ವಕ್ಕೆ ಜೀವಕಳೆಯಾದ ಅಜ್ಞಾಧಾರಕತೆ, ಪರಸ್ಪರರವಿಷಯದಲ್ಲಿ ಆದರ, ಸಹಿಷ್ಣುತೆ, ಮನೋನಿಗ್ರಹ, ಸ್ವಾರ್ಥತ್ಯಾಗ, ಸಾರ್ವಜನಿಕ ಹಿತದಲ್ಲಿ ಆಸಕ್ತಿ ಈಗುಣಗಳನ್ನು ತರುಣರು ಅಲ್ಲಿಯೇ ಮಾತ್ರ ಕಲಿತುಕೊಳ್ಳಬಹುದೇ ಹೊರ್ತು ಬೇರೆ ಕಡೆಗೆ ಸಂಪಾದಿಸಲಾರರು. ಈ ಸದ್ಗುಣಗಳನ್ನು ಕಲಿತುಕೊಳ್ಳದೆಡೆಯಲ್ಲಿ, ಸ್ವೇಚ್ಛೆಯ ಹೊರ್ತು ಬೇರೆ ಕಟ್ಟಳೆಯನ್ನರಿಯದಂಥ ಸ್ವಸುಖಸ್ವೋತ್ಕರ್ಷಗಳ ಹೊರ್ತು ಬೇರೆ ತರದ ಹಿತವನ್ನು ಕಾಣದಂಥ ರಾಷ್ಟ್ರೀಯಪ್ರಗತಿಯ ನಿಜವಾದ ಕಲ್ಪನೆಗೆ ಸಿಲುಕಲಾರದಂಥ ವ್ಯವಸ್ಥೆ ಇಲ್ಲದ ವ್ಯಕ್ತಿಗಳ ಹಿಂಡೇ ಹೊರ್ತು, ಬೇರೊಂದಿರಲಾರದು. ಇತಿಹಾಸದಿಂದ

ತಿಳಿಯಲಾಗುವಂಥ ನಿಶ್ಚಿತವಾದ ಸತ್ಯ ತತ್ವಗಳಲ್ಲಿ ಇದೊಂದಾಗಿದೆ. ಹಿಂದುಸ್ಥಾನದಲ್ಲಿ ಈ ಸತ್ಯವು ಯಾವಾಗಲೂ ನಿರ್ವಿವಾದವಾಗಿ ಸ್ವೀಕರಿಸಲ್ಪಟ್ಟಿರುವದಲ್ಲದೆ, ಅದು ಧರ್ಮದ ಆಜ್ಞೆಗಳಿಂದ ಬಲವತ್ತರವಾಗಿ ದೃಢೀಕರಿಸಲ್ಪಟ್ಟಿರುತ್ತದೆ.

೩. ಈ ದೇಶದಲ್ಲಿ ಗುರುಗಳಲ್ಲಿ ವಿದ್ಯಾರ್ಥಿಗಳ ಭಯಭಕ್ತಿಭಾವಗಳು ಪರಂಪರಾಗತವಾಗಿವೆ. ತಂದೆ ತಾಯಿಗಳ ಮತ್ತು ಹಿರಿಯರ ಆಜ್ಞೆಯನ್ನು ಮಕ್ಕಳು ಪ್ರಬುದ್ಧರಾದಬಳಿಕ ಸಹ ನಿರ್ವಿವಾದವಾಗಿ ಶಿರಸಾವಮಾನ್ಯ ಮಾಡುವ ಪ್ರವೃತ್ತಿಯು ಯಾವಾಗಲೂ ಇರುತ್ತದೆ. ಹೀಗಿದ್ದು ಗುರು ಹಿರಿಯರಿಗೆ ಕಾಲುಶತಮಾನದ ಹಿಂದೆ ದೊರೆಯುತ್ತಿದ್ದ ಮಾನಮರ್ಯಾದೆಗಳು ಕೂಡಾ ಈಗ ದೊರೆಯದಂತಾದರೆ, ಆ ತಪ್ಪು ಗುರುಹಿರಿಯರದೇ ಸರಿ.

೪. ಈಗ ಶಿಸ್ತು ಹೆಚ್ಚು ಹೆಚ್ಚಾಗಿ ಸಡಿಲಾಗುತ್ತಿರುವದಕ್ಕೂ, ಅಧಿಕಾರದ ವಿಷಯದಲ್ಲಿ ಕಂಡು ಬರುವ ಅನಾದರಕ್ಕೂ ಕೆಲಮಟ್ಟಿಗೆ ಹುಡುಗರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಉಂಟಾಗಿರುವ ರಾಜಕೀಯ ಸಮಾರಂಭಗಳಲ್ಲಿ ಸೇರುವ ಪ್ರವೃತ್ತಿಯೇ ಕಾರಣವಾಗಿರುತ್ತದೆಂದು ಗವ್ಹರ್ನರ ಇನ್‌ಕೌನ್ಸಿಲ್ ದೊರೆಗಳಿಗೆ ಮನವರಿಕೆಯಾಗಿದೆ. ಯಾವ ರಾಜಕೀಯ ಮತಗಳ ಗುಣಾವಗುಣಗಳು ಹ್ಯಾಗೇ ಇರಲಿ, ವಿದ್ಯಾರ್ಥಿದೆಶೆಯಲ್ಲಿದ್ದ ತರುಣರು ಅವುಗಳಲ್ಲಿ ಸೇರುವದರಿಂದ ಅವರ ವಿದ್ಯಾರ್ಜನೆಗೆ ಬಹಳ ಹಾನಿಯುಂಟಾಗುವದೆಂಬ ಬಗ್ಗೆ ಏನೂ ಸಂದೇಹವಿಲ್ಲ. ಇದರಿಂದ ಹುಡುಗರ ಮಾನಸಿಕ ಶಕ್ತಿಗಳು ತಥ್ಯಾತಥ್ಯ ವಿಚಾರ ಮಾಡುವಷ್ಟು ಬಲಪಡುವದಕ್ಕಿಂತ ಮೊದಲೇ ಅವರ ಅಪಕ್ವವಾದ ಮನಸ್ಸಿನಲ್ಲಿ ಹಲವು ರಾಜಕೀಯಕಲ್ಪನೆಗಳು ನಾಟುವದಲ್ಲದೆ, ಅವುಗಳಿಂದ ಅವರ ಮನಸ್ಸು ಪ್ರಕ್ಷುಬವಾಗುವದರಿಂದ ವ್ಯವಸ್ಥಿ

ಕವಾಗಿ ಸಾಗತಕ್ಕ ವಿದ್ಯಾರ್ಜನೆಗೆ ನಿಶ್ಚಯವಾಗಿ ಹಾನಿಯಾಗುತ್ತದೆ. ಈ ವಿಷಯದಲ್ಲಿ ಆಕ್ಸಫರ್ಡದ ಬೇಲಿಯಲ್ ಕಾಲೇಜದ ವಿದ್ಯಾರ್ಥಿಗಳನ್ನುದ್ದೇಶಿಸಿ ಡಾಕ್ಟರ ಎಡವರ್ಡ ಕೇರ್ಡರವರು ನುಡಿದ ಶಬ್ದಗಳಿಂದ ಹೇಳಬೇಕಾದರೆ, "ಇಂಥ (ರಾಜಕೀಯ) ವ್ಯವಹಾರಗಳಲ್ಲಿ ಕೈ ಹಾಕುವದು ಮುಂದೆ ಪ್ರಬುದ್ಧರಾದಮೇಲೆ ಮಾಡತಕ್ಕ ಕೆಲಸಕ್ಕೆ ಈಗಲೇ ಕೈ ಹಾಕಿ, ಆ ಕೆಲಸಕ್ಕೆ ಅವಶ್ಯವಾದ ಪೂರ್ವಸಿದ್ಧತೆಗೆ ಪ್ರತಿಬಂಧ ಮಾಡುವದಾಗಿರುತ್ತದೆ." ಈ ಶಬ್ದಗಳು ಒಂದು ಸರ್ವಮಾನ್ಯವಾದ ತತ್ವವನ್ನು ಹೇಳುತ್ತವೆ. ಮತ್ತು ಸದ್ಯಕ್ಕೆ ಯಾವ ಶಿಕ್ಷಣದ ಪ್ರಗತಿಗೆ ಹಾನಿ ತಟ್ಟುತ್ತಿರುವದೋ ಆ ಶಿಕ್ಷಣದ ರಕ್ಷಣೆಗಾಗಿ, ರಾಜಕೀಯವ್ಯವಹಾರಗಳಲ್ಲಿ ಹುಡುಗರು ಸೇರುವದನ್ನು ಪ್ರತಿಬಂಧಿಸುವದು ಅವಶ್ಯವಿರುತ್ತದೆಂದು ಗವ್ಹರ್ನರ ಇನ್‌ಕೌನ್ಸಿಲರವರಿಗೆ ಸಿದ್ಧಾಂತವಾಗಿದೆ.

೫. ವಿದ್ಯಾರ್ಥಿಗಳು ಶಾಲೆಗಳಿಗೆ ಹೊಂದಿದ ವಸತಿಗೃಹಗಳಲ್ಲಿದ್ದಾಗ ಅವರ ನಡತೆಯ ಬಗ್ಗೆ ಅವರ ಪಾಲಕರ ಜವಾಬದಾರಿಯು ಅಷ್ಟರ ಮಟ್ಟಿಗೆ ಕಡಿಮೆಯಾಗಿ, ಸಂಪೂರ್ಣ ಜವಾಬದಾರಿಯು ಮಾಸ್ತರರ ಮೇಲೆಯೇ ಬೀಳುತ್ತದೆ. ಹಗಲು ಮಾತ್ರ ನಡೆಯುವ ಶಾಲೆಗಳಲ್ಲಿ ಹುಡುಗರು ಶಾಲೆಯಲ್ಲಿರುವಾಗ ಅವರ ನಡತೆಯ ಬಗ್ಗೆ ಮಾಸ್ತರರು ಜವಾಬದಾರರಿರುತ್ತಾರೆ, ಮತ್ತು ಬೇರೆ ಕಾಲದಲ್ಲಿ ಪಾಲಕರು ಜವಾಬದಾರರಿರುತ್ತಾರೆ. ಆದಕಾರಣ (ಹುಡುಗರ ನಡತೆಯ ವಿಷಯದಲ್ಲಿ) ಮಾಸ್ತರರೂ ಪಾಲಕರೂ ಪರಸ್ಪರರಿಗೆ ಸಹಾಯ ಮಾಡುವದು ಅವಶ್ಯವಿರುತ್ತದೆ. ಹಿಂದಿನ ಕಾಲದಲ್ಲಿ ಹಿಂದುಸ್ತಾನದ ಕುಟುಂಬಗಳಲ್ಲಿ ಇದ್ದಷ್ಟು ಮನೆಹೊರವಾದ ನಡೆನುಡಿಗಳೂ ಮಾನಮರ್ಯಾದೆಗಳೂ

ಮತ್ತೆಲ್ಲಿಯೂ ಕಂಡು ಬರುತ್ತಿದ್ದಿಲ್ಲ. ಮಾಸ್ತರರೂ ಪಾಲಕರೂ ಕೂಡಾ ಈ ಸಂಗತಿಯನ್ನು ಚನ್ನಾಗಿ ಅರಿತಿದ್ದಾರೆ. ಅವರು ತಾವು ಚಿಕ್ಕವರಿರುವಾಗ (ಗುರುಹಿರಿಯರ ವಿಷಯದಲ್ಲಿ) ಎಷ್ಟು ಪೂಜ್ಯಬುದ್ಧಿಯುಳ್ಳವರಾಗಿದ್ದರೆಂಬುದನ್ನೂ ಅವರಿಗೆ ಮಾನಮರ್ಯಾದೆಗಳನ್ನು ತೋರಿಸುವಂಥ ಬಾಹ್ಯ ಉಪಚಾರಗಳನ್ನು ಎಷ್ಟು ಆಚರಿಸಬೇಕಾಗುತ್ತಿತ್ತೆಂಬುದನ್ನೂ ಬಲ್ಲರು. ಅವರು ಈಗಾದರೂ ತಮ್ಮ ಮಕ್ಕಳಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಅದೇ ಉಚ್ಚತರದ ಭಾವವನ್ನೂ, ಉದಾತ್ತವರ್ತನಕ್ರಮವನ್ನೂ ನೆಲೆಗೊಳಿಸುವದಕ್ಕೆ ವಿಶ್ವಪ್ರಯತ್ನ ಮಾಡುವರೆಂದು ಗವ್ಹರ್ನರ ಇನ್‌ಕೌನ್ಸಿಲ್‌ರವರು ನಿರೀಕ್ಷಿಸುತ್ತಾರೆ. ಇಂಥ ಪ್ರಯತ್ನವು ಪಾಲಕರ ಹಿತಕ್ಕೂ ಹುಡುಗರ ಹಿತಕ್ಕೂ ಸಮಗ್ರರಾಷ್ಟ್ರದ ಹಿತಕ್ಕೂ ಕೂಡಿಯೇ ಅತ್ಯವಶ್ಯವಿರುತ್ತದೆಂಬುದು ಸ್ಪಷ್ಟವದೆ.

೬. ಆದಕಾರಣ, ಗವ್ಹರ್ನರ ಇನ್‌ಕೌನ್ಸಿಲ್ ದೊರೆಗಳು ಸರಕಾರದ ಶಾಲೆಗಳಲ್ಲಿಯೂ ಸರಕಾರದಿಂದ ಸಹಾಯ ಹೊಂದುವ ಶಾಲೆಗಳಲ್ಲಿಯೂ, ಶಾಲೆಗಳ ಶಿಸ್ತಿನ ನಿಯಮಗಳ ಉಲ್ಲಂಘನ, ಕಾಯದೆಗೆ ವಿರುದ್ಧವಾದ ಆಚರಣೆ, ಉದ್ಧಾಮತನ, ಅಸಭ್ಯವರ್ತನ ಇವುಗಳು, ಶಾಲೆಯಲ್ಲಿಯೇ ಕಂಡು ಬರಲಿ, ಶಾಲೆಯ ಹೊರಗೆ ಕಂಡು ಬರಲಿ, ಇವುಗಳನ್ನು ಎಷ್ಟು ಮಾತ್ರವೂ ನಡೆಯಗೊಡಲಾಗದೆಂದು ನಿಶ್ಚಯಿಸಿದ್ದಾರೆ, ಮತ್ತು ಶಾಲೆಗಳ ಮಾಸ್ತರರೂ ವ್ಯವಸ್ಥಾಪಕರೂ ಯೋಗ್ಯವಾದ ಅಧಿಕಾರವನ್ನು ಜರುಗಿಸುವದಕ್ಕೂ ಮಾನಮರ್ಯಾದೆಗಳಲ್ಲಿ ಹೆಚ್ಚುಹೆಚ್ಚಾಗಿ ಕಂಡು ಬರುತ್ತಿರುವ ಕೊರತೆಯನ್ನು ನೀಗಲಿಕ್ಕೂ ಮಾಡುವ ಯಾವತ್ತು ಉಪಾಯಗಳಿಗೆ ಸರಕಾರದವರ ಸಂಪೂರ್ಣ ಸಹಾಯವು ಸಿಗುವದು.

೭. ಶಾಲೆಗಳೊಳಗಿನ ವಿದ್ಯಾರ್ಥಿಗಳ ಸಂಖ್ಯೆಯು ಮಾನದಿಂದ ತಮ್ಮ ಯಶಸ್ವಿತನವು ತಿಳಿಯಲ್ಪಡುತ್ತದೆಂದು ಮಾಸ್ತರರು ತಿಳುಕೊಳ್ಳುವ ಪ್ರವೃತ್ತಿಯು ಬಹಳವಾಗಿರುತ್ತದೆ. ಆದರೆ ಈ ತಿಳುವಳಿಕೆಯು ಪೂರಾ ತಪ್ಪಾದದ್ದು. ಉದ್ಧಟತನದಿಂದ ನಡೆಯುವಂಥ, ಶಿಸ್ತನ್ನು ಮುರಿಯುವಂಥ, ಅವಿಧೇಯರಾದಂಥ ಹುಡುಗರನ್ನು ದಾಕ್ಷಿಣ್ಯವಿಲ್ಲದೆ ಕಿತ್ತುಹಾಕಬೇಕು. ರಾಜದ್ರೋಹದ ಅಥವಾ ಬೇಬಂದಿನ ವ್ಯವಹಾರಗಳಲ್ಲಿ ಕೈಹಾಕುವ ಹುಡುಗರನ್ನು ಹೊರಗೆ ಹಾಕಬೇಕು. ಸರಕಾರದವರು ತಮ್ಮ ಶಾಲೆಗಳಲ್ಲಿಯೂ ತಮ್ಮಿಂದ ಸಹಾಯ ಹೊಂದುವ ಶಾಲೆಗಳಲ್ಲಿಯೂ ಹುಡುಗರ ಸಂಖ್ಯೆಗಿಂತಲೂ ಗುಣಗಳಿಗೆ ಬಹಳ ಹೆಚ್ಚು ಮಹತ್ವವನ್ನು ಕೊಡುತ್ತಾರೆ.

೮. ಶಾಲೆಗಳ ತಪಾಸಣೆಯ ಅಧಿಕಾರಿಗಳು ಶಾಲೆಗಳಿಗೆ ಆಕಸ್ಮಿಕವಾಗಿ ಹೋಗಿ, ಅವಶ್ಯ ಕಂಡರೆ ಸರಕಾರದವರು ಹಾಕಿಕೊಟ್ಟ ನಿಯಮಗಳಿಗೆ ಸರಿಯಾಗಿ ಮಾಸ್ತರರು ನಡೆಯುವದಿಲ್ಲವೆಂಬ ಬಗ್ಗೆ ಅವರಿಗೆ ಎಚ್ಚರಿಕೆಯನ್ನು ಹೇಳಬೇಕೆಂದು ತಪಾಸಣೆಯ ಅಧಿಕಾರಿಗಳಿಗೆ ಅಪ್ಪಣೆಯು ವಿಧಿಸಲ್ಪಡುವದು. ಸರಕಾರದವರು ತಮ್ಮ ಶಾಲೆಗಳಲ್ಲಿ ಯಾವ ಶಿಸ್ತಿನ ಕ್ರಮವನ್ನು ಸಖ್ತಿಯಿಂದ ಜರುಗಿಸುವರೋ, ಆ ಕ್ರಮವನ್ನೇ ಸರಕಾರದಿಂದ ಸಹಾಯ ಹೊಂದುವ ಶಾಲೆಗಳ ವ್ಯವಸ್ಥಾಪಕರೂ ತಮ್ಮ ಶಾಲೆಗಳಲ್ಲಿ ಇಡಲಿಕ್ಕೆ ಬೇಕೆಂಬದನ್ನೂ ಸರಕಾರದಿಂದ ಸಹಾಯವನ್ನು ಸ್ವೀಕರಿಸುವದರಲ್ಲಿ ಸಾಧ್ಯವಾದಮಟ್ಟಿಗೆ ಸರಕಾರದ ನಿಯಮಗಳಂತೆ ನಡಿಯುವ ಸಾಮಾನ್ಯವಾದ ಇಚ್ಛೆಯು ಗರ್ಭಿತವಾಗುತ್ತದೆಂಬದನ್ನೂ ಅವರು ಲಕ್ಷ್ಯದಲ್ಲಿಡುವರೆಂದು ಸರಕಾರದವರು ನಿರೀಕ್ಷಿಸುತ್ತಾರೆ. ಯಾವ ಸಂಸ್ಥೆಗಳು ಜನರ ಯೋ

ಗ್ಯ ಸೇವೆಯನ್ನು ಮಾಡುವದಿಲ್ಲವೋ, ಅಂಥ ಸಂಸ್ಥೆಗಳ ಪೋಷಣೆಗೆ ದ್ರವ್ಯ ಸಹಾಯ ಮಾಡುವದು ಸರಕಾರದ ಕರ್ತವ್ಯವಿರುವದಿಲ್ಲ.

೯. ಶಾಲೆಗಳ ವ್ಯವಸ್ಥಾಪಕರೂ ಶಾಲಾಖಾತೆಯ ಮತ್ತು ಮುಲ್ಕೀ ಖಾತೆಯ ಅಮಲದಾರರೂ ಈಗಿನದಕ್ಕಿಂತ ಹೆಚ್ಚು ಪದೇ ಪದೇ ಒಬ್ಬರೊಬ್ಬರ ಆಲೋಚನೆಯನ್ನು ತಕ್ಕೊಳ್ಳುತ್ತಾ ಹೋದಲ್ಲಿ ಒಳ್ಳೇ ಪರಿಣಾಮವಾಗುವದೆಂದು ಗವರ್ನರ ಇನ್‌ಕೌನ್ಸಿಲ್‌ರವರಿಗೆ ನಂಬಿಗೆಯದೆ. ಆದಷ್ಟು ಮಟ್ಟಿಗೆ ಹುಡುಗರ ಪಾಲಕರನ್ನು ಸಹ ಆಪ್ತಾಲೋಚನೆಗೆ ಬರಮಾಡಿ ಅವರಿಗೆ ಸರಕಾರದ ಉದ್ದೇಶಗಳನ್ನು ತಿಳಿಸಿ ಹೇಳಬೇಕು. ಸರಕಾರದವರು ತಮ್ಮ ಸ್ವಂತ ಸಂಸ್ಥೆಗಳಲ್ಲಿ ಹಣದ ಅನುಕೂಲತೆಯ ಪ್ರಕಾರ ಆದಷ್ಟು ಉಚ್ಚತರದ ಶಿಕ್ಷಣವನ್ನು ಕೊಡುವದಕ್ಕೆ ಯತ್ನಮಾಡುವರು, ಮತ್ತು ಬೇರೆ ಶಾಲೆಗಳಿಗೂ ಕಾಲೇಜಗಳಿಗೂ ಸಹಾಯವನ್ನೀಯುವರು. ಆದರೆ ಸರಕಾರಕ್ಕೆ ವಿರೋಧ ಮಾಡುವಂಥ ವಿದ್ಯಾರ್ಥಿಗಳನ್ನು ಸರಕಾರದ ಶಾಲೆಗಳಲ್ಲಿ ಇರಗೊಡುವದೂ ಸರಕಾರಕ್ಕೆ ವಿರೋಧ ಮಾಡುವ ಸಂಸ್ಥೆಗಳಿಗೆ ಸರಕಾರದಿಂದ ದ್ರವ್ಯಸಹಾಯ ಸಿಗುವದೂ ಅಸಂಭವನೀಯವಿರುತ್ತದೆಂಬದನ್ನು ಸ್ಪಷ್ಟವಾಗಿ ತಿಳಕೊಳ್ಳಬೇಕು.

೧೦. ಸರಕಾರದ ಮತ್ತು ಸರಕಾರದ ಸಹಾಯ ಹೊಂದುವ ಯಾವತ್ತು ಮಧ್ಯಮ ಶಿಕ್ಷಣದ (ಅಂದರೆ, ಹಾಯ ಸ್ಕೂಲ ಮುಂತಾದ ಇಂಗ್ಲಿಷ ಕಲಿಸುವ) ಶಾಲೆಗಳಲ್ಲಿ ಕೆಳಗೆ ಕಾಣಿಸಿದ ನಿರ್ಬಂಧಗಳನ್ನು ಸಖ್ತಿಯಿಂದ ಅಮಲಿನಲ್ಲಿ ತರಬೇಕೆಂದು ಗವರ್ನರ ಸಾಹೇಬರ ಅಪ್ಪಣೆ ಇರುತ್ತದೆ:—

(೧) ವರ್ಗದಲ್ಲಿ ವಿದ್ಯಾರ್ಥಿಗಳು ಖಂಡಿತವಾಗಿ ನಿಯಮ

ದಿಂದ ಶಾಲೆಗೆ ಬರುವಂತೆಯೂ ಸಂಪೂರ್ಣವಾಗಿ ವಿಧೇಯ ರಾಗಿರುವಂತೆಯೂ ವ್ಯವಸ್ಥೆಯನ್ನಿಡತಕ್ಕದ್ದು.

(೨) ಶಾಲೆಯ ಹೊರಗೆ ಕಂಡುಬಂದಂಥ ಅಥವಾ ತಿಳಿದು ಬಂದಂಥ ವಿದ್ಯಾರ್ಥಿಗಳ ಆಕ್ಷೇಪಾರ್ಹವಾದ ನಡತೆಯನ್ನು ನಿರ್ದಾಕ್ಷಿಣ್ಯದಿಂದ ದಂಡಿಸಬೇಕು.

(೩) ಹುಡುಗರನ್ನು ಯಾವ ಶರ್ತುಗಳ ಮೇರೆಗೆ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುವದು ಅಥವಾ ಇಡಲಾಗುವದು ಎಂಬದನ್ನು ಹೇಳುವ ಅಧಿಕಾರವು (ಶಾಲೆಗಳ) ವ್ಯವಸ್ಥಾಪಕರದಿರುತ್ತದೆ. ಈ ವಿಷಯದಲ್ಲಿ ಶಾಲೆಗಳ ವ್ಯವಸ್ಥಾಪಕರಿಗೆ ಆಜ್ಞಾಪಿಸುವ ಹಕ್ಕು ಪಾಲಕರಿಗಿರುವದಿಲ್ಲವೆಂಬದನ್ನು ಪಾಲಕರಿಗೆ ತಿಳಿಸಬೇಕು. ಶಾಲೆಗಳಲ್ಲಿ ಈಗ ಕಂಡುಬರುವ ಶಿಥಿಲತನವು ಬಹಳ ಮಟ್ಟಿಗೆ ದಾಕ್ಷಿಣ್ಯಕ್ಕೊಳಗಾಗುವಂಥ ಪ್ರಾಚ್ಯರ ಸ್ವಭಾವದ ಫಲವೇ ಆಗಿರುತ್ತದೆ.

(೪) ವರ್ಗದಲ್ಲಿಯೂ ಬೇರೆ ಸಾರ್ವಜನಿಕ ಸ್ಥಳಗಳಲ್ಲಿಯೂ ಹೊಲಸಾದಂಥ ಅವ್ಯವಸ್ಥಿತವಾದಂಥ ವಸ್ತ್ರಗಳನ್ನು ಧರಿಸಿ ಬರುವ ಈಗಿನ ನಡತೆಯನ್ನು ಮುರಿಯಲಿಕ್ಕೆ ಬೇಕು. ಈ ದೇಶದವರ ಸಭ್ಯತನದ ಅರಿವೆಗಳು ಬಹಳ ಅಗ್ಗವಿರುವದಲ್ಲದೆ, ಅವುಗಳನ್ನು ಸುಲಭವಾಗಿ ಸ್ವಚ್ಛ ಇಡಲಿಕ್ಕೂ ಬರುತ್ತದೆ.

(೫) (ವಿದ್ಯಾರ್ಥಿಗಳಿಗೆ) ಸಭ್ಯತನದ ಮತ್ತು ವಿನಯವುಳ್ಳ ಆಚರಣೆಯ ಮಹತ್ವವನ್ನು ಚನ್ನಾಗಿ ತಿಳಿಸಿ ಹೇಳಬೇಕು; ಮತ್ತು ಉದ್ಧಟತನದ ಬಗ್ಗೆಯೂ ಅಸಭ್ಯತನದ ಮಾತುಗಳ ಹಾಗು ನಡತೆಯ ಬಗ್ಗೆಯೂ ಶಾಸನ ಮಾಡಬೇಕು.

(೬) ಸರಕಾರದವರಿಂದ ಆಯಾ ಕಾಲಕ್ಕೆ ಮಂಜೂರು ಮಾಡಲ್ಪಡುವ ವರ್ತಮಾನಪತ್ರಗಳನ್ನು ಮಾತ್ರ ಶಾಲೆಗಳ

ವಾಚನಮಂದಿರಗಳಲ್ಲಿಯೂ, ವಸತಿಗೃಹಗಳಲ್ಲಿಯೂ ಬರಗೊಡಬೇಕು, ಅಥವಾ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕು.

(೭) ಶಾಲೆಯ ಯಾವ ವಿದ್ಯಾರ್ಥಿಯೂ ಯಾವ ಬಗೆಯ ಜಾಹೀರ ಸಭೆಗೂ ಹೋಗಕೂಡದು, ಅಥವಾ ಆ ಸಭೆಯ ವ್ಯವಸ್ಥೆಯಲ್ಲಾಗಲಿ ಅದನ್ನು ನಡಿಸುವದರಲ್ಲಾಗಲಿ ಕೈಹಾಕಕೂಡದು,

೧೧. ಮೇಲಿನ ನಿಯಮಗಳು ಸರಕಾರದ ಮತ್ತು ಸರಕಾರದಿಂದ ಸಹಾಯ ಹೊಂದುವ ಯಾವತ್ತೂ ಶಾಲೆಗಳಿಗೂ ಕಾಲೇಜಗಳಿಗೂ ಲಾಗೂ ಇರುವವು. ಆದರೆ ಕಾಲೇಜದ ವಿದ್ಯಾರ್ಥಿಗಳು ಮಾತ್ರ ಮೊದಲು ಪ್ರಿನ್ಸಿಪಾಲರ ಅಪ್ಪಣೆಯನ್ನು ಪಡಕೊಂಡು ಜಾಹೀರ ಸಭೆಗಳಿಗೆ ಹೋಗಲಿಕ್ಕೆ ಅಡ್ಡಿ ಇಲ್ಲ. ಮತ್ತು ಕಾಲೇಜದಲ್ಲಿ ಯಾವ ವರ್ತಮಾನ ಪತ್ರಗಳನ್ನು ತೆಗೆದುಕೊಳ್ಳಬೇಕೆಂಬದನ್ನು ಸಾರಾಸಾರ ವಿಚಾರಮಾಡಿ ನಿರ್ಣಯಿಸುವ ಅಧಿಕಾರವನ್ನು ಸಹ ಪ್ರಿನ್ಸಿಪಾಲರಿಗೇ ಕೊಟ್ಟಿರುತ್ತದೆ.

೧೨. ದೊಡ್ಡ ದೊಡ್ಡ ಸ್ಥಳಗಳಲ್ಲಿರುವ ಪ್ರಾಥಮಿಕ ಶಾಲೆಗಳ ವ್ಯವಸ್ಥಾಪಕರು ಮೇಲಿನ ನಿಯಮಗಳಲ್ಲಿ ತಮಗೆ ಲಾಗೂ ಆಗುವ ನಿಯಮಗಳನ್ನು ಅಮಲಿನಲ್ಲಿ ತರುವರೆಂದು ಸರಕಾರದವರು ತಿಳಿಯುತ್ತಾರೆ. ಹಳ್ಳಿಪಳ್ಳಿಗಳ ಶಾಲಾಮಾಸ್ತರರ ಬಗ್ಗೆ ಬೇರೆ ಸೂಚನೆಗಳು ಕೊಡಲ್ಪಡುವವು.

ಮೇಲಿನ ಸರಕಾರ ಠರಾವಿನ ಕಡೆಯ ಕಲಮಿನಲ್ಲಿ ಉಲ್ಲೇಖಿಸಿದ ಮೇರೆಗೆ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಲ್ ಪ್ರಾಥಮಿಕ ಶಾಲೆಗಳ ಮಾಸ್ತರರಿಗೋಸ್ಕರ ಶಾಳಾಖಾತೆಯ ಸರಕಾರ ಠರಾವ ನಂ. ೨೩೯೬ ತಾ|| ೩೦ನೇ

ಸಪ್ಟಂಬರ ೧೯೦೮ದ ಪ್ರಕಾರ ಸರಕಾರದವರು ಕೆಳಗೆ ಬರೆದ ನಿಯಮಗಳನ್ನು ಪ್ರಸಿದ್ಧ ಮಾಡಿದ್ದಾರೆ:—

ಹಳ್ಳಿಪಳ್ಳಿಗಳಲ್ಲಿರುವ ಪ್ರಾಥಮಿಕ ಶಾಳಾಮಾಸ್ತರರಿಗೆ:-

೧. ನೀವು ರಾಜಕೀಯ ಸಭೆಗಳಿಗೆ ಹೋಗಬಾರದು, ಅಥವಾ ರಾಜಕೀಯ ವಿಷಯಗಳನ್ನು ಕುರಿತು ಜಾಹೀರವಾಗಿ ಮಾತಾಡಬಾರದು ಎಂಬ ನಿಯಮವಿದ್ದು, ನಿಮ್ಮೊಳಗಿನ ಕೆಲವರು ಆ ನಿಯಮ ವನ್ನು ಮುರಿಯುತ್ತೀರೆಂದು ಸರಕಾರದವರ ಕಿವಿಗೆ ಬಂದಿರುತ್ತದೆ. ನೀವು ನಿಯಮದಂತೆ ನಡೆಯಲಿಕ್ಕೇ ಬೇಕು.

೨. ನೀವು ಶಾಲೆಯಲ್ಲಿ ವರ್ತಮಾನ ಪತ್ರಗಳನ್ನು ತರಬಾರದು, ಅಥವಾ ಬೇರೆ ಯಾರಿಗೂ ತರಗೊಡಬಾರದು.

೩. ನಿಮ್ಮ ಶಾಲೆಯ ಕೆಲವು ಹುಡುಗರು ಹಾದಿಯಲ್ಲಿ ಹೋಗುವವರೊಡನೆ ಉದ್ಧಟತನದಿಂದ ವರ್ತಿಸುತ್ತಾರೆ. ಅವರಿಗೆ ಒಳ್ಳೇ ನಡತೆಯನ್ನು ಕಲಿಸುವದೂ, ಅವರು ನಿಮ್ಮ ಆಜ್ಞೆಯಂತೆ ನಡೆಯದಿದ್ದರೆ ಅವರಿಗೆ ಶಾಸನ ಮಾಡುವದೂ ನಿಮ್ಮ ಕೆಲಸವದೆ.

೪. ಹುಡುಗರ ತಾಯಿತಂದೆಗಳು ತಮ್ಮ ಮಕ್ಕಳನ್ನು ವಿಧೇಯರನ್ನಾಗಿಯೂ, ಸಭ್ಯತನವುಳ್ಳವರನ್ನಾಗಿಯೂ, ಶಾಲೆಗೆ ಸರಿಯಾಗಿ ಬರುವಂಥವರನ್ನಾಗಿಯೂ ಮಾಡಬೇಕೆಂದು ಅವರ ಮನಸು ಒಲಿಸಬೇಕು.

೫. ಜಾಹೀರ ಸಭೆಗಳಾದಾಗ ನೀವು ನಿಮ್ಮ ಹುಡುಗರನ್ನು ಆ ಸಭೆಗಳಿಗೆ ಹೋಗಗೊಡಬಾರದು, ಮತ್ತು ತಮ್ಮ ಮಕ್ಕಳನ್ನು ಅಂಥಸಭೆಗಳಿಗೆ ಹೋಗಗೊಡದಂತೆ ಮಾಡುವದಕ್ಕೆ ಅವರ ತಾಯಿತಂದೆಗಳ ಮನಸು ಒಲಿಸಬೇಕು.

೬. ನೀವುನಿಮ್ಮ ಹುಡುಗರನ್ನು ಆದಷ್ಟು ಹೆಚ್ಚು ಸ್ವಚ್ಛತೆಯುಳ್ಳವರನ್ನಾಗಿಯೂ, ವ್ಯವಸ್ಥಿತವಾಗಿ ಇರುವ ಸ್ವಭಾವವುಳ್ಳವರನ್ನಾಗಿಯೂ ಮಾಡಬೇಕು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು.

೮ನೇ ಅಧ್ಯಾಯ.

ಉದಯಸಿಂಗ.

ಹಿಂದಿನ ಅಧ್ಯಾಯದಲ್ಲಿ ಮೇವಾಡದ ಸರದಾರರೆಲ್ಲರೂ ಒಂದಾಗಿ ಬನಬೀರನನ್ನು ಮುಂದೆ ಮಾಡಿಕೊಂಡು ದುಷ್ಟನಾದ ವಿಕ್ರಮಾಜಿತ ರಾಣಾನನ್ನು ಕೊಂದರೆಂದು ನಿರೂಪಿಸಿದ್ದೇವೆ. ಬಳಿಕ ಸರದಾರರೆಲ್ಲರು ದರ್ಬಾರವನ್ನು ನೆರಿಸಿ ಸಂಗರಾಣಾನ ವಂಶಜನೂ ಮೇವಾಡದ ಪಟ್ಟಕ್ಕೆ ಸರಳವಾರಸದಾರನೂ ಆದ ಉದಯಸಿಂಗನು ಕೇವಲ ೬ ವರ್ಷದ ಹಸುಮಗನಿದ್ದದರಿಂದ ಅವನು ಪ್ರೌಢನಾಗುವವರೆಗ ರಾಜ್ಯದ ಆಡಳಿತದ ಹೊರೆಯನ್ನು ಬನಬೀರನ ಮೇಲೆ ಹೊರಿಸಿದರು. ಬನಬೀರನು ಈ ಭಾರವನ್ನು ಆತ್ಯಾನಂದದಿಂದ ವಹಿಸಿಕೊಂಡನು. ಆದರೆ ಬಾಲರಾಜನು ದೊಡ್ಡವನಾದ ಬಳಿಕ ಈ ಪ್ರಾಪ್ತವಾದ ರಾಜ್ಯಲಕ್ಷ್ಮಿಯು ತನ್ನನ್ನಗಲಿ ಹೋಗುವಳೆಂಬ ವಿಚಾರವು ತೆಲೆದೋರಲು, ಮೊದಲು ಅವನಿಗುಂಟಾಗಿದ್ದ ಆನಂದವು ಬಯಲಾಗಿ ಬಲವಾದ ಚಿಂತೆಯು ಮುಂದೆಬಂದು ನಿಂತಿತು. ತಮಗೆ ಕೈಸೇರಿದ ಕೀಳ ಒಡವೆಯನ್ನು ಕೂಸುಗಳು ಸಹ ಪರರಿಗೆ ಕೊಡಲೆಳಿಸುವದಿಲ್ಲ. ಪ್ರಾಣಿಮಾತ್ರರಲ್ಲಿ ಜನ್ಮತಃ ವಾಸವಾಗಿದ್ದ ಸ್ವಾರ್ಥದ ಮಹಿಮೆಯೇ ಅಂಥಾ ಬಲವತ್ತರವಾದದ್ದು. ಬನಬೀರನಂತೂ ಪ್ರೌಢನು, ಪರಾಕ್ರಮಿಯು. ಅಂದಮೇಲೆ ಅನಾಯಾಸವಾಗಿ ತಾನೆ ಮನೆತನಕ ನಡದು ಬಂದ ರಾಜ್ಯಲಕ್ಷ್ಮಿಯನ್ನು ತನ್ನ ಮನೆತನದಲ್ಲಿ ಸ್ಥಿರಗೊಳಿಸಲಿಕ್ಕೆ ಅಪೇಕ್ಷಿಸಿದ್ದು ಆಶ್ಚರ್ಯವಲ್ಲ. ಪ್ರಬಲಸ್ವಾರ್ಥಾಭಿಲಾಷೆಯುಳ್ಳ ಪೌರುಷವಿಹೀನನಾದ ಮನುಷ್ಯನು

ಸ್ವಾರ್ಥ ಸಾಧಿಸಲೋಸುಗ ತೀರ ನೀಚಕೃತ್ಯಗಳನ್ನು ಕೈಕೊಳ್ಳಲಿಕ್ಕೆ ಹಿಂದೆಮುಂದೆ ನೋಡುವದಿಲ್ಲ. ಇದಕ್ಕೆ ವಿಪರೀತವಾಗಿ ವರ್ತಿಸುವ ಮಹನೀಯರು ವಿಶಾಲವಾದ ಆಕಾಶದಲ್ಲಿ ಮಿಂಚುವ ತಾರೆಗಳಂತೆ ಒಮ್ಮೊಮ್ಮೆ ಅಲ್ಲಲ್ಲಿ ದೃಷ್ಟಿಗೋಚರರಾಗುತ್ತಾರೆ. ಇದು ಸಾರ್ವತ್ರಿಕವೂ ಅಲ್ಲ; ಸಾರ್ವಕಾಲಿಕವೂ ಅಲ್ಲ. ಇಂಥ ಸಂಗತಿಗಳು ಸಾಮಾನ್ಯಸಿದ್ಧಾಂತಕ್ಕೆ ಕೇವಲ ಅಪವಾದರೂಪವಾಗಿ ವರ್ತಿಸುತ್ತಿರುತ್ತವೆ. ನಮ್ಮ ಬನಬೀರನು ಈ ಅಪವಾದಕೋಟಿಯಲ್ಲಿ ಸೇರದೆ ನೈಸರ್ಗಿಕವಾದ ಸ್ವಾರ್ಥಪಾಶದಿಂದ ಪೂರಾ ಕಟ್ಟುವಡೆದು ಉದಯಸಿಂಗನನ್ನು ಕೊಂದು ತನ್ನ ಅರಸೊತ್ತಿಗೆಯನ್ನು ನಿಷ್ಕಂಟಕವಾಗಿ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದನು. ಅವನು ಹೊರಹೊರಗೆ ಸರದಾರರೊಂದಿಗೆ ಕಾರಭಾರ ವಿಷಯವನ್ನು ಕುರಿತು ಮಾತುಕಥೆಗಳನ್ನಾಡುತ್ತಿದ್ದರೂ ಅವನ ಅಂತರಂಗವೆಲ್ಲ ರಾಜಪುತ್ರನ ಸಂಹಾರದ ಉಪಾಯಗಳ ಯೋಜನೆಯಿಂದ ತುಂಬಿಹೋಗಿತ್ತು. ತನ್ನೀ ಪಾಪಕೃತ್ಯವನ್ನು ಸರ್ವಸಾಕ್ಷಿಯಾದ ಸೂರ್ಯನಾರಾಯಣನು ನೋಡಬಾರದೆಂದು ಕಾರ್ಯಸಾಧನೆಗೆ ರಾತ್ರಿಯ ಆಗಮನವನ್ನು ಎದುರು ನೋಡುತ್ತಿದ್ದನು.

ಇತ್ತ ವಿಕ್ರಮಾಜಿತನ ವಧೆಯ ಸುದ್ದಿಯು ಅಂತಃಪುರವನ್ನು ಮುಟ್ಟಿದ ಕೂಡಲೆ ಅರಮನೆಯೆಲ್ಲ ಆಕ್ರಂದನ ಧ್ವನಿಯಿಂದ ತುಂಬಿಹೋಯಿತು. ಉದಯಸಿಂಗನ ಆರೈಕೆಗಾಗಿ ನೇಮಿಸಲ್ಪಟ್ಟ ಪನ್ನೆಯೆಂಬ ಧಾತ್ರಿಯು ಈ ಆಕಸ್ಮಿಕವಾದ ಶೋಕಧ್ವನಿಯ ಕಾರಣವನ್ನು ಅರಿತುಕೊಳ್ಳಲು ಆತುರಪಟ್ಟಳು. ಅಷ್ಟರಲ್ಲಿ ರಾಜಕುಮಾರನ ಎಂಜಲ ತೆಗೆದು ಚೆಲ್ಲುವ ನಾವಲಿಗನು ಅಲ್ಲಿಗೆ ಬರಲು, ಪನ್ನೆ

ಯು ಅವನನ್ನು ಕುರಿತು ರಾಣೀವಾಸದೊಳಗಿನ ಆಕ್ರೋಶದ ಕಾರಣವನ್ನು ಕೇಳಿದಳು. ಅದಕ್ಕೆ ನಾವಲಿಗನು ವಿಕ್ರಮಾಜಿತನ ಕೊಲೆಯೇ ಈ ಆಕ್ರೋಶದ ಕಾರಣವೆಂದು ಉಸುರಿದನು. ಈ ಮಾತು ಕಿವಿಗೆಬಿದ್ದಕೂಡಲೆ ಆ ಚತುರಳೂ ಸ್ವಾಮಿಭಕ್ತಳೂ ಆದ ದಾಸಿಯು ಮನಸ್ಸಿನಲ್ಲಿ—"ರಾಣಾನನ್ನು ಕೊಂದು ಚಕ್ಲಿದ ನೀಚನು ಪಟ್ಟದೊಡೆಯನಾದ ಈ ಕೂಸನ್ನು ಕೊಲ್ಲದೆ ಬಿಡನು. ಇನ್ನು ವಿಶ್ವಪ್ರಯತ್ನ ಮಾಡಿ ಈ ಮಗುವಿನ ಜೀವವನ್ನು ಉಳಿಸಬೇಕು" ಎಂದು ನೆನೆದು, ಹಾಲು ಅನ್ನವನ್ನು ಉಂಡು ತೊಟ್ಟಿಲಲ್ಲಿ ಮಲಗಿದ ರಾಜಪುತ್ರನನ್ನು ಒಂದು ದೊಡ್ಡ ಬುಟ್ಟಿಯಲ್ಲಿ ಮಲಗಿಸಿ ಮೇಲೆ ಕೆಲವು ಹಣ್ಣುಗಳನ್ನೂ ಎಲೆಗಳನ್ನೂ ಹರಿವಿ ಆದೇ ನಾವಲಿಗನನ್ನು ಕರೆದು—"ತಮ್ಮಾ, ಮೇವಾಡದ ಅರಸನ ಅನ್ನವನ್ನು ಇಂದಿನವರೆಗೆ ಉಂಡದ್ದಕ್ಕೆ ಇಂದು ಒಂದು ರಾಜನಿಷ್ಠೆಯ ಘನಕಾರ್ಯವನ್ನು ನೆರವೇರಿಸುವದು ನಮ್ಮಿಬ್ಬರ ಪವಿತ್ರಕರ್ತವ್ಯವಾಗಿದೆ. ಆದಕಾರಣ ನೀನು ಈಗಿಂದೀಗ ಈ ಹೆಡಿಗೆಯನ್ನು ಹೊತ್ತುಕೊಂಡು ಕೋಟೆಯನ್ನಿಳಿದು ಆದಷ್ಟು ಉತ್ತರದಿಂದ ಮಾರ್ಗ ಕ್ರಮಿಸುತ್ತಾ ಊರ ಪಶ್ಚಿಮಕ್ಕೆ ಕೆಲವು ಹರದಾರಿಗಳ ಅಂತರದ ಮೇಲೆ ಹರಿಯುತ್ತಿದ್ದ ಹೊಳೆಯ ದಡವನ್ನು ಸೇರಿ ನನ್ನ ಮಾರ್ಗವನ್ನು ಪ್ರತೀಕ್ಷಿಸುತ್ತ ಕುಳ್ಳಿರು. ನಾನೂ ಆದಷ್ಟು ಬೇಗನೆ ಬರುವೆನು. ಮಾರ್ಗದಲ್ಲಿ ಯಾರಾದರೂ ಇದೇನೆಂದು ಕೇಳಿದರೆ, ಹಣ್ಣುಗಳೆಂದು ಹೇಳು" ಎಂದು ನುಡಿದು ಅವನ ಮೇಲೆ ಆ ಬುಟ್ಟಿಯನ್ನು ಹೊರಿಸಿ ಕಳುಹಿದಳು. ಆ ನಂಬಿಗೆಯ ನಾವಲಿಗನು ಪನ್ನೆಯ ಅಪ್ಪಣೆಯಂತೆ ಆ ಬುಟ್ಟಿಯನ್ನು ಹೊತ್ತುಕೊಂಡು ಕೋಟೆಯಿಂದ ಹೊರಬಿದ್ದು ಸುದೈವದಿಂದ ಹೊಳೆಯ ದಂಡೆಗೆ ಬಂದು ಮು

ಟ್ಟಿದನು. ಮಾರ್ಗದಲ್ಲಿ ಯಾರೂ ಅವನನ್ನು ವಿಚಾರಿಸಲಿಲ್ಲ, ಅರಸು ಮಗನೂ ನಿದ್ದೆಯಿಂದೇಳಲಿಲ್ಲ.

ಇತ್ತ ಬನಬೀರನು ರಾತ್ರಿಯಾದ ಕೂಡಲೆ ಕೈಯಲ್ಲಿ ಬಿಚ್ಚುಗತ್ತಿಯನ್ನು ಹಿಡಿದುಕೊಂಡು ಅಂತಃಪುರವನ್ನು ಹೊಕ್ಕು ರಾಜಪುತ್ರನನ್ನು ಶೋಧಿಸುತ್ತ ಅವನಿರುವ ಮಹಾಲಿಗೆ ಬಂದು ಅಲ್ಲಿ ಕುಳಿತಿದ್ದ ಪನ್ನಾಧಾತ್ರಿಯನ್ನು ಕುರಿತು ರಾಜಪುತ್ರನೆಲ್ಲಿ? ಎಂದು ಕೇಳಿದನು. ಆಗ ಸ್ವಾಮಿಭಕ್ತಳಾದ ಆ ದಾಸಿಯ ಹೃದಯವು ಒಡೆದು ನೀರಾಯಿತು. ಕುತ್ತಿಗೆ ಶಿರಗಳು ಬಿಗಿದು ಅವಳ ಬಾಯಿಂದ ಶಬ್ದಗಳು ಹೊರಡದಂತಾದವು. ಕಣ್ಣುಗಳು ಬಾಷ್ಪದಿಂದ ಪೂರಿತವಾದವು. ಬನಬೀರನ ಪ್ರಶ್ನಕ್ಕೆ ಉತ್ತರವನ್ನಂತು ಕೊಡಲಿಕ್ಕಬೇಕೆಂದು ಬಗೆದು, ಅವಳು ಮಾತಾಡದೆ ಆ ತೊಟ್ಟಿಲ ಕಡೆಗೆ ಬೊಟ್ಟು ಮಾಡಿ ತೋರಿಸಿದಳು. ಆ ಸನ್ನೆಯನ್ನು ತಿಳುಕೊಂಡು ಬನಬೀರನು ತನ್ನ ಬಿಚ್ಚುಗತ್ತಿಯನ್ನು ಆ ತೊಟ್ಟಿಲಲ್ಲಿ ಮಲಗಿದ್ದ ಕೂಸಿನ ಹೊಟ್ಟೆಯೊಳಗೆ ಚುಚ್ಚಿಕೊಂಡು ಬಿಟ್ಟು ಇನ್ನು ತನ್ನ ಅರಸೊತ್ತಿಗೆಯು ನಿರಾತಂಕವಾಯಿತೆಂದು ಹಿಗ್ಗುತ್ತ ಹೊರಟು ಹೋದನು. ಅವಶಿಷ್ಟವಾದ ರಾಜವಂಶವು ಈ ಬಗೆಯಾಗಿ ನಷ್ಟವಾದ ಸುದ್ದಿಯು ಅಂತಃಪುರಕ್ಕೆ ಮುಟ್ಟಿದ ಕೂಡಲೆ ರಾಣೀವಾಸದೊಳಗಿನ ಜನರೆಲ್ಲರೂ ಮಿತಿಮೀರಿ ದುಃಖಿಸಿದರು. ಸಂಗರಾಣಾನ ಮೃತ್ಯುವಿನ ಸಂಗಡಲೇ ತಮ್ಮ ವಂಶವು ಮುಳುಗಿ ಹೋಯಿತೇ! ವಿಧಿಯೇ! ನಮಗೆ ಈ ಭಯಂಕರ ಕಷ್ಟವನ್ನನುಭವಿಸಲಿಕ್ಕಾಗಿಯೇ ದೀರ್ಘಾಯುಷ್ಯವನ್ನು ಕೊಟ್ಟಿರುವಿಯಾ! ನಿಪುತ್ರಕರಾದ ನಮಗೆ ಸ್ವರ್ಗ ಸುಖವೆಲ್ಲಿಯದು! ಎಂದು ಹಲವು ಬಗೆಯಿಂದ ಹಲುಬಿದರು. ರಾಣಾನ ವಂಶವು ಸುರಕ್ಷಿತವಾಗಿರುವದೆಂಬ ಸಂಗತಿಯು ಅವರಿಗೆ ಗೊತ್ತಿರುವ ಬಗೆ ಏನು?

DEPARTMENTAL NOTICES.

ಶಾಲಾಖಾತೆಯ ನೋಟೀಸುಗಳು.

ಮುಂಬಯಿ ಗವ್ಹರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಖಂದಾದ್ದರಿಂದ ಶಾಲೋಪಯೋಗಿ ಸರಕಾರಿ ನಕಾಶಗಳನ್ನು ಕನ್ನಡ, ಮರಾಠಿ, ಗುಜರಾಥಿ ಉರ್ದು ಭಾಷೆಗಳಲ್ಲಿ ಛಾಪಿಸಿ ಪ್ರಸಿದ್ಧ ಮಾಡುವ ಹಾಗು ಮಾರುವ ಹಕ್ಕು ಸರಕಾರೀ ಹುಕುಮಿನಿಂದ ರಾ. ನರಹರ ನಾರಾಯಣ ದಾತಾರ ಮನೆಯ ನಂಬರ ೬೮, ಬುಧವಾರಪೇಠ, ಪುಣೆ, ಇವರ ಕಡೆಗೆ ಕೊಟ್ಟಿರುತ್ತದೆ. ಕಾರಣ ಇನ್ನು ಮುಂದೆ ಆಯಾ ಭಾಷೆಯ ನಕಾಶಗಳನ್ನು ಬೇಕಾದವರು ಸದರಿಯವರಿಂದ ತರಿಸಿಕೊಳ್ಳಬೇಕು.

ಧಾರವಾಡ ತಾ॥೨೦-೧೦-೧೯೦೮	R. B. KARANDIKAR. *Edl. Inspector, S. D.*

ಮಿ. ವೆಂಕಟ ಸುಬ್ಬಯ್ಯ ಇವರಿಂದ ರಚಿಸಲ್ಪಟ್ಟ ಕನ್ನಡ ಕಿಂಡರಗಾರ್ಟನ್ ಎಂಬ ಪುಸ್ತಕವನ್ನು ಮೆ. ಹೆಬ್ಲಾನ್ ಡಿರೆಕ್ಟರದೊರೆಗಳು ಲಾಯಬ್ರರಿಗಾಗಿ ಮಂಜೂರಮಾಡಿರುವರು. ಬೆಲೆ ಆರು ಆಣೆ.

ಧಾರವಾಡ. ತಾ॥ ೧೯-೬-೧೯೦೫.	R. B. KARANDIKAR *Edl. Inspector, S. D.*

ಮಿ. ಕೇ. ವ್ಹಿ. ದೇಶಿಕಾಚಾರ್ಯರಿಂದ ರಚಿತವಾದ "ಮಾನವ ಶರೀರದ ಸಂಕ್ಷಿಪ್ತ ವರ್ಣನೆ" (ಕಂಪೆಂಡಿಯಮ್ ಆಫ್ ಹ್ಯೂಮನ್ ಫಿಜಿಕಲಜಿ) ಎಂಬ ಪುಸ್ತಕವನ್ನು

ಮೆಹರ್ಬಾನ್ ಡಿರೆಕ್ಟರ ದೊರೆಗಳು ಲಾಯಬ್ರರಿಗಾಗಿ ಮಂಜೂರುಮಾಡಿದ್ದಾರೆ.

ಧಾರವಾಡ. } R. B. KARANDIKAR.
ತಾ॥ ೨೫-೭-೧೯೦೮ } *Edl. Inspector, S. D.*

ನೋಟೀಸು

ಮೆ. ಡಾಯರೆಕ್ಟರ ಸಾಹೇಬರು ಹಳ್ಳಿಗಳೊಳಗಿನ ಪ್ರಾಥಮಿಕ ಶಾಲೆಗಳ ಬಗ್ಗೆ ಮಂಜೂರಮಾಡಿದಂಥ ಹೋದ ಸಂಚಿಕೆಯಲ್ಲಿ ಮುದ್ರಿಸಿದಂಥ ಶಾರೀರಿಕ ಶಿಕ್ಷಣಕ್ರಮದ ನಿಯಮಗಳ ಕೆಲವು ಪ್ರತಿಗಳನ್ನು ಬೇರೆ ಪುಸ್ತಕರೂಪವಾಗಿ ಮುದ್ರಿಸಿದ್ದೇವೆ. ಕ್ರಯ ಎರಡು ಆಣೆ. ಅಂಚೇವೆಚ್ಚ ಬೇರೆ. ಬೇಕಾದವರು ತರಿಸಿಕೊಳ್ಳಬೇಕು.

ಧಾರವಾಡ } ಮ್ಯಾನೇಜರ ಕನ್ನಡ
ತಾ.೨೦-೧೦-೧೯೦೮. } ಶಾಲಾಪತ್ರಕ.

ನೋಟೀಸು

ಈ ಸಾರೆ ಕಾಲೇಜವು ಪ್ಲೇಗಿನಿಂದ ಬಂದಾಗಿ ಸರಟೀಫಿಕೇಟ ಪರೀಕ್ಷೆಯು ಮುಂದೆ ಬಿತ್ತಷ್ಟೇ? ಆದರೆ ಈ ಕಾಲೇಜದ ಪ್ರವೇಶಪರೀಕ್ಷೆಯು ಮೊದಲನೇ ನೋಟೀಸಿನಂತೆ ದಿಶಂಬರ ೨ನೇ ತಾರೀಖಿಗೂ, ಹೆಣ್ಣುಮಕ್ಕಳ ಕಾಲೇಜದ್ದು ದಿಶಂಬರ ೪ನೇ ತಾರೀಖಿಗೂ ಪ್ರಾರಂಭವಾಗುವವು. ತಿಳಿಯುವದು.

ಧಾರವಾಡ } V. B. Joshi
ತಾ. ೨೦-೧೦-೦೮ } ಪ್ರಿನ್ಸಿಪಾಲ.

ನೋಟೀಸು

ಧಾರವಾಡ ಟ್ರೇನಿಂಗಕಾಲೇಜದ ಗಾಯನ ಶಿಕ್ಷಕರು ಸದ್ಯಕ್ಕೆ ಒಂದು ವರ್ಷದ ರಜೆಯನ್ನು ತಕ್ಕೊಂಡಿರುವದರಿಂ

ದ ಅವರ ಸ್ಥಳಕ್ಕೆ ಯೋಗ್ಯ ಇಸಮನ್ನು ನೇಮಿಸತಕ್ಕದ್ದಿರುತ್ತದೆ. ಆದ ಕಾರಣ ಗಾಯನದಲ್ಲಿ ಕೆಳಗೆ ಬರೆದ ಯೋಗ್ಯತೆಯುವರಿದ್ದು ಸದರೀ ಸ್ಥಳವನ್ನು ಅಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೧೫೦೬ನೇ ಇಸವಿಯ ದಿಶಂಬರ ಅಖ್ಯೈರದೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಬೇಕು.

೧. ಕರ್ನಾಟಕ ಅಥವಾ ಹಿಂದುಸ್ತಾನಿ ಗಾಯನ ಶಾಸ್ತ್ರದ ಸಂಪೂರ್ಣ ಜ್ಞಾನ, ಮೃದಂಗ, ಮತ್ತು ಫಿಡಲ್ ಹಾಗೂ ವೀಣಾ ಇವುಗಳನ್ನು ಬಾರಿಸುವದು ಸಹಿತ. ಕರ್ನಾಟಕಗಾಯನ ಬಲ್ಲವರ ಅವಶ್ಯಕತೆ ಹೆಚ್ಚು ಇರುವದು.

೨. ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಯಾವತ್ತು ಪದ್ಯಗಳನ್ನು ಸರಿಯಾದ ರಾಗಗಳಿಂದ ಅನ್ನೋಣ.

೩. ತಕ್ಕಮಟ್ಟಿಗೆ ಈ ದೇಶದ ಮತ್ತು ಯುರೋಪದ ಗಾಯನ ಶಾಸ್ತ್ರಗಳ ತಾರತಮ್ಯಜ್ಞಾನ. ಈ ಜ್ಞಾನವು ಇದ್ದರೆ ಒಳ್ಳೇದು; ಇಲ್ಲದಿದ್ದರೂ ಪ್ರತಿಬಂಧಕವಿಲ್ಲ.

ಅವಶ್ಯ ಕಂಡರೆ ಉಮೇದವಾರರ ಪರೀಕ್ಷೆಯನ್ನು ಕಮೀಟಿಯ ಮುಖಾಂತರ ತಕ್ಕೊಳ್ಳಲ್ಪಟ್ಟು ಯೋಗ್ಯರೆಂದು ಕಂಡವರನ್ನು ನೇಮಿಸಲಾಗುವದು. ಪರೀಕ್ಷೆಯ ತಾರೀಖು ಹಿಂದಿನಿಂದ ತಿಳಿಸಲ್ಪಡುವದು. ಸದರೀ ಸ್ಥಳದ ಈಗಿನ ಸಂಬಳವು ತಿಂಗಳಿಗೆ ೩೫ ರೂಪಾಯಿ ಇದ್ದು, ಮುಂದೆ ೫೦ ರೂ. ಆಗುವ ಸಂಭವವಿರುತ್ತದೆ.

ಧಾರವಾಡ
ತಾ. ೨೨-೯-೦೮

V. B. Joshi.
ಪ್ರಿನ್ಸಿಪಾಲ ಟ್ರೇ. ಕಾಲೇಜ

ನೋಟೀಸು.

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಕಲಿತು ಶಾಲಾಖಾತೆಯಲ್ಲಿ ಕೆಲಸ ಮಾಡಲಪೇಕ್ಷಿಸುವ ವಿ

ದ್ಯಾರ್ಥಿನಿಯರಿಗೆ ಸದರೀ ಕಾಲೇಜದ ಪ್ರವೇಶಪರೀಕ್ಷೆಯ ಅಭ್ಯಾಸದ ಅನುಕೂಲತೆಯಾಗುವ ಬಗ್ಗೆ ಧಾರವಾಡ ಹೆಣ್ಣುಮಕ್ಕಳ ಕಾಲೇಜದ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ತಿಂಗಳಿಗೆ ೩ರಿಂದ ೭ ರೂಪಾಯಿಗಳ ವರೆಗಿನ ಹತ್ತು ಸ್ಕಾಲರಶಿಪ್ಪುಗಳು, ಮತ್ತು ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ ಜಿಲ್ಲೆಗಳೊಳಗಿನ ಸಾಲೆಗಳಲ್ಲಿ ೩ರಿಂದ ೫ರೂಪಾಯಿಗಳ ವರೆಗಿನ ಜಿಲ್ಹೆಯೊಂದಕ್ಕೆ ಮೂರು ಮೂರಂತೆ ೧೨ ಸ್ಕಾಲರಶಿಪ್ಪುಗಳು ಸರಕಾರದಿಂದ ಇಡಲ್ಪಟ್ಟಿರುತ್ತವೆ. ಆಯಾ ಸ್ಥಳಗಳಲ್ಲಿ, ಇದ್ದ ಊರವರಿಗೆ ಕಡಿಮೆ ದರದ ಸ್ಕಾಲರಶಿಪ್ಪುಗಳೂ ಪರಸ್ಥಳದವರಿಗೆ ಅವರವರ ಯೋಗ್ಯತೆಯಂತೆ ಹೆಚ್ಚಿನದರದ ಸ್ಕಾಲರಶಿಪ್ಪುಗಳೂ ದೊರೆಯುವವು. ಈ ಸ್ಕಾಲರಶಿಪ್ಪುಗಳನ್ನು ಪಡೆಯಲಪೇಕ್ಷಿಸುವ ಉಮೇದವಾರರು ೧೨ ವರ್ಷ ವಯಸ್ಸು ಮಿಕ್ಕಿದವರೂ ಲಗ್ನವಾದವರೂ ವ್ಯಂಗರಹಿತರೂ ಇರಬೇಕು. ಇಂಥವರು ಆಯಾ ಜಿಲ್ಹೆಯ ಡಿ|| ಎ|| ಇನಸ್ಪೆಕ್ಟರವರ ಮುಖಾಂತರವಾಗಿ ನಮ್ಮ ಕಡೆಗೆ ಅರ್ಜಿಯನ್ನು ಮಾಡಬೇಕು.

ಧಾರವಾಡ } R. B. Karandikar
ತಾ ೨೭-೧೦-೦೮ } ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾಗ.

ನೋಟೀಸು

ಪುಣೆ ಚಿತ್ರಶಾಲಾಪ್ರೆಸ್ಸಿನಲ್ಲಿ ಮುದ್ರಿಸಿರುವ ಈ ಕೆಳಗಿನ ಚಿತ್ರ ನಕಾಶೆಗಳನ್ನು ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ ಸರಕಾರದವರು ಬಿಪ್ಪಿ ಗ್ಯಾಝೆಟಿನಲ್ಲಿ ನಂಬರ ೬೨೪೫ನೇ ೫ನೇ ಸಪ್ಟಂಬರ ೧೯೦೮ನೇ ಠರಾವನ್ನು ಪ್ರಸಿದ್ಧಪಡಿಸಿದ್ದಾರೆ. ಬೇಕಾದವರು ತರಿಸಿಕೊಳ್ಳಬಹುದು.

ಶೇಜ ನಂಬರು.	ಚಿತ್ರಗಳು.	ಶೇಜ ನಂಬರು.	
೧	ಹುಲಿ	೧	ಕಾಫೀ ಸಾಗುವಳಿ
೨	ಹಂದಿ	೨	ರೇಶ್ಮೆಯಕಾರಖಾನೆ

೩	ಕೋಳಿ
೪	ಆಡು
೫	ಕುರಿ
೬	ಮೊಲ
೭	ನಾಯಿ
೮	ನವಿಲು
೯	ಆಕಳು
೧೦	ಎಮ್ಮೆ
೧೧	ನಾಗರಹಾವು
೧೨	ಕಪ್ಪೆ
೧೩	ಕತ್ತೆ
೧೪	ಬೆಕ್ಕು
೧೫	ಕರಡಿ
೧೬	ತೋಳ
೧೭	ಆನೆ
೧೮	ನರಿ
೧೯	ಸಿಂಹ
೨೦	ಕುದರಿ
೨೧	ಗಿಳಿ
೨೨	ಕಾಗಿ
೨೩	ಅಳಲಿ
೨೪	ಪಾರಿವಾಳ
೨೫	ಚಿಗರಿ
೨೬	ತೊಗಲಬಾವಲಿ

೩	ಉಣ್ಣೆಯ ಕಾರಖಾನೆ
೪	ತೊಗಲು ಹದಗೊಳಿಸುವ ಕಾರಖಾನೆ
೫	ಅರಳಿಯ ಕಾರಖಾನೆ
೬	ಎಲಿಗಳು ನಂ. ೧
೭	ಸದರ ನಂ. ೨
೮	ಸದರ ನಂ. ೩
೯	ಶಾರೀರ ಶಾಸ್ತ್ರಕ್ಕೆ ಸಂಬಂಧಿಸಿದವು ನಂಬರ ೧ ನಂಬರ ೨ ನಂಬರ ೩
೧೦	ಬಣ್ಣದ ತಕ್ತೆ
೧೧	ಕಾಮನಬಿಲ್ಲು
೧೨	ಬ್ರಿತಿಶರಾಜ್ಯದ ನಿಶಾನೆಗಳು
೧೩	ಅಂಕಿಗಳ ತಕ್ತೆ
೧೪	ಮನುಷ್ಯಜಾತಿಯ ಚಿತ್ರ
೧೫	ಆಕೃತಿಯ ನಕಾಶೆ
೧೬	ದಾತಾರಕೃತ ಧಾರವಾಡ ಜಿಲ್ಲೆಯ ಮನೆಯಲ್ಲಿಉಪಯೋಗಿಸುವ ನಕಾಶೆ.

ಧಾರವಾಡ.
ತಾ॥ ೨೦-೧೦-೧೯೦೮.

R. P. KARANDIKAR.
Edl Inspector, S. D.

ಬಂದಪತ್ರಗಳ ಸಾರಾಂಶ

ಕಚಕಡಿ—ಈ ದೇಸಗತ್ತಿನ ಒಡೆಯರಾದ ಶ್ರೀ. ವೀರಭದ್ರಪ್ಪಾ ಉರ್ಫ ಅಣ್ಣಾಸಾಹೇಬ ಬಾಹದ್ದೂರ ದೇಸಾಯಿ ಇವರು ತಮ್ಮ ಹದ್ದಿನೊಳಗಿನ ಕಚಕಡಿ, ರುದ್ರಕೇರಿ, ಗೊಂತಮಾರ ಈ ಮೂರು ಗ್ರಾಮದ ಶಾಲೆಯೊಳಗಿನ ವಿದ್ಯಾರ್ಥಿಗಳ ಫೀಯನ್ನು ತಮ್ಮ ಜೀವಮಾನದವರೆಗೆ ಕೊಡಲೊಪ್ಪಿ ಅವರಂತೆ ಮೆ. ಕಲೆಕ್ಟರಸಾ॥ ರವರಿಗೆ ಪತ್ರ ಬರೆದಿದ್ದಾರೆ, ಇದು ಶ್ರೀಮಂತರಿಗೆ ಭೂಷಣವಾದದ್ದೆಂದು ಒಬ್ಬರು ಪತ್ರ ಬರೆದಿರುವರು. ಇದು ಶ್ರೀ. ದೇಸಾಯಿಯವರಿಗೆ ಭೂಷಣಾಸ್ಪದವಾದದ್ದು.

ಜಕ್ಕಲಿ—ಈ ಊರ ಒಬ್ಬ ಸಭ್ಯಗೃಹಸ್ಥರು, ಈಗಿರುವ ಮಾಸ್ತರರಾದ ರಾ. ರಾ. ವೆಂಕಟರಾವ ಕುಲಕರ್ಣಿ ಇವರು ಬಂದಂದಿನಿಂದ ಸಾಲೆಯು ಸುಧಾರಿಸುತ್ತ ನಡೆದಿದೆಯೆಂತಲೂ ಮಾಸ್ತರರ ದೀರ್ಘಪ್ರೋತ್ಸಾಹನದಿಂದ ಊರೊಳಗಿನ ಪ್ರಮುಖರು ಸಾಲೆಯ ಉಪಯೋಗಕ್ಕಾಗಿ, ಗಡಿಯಾರ, ವಸ್ತುಪಾಠವನ್ನು ಕಲಿಸಲಿಕ್ಕೆ ಬೇಕಾಗುವ ಉಪಕರಣ, ತಾಲೀಮ ಸಾಮಾನ ಮುಂತಾದವುಗಳ ಬಗ್ಗೆ ೨೮ ರೂಪಾಯಿಗಳನ್ನು ವರ್ಗಣಿಯಿಂದ ಕೂಡಿಸಿ ಗಡಿಯಾರ ಮೊದಲಾದ ಸಾಮಾನಗಳನ್ನು ತರಿಸಿರುವರೆಂತಲೂ ತಿಳಿಸುತ್ತಾರೆ. ಇದು ಉಭಯತರಿಗೂ ಭೂಷಣವು.

ಈ ಸಂಚಿಕೆಯ ಕೂಡ ರಾಜವೈದ್ಯ ಬೀಳಗಿ ಇವರ ಜಾಹೀರಾತುಗಳು ಹಂಚಲ್ಪಟ್ಟಿರುತ್ತವೆ. ಅವಶ್ಯಕರು ನೋಡಬೇಕು.

REGISTERED No. B. 19.

"ಮುಂಜಿ ಶಿಕ್ಷಣ" ಎಂಬ ಪುಸ್ತಕಗಳು ಮಾರಾಟಕ್ಕೆ ಸಿದ್ಧವಾಗಿ ವೆ. ಬೆಲೆ ೧ ಪ್ರತಿಗೆ ೧ ರೂ. ೪ ಆಣೆ, ಟ. ಖ. ಬೇರೆ.

ಪತ್ತೆ:—ನ. ಸು. ಬಾಗಲ ಹೆ. ಮಾ. [illegible] ನಗರ ಓಣಿ ಪೋ. ಧಾರವಾಡ.

ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೪೪] ಡಿಶಂಬರ ೧೯೦೮ [ಸಂ. ೧೨.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೨೬೫-೨೭೩
೨. ಪ್ಲೇಗವೂ ಪ್ಲೇಗ ಪ್ರತಿಬಂಧಕ ಉಪಾಯಗಳೂ ೨೭೩-೨೮೧
೩. ರಾಜಸ್ಥಾನದ ಇತಿಹಾಸವು ೨೮೧-೨೮೪
೪. ಶಾಲಾಖಾತೆಯ ನೋಟೀಸುಗಳು ... ೨೮೫-೨೮೮
೫. ಪತ್ರವ್ಯವಹಾರ ... ... -೨೮೮

CONTENTS.

1. Educational Intelligence and Useful Notes 265-273
2. Plague & its Remedy 273-281
3. The History of Rajasthan 281-284
4. Departmental Notices 285-288
5. Correspondence ... ... -288

DHARWAR:

PRINTED AT THE KARNATIC BOOK DEPOT PRESS

1908.

REGISTERED No. B. 15

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ೧॥ ರೂ.

ಒಂದು ಸಂಚಿಕೆಗೆ ... ... ೦।೨

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ	೪ ಪಂಕ್ತಿಗಳವರೆಗೆ	೧ ರೂ.
ಮೂರು ಸಾರೆ ಇಟ್ಟರೆ	೬ ,,	೧ ರೂ.
ಆರು ಸಾರೆ ಇಟ್ಟರೆ	೮ ,,	೧ ರೂ.

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೆ ಅಪೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿಯ ಹಾಸಲು ಬೀಳುವದು.

೩. ಛಾಪಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಆಗಾಊ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರತು ಉತ್ತರ ಸಿಗಲಾರದು.

V. B. JOSHI,

ಮ್ಯಾನೇಜರ ಶಾಲಾಪತ್ರಕ

ಶಾಲಾಪತ್ರಿಕೆ.

ಪದ್ಯಂ

ಪ್ರಿಯದಿಂ ವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸದಯಂ ದಿಕ್ತಟಪೂರ್ವದಾಗೆ ಸುಗುಣಂ ತೋರಲ್ಕೆ ಕೈಕೊಂಡುದ್ಯ
ಪಯಯಿಂದೋಪಶಿದ್ಧವೇಳ್ವ ಬುಧರಜ್ಞಾನಾಭಿವೃದ್ಧಿಪ್ರಿಯರ್ ।

ಪುಸ್ತಕ ೪೪.] ಡಿಶಂಬರ ೧೯೦೮. [ಸಂಚಿಕೆ ೧೨

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸನ್ ೧೮೫೮ರ ವರೆಗೆ ಈಸ್ಟ ಇಂಡಿಯಾ ಕಂಪನಿಯವರ ಆಧೀನದಲ್ಲಿದ್ದಂಥ ಈ ನಮ್ಮ ದೇಶದ ಆಡಳಿತವನ್ನು ಇಂಗ್ಲಂಡದ ರಾಣಿಯವರಾದ ವಿಕ್ಟೋರಿಯಾರಾಜ್ಞಿಯವರು ತಮ್ಮ ಕೈಯಲ್ಲಿ ತಕ್ಕೊಂಡರಷ್ಟೇ. ಆ ಮಾತಿಗೆ ಈ ವರ್ಷದ ನವಂಬರ ೧ನೇ ತಾರೀಖಿಗೆ ೫೦ ವರ್ಷಗಳಾದವು. ಈ ಪಂಚಾಶತ್ಸಾಂವತ್ಸರಿಕೋತ್ಸವದ ಶುಭ ದಿವಸದಲ್ಲಿ ಈಗಿನ ಚಕ್ರವರ್ತಿಗಳಾದ ಏಳನೇ ಎಡ್ವರ್ಡ ದೊರೆಗಳು ತಮ್ಮ ಪ್ರಜೆಗಳಿಗೆ ಕಳಿಸಿದ ಸಂದೇಶವನ್ನು ಇದರಡಿಯಲ್ಲಿ ಕೊಟ್ಟಿರುತ್ತೇವೆ:—

ಕೈಸರ್-ಇ-ಹಿಂದರವರು ಹಿಂದುಸ್ಥಾನದೊಳಗಿನ ಸಂಸ್ಥಾನಿಕರಿಗೆ ಮತ್ತು ಪ್ರಜಾಜನರಿಗೆ ಕಳುಹಿಸಿದ ಸಂದೇಶವು.

ಮೊದಲು ಈಸ್ಟ ಇಂಡಿಯಾ ಕಂಪನಿಯವರು ಆಡಳಿತ ನಡೆಯಿಸುತ್ತಿದ್ದ ಪ್ರದೇಶಗಳ ರಾಜ್ಯಕಾರಭಾರವನ್ನು ನ

ಮ್ಮ ಪ್ರಿಯ ಪೂಜ್ಯ ಮಾತೋಶ್ರೀಯವರೂ ಈ ರಾಜ್ಯದ ಸಿಂಹಾಸನದ ಮೇಲೆ ನಮ್ಮ ಪೂರ್ವದಲ್ಲಿ ಆರೂಢರಾಗಿದ್ದವರೂ ಆದ ಪರಮ ಪೂಜ್ಯ ವ್ಹಿಕ್ಟೋರಿಯಾ ಮಹಾರಾಣಿಯವರು ಪಾರ್ಲಮೆಂಟ ಸಭೆಯ ಆಲೋಚನೆಯಿಂದಲೂ ಸಮ್ಮತಿಯಿಂದಲೂ ಅನೇಕ ಮಹತ್ವದ ಕಾರಣಗಳಿಗಾಗಿ ಕೈಕೊಂಡು ಈಗ ಐವತ್ತು ವರ್ಷಗಳಾದವು. ಆಗ ವಿಧಿಪೂರ್ವಕವಾಗಿ ಕೈಕೊಂಡ ಈ ಮಹತ್ಕಾರ್ಯದ ಸ್ಮರಣಾರ್ಥವಾಗಿ ಹಿಂದುಸ್ಥಾನದೊಳಗಿನ ರಾಜರುಗಳಿಗೂ ಪ್ರಜಾಜನರಿಗೂ ಅಭಿನಂದನಪರವಾದ ಸಂದೇಶವನ್ನು ಕಳುಹಿಸಲಿಕ್ಕೆ ಈ ವಾರ್ಷಿಕ ದಿನದ ಸಂಧಿಯು ಉತ್ತಮವಾಗಿರುವದೆಂದು ನಮಗೆ ತೋರುತ್ತದೆ. ನಿಮ್ಮ ಚಿರಕಾಲೀನ ಇತಿಹಾಸದಲ್ಲಿ ಅರ್ಧ ಶತಮಾನದ ಅವಧಿಯು ಅತ್ಯಲ್ಪವಾಗಿದ್ದರೂ ಈ ಹೊತ್ತು ಮುಗಿದ ಅರ್ಧಶತಮಾನವು ನಿಮ್ಮ ಇತಿಹಾಸದ ವಿಸ್ತೀರ್ಣವಾದ ಮಹಾಸಾಗರದಲ್ಲಿ ಬಹಳ ದೂರದ ವರೆಗೆ ಹೊಳೆಯುವಂಥ ಒಂದು ಗುರುತಾಗಿರುವದು. ಹಿಂದುಸ್ಥಾನ ದೇಶವನ್ನು ಪ್ರತ್ಯಕ್ಷ ರಾಜಸತ್ತೆಯ ಕೆಳಗೆ ತೆಗೆದುಕೊಂಡ ಬಗ್ಗೆ ಕೊಟ್ಟ ಜಾಹೀರನಾಮೆಯ ಮೂಲಕವಾಗಿ ಹಿಂದುಸ್ಥಾನದ ರಾಜ್ಯದ ಮೇಲೆ ಏಕಛತ್ರಾಧಿಪತ್ಯದ ಕಾಯಮಿನ ಮುದ್ರೆಯನ್ನು ಮೂಡಿಸಿದಂತಾಗಿ ಹೊಸ ಮನ್ವಂತರಕ್ಕೆ ಪ್ರಾರಂಭವಾಯಿತು. ಮುಂದಿನ ಮಾರ್ಗಕ್ರಮಣ ಕಷ್ಟಪ್ರದವಾಗಿತ್ತು. ಮತ್ತು ರಾಜ್ಯದ ಪ್ರಗತಿಯ ವೇಗವು ಮಂದವಾದದ್ದಾಗಿಯೂ ಕೆಲವು ಸಾರೆ ತೋರಿರಬಹುದು. ಆದರೆ ವಿಶೇಷ ರೀತಿಯಿಂದ ಪರಸ್ಪರ ಭಿನ್ನವಾಗಿರುವ ಅನೇಕ ಸಮಾಜಗಳ ಮತ್ತು ಮಾನವ ಜಾತಿಯ ಪೈಕಿ ಸುಮಾರು ಮೂವತ್ತು ಕೋಟಿ ಜನರ ಏಕೀಕರಣದ ಕೆಲಸವು ಬ್ರಿಟಿಶ್ ಜನರ ಮಾರ್ಗದರ್ಶಕತ್ವದ ಮತ್ತು ನಿ

ಬಂಧದ ಕೆಳಗೆ ಸಾವಕಾಶವಾಗಿಯೂ ಅವ್ಯಾಹತವಾಗಿಯೂ ನಡೆದಿದೆ. ಕಳೆದ ಶತಮಾನದಲ್ಲಿ ನಾವು ಮಾಡಿದ ಕೆಲಸದ ಕಡೆಗೆ ನಿರ್ಮಲ ದೃಷ್ಟಿಯಿಂದಲೂ ನಿರ್ದೋಷ ಸದ್ಬುದ್ಧಿಯಿಂದಲೂ ನೋಡುವದಕ್ಕೆ ನಮಗೆ ಏನೂ ಸಂಕೋಚವು ತೋರುವದಿಲ್ಲ.

೨. ಮಾನವೀರಾಜ್ಯಕಾರಭಾರದಲ್ಲಿ ಎಲ್ಲ ವೇಳೆಗಳಲ್ಲಿಯೂ ಸ್ಥಳಗಳಲ್ಲಿಯೂ ಯಾವ ಅಡಚಣಿಗಳುಂಟಾಗುತ್ತವೆಯೋ ಅಂಥ ಅಡಚಣಿಗಳು ಹಿಂದುಸ್ಥಾನದಲ್ಲಿ ಸಹ ಆಗಿಂದಾಗ್ಗೆ ಉಂಟಾಗಿವೆ. ಆ ಅಡಚಣಿಗಳನ್ನು ಬ್ರಿಟಿಶ್ ರಾಜ್ಯದ ನೌಕರರು ಪರಿಶ್ರಮದಿಂದ ಧೈರ್ಯದಿಂದ, ಮತ್ತು ಸಹಿಷ್ಣುತೆಯಿಂದ, ಹಾಗೂ ಪೂರ್ಣ ವಿಚಾರದಿಂದ ಮತ್ತು ಎಂದಿಗೂ ಚಲಿಸಿರದಂಥ ಅಥವಾ ತತ್ತರಿಸಿರದಂಥ ನಿಶ್ಚಯದಿಂದ ಎದುರಿಸಿರುತ್ತಾರೆ. ತಪ್ಪುಗಳಾಗಿದ್ದರೆ, ನಮ್ಮ ಪ್ರತಿನಿಧಿಗಳು ಅವುಗಳನ್ನು ತಿದ್ದುವ ಕೆಲಸದಲ್ಲಿ ಯಾವದಾದರೂ ಪರಿಶ್ರಮಗಳನ್ನು ಮಾಡಲಿಕ್ಕೆ ಮತ್ತು ಸ್ವಾರ್ಥತ್ಯಾಗ ಮಾಡಲಿಕ್ಕೆ ತಪ್ಪಲಿಲ್ಲ. ಅಧಿಕಾರದ ದುರುಪಯೋಗವಾದದ್ದು ಸಾಬೀತಾದರೆ, ಆಯಾ ವೇಳೆಯಲ್ಲಿ ಯೋಗ್ಯ ಉಪಾಯಗಳನ್ನು ಮಾಡಲಿಕ್ಕೆ ಸಕ್ರಿಯ ಪ್ರಯತ್ನಗಳು ಮಾಡಲ್ಪಟ್ಟವೆ.

೩. ಅವರ್ಷಣದ ಮತ್ತು ಪ್ಲೇಗಿನ ವಿಪತ್ತಿನಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯವು ಯಾವದೇ ಸಾಮ್ರಾಜ್ಯರಹಸ್ಯದಲ್ಲಿರುವದಿಲ್ಲ. ಆದರೆ ಈ ದಾರುಣವಾದ ಐಹಿಕಸಂಕಟಗಳ ತೀವ್ರತೆಯನ್ನು ಕಡಿಮೆ ಮಾಡುವ ಕೆಲಸದಲ್ಲಿ ಅನುಭವವುಳ್ಳ ಅಧಿಕಾರಸ್ಥರು ತಮ್ಮ ಕೌಶಲ್ಯದ ಮತ್ತು ಏಕನಿಷ್ಠೆಯ ಪರಾಕಾಷ್ಠೆಯನ್ನು ಮಾಡಿದ್ದಾರೆ. ನಿಮ್ಮ ದೇಶದಲ್ಲಿ ಮೊದಲು ಎಂದಿಗೂ ಗೊತ್ತಾಗಿರದಷ್ಟು ದೀರ್ಘಕಾಲದ ವರೆಗೆ ನಿಮ್ಮ ದೇಶದ ಚತುಃಸೀಮೆಯೊಳಗೆ ಯುದ್ಧ

ದ ದಾರುಣವಾದ ಸಂಕಟದಿಂದ ನೀವು ಮುಕ್ತರಾಗಿದ್ದೀರಿ. ಅಂತರ್ಗತ ಶಾಂತತೆಯು ಅಖಂಡವಾಗಿ ನಡೆದಿದೆ.

೪. ಸನ್ನ ೧೮೫೮ ನೇ ಇಸವಿಯ ದೊಡ್ಡ ಸನದಿನಲ್ಲಿ, ವ್ಹಿಕ್ಟೋರಿಯಾ ಮಹಾರಾಣಿಯವರು, ಹಿಂದುಸ್ಥಾನದೊಳಗಿನ ನಿರುಪದ್ರವವಾದ ಉದ್ಯೋಗಗಳಿಗೆ ಉತ್ತೇಜನ ಕೊಡುವ ವಿಷಯದ, ಸಾರ್ವಜನಿಕ ಉಪಯುಕ್ತತೆಯ ಮತ್ತು ಸುಧಾರಣೆಯ ಕೆಲಸಗಳನ್ನು ಮಾಡುವ ವಿಷಯದ ಮತ್ತು ಆ ದೇಶದೊಳಗಿನ ಎಲ್ಲ ಜನರ ಹಿತಕ್ಕಾಗಿ ರಾಜ್ಯಭಾರವನ್ನು ನಡಿಸುವ ವಿಷಯದ ತಮ್ಮ ಉತ್ಕಟವಾದ ಇಚ್ಛೆಯ ಬಗ್ಗೆ ನಿಮಗೆ ಉದಾರ ಆಶ್ವಾಸನವನ್ನು ಕೊಟ್ಟಿದ್ದರು. ಈ ಪ್ರೇಮಪೂರ್ವಕವಾಗಿ ಕೊಟ್ಟ ಆಶ್ವಾಸನವು ಎಷ್ಟು ಉತ್ಸಾಹದಿಂದ ಪಾಲಿಸಲ್ಪಟ್ಟಿರುವದೆಂಬುದರ ಪ್ರತ್ಯಯವು, ನಿಮ್ಮ ಐಹಿಕ ಅನುಕೂಲತೆಗಳನ್ನೂ ಪ್ರಗತಿಯನ್ನೂ ಬೆಳಿಸುವ ಬಗ್ಗೆ ದಕ್ಷತೆಯಿಂದ ತಯಾರಿಸಿದ ಅಮಲಿನಲ್ಲಿ ತಂದ ಮತ್ತು ಆಕಾರಮಾನದಲ್ಲಿಯೂ ಸಾಹಸದಲ್ಲಿಯೂ ಅಪೂರ್ವವಾಗಿರುವ ಯೋಜನೆಗಳ ಮೇಲಿಂದ ಜಗತ್ತಿಗೆ ಬರುವದು.

೫. ಮಾಂಡಲಿಕ ರಾಜರುಗಳ ಮತ್ತು ರಾಜ್ಯಕರ್ತರಾದ ಸಂಸ್ಥಾನಿಕರ ಹಕ್ಕುಗಳೂ ಮರ್ಯಾದೆಗಳೂ ಆದರಪೂರ್ವಕವಾಗಿ ಸಂರಕ್ಷಿಸಲ್ಪಟ್ಟು ಕಾಪಾಡಲ್ಪಟ್ಟಿವೆ. ಮತ್ತು ಅವರ ರಾಜನಿಷ್ಠೆಯೂ ಸ್ವಾಮಿಭಕ್ತಿಯೂ ಅಚಲವಾಗಿ ನಿಂತಿದೆ. ಧರ್ಮಸಂಬಂಧವಾದ ನಂಬುಗೆಗಳ ಅಥವಾ ಉಪಾಸನೆಯ ಕಾರಣದಿಂದ ನಮ್ಮ ಪ್ರಜಾಜನರೊಳಗಿನ ಯಾವನೇ ಮನುಷ್ಯನ ಸಂಬಂಧದಿಂದಲೂ ಪಕ್ಷಪಾತವು ಮಾಡಿರುವದಿಲ್ಲ. ಅಥವಾ ಅವನಿಗೆ ತೊಂದರೆ ಕೊಟ್ಟಿರುವದಿಲ್ಲ. ಅಥವಾ ಅಸಮಾಧಾನ ಮಾಡಿರುವದಿಲ್ಲ. ಕಾ

ಯಿದೆಯಿಂದ ಎಲ್ಲರ ರಕ್ಷಣವು ಮಾಡಲ್ಪಟ್ಟಿದೆ. ಕಾಯದೆಯ ಅಮಲು ಧರ್ಮದ ಅಥವಾ ಜಾತಿಯ ಅಥವಾ ನಿಮ್ಮ ಸಮಾಜದಲ್ಲಿ ದೃಢಮೂಲವಾಗಿರುವ ರೂಢಿ ಮತ್ತು ಕಲ್ಪನೆಗಳ ಅನಾದರವನ್ನು ಮಾಡದೆ ಬಜಾಯಿಸಲ್ಪಟ್ಟಿದೆ. ಮತ್ತು ಕಾಯದೆಯ ಸ್ವರೂಪವು ಸರಳವಾಗಿ ಮಾಡಲ್ಪಟ್ಟದ್ದು ಅದರ ಅಮಲುಬಜಾವಣಿಯ ಸಾಧನಗಳು, ಹೊಸ ಸಂಸ್ಥಿತಿಯೊಳಗೆ ಮೆಲ್ಲ ಮೆಲ್ಲನೆ ಪ್ರವೇಶಿಸುವ ಪ್ರಾಚೀನ ಸಮಾಜುಗಳ ಅಗತ್ಯತೆಗಳಿಗೆ ಅನುರೂಪವಾದಂಥವುಗಳಾಗಿ ಮಾಡಲ್ಪಟ್ಟವೆ.

೬. ನಮ್ಮ ರಾಜ್ಯಕಾರಭಾರದ ಮೇಲೆ ಬಂದಿರುವ ಜವಾಬುದಾರಿಯ ಸಂಬಂಧವು ಅಸಂಖ್ಯ ಜನರ ಈಗಿನ ಸ್ಥಿತಿಯೊಡನೆ ಮತ್ತು ಮುಂದಿನ ಅತಿ ದೀರ್ಘಕಾಲದ ವರೆಗಿನ ಭವಿತವ್ಯತೆಯೊಡನೆ ಇರುವದರಿಂದ ಯೋಗ್ಯ ಕಾರಣವಿಲ್ಲದೆ ಮತ್ತು ಗೌರವದ ಉದ್ದೇಶವಿಲ್ಲದೆ ಮಾಡಿದ ದುಷ್ಟವಾದ ಹಳಸಂಚುಗಳ ನಿರ್ಮೂಲವನ್ನು ನಿಷ್ಠುರ ರೀತಿಯಿಂದ ಮಾಡುವದು ನಮ್ಮ ಅತ್ಯಂತ ಶ್ರೇಷ್ಠವಾದ ಕರ್ತವ್ಯವಾಗಿದೆ. ಈ ಹಳಸಂಚುಗಳು ನಮ್ಮ ಅಸಂಖ್ಯ ಹಿಂದೀಪ್ರಜಾಜನರ ರಾಜನಿಷ್ಠೆ ಮತ್ತು ಪ್ರಾಮಾಣಿಕವಾದ ಮನೋವೃತ್ತಿಗೆ ಅತ್ಯಂತ ಅಪ್ರಿಯವಾಗಿರುವವೆಂಬದು ನಮಗೆ ಗೊತ್ತಾಗಿದೆ. ಮತ್ತು ಸುರಕ್ಷಿತತೆಯ ಮತ್ತು ಸುವ್ಯವಸ್ಥಿತೆಯ ಭವ್ಯವಾದ ಇಮಾರತವನ್ನು ಕಟ್ಟುವ ಕೆಲಸದಲ್ಲಿ ಈ ಹಳಸಂಚುಗಳು ನಮಗೆ ಅಡ್ಡ ಬರಲಿಕ್ಕೆ ನಾವು ಬಿಡಲಿಕ್ಕಿಲ್ಲ.

೭. ಈ ಐತಿಹಾಸಿಕವಾದ ವಾರ್ಷಿಕ ದಿನವನ್ನು ರಾಜಯೋಗ್ಯವಾದ ದಯಾಳುತ್ವದ ಮತ್ತು ಕೃಪೆಯ ವಿಶೇಷ ಚಿನ್ಹದ ಹೊರತು ಹೋಗಗೊಡುವ ಇಚ್ಛೆಯು ನಮಗೆ ಇಲ್ಲ

ದಿರುವದರಿಂದ ಸನ್ ೧೯೦೩ನೇ ಇಸವಿಯ ರಾಜ್ಯಾರೋಹಣದ ಸಂಸ್ಮರಣೀಯವಾದ ದರ್ಬಾರಿನ ಪ್ರಸಂಗದಲ್ಲಿ ಮಾಡಲ್ಪಟ್ಟಂತೆ, ಈ ವೇಳೆಯಲ್ಲಿ ಸಹ, ಯಾವ ಮನುಷ್ಯನಿಗೆ ಕಾಯದೆಯ ವಿರುದ್ಧವಾಗಿ ಮಾಡಿದ ಅಪರಾಧಗಳ ಬಗ್ಗೆ ನಮ್ಮ ಕೋರ್ಟುಗಳಿಂದ ಯೋಗ್ಯ ರೀತಿಯಾಗಿ ಶಿಕ್ಷೆಗಳು ಕೊಡಲ್ಪಟ್ಟದ್ದವೋ ಅವರ ಶಿಕ್ಷೆಗಳನ್ನು ಮಾಫು ಮಾಡಬೇಕೆಂದು ಅಥವಾ ಬೇರೆ ಬೇರೆ ಪ್ರಮಾಣದಿಂದ ಕಡಿಮೆ ಮಾಡಬೇಕೆಂದು ನಾವು ಆಜ್ಞಾಪಿಸಿದ್ಧೇವೆ. ಮತ್ತು ಇಂಥ ಗುನ್ಹೆಗಾರರು ಈ ದಯೆಯ ಕೃತ್ಯವನ್ನು ಸ್ಮರಣದಲ್ಲಿಟ್ಟು ಈ ಮುಂದೆ ಅಪರಾಧವಾಗದಂತೆ ತಮ್ಮ ವರ್ತನವನ್ನಿಡಬೇಕೆಂದು ನಾವು ಇಚ್ಛಿಸುತ್ತೇವೆ.

೮. ಸರಕಾರೀ ಅಧಿಕಾರಸ್ಥರು ಸತ್ತೆಯ ಜಾಗೆಗಳನ್ನು ಪಡೆಯುವ ಯೋಗ್ಯತೆಯನ್ನು ಗೊತ್ತು ಪಡಿಸುವಲ್ಲಿ ಜಾತಿಭೇದವನ್ನು ಲಕ್ಷಿಸದಿರುವ ಬಗ್ಗೆ ವ್ಯವಸ್ಥೆಯು ಎಡೆಬಿಡದೆ ಮಾಡಲ್ಪಡುತ್ತದೆ. ಶಿಕ್ಷಣದ ಪ್ರಸಾರವು ಹೆಚ್ಚಾಗುತ್ತ ಹೋದಹಾಗೆ, ಅನುಭವವು ಪರಿಪಕ್ವವಾಗುತ್ತ ಹೋದಹಾಗೆ, ಮತ್ತು ಹಿಂದುಸ್ಥಾನದೊಳಗಿನ ಕುಶಾಗ್ರಬುದ್ಧಿಯ ಮತ್ತು ದಕ್ಷರಾಗಿಯೂ ಸಾಮರ್ಥ್ಯವುಳ್ಳವರಾಗಿಯೂ ಇರುವ ಜನರಿಗೆ ಜವಾಬುದಾರಿಯ ಬೆಲೆಯು ಚೆನ್ನಾಗಿ ತಿಳಿಯುತ್ತ ಹೋದಹಾಗೆ, ಸದರೀ ಬಾಬತಿನಲ್ಲಿ ಹಿಂದುಸ್ಥಾನದ ಪ್ರಗತಿಯು ಅವಿಶ್ರಾಂತವಾಗಿಯೂ ನಿಶ್ಚಿತವಾಗಿಯೂ ಆಗುತ್ತ ನಡೆಯುವದೆಂದು ನಮಗೆ ಪೂರ್ಣ ವಿಶ್ವಾಸವಿದ್ದು ನಮ್ಮ ಉದ್ದೇಶವೂ ಹಾಗೇ ಇದೆ.

೯. ಲೋಕನಿಯುಕ್ತ ಸಂಸ್ಥೆಗಳ ತತ್ವವು ಮೊದಲಿನಿಂದ ಮೆಲ್ಲ ಮೆಲ್ಲಗೆ ಅಮಲಿನಲ್ಲಿ ತರಲ್ಪಟ್ಟದೆ. ಮತ್ತು ನಮ್ಮ ವೈಸ್‌ರಾಯ್ ಮತ್ತು ಗವರ್ನರ ಜನರಲ್‌ರವರ ಮತ್ತು

ನಮ್ಮ ಇತರಸಲ್ಲಾಗಾರರ ಅಭಿಪ್ರಾಯದಂತೆ ಆ ತತ್ವದ ವ್ಯಾಪ್ತಿಯನ್ನು ವಿವೇಕ ಪೂರ್ವಕವಾಗಿ ಬೆಳೆಯಿಸ ಬಹುದಾದ ವೇಳೆಯು ಈಗ ಬಂದಿರುತ್ತದೆ. ನಿಮ್ಮೊಳಗಿನ ಯಾವ ಮಹತ್ವದ ಸಮಾಜಗಳಲ್ಲಿ ಬ್ರಿಟಿಶ ಅಮಲಿನ ಮೂಲಕವಾಗಿ ಉತ್ಪನ್ನವಾದ ಮತ್ತು ಉತ್ತೇಜನ ಹೊಂದಿದ ಕಲ್ಪನೆಗಳ ಪ್ರಸಾರವಾಗಿದೆಯೋ ಆ ಸಮಾಜಗಳೊಳಗಿನ ಜನರು ನಾಗರಿಕತ್ವದ ಸಮಾಜದ ಹಕ್ಕುಗಳನ್ನು ಬೇಡುತ್ತಿದ್ದು ಕಾಯದೆಕಾನೂನುಗಳನ್ನು ಮಾಡುವ ಕೆಲಸದಲ್ಲಿಯೂ ರಾಜ್ಯಕಾರಭಾರವನ್ನು ನಡಿಸುವ ಕೆಲಸದಲ್ಲಿಯೂ ಹೆಚ್ಚಿನ ಅಧಿಕಾರಗಳನ್ನು ಬೇಡತೊಡಗಿದ್ದಾರೆ. ಈ ಬೇಡುವಿಕೆಯನ್ನು ಯೋಗ್ಯ ವ್ಯವಸ್ಥೆ ಮಾಡಿ ಮಾನ್ಯ ಮಾಡಿದರೆ ಅದರಿಂದ ಸರಕಾರದ ಈಗಿನ ಅಧಿಕಾರಕ್ಕೂ ಸತ್ತೆಗೂ ಬಾಧೆ ಬಾರದೆ ಅವು ಹೆಚ್ಚು ದೃಢವಾಗುವವು. ರಾಜ್ಯಕಾರಭಾರಕ್ಕೆ ಸಂಬಂಧ ಪಡುವ ಜನರೊಡನೆ, ಮತ್ತು ರಾಜ್ಯಕಾರಭಾರದ ಸಂಬಂಧದಿಂದ ಲೋಕಮತಕ್ಕೆ ವಿವಕ್ಷಿತ ಪ್ರವೃತ್ತಿಯನ್ನು ಕೊಡುವ ಮತ್ತು ಅದನ್ನು ವ್ಯಕ್ತ ಪಡಿಸುವ ಜನರೊಡನೆ ಯಾವಾಗಲೂ ಸಂಘಟ್ಟನವನ್ನಿಡುವ ಸಂಧಿಯು, ರಾಜ್ಯಕಾರಭಾರವನ್ನು ನಡಿಸುವ ಅಮಲದಾರರಿಗೆ ಸಿಕ್ಕಿದರೆ, ದೇಶದ ರಾಜ್ಯಕಾರಭಾರವು ಸುಸೂತ್ರವಾಗಿ ನಡೆಯುವದೆಂಬದು ಸ್ಪಷ್ಟವಾಗಿದೆ. ಈ ಉದ್ದೇಶಗಳನ್ನು ಕೊನೆಗಾಣಿಸುವ ಬಗ್ಗೆ ಯಾವ ತಜವೀಜುಗಳು ಈಗ ಆಲೋಚಿಸಲ್ಪಡುತ್ತವೆಯೋ ಅವುಗಳ ಸಂಬಂಧದಿಂದ ಇಲ್ಲಿ ನಾವು ಸದ್ಯಕ್ಕೆ ಏನೂ ಹೇಳುವದಿಲ್ಲ. ಅವು ಬೇಗನೆ ನಿಮಗೆ ಜಾಹೀರು ಮಾಡಲ್ಪಡುವವು. ಮತ್ತು ಅವುಗಳ ಮೂಲಕವಾಗಿ ನಿಮ್ಮ ದೇಶದ ರಾಜ್ಯಕಾರಭಾರದ ಹಿತಕಾರಕವಾದ ಪ್ರಗತಿಯ ಹೆಜ್ಜೆಯು ಸಂಸ್ಮರಣೀಯವಾಷ

ರೀತಿಯಿಂದ ಮುಂದೆ ಬೀಳುವದೆಂದು ನಮಗೆ ದೃಢವಾದ ವಿಶ್ವಾಸವಿದೆ.

೧೦. ನಮ್ಮ ಹಿಂದೀ ಪಂಡಿನ ಶೌರ್ಯವೂ ಪ್ರಾಮಾಣಿಕತನವೂ ನಮಗ್ಗೆ ತಿಳಿದದೆ, ಮತ್ತು ಅವರ ಕ್ಷಾತ್ರತೇಜದ ಬಗ್ಗೆ, ಅವರ ಪ್ರಶಂಸನೀಯವಾದ ಶಿಸ್ತಿನ ಬಗ್ಗೆ ಮತ್ತು ಯುದ್ಧಕ್ಕೆ ತೆರಳುವ ಅವರ ನಿಜವಾದ ಸಿದ್ಧತೆಯ ಬಗ್ಗೆ ನಮ್ಮ ಈ ಅತ್ಯುತ್ತಮವಾದ ಮಾನ್ಯತೆಯನ್ನು ವಿಶೇಷ ರೀತಿಯಿಂದ ತೋರಿಸುವ ತಜವೀಜು ಈ ಬರುವ ಹೊಸ ವರ್ಷದ ಪ್ರಾರಂಭದಲ್ಲಿ ಮಾಡಲ್ಪಡಬೇಕೆಂದು ನಾವು ಆಜ್ಞಾಪಿಸಿದ್ದೇವೆ.

೧೧. ವಿಕ್ಟೋರಿಯಾ ಮಹಾರಾಣಿಯವರಿಗೆ ಯಾವ ಸಂಗತಿಗಳು ಅಂತಃಕರಣಪೂರ್ವಕವಾಗಿ ಅತ್ಯಂತ ಪ್ರಿಯವಾಗಿದ್ದವೋ ಅವುಗಳ ಪೈಕಿ ಹಿಂದುಸ್ಥಾನದ ಕುಶಲಾಭಿವೃದ್ಧಿಯು ಒಂದಾಗಿತ್ತು. ನಾವು ಸ್ವತಃ ಸನ್ನ ೧೮೭೫ನೇ ಇಸವಿಯಲ್ಲಿ ಹಿಂದುಸ್ಥಾನದ ದೇಶವನ್ನು ನೋಡಿದಂದಿನಿಂದ, ಆ ದೇಶದ ಮತ್ತು ಅದರೊಳಗಿನ ಸಂಸ್ಥಾನಿಕರ ಮತ್ತು ಜನರ ಹಿತದ ಕಡೆಗೆ ಪ್ರೇಮಪೂರ್ವಕವಾದ ಉತ್ಕಂಠೆಯಿಂದ ಲಕ್ಷ್ಯಗೊಡುತ್ತ ಬಂದಿದ್ದೇವೆ. ಮತ್ತು ಎಷ್ಟು ಕಾಲವು ಕಳೆದರೂ ಆ ಉತ್ಕಂಠೆಯು ಕಡಿಮೆ ಯಾಗುವದು ಶಕ್ಯವಲ್ಲ. ನಮ್ಮ ಪ್ರಿಯ ಪುತ್ರರಾದ ಪ್ರಿನ್ಸ್ ಆಫ್ ವೇಲ್ಸರವರು ಮತ್ತು ಪ್ರಿನ್ಸೆಸ್ ಆಫ್ ವೇಲ್ಸರವರು ನಿಮ್ಮೊಳಗೆ ಕೆಲವು ದಿನ ಉಳಿದು ತಿರುಗಿ ಬಂದಂದಿನಿಂದ ಅವರ ಮನಸ್ಸಿನಲ್ಲಿ ನಿಮ್ಮ ದೇಶದ ಬಗ್ಗೆ ಉತ್ಕಟವಾದ ಪ್ರೇಮವು ಹುಟ್ಟಿದೆ. ಮತ್ತು ಅಲ್ಲಿಯ ಜನರ ಯೋಗಕ್ಷೇಮದ ಮತ್ತು ಸಂತೋಷದ ವಿಷಯದಲ್ಲಿ ಅವರು ನಿಜವಾದ ಮತ್ತು ಅಂತಃಕರಣ ಪೂರ್ವಕವಾದ ಚಿಂತೆಯನ್ನು ಪಡುತ್ತಾರೆ. ನ

ಮ್ಮ ಬಾದಶಾಹೀ ಮನೆತನಕ್ಕೆ ಮತ್ತು ವಂಶಕ್ಕೆ ಹಿಂದುಸ್ಥಾನದ ಸಂಬಂಧದಿಂದ ಇರುವ ಯಥಾರ್ಥವಾದ ಚಿಂತೆಯು ಮತ್ತು ಸದಿಚ್ಛೆಯು ಈ ಅಕೃತ್ರಿಮ ವಿಚಾರಗಳು, ಈ ರಾಷ್ಟ್ರದೊಳಗಿನ ಜನರ ದೃಢವಾದ ಮತ್ತು ಸಂಯುಕ್ತ ಸದ್ಹೇತುಗಳ ದ್ಯೋತಕವಾಗಿ ಇರುವವು.

೧೨. ಜಗತ್ತಿನ ಬರೆದಿಟ್ಟ ಇತಿಹಾಸದಲ್ಲಿ ಯಾವದಾದರೂ ಸಂಸ್ಥಾನದ ಅಥವಾ ಸಾಮ್ರಾಜ್ಯದ ರಾಜ್ಯಕರ್ತರ ಕಡೆಗೆ ಮತ್ತು ಪ್ರಜಾ ಜನರ ಕಡೆಗೆ ಈ ವರೆಗೆ ಎಂದಿಗೂ ಒಪ್ಪಿಸಲ್ಪಡದಿದ್ದಂಥ ಸದರೀ ಸೋಜ್ವಲವಾದ ಮಹತ್ಕಾರ್ಯವನ್ನು ಕೊನೆಗಾಣಿಸಲಿಕ್ಕೆ ಅಗತ್ಯವಿರುವ ಜಾಣತನವೂ ಪರಸ್ಪರ ಸದಿಚ್ಛೆಯೂ ಈಶ್ವರನ ಸಹಾಯದಿಂದ ಮತ್ತು ಕೃಪೆಯಿಂದ ಬಲವತ್ತರವಾಗಲಿ!

(True translation.)
SYED SHAMSUDDIN KADRI
Oriental Translator to
Government.

ಪ್ಲೇಗವೂ ಪ್ಲೇಗ ಪ್ರತಿಬಂಧಕ ಉಪಾಯಗಳೂ.

ಇಸವೀ ಸನ್ ೧೮೯೬ನೇ ವರ್ಷದ ಪೂರ್ವದಲ್ಲಿ 'ಪ್ಲೇಗ' ಎಂಬ ಹೆಸರನ್ನು ಹಲಕೆಲವರು ಇಂಗ್ಲಂಡದ ಇತಿಹಾಸದಲ್ಲಿ ಮಾತ್ರ ಓದಿದ್ದರೇ ಹೊರ್ತು ಅದರ ಹೆಸರನ್ನು ಕೇಳಿದವರು ಸಹ ಈ ದೇಶದಲ್ಲಿ ಬಹಳ ಜನರು ಇದ್ದಿಲ್ಲ. ಆದರೆ ಸಾಂಪ್ರತಕ್ಕೆ ಹಿಂದುಸ್ಥಾನದ ಯಾವತ್ತೂ ಪ್ರದೇಶಗಳಲ್ಲಿ ವಾಸಿಸುವಂಥ ಆಬಾಲವೃದ್ಧರಿಗೂ ಪ್ಲೇಗವೆಂಬ ಹೆಸರು ಸಂಪೂರ್ಣವಾಗಿ ವಿದಿತವಾಗಿರುವದರಿಂದ ಪ್ಲೇಗವೆಂದರೇನೆಂಬ ವಿಷಯದಲ್ಲಿ ವಿಶೇಷ ಸ್ಪಷ್ಟೀಕರಣ ಮಾಡುವ

ಅವಶ್ಯಕತೆಯು ಉಳಿದಿರುವದಿಲ್ಲ. ಈ ಭಯಂಕರ ಬೇ
ನೆಯು ಮೊದಲು ೧೮೯೬ನೇ ಇಸವಿಯ ಅಂತ್ಯಭಾಗದ
ಲ್ಲಿ ಮುಂಬಯಿ ಪಟ್ಟಣದಲ್ಲಿ ಪ್ರಾದುರ್ಭವಿಸಿ, ಸುತ್ತಲಿ
ನ ಪುಣೆ ಮುಂತಾದ ಜಿಲ್ಹೆಗಳಲ್ಲಿ ಹಬ್ಬಿಗೊಂಡು, ೧೮೯೭
ರಲ್ಲಿ ಈ ನಮ್ಮ ಕರ್ನಾಟಕದಲ್ಲಿ ಅಲ್ಪ ಪ್ರಮಾಣದಿಂದ
ಕಾಣಿಸಿಕೊಂಡು, ಮರುವರ್ಷ ಅಂದರೆ ೧೮೯೮ನೇ ಇಸ್ವಿ
ಯಲ್ಲಿ ಮಾಡಿದ ಪ್ರಳಯವು ಇನ್ನೂ ಕಣ್ಣು ಮುಂದೆ ಕಟ್ಟಿ
ದಂತೆ ಅದೆ. ಇದುವರೆಗೂ ಈ ರೋಗವು ಕೆಲವು ಸ್ಥಳಗಳ
ಲ್ಲಿ ಪ್ರತಿವರ್ಷಕ್ಕೆ, ಬೇರೆ ಕೆಲವು ಸ್ಥಳಗಳಲ್ಲಿ ನಡನಡುವೆ
ಒಂದೆರಡು ವರ್ಷಗಳನ್ನು ಬಿಟ್ಟು ಕಾಣಿಸಿಕೊಂಡು, ಸಾವಿ
ರಾರು ಜನರ ಆಹುತಿಯನ್ನು ತೆಗೆದುಕೊಳ್ಳುತ್ತಲೇ ಇದೆ.
ಇದುವರೆಗೆ ಅನೇಕ ಲಕ್ಷ ಜನರು ಈ ರೋಗಕ್ಕೆ ಬಲಿ
ಯಾಗಿದ್ದಾರೆ; ಇನ್ನೂ ಪ್ರತಿವರ್ಷ ಇದರ ಬಾಯಿಗೆ ಲ
ಕ್ಷಾವಧಿ ಜನರು ತುತ್ತಾಗುತ್ತಲೇ ಇದ್ದಾರೆ. ಪ್ರತಿ ಒಂದು
ಊರಲ್ಲಿ ಎಷ್ಟೋ ಮನೆತನಗಳು ನಾಶ ಹೊಂದಿವೆ; ನೂ
ರಾರು ಮನೆಗಳು ಹಾಳುಬಿದ್ದವೆ. ಪ್ರತ್ಯಕ್ಷವಾಗಿಯಾಗಲಿ
ಅಪ್ರತ್ಯಕ್ಷವಾಗಿಯಾಗಲಿ ಪ್ಲೇಗದಿಂದ ಒಂದಿಲ್ಲ, ಒಂದು ರೀ
ತಿಯಿಂದ ದಕ್ಕಿ ತಗಲದಂಥ ಮನೆತನವು ಬಹುಶಃ ಉಳಿದಿಲ್ಲ.

ಈ ರೋಗಕ್ಕೆ ಪ್ರತಿವರ್ಷ ಬಲಿಯಾಗುವಂಥ ಬರೇ ಶಾ
ಲಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನೇ ನೋ
ಡಿದರೆ, ಕಲ್ಲೆದೆಯು ಸಹ ಕರಗದೆ ಇರದು. ಈ ರೋಗದ
ಹಾವಳಿಯು ಇದೇ ಪ್ರಕಾರ ಇನ್ನೂ ಎಷ್ಟು ವರ್ಷ ಎಡೆಬಿ
ಡದೆ ನಡೆಯುವದೋ ತಿಳಿಯದು. ಆದರೆ ಈ ಪ್ರಕಾರ ಪ್ರ
ತಿವರ್ಷ ಸಾವಿರಾರು ಜನರು ಕಣ್ಣೆದುರಿಗೆ ಈ ರೋಗಕ್ಕೆ
ಆಹುತಿಯಾಗುತ್ತಿರಲು, ಸುಶಿಕ್ಷಿತರಾದಂಥ ಬಲ್ಲವರೆನಿಸಿ
ಕೊಳ್ಳುವಂಥ ಜನರು ಅದನ್ನು ಸಾಧ್ಯವಾದ ಎಲ್ಲ ಉಪಾಯ

ಗಳಿಂದ ಪ್ರತೀಕರಿಸಲಿಕ್ಕೆ ಯತ್ನ ಮಾಡದೆ ಸುಮ್ಮನೆ ಕೂಡ್ರುವದು ಎಂದಿಗೂ ಸಮಂಜಸವಾಗಲಾರದು. ಹಳ್ಳಿಪಳ್ಳಿಗಳಲ್ಲಿಂತೂ ಬಹುಶಃ ಶಾಲಾಧ್ಯಾಪಕರ ಹೊರ್ತು ತಿಳಿದವರು ಬಹಳ ಕಡಿಮೆ. ಆದಕಾರಣ ಈ ವಿಷಯದಲ್ಲಿ ಉಪಲಬ್ಧವಾದ ಯಾವತ್ತೂ ಜ್ಞಾನವನ್ನು ಸಂಪಾದಿಸಿಕೊಂಡು ತಮ್ಮ ಬಂಧುಬಳಗದವರು, ಸ್ನೇಹಿತರು, ವಿದ್ಯಾರ್ಥಿಗಳು, ಊರೊಳಗಿನ ಅಶಿಕ್ಷಿತ ಜನರು, ಮೊದಲಾದವರಿಗೆ ತಮಗೆ ತಿಳಿದ ಸಂಗತಿಗಳನ್ನು ತಿಳಿಸಿಕೊಟ್ಟು, ಈ ರೋಗದಿಂದ ಪ್ರತಿವರ್ಷ ಆಗುತ್ತಿರುವ ಪ್ರಾಣಹಾನಿಯನ್ನು ಯತ್ಕಿಂಚಿತ್ತಾದರೂ ಕಡಿಮೆ ಮಾಡುವದಕ್ಕೆ ಪ್ರಯತ್ನಿಸುವದು ಶಾಲಾಧ್ಯಾಪಕರ ವಿಶೇಷಕರ್ತವ್ಯವಿರುತ್ತದೆ. ಈ ಸತ್ಕಾರ್ಯದಲ್ಲಿ ಶಾಲಾಧ್ಯಾಪಕರಿಗೆ ಸಹಾಯವಾಗಬೇಕೆಂದು ಪ್ಲೇಗದ ಉತ್ಪತ್ತಿ ಮತ್ತು ಅದನ್ನು ಪ್ರತಿಬಂಧಿಸುವ ಉಪಾಯಗಳನ್ನು ಕುರಿತು ಇದುವರೆಗೆ ಸಾರ್ವತ್ರಿಕ ಅನುಭವದಿಂದಲೂ ವಿಶೇಷಪ್ರಯೋಗಗಳಿಂದಲೂ ಕಂಡು ಬಂದಂಥ ನಿಶ್ಚಿತವಾದ ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಕೊಡಬೇಕೆಂದೆಣಿಸಿದ್ದೇವೆ.

ಪ್ಲೇಗವು ಇಲಿಗಳ ಬೇನೆಯಾಗಿರುವದು. ಮತ್ತು ಇಲಿಗಳ ಮೈಮೇಲಿರುವ ಚಿಕ್ಕಾಡುಗಳು ಮನುಷ್ಯರಿಗೆ ಕಡಿಯುವದರಿಂದ ಮನುಷ್ಯರಿಗೆ ಈ ಬೇನೆಯು ಬರುವದು. ಈ ಮೇರೆಗೆ ಈ ಬೇನೆಯು ಇಲಿಗಳಿಂದಲೇ ಮನುಷ್ಯರಿಗೆ ಬರುವದರಿಂದ ಇದು ಮನುಷ್ಯರಿಗೆ ಆಕಸ್ಮಿಕವಾಗಿ ಬರುತ್ತದೆಂದು ಹೇಳ ಬಹುದು. ಮತ್ತು ಯಾವ ರೀತಿಯಿಂದಾದರೂ ಮನುಷ್ಯರಿಗೂ ಇಲಿಗಳಿಗೂ ಸಂಪರ್ಕವಾಗದಂತೆ ಮಾಡಲಿಕ್ಕೆ ಬಂದರೆ ಮನುಷ್ಯನಿಗೆ ಇದು ಸರ್ವಥಾ ಬರಲಿಕ್ಕಿಲ್ಲೆಂದು ಹೇಳಬಹುದು. ಆದರೆ ಇಲಿಗಳನ್ನು ನಿರ್ಮೂಲ

ಮಾಡುವದು ಅಶಕ್ಯವಾಗಿರುವದರಿಂದ ಈ ರೋಗದಿಂದ
ಉಳಕೊಳ್ಳುವ ಮಾರ್ಗಗಳು ಎರಡೇ ಉಳಿಯುತ್ತವೆ. ಅ
ವು ಯಾವವೆಂದರೆ—ಸ್ಥಾನತ್ಯಾಗ ಅಂದರೆ, ಈ ರೋಗ
ವಾದ ಸ್ಥಳದಿಂದ ಓಡಿಹೋಗುವದು, ಮತ್ತು ಎರಡನೇದು
ಹಾಫಕಿನ್ ಸಾಹೇಬರು ಶೋಧ ಮಾಡಿದ ಪ್ಲೇಗಪ್ರತಿಬಂಧ
ಕ ಔಷಧವನ್ನು ರಕ್ತದಲ್ಲಿ ಸೇರಿಸಿಕೊಂಡು ಮೈಯಲ್ಲಿ ಈ
ರೋಗವನ್ನು ಪ್ರತಿಬಂಧಿಸುವ ಶಕ್ತಿಯನ್ನುಂಟುಮಾಡುವ
ದು, ಅಂದರೆ ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಳ್ಳುವದು.

ಪ್ಲೇಗವನ್ನು ಪ್ರತಿಬಂಧಿಸುವ ಉಪಾಯಗಳಲ್ಲಿ ಚಿರ
ಕಾಲ ಬಾಳುವಂಥ ಉಪಾಯಗಳು, ಮತ್ತು ಕೆಲವು
ಕಾಲ ಮಾತ್ರ ಬಾಳುವಂಥ ಉಪಾಯಗಳು, ಎಂದು
ಎರಡು ಭೇದಗಳನ್ನು ಕಲ್ಪಿಸಬಹುದು. ಯಾವ ಉಪಾ
ಯಗಳಿಂದ ಮನುಷ್ಯರಿಗೂ ಇಲಿಗಳಿಗೂ ಸಂಪರ್ಕ
ವಾಗದಂತೆ ಮಾಡಲಿಕ್ಕೆ ಬರುವದೋ ಆ ಉಪಾಯಗ
ಳು ಚಿರಕಾಲ ಬಾಳುವಂಥ ಉಪಾಯಗಳೆಂದು ಹೇಳಬ
ಹುದು. ಈ ಉಪಾಯಗಳು ಯಾವವೆಂದರೆ:—ಇಲಿಗ
ಳಿಗೆ ಸಂಚರಿಸಲಿಕ್ಕೆ ಆಸ್ಪದ ಸಿಗದಂಥ ಪಕ್ಕಾ ಇಮಾರತು
ಗಳನ್ನು ಕಟ್ಟಿಸುವದು, ಅಂಗಡಿಗಳು ವಖಾರಗಳು, ಬೂ
ಸದ ಮನೆಗಳು, ಕುದುರೆಯ ಲಾಯಗಳು, ದನದ ಹಕ್ಕಿ
ಗಳು, ಇವೆಲ್ಲವುಗಳನ್ನು ಮನುಷ್ಯರು ಇರುವ ಮನೆಗಳಿಂ
ದ ಬೇರೆ ದೂರವಾಗಿ ಕಟ್ಟಿಸುವದು, ಮನೆಗಳ ನೆಲವನ್ನೂ
ಮಾಳಿಗೆಯನ್ನೂ ಇಲಿಗಳಿಗೆ ಆಶ್ರಯ ಸಿಗದಂತೆ ಮಾಡು
ವದು, ಇಲಿಗಳಿಗೆ ಆಹಾರವಾಗುವಂಥ ಪದಾರ್ಥಗಳನ್ನು
ಮನೆಯೊಳಗಾಗಲಿ, ಮನೆಯ ಹೊರಗಾಗಲಿ, ಅವ್ಯವಸ್ಥಿತ
ರೀತಿಯಿಂದ ಇಡದೆ, ಅಥವಾ ಚಲ್ಲದೆ, ಒಳ್ಳೇ ವ್ಯವಸ್ಥೆಯಿಂ
ದ ಇಡುವಂತೆ ಜನರಲ್ಲಿ ಸುಧಾರಣೆಯಾಗುವದು. ಪ್ಲೇಗ

ಬೇನೆಯೊಡನೆ ಹೋರಾಡುವದಕ್ಕೆ ಈ ಉಪಾಯಗಳು ಮೇಲಾದವುಗಳೂ ಚಿರಸ್ಥಾಯಿಗಳೂ ಆದಾಗ್ಯೂ ಈ ಉಪಾಯಗಳು ಸ್ವಲ್ಪಕಾಲದಲ್ಲಿ ಅಮಲಿನಲ್ಲಿ ಬರುವಂಥವುಗಳಲ್ಲವಾದ ಕಾರಣ ಈ ಉಪಾಯಗಳನ್ನು ಸಾಧ್ಯವಾದ ಮಟ್ಟಿಗೆ ಮಾಡುತ್ತಿರುವಾಗಲೇ, ಬೇರೆ ತಾತ್ಕಾಲಿಕ ಉಪಾಯಗಳನ್ನು ಕೈಕೊಳ್ಳುವದು ಅವಶ್ಯವಾಗಿರುತ್ತದೆ. ಈ ತಾತ್ಕಾಲಿಕ ಉಪಾಯಗಳಲ್ಲಿ ಮೂರು ಭೇದಗಳನ್ನು ಮಾಡಬಹುದು. ಮೊದಲನೆಯದು, ಇಲಿಗಳ ಸಂಹಾರಮಾಡಿ ಇಲಿಗಳ ಮೈಮೇಲಿನ ಚಿಕ್ಕಾಡುಗಳಿಗೂ ಮನುಷ್ಯರಿಗೂ ಸಂಬಂಧವಾಗದಂತೆ ಮಾಡುವದು, ಎರಡನೇ ಉಪಾಯವು ಸ್ಥಾನತ್ಯಾಗ, ಅಂದರೆ ಪ್ಲೇಗದ ಇಲಿಗಳು ಸತ್ತಂಥ ಸ್ಥಳವನ್ನು ಬಿಟ್ಟು ದೂರ ಹೋಗುವದು. ಮೂರನೆಯದು ಪ್ಲೇಗಪ್ರತಿಬಂಧಕ-ಔಷಧವನ್ನು ಮೈಯಲ್ಲಿ ಸೇರಿಸಿಕೊಂಡು, ಪ್ಲೇಗವನ್ನು ಪ್ರತಿಬಂಧಿಸುವಂಥ ಹಾಗೂ ಪ್ಲೇಗಬಂದರೂ ಬಹಳ ಮಟ್ಟಿಗೆ ಪಾರುಮಾಡುವಂಥ ಶಕ್ತಿಯನ್ನು ಶರೀರದಲ್ಲಿ ಉಂಟು ಮಾಡುವದು.

ಈ ಮೂರು ಉಪಾಯಗಳು ಹಂಗಾಮಿಯ ಉಪಾಯಗಳೆಂದು ಮೇಲೆ ಹೇಳಿರುತ್ತೇವೆ. ಮತ್ತು ಇವುಗಳಿಂದ ನಿಜವಾದ ಒಳಿತಾಗಬೇಕಾದರೆ ಇವುಗಳನ್ನು ಮೇಲಿಂದಮೇಲೆ ಮಾಡಬೇಕಾಗುತ್ತದೆ. ಇನ್ನು ಈ ಮೂರು ಉಪಾಯಗಳಲ್ಲಿ ಪ್ರತಿ ಒಂದರ ಸಾಧ್ಯಾಸಾಧ್ಯತೆಗಳ ಬಗ್ಗೆ ಅಲ್ಪ ಸ್ವಲ್ಪ ವಿಚಾರ ಮಾಡುವಾ.

೧. ಇಲಿಗಳ ಸಂಹಾರ— ಇಲಿಗಳಿರದಂಥ ಸ್ಥಳದಲ್ಲಿ ಪ್ಲೇಗವು ಉಂಟಾಗದೆಂಬುದು ಸಿದ್ಧಾಂತವಾಗಿರುತ್ತದೆ. ಎಲ್ಲ ಇಲಿಗಳನ್ನು ಸಂಹಾರ ಮಾಡುವದು ಸಾಧ್ಯವಾಗಿದ್ದರೆ ಇದರಷ್ಟು ಉತ್ಕೃಷ್ಟವಾದ ಉಪಾಯವು ಬೇರೊಂದಿಲ್ಲ.

ಆದರೆ ಈ ಕೆಲಸಕ್ಕೆ ಬೇಕಾಗುವ ಜನಸಹಾಯದ ಕೊರತೆ, ಯಾವತ್ತೂ ಇಲಿಗಳನ್ನು ವಿಷಹಾಕಿ ಕೊಲ್ಲುವದಕ್ಕೆ ಬೇಕಾಗುವ ಖರ್ಚು, ಈ ಉಪಾಯವನ್ನು ಎಡೆಬಿಡದೆ ಬಹು ದಿವಸ ನಡಿಸಲಿಕ್ಕೆ ಉಂಟಾಗುವಂಥ ತೊಂದರೆಗಳು, ಮತ್ತು ಇಲಿಗಳಲ್ಲಿರುವಂಥ ವಿಲಕ್ಷಣವಾದ ಪ್ರಜೋತ್ಪಾದನಶಕ್ತಿ, ಮುಂತಾದ ಸಂಗತಿಗಳನ್ನು ವಿಚಾರ ಮಾಡಿದರೆ ಈ ಉಪಾಯವು ಬಹಳ ಮಟ್ಟಿಗೆ ಫಲದ್ರೂಪವಾಗಲಾರದೆಂಬುದು ಸಹಜವಾಗಿ ತಿಳಿಯುವದು.

೨. ಎರಡನೇ ಉಪಾಯ ಸ್ಥಾನತ್ಯಾಗವು. ಈ ಉಪಾಯವು ಫಲದ್ರೂಪವಾಗಬೇಕಾದರೆ ಊರಲ್ಲಿ ಇಲಿಗಳು ಬೀಳಲಿಕ್ಕೆ ಪ್ರಾರಂಭವಾದ ಕೂಡಲೆ ಎಲ್ಲರೂ ಒಮ್ಮೆಲೆ ಊರನ್ನು ಬಿಡಲಿಕ್ಕೆಬೇಕು. ಮತ್ತು ಊರ ಬಿಟ್ಟನಂತರ ದೂಷಿತವಾದಂಥ ಸ್ಥಳಗಳಲ್ಲಿ ಹೋಗಕೂಡದು. ಮನೆಯೊಳಗೆ ಪ್ಲೇಗ ಆದನಂತರ ಮನೆಯನ್ನು ಬಿಡುವದರಿಂದ ಬಹುಶಃ ವಿಶೇಷ ಉಪಯೋಗವಾಗುವದಿಲ್ಲ. ಮತ್ತು ಪ್ಲೇಗ ಬೇನೆಯು ಮನೆಯೊಳಗೆ ಬರುವದಕ್ಕಿಂತಲು ಅಂಗಡಿಗಳು, ವಖಾರಗಳು ಮುಂತಾದವುಗಳಲ್ಲಿ ಕೆಲಸಮಾಡುವವರಿಗೆ ಬರುವ ಸಂಭವವು ಹೆಚ್ಚು ಇರುವದರಿಂದ ಸ್ಥಾನತ್ಯಾಗಮಾಡಿ ಅಂಗಡಿ ಮುಂತಾದವುಗಳಲ್ಲಿ ಕೆಲಸ ಮಾಡುವವರಿಗೆ ಪ್ಲೇಗ ಬರುವ ಸಂಭವವು ಉಳಿದೇ ಉಳಿಯುತ್ತದೆ. ಇದಲ್ಲದೆ ಬಡಬಗ್ಗರಿಗಂತೂ ಸ್ಥಾನತ್ಯಾಗಮಾಡುವದು ಶಕ್ಯವೇ ಇರುವದಿಲ್ಲ. ಇದಲ್ಲದೆ ಮಳೆಗಾಲದಲ್ಲಿ ಪ್ಲೇಗವು ಪ್ರಾರಂಭವಾದರೆ ಹೊರಗೆ ಹೋಗಲಿಕ್ಕೆ ಯಾರಿಗೂ ಅನುಕೂಲವಾಗುವದಿಲ್ಲ. ಪ್ಲೇಗದೂಷಿತವಾದ ಸ್ಥಳದಿಂದ ಪರ ಊರಿಗೆ ಹೋಗುವ ಜನರು ತಾವು ಹೋದ ಹೋದ ಊರುಗಳಿಗೆ ಪ್ಲೇಗಬೇನೆಯನ್ನು ಒಯ್ಯುವದರಿಂದ ಸ್ಥಾನತ್ಯಾಗ

ದಿಂದ ಪ್ಲೇಗೆಕ್ಕೆ ಪ್ರತಿಬಂಧವಾಗುವದಕ್ಕೆ ಬದಲಾಗಿ ಅನು ಮತ್ತಿಷ್ಟು ಹಬ್ಬಲಿಕ್ಕೆ ಕಾರಣವಾಗುತ್ತದೆ. ಇದು ಹೊರ್ತು ಊರಲ್ಲಿ ಪ್ಲೇಗ ಬಂದಕೂಡಲೆ ಜನರು ದಿಕ್ಕಾಪಾಲಾಗಿ ಓಡಿ ಹೋಗುವದರಿಂದ ಜನರು ದಿಗಿಲುಬಡಿದು ಅದರಿಂದಲೂ ಜನರಲ್ಲಿ ಪ್ಲೇಗವು ಹೆಚ್ಚು ಪ್ರಸಾರವಾಗಲಿಕ್ಕೆ ಕಾರಣವಾಗುತ್ತದೆ. ಈ ಎಲ್ಲ ಸಂಗತಿಗಳನ್ನು ವಿಚಾರಿಸಲಾಗಿ ಸ್ಥಾನತ್ಯಾಗವಾದರೂ ಪ್ಲೇಗವನ್ನು ಪ್ರತಿಬಂಧಿಸಲಿಕ್ಕೆ ಉತ್ತಮವಾದ ಉಪಾಯವೆಂದು ಹೇಳಲಿಕ್ಕಾಗುವದಿಲ್ಲ.

೩. ಪ್ಲೇಗವನ್ನು ಪ್ರತಿಬಂಧಿಸಲಿಕ್ಕೆ ಮೂರನೇ ಉಪಾಯವು ಪ್ಲೇಗಪ್ರತಿಬಾಧಕ ಔಷಧವನ್ನು ಮೈಯಲ್ಲಿ ಹಾಕಿಕೊಳ್ಳುವದು. ಈ ಉಪಾಯದಲ್ಲಿ ಒಂದು ಲಾಭವೇನಂದರೆ, ಈ ಉಪಾಯವನ್ನು ಬೇರೆ ಬೇಕಾದವರು ಕೈಕೊಳ್ಳಲಿ, ಕೈಕೊಳ್ಳದಿರಲಿ, ಈ ಉಪಾಯವನ್ನು ಕೈಕೊಂಡವರು ಮಾತ್ರ ಪ್ಲೇಗದಿಂದ ಸುರಕ್ಷಿತರಾಗಿರುವರೆಂಬದಕ್ಕೆ ಸಂದೇಹವಿಲ್ಲ. ಈ ಉಪಾಯವನ್ನು ಪ್ರತಿವರ್ಷ ಸುಲಭವಾಗಿಯೂ ವೆಚ್ಚವಿಲ್ಲದೆಯೂ, ನಿರ್ಭಯವಾಗಿಯೂ, ಉಪಯೋಗಿಸಬಹುದು. ಈಗ ಮಾಡಿ ನೋಡಿದ ಪ್ರಯೋಗಗಳಿಂದ ಸಿದ್ಧವಾಗಿರುವದೇನಂದರೆ, ಈ ಉಪಾಯವನ್ನು ಕೈಕೊಂಡವರಿಗೂ ಕೈಕೊಳ್ಳದವರಿಗೂ ತುಲನೆಮಾಡಿ ನೋಡಿದರೆ, ಈ ಉಪಾಯವನ್ನು ಕೈಕೊಳ್ಳದವರಲ್ಲಿ ಪ್ಲೇಗದಿಂದ ಮರಣಪಟ್ಟವರ ಸಂಖ್ಯೆಯು ಆರು ಇದ್ದರೆ, ಈ ಉಪಾಯವನ್ನು ಕೈಕೊಂಡವರಲ್ಲಿ ಒಂದು ಇರುವದು. ಅಂದರೆ ಈ ಉಪಾಯವನ್ನು ಕೈಕೊಂಡವರಲ್ಲಿ ಆರುಮಡಿ ಹೆಚ್ಚು ಸುರಕ್ಷತೆಯು ಇರುವದು. ಪ್ಲೇಗದಿಂದ ಸತ್ತವರ ಅಪ್ಪರಿಷ್ಕಾರ ಸಂಪರ್ಕದಿಂದ ಪ್ಲೇಗವು ಮತ್ತಿಷ್ಟು ಹಬ್ಬುವ ಸಂಭವವಿರುತ್ತದೆ. ಆದಕಾರಣ ಪ್ಲೇಗ ಪ್ರತಿಬಂಧಕ ಔಷಧದಿಂದ ಸುರಕ್ಷಿ

ತವಾದ ಜನರ ಪ್ರಮಾಣವು ಹೆಚ್ಚಾದಂತೆ ಪ್ಲೇಗಪ್ರಸಾರವೂ ಕಡಿಮೆಯಾಗುತ್ತದೆ. ಮೈಲಿಯನ್ನು ಚುಚ್ಚಿಸಿಕೊಂಡವರಿಗೆ ಮೈಲಿ ಏಳುವ ಸಂಭವವು ಕಡಿಮೆಯಾಗುವಂತೆ ಪ್ಲೇಗ ಪ್ರತಿಬಂಧಕ ಔಷಧವನ್ನು ಮೈಯಲ್ಲಿ ಹಾಕಿಸಿಕೊಂಡವರಿಗೆ ಪ್ಲೇಗ ಬರುವ ಸಂಭವವು ಬಹಳ ಕಡಿಮೆ ಇರುತ್ತದೆ. ಮತ್ತು ಇಂಥವರಿಗೆ ಪ್ಲೇಗ ಬಂದರು ಕೂಡಾ ಅವರು ವಾಸಿಯಾಗುವ ಸಂಭವವು ಹೆಚ್ಚು ಇರುತ್ತದೆ. ಪ್ಲೇಗ-ದೂಷಿತ-ಸ್ಥಳದಲ್ಲಿ ಪ್ಲೇಗ-ಪ್ರತಿಬಂಧಕಔಷಧವನ್ನು ಮೈಯಲ್ಲಿ ಸೇರಿಸಿಕೊಂಡವರೂ ಸೇರಿಸಿಕೊಳ್ಳದವರೂ ಒತ್ತಟ್ಟಿಗೆ ಇದ್ದರೆ ಔಷಧ ಸೇರಿಸಿಕೊಳ್ಳದವರಲ್ಲಿ ಮೂವರಿಗೆ ಪ್ಲೇಗಬಂದರೆ, ಸೇರಿಸಿಕೊಂಡವರಲ್ಲಿ ಒಬ್ಬನಿಗೆ ಬರುವದು; ಮತ್ತು ಪ್ಲೇಗ ಪ್ರತಿಬಂಧಕಔಷಧವನ್ನು ಸೇರಿಸಿಕೊಳ್ಳದಿದ್ದವರಲ್ಲಿ ಪ್ಲೇಗದ ಮರಣಗಳು ಮೂರಾದರೆ ಸೇರಿಸಿಕೊಂಡವರಲ್ಲಿ ಒಂದು ಇರುವದು. ಅಂದರೆ, ಒಟ್ಟಿಗೆ ಪ್ಲೇಗ ಪ್ರತಿಬಂಧಕಔಷಧವನ್ನು ಹಾಕಿಸಿಕೊಳ್ಳದವರಲ್ಲಿ ಆಗುವ ಮರಣ ಸಂಖ್ಯೆಯ ಒಂದು ಆರಂಶದಷ್ಟು ಮರಣ ಸಂಖ್ಯೆಯು ಔಷಧವನ್ನು ಸೇರಿಸಿಕೊಂಡವರಲ್ಲಿ ಕಂಡುಬರುವದು. ಉದಾಹರಣಾರ್ಥವಾಗಿ ಒಂದು ಊರಲ್ಲಿ ೪೦೦೦ ಜನರಿದ್ದು ಅವರಲ್ಲಿ ಅರ್ಧ ಜನರು ಇನಾಕ್ಯುಲೇಶನ್ (ಪ್ಲೇಗದ ಮೈಲಿ ಚುಚ್ಚಿಸಿಕೊಳ್ಳೋಣ) ಮಾಡಿಸಿಕೊಂಡವರು ಮತ್ತು ಉಳಿದವರು ಹಾಗೇ ಇದ್ದು, ಆ ಊರಲ್ಲಿ ನೂರಕ್ಕೆ ೨ ರಂತೆ ಪ್ಲೇಗ ಮರಣಗಳಾದರೆ, ಇನಾಕ್ಯುಲೇಶನ್‌ಮಾಡಿಸಿಕೊಂಡ ೨೦೦೦ ಜನರಲ್ಲಿ ಪ್ಲೇಗ ಕೇಸುಗಳು ೨೦ ಮತ್ತು ಮರಣಗಳು ೭ ಆಗುವಲ್ಲಿ, ಇನಾಕ್ಯುಲೇಶನ್ ಮಾಡಿಸಿಕೊಳ್ಳದವರಲ್ಲಿ ೬೦ ಕೇಸುಗಳೂ ೪೫ ಮರಣಗಳೂ ಆಗುವವೆಂದು ಗೊತ್ತಾಗಿದೆ. ಈ ಅನುಭವವನ್ನು ಬಡೋದೆ

ಸಂಸ್ಥಾನದೊಳಗಿನ ಅಂಧೇರಿ, ಮುಂಬಯಿ ಶಹರದ ಕ್ಯಾಟಲ್‌ಲೈನ್ಸ ಪಾಯಲಟ್ ಬಂದರದಲ್ಲಿದ್ದ ೨೦೧ ನೇ ಚಾಳ, ಮುಂಬಯಿ ಶಹರದ ಒಂದನೇನಂಬರದ ಭಾಗ, ಕರಾಚಿ, ನಾಗಪುರದ ಎಂಪ್ರೆಸಮಿಲ್ಲ ಎಂಬ ಗಿರಣಿ, ಹುಬ್ಬಳ್ಳಿಯಲ್ಲಿ ಸದರ್ನಮರಾಠಾ ರೇಲ್ವೆಯ ಚಾಳುಗಳು, ಲಷ್ಕರ, ಪೋಲೀಸ, ತುರಂಗ, ಮುಂತಾದ ಸ್ಥಳಗಳಲ್ಲಿ ಯೋಗ್ಯವಾದ ಪ್ರಯೋಗವಮಾಡಿ ನೋಡಿದ್ದರಿಂದ ಈ ಮಾತು ಸಿದ್ಧವಾಗಿರುತ್ತದೆ. ಆದ್ದರಿಂದ ಈ ಉಪಾಯದ ನಿಶ್ಚಿತತ್ವದ ವಿಷಯದಲ್ಲಿ ವಿಚಾರವಂತರ ಮನಸ್ಸಿನಲ್ಲಿ ಏನೂ ಸಂದೇಹ ಉಳಿದಿರುವದಿಲ್ಲ.

ಈ ಪ್ಲೇಗ ಪ್ರತಿಬಂಧಕ-ಉಪಾಯದಿಂದ ಶರೀರದಲ್ಲಿ ಪ್ಲೇಗ ಪ್ರತಿಬಂಧಕ ಶಕ್ತಿಯು ಬರುವ ಬಗೆಯನ್ನೂ, ಈ ಉಪಾಯವನ್ನು ಪ್ರತಿವರ್ಷ ಕೈಕೊಳ್ಳುವದರಿಂದ ಏನಾದರೂ ಅಪಾಯವಾಗುವದೋ ಹ್ಯಾಗೆ ಎಂಬದನ್ನೂ, ಪ್ಲೇಗ ಬೀಜಗಳು ಮೊದಲೇ ಮೈಯಲ್ಲಿ ಸೇರಿರಲು ಈ ಉಪಾಯವನ್ನು ಕೈ ಕೊಳ್ಳಬಹುದೋ ಎಂಬದನ್ನೂ ಈ ಔಷಧವನ್ನು ತಯಾರಿಸುವ ಕ್ರಮವನ್ನೂ ಕುರಿತು ಮುಂದಿನ ಸಂಚಿಕೆಯಲ್ಲಿ ಬರೆಯುವೆವು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು. I

ಬನಬೀರನಿಂದ ಕೊಲ್ಲಲ್ಪಟ್ಟ ಹುಡುಗನು ಯಾರೆಂಬ ಆಕಾಂಕ್ಷೆಯು ವಾಚಕರ ಮನಸ್ಸಿನಲ್ಲಿ ಉದ್ಭವಿಸಿರಬಹುದು. ಆ ಕೂಸು ಯಾರೆಂಬದನ್ನು ನಾವು ಹೇಳುವೆವು. ವಾಚಕರು ಮಾತ್ರ ತಮ್ಮ ಮನಸ್ಸನ್ನು ತುಸು ಕಲ್ಲು ಮಾಡಬೇಕು. ಬನಬೀರನ ಕತ್ತಿಗೆ ಆಹುತಿಯಾದ ಹುಡುಗ

ನು ಪನ್ನಾ ಧಾತ್ರಿಯ ಗರ್ಭಸಂಭೂತನು. ರಾಜನಿಷ್ಠೆಗಾಗಿ ಆ ಧಾತ್ರೀಶಿರೋಮಣಿಯು (ಪನ್ನಾ = ರತ್ನ) ತನ್ನ ಹೊಟ್ಟೆಯ ಕರುಳನ್ನು ಬಲಿಕೊಟ್ಟಳು. ಅವಳು ರಾಜಪುತ್ರನನ್ನು ಕೋಟೆಯಿಂದ ಹಿಡಿಸಿದರೆ ಪ್ರಸ್ತುತದ ಸಂಕಟವು ನಿವಾರಣವಾಗದು. ನಾನೂ ಸಾವಿಗೆಡೆಯಾಗಬೇಕು. ಇಷ್ಟೇ ಅಲ್ಲ. ಈ ಘಾತುಕನು ರಾಜಪುತ್ರನ ಶೋಧವನ್ನು ನಡಿಸಿ ಹಲವು ಉಪಾಯಗಳಿಂದ ತನ್ನ ಬಯಕೆಯನ್ನು ಪೂರ್ಣ ಮಾಡಿಕೊಳ್ಳುವನು. ಆದ್ದರಿಂದ ಹಾಗೆ ಮಾಡದೆ ರಾಜಪುತ್ರನ ಕೊಲೆಯಾಯಿತೆಂಬ ನಂಬಿಗೆಯು ಬನಬೀರನಿಗಾಗಲು, ರಾಜಕುಮಾರನ ಪ್ರಾಣಭಯವು ಇಲ್ಲದಾಗಾದೀತೆಂದು ಬಗೆದು, ಆ ರಾಜಕುಮಾರನ ಬದಲು ಬೇರೊಂದು ಮಗುವನ್ನು ಆಹುತಿ ಕೊಡಲು ಬಗೆದಳು. ಹೀಗೆ ಹೊಟ್ಟೆಯ ಮಕ್ಕಳನ್ನು ಬಲಿಕೊಡಲಿಕ್ಕೆ ಯಾರು ಒಪ್ಪುವರು! ಮುಂದಿಯನ್ನು ಕೇಳುತ್ತ ನಡಿಯಲಿಕ್ಕೆ ಅವಕಾಶವೆಲ್ಲಿ? ಅವಕಾಶವಿದ್ದರೂ ಅದರಿಂದ ರಹಸ್ಯವು ಬಯಲಾಗುವ ಸಂಭವ ಉಂಟಲ್ಲ! ಎಂಬ ವಿಚಾರದಿಂದ ಹಿಂದು ಮುಂದು ನೋಡದೆ ತನ್ನ ಮಗನನ್ನೇ ರಾಜಪುತ್ರನ ಸ್ಥಳದಲ್ಲಿ ಮಲಗಿಸಿ ಮುಂದೆ ಬರುವ ಗಂಡಾಂತರವನ್ನು ಕಣ್ಣುಟ್ಟನೋಡಲಿಕ್ಕೆ ಕಲ್ಲೆದೆ ಮಾಡಿಕೊಂಡು ಕುಳಿತಿದ್ದಳು. ಈ ಸಮಯದಲ್ಲಿ ಬನಬೀರನು ಬಂದು ರಾಜಪುತ್ರನೆಲ್ಲಿ? ಎಂದು ಪ್ರಶ್ನಮಾಡಿದಾಗ ಅವಳ ಮನದಲ್ಲಿ ಯಾವ ಯಾವ ವಿಚಾರಗಳುಂಟಾಗಿರಬಹುದು! ಪುತ್ರವಧೆಗೆ ಸಮ್ಮತಿ ಕೊಟ್ಟು, ಅದನ್ನು ಕಣ್ಣುಟ್ಟ ನೋಡಲಿಕ್ಕೆ ಎದೆಮಾಡಬೇಕೇ! ಸ್ವಾಮಿದ್ರೋಹಿಯಾಗಿ ರಾಜಪುತ್ರನನ್ನು ಕೊಲ್ಲಿಸಲಿಕ್ಕೆ ಕಾರಣಳಾಗಬೇಕೆ? ನೋಡಿರಿ! ಬನಬೀರನ ಸ್ವಾರ್ಥದ ಅಭಿಲಾಷೆಯೂ ಪನ್ನೆಯ ಪರಾರ್ಥದ ಅಭಿಲಾಷೆಯೂ ಒಂದಕ್ಕೊಂದು ಎ

ಷ್ಟು ವಿರುದ್ಧವಾಗಿರುವವು. ಬನಬೀರನು ದುರ್ಲೌಕಿಕವ ನ್ನು ಚಿಂತಿಸದೆ, ಶಿಶುಹತ್ಯಕ್ಕೆ ಹೇಸದೆ, ಕೇವಲ ಐಹಿಕಸು ಖಕ್ಕಾಗಿ ಪಾಪಕೃತ್ಯಕ್ಕೆ ಗುರಿಯಾದನು. ಪನ್ನೆಯು ಕೇವ ಲ ಸ್ವಾಮಿಭಕ್ತಿಯನ್ನು ಪ್ರಕಟಿಸಿ ಇಹಪರವೆರಡರಲ್ಲಿಯೂ ಅಖಂಡ ಕೀರ್ತಿಯನ್ನು ಸಂಪಾದಿಸಿದಳು. ಐಹಿಕ ಸುಖ ವನ್ನು ತೃಣೀಕರಿಸಿದಳು. ಇದರಿಂದ ಓದಿ, ಕೇಳಿ, ನೋ ಡಿ ಅನುಭವ ತೆಗೆದುಕೊಂಡ ಪುರುಷನಿಗಿಂತ ಈ ಅಶಿಕ್ಷಿತ ಳಾದ ಅಬಲೆಯು ಶ್ರೇಷ್ಠಳೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಇವಳು ಖೀಚಿವಂಶದಲ್ಲಿ ಹುಟ್ಟಿದವಳು.

ರಾಜಪುತ್ರನ ಬದಲಾಗಿ ಸ್ವಪುತ್ರನನ್ನು ಬಲಿ ಕೊಟ್ಟ ಬಳಿಕ ಪನ್ನೆಯು, ದುಃಖಾಶ್ರುಗಳಿಂದ ಮಗನ ಶವವನ್ನು ತೋಯಿಸಿ ಅದಕ್ಕೆ ಅಗ್ನಿ ಸಂಸ್ಕಾರಮಾಡಿ, ಕೋಟೆಯಿಂದ ಹೊರಬಿದ್ದು ನೆಟ್ಟಗೆ ಆ ನಾವಲಿಗನ ಹಾದಿಯನ್ನು ಹಿಡಿದು ಕೆಲಹೊತ್ತಿಗೆ ಆ ಹೊಳೆಯ ದಂಡೆಗೆ ಬಂದಳು. ನಾವಲಿಗ ನೂ ಅವಳ ಹಾದಿಯನ್ನೇ ನೋಡುತ್ತಿದ್ದನು. ಬಳಿಕ ಅವ ರೀರ್ವರು ಕೂಡಿ ಆ ಕೂಸನ್ನು ತಕ್ಕೊಂಡು ದೇವಳಾ ಎಂಬಲ್ಲಿಯ ಸಿಂಗರಾವ ಎಂಬವನ ಬಳಿಗೆ ಬಂದರು. ಈ ಸಿಂಗರಾವನ ತಂದೆಯು ಚಿತೋಡದ ಗಾದಿಯ ಅಭಿಮಾನ ದಿಂದ ಶತ್ರುಗಳೊಂದಿಗೆ ಅನೇಕಸಾರೆ ಕಾದಿ ಹೆಸರಾಗಿದ್ದ ನು. ಇಷ್ಟೇ ಅಲ್ಲ, ಇವನು ಚಿತೋಡದ ರಾಜವಂಶಕ್ಕೆ ಹೊಂದಿದವನು. ಅದರಿಂದ ಇವನಲ್ಲಿ ಈ ಕೂಸಿಗೆ ಆಶ್ರಯ ಸಿಕ್ಕೀತೆಂದು ಪನ್ನೆಯು ನೆನಿಸಿದ್ದಳು. ಆದರೆ ಈ ರಾವನು ಅಂಜಿಕೊಂಡು ಉದಯಸಿಂಗನಿಗೆ ಆಶ್ರಯಕೊಡಲಿಲ್ಲ. ಬಳಿ ಕ ಪನ್ನೆಯು ಅಲ್ಲಿಂದ ಹೊರಟು ಡೊಂಗರಪುರಕ್ಕೆ ಬಂದ ಳು. ಇಲ್ಲಿಯ ರಾವಳನಾದ ಯಶಕರ್ಣನಾದರೂ ಚಿತೋ ಡದ ರಾಜವಂಶಕ್ಕೆ ಹೊಂದಿದವನು. ಇವನಾದರೂ ಸಿಂಗ

ರಾವನಂತೆ ಅಂಜಿಕೆಯಿಂದ ಕೂಸಿಗೆ ಆಶ್ರಯಕೊಡಲಿಲ್ಲ. ಅಲ್ಲಿಂದ ಪನ್ನೆಯು ಈದರ ಪ್ರಾಂತದೊಳಗಿಂದ ಹಾಯ್ದು ಅರವಲೀ ಗುಡ್ಡದೊಳಗಿನ ಭಯಂಕರ-ದರಿಗಳೊಳಗಿಂದ ಭಿಲ್ಲರ ಸಹಾಯದಿಂದ ಮಾರ್ಗಕ್ರಮಿಸುತ್ತ ಕುಮಳಮೇರಕ್ಕೆ ಬಂದಳು. ಈ ಪ್ರಾಂತದ ಸುಭೇದಾರನು ಆಸಾಸಾಹನೆಂಬವನು. ಡೇಪ್ರಾಜಾತಿಯ ಶ್ರಾವಕಶಾಖೆಯ ಗೃಹಸ್ಥನು. ಪನ್ನೆಯು ಆ ಸುಭೇದಾರನ ಮುಂದೆ ಆ ಅರಸುಮಗನನ್ನು ಕುಳ್ಳಿರಿಸಿ; ಇಗೋ, ಇವನು ನಿನ್ನ ರಾಜನು. ಇವನ ಸಂರಕ್ಷಣೆಯನ್ನು ಮಾಡು ಎಂದು ನುಡಿದಳು. ಆ ಕೂಸನ್ನು ನೋಡಿ ಸುಭೇದಾರನ ಮನಸು ಕರಗಿತು. ಆಶ್ರಯ ಕೊಡಬೇಕೆಂದು ಬಗೆದನು. ಆದರೆ ಬನಬೀರನೊಡನೆ ಶತ್ರುತ್ವವನ್ನು ಕಟ್ಟಿಕೊಂಡು ಆವನೊಂದಿಗೆ ಹೋಗಾಡುವಷ್ಟು ಬಲವು ತನ್ನದಲ್ಲವೆಂದು ಬಗೆದು ಆಶ್ರಯ ಕೊಡಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದನು. ಅಷ್ಟರಲ್ಲಿ ಆವನ ತಾಯಿಯು ಒಳಗಿಂದ ಬಂದು—ಏನ್ಮ, ಮಗನೇ, ಏನು ವಿಚಾರ ಮಾಡುತ್ತೀ? ಶರಣಾಗತನಿಗೆ ಆಶ್ರಯ ಕೊಡುವದು ನಮ್ಮ ಧರ್ಮವಲ್ಲವೇ! ಇವನಂತೂ ನಮ್ಮ ಸ್ವಾಮಿಯು, ಅನ್ನದಾತನು. ಈತನ ಸಂರಕ್ಷಣಕ್ಕಲ್ಲದೆ ನಮ್ಮ ಈ ಬಾಳು ಕೇವಲ ಹೊಟ್ಟೆ ಹೊರಕೊಳ್ಳುವದಕ್ಕಾಗಿ ಇರುವದೋ! ವಿಚಾರ ಮಾಡು, ಅಂಜಬೇಡ, ದೇವರು ಸತ್ಪಕ್ಷಪಾತಿ ಇದ್ದಾನೆ. ಅವನೆಂದಿಗೂ ಈ ನಮ್ಮ ಕಾರ್ಯಕ್ಕೆ ಪ್ರತಿಕೂಲನಾಗಲಿಕ್ಕಿಲ್ಲ. ಎಂದು ಧೈರ್ಯ ಹೇಳಿದ್ದರಿಂದ ಅವನು ಒಡಂಬಟ್ಟನು. ಆಗ ವಸಾತ್ರ ತಾನು ಕೈಕೊಂಡ ಕಾರ್ಯವು ನೆರವೇರಿತೆಂದೂ, ತನ್ನ ಮೇಲಿನ ಹೊರೆಯು ಇಳಿಯಿತೆಂದೂ ಆ ದಾಸಿಗೆ ಆನಂದವಾಯಿತು.

DEPARTMENTAL NOTICES.

ಶಾಳಾಖಾತೆಯ ನೋಟೀಸುಗಳು.

ಯಾವತ್ತರಿಗೂ ಈ ನೋಟೀಸಿನಿಂದ ತಿಳಿಸುವದೇನಂದರೆ— ಕನ್ನಡದಲ್ಲಿ ಆಗತಕ್ಕ ವರ್ಧಪ್ರಾಯಿರ್ಯು ಪರೀಕ್ಷೆಯು ೧೯೦೯ನೇ ಇಸ್ವಿಯ ಮಾರ್ಚ ತಿಂಗಳ ೧ನೇ ತಾರೀಖು ಸೋಮವಾರ ದಿವಸದಿಂದ ಕೆಳಗೆ ಸಹೀ ಮಾಡಿದವರ ಕಡೆಯಿಂದ ೧೯೦೮ನೇ ಇಸ್ವಿಯ ಫೇಬ್ರುವರಿ ತಿಂಗಳ ಕನ್ನಡ ಶಾಲಾಪತ್ರಕದಲ್ಲಿ ೩೯–೪೦ ಪಾನುಗಳಲ್ಲಿ ಪ್ರಕಟಿಸಿದ ನಿಯಮಗಳಿಗೆ ಅನುಸರಿಸಿ, ಧಾರವಾಡ ಟ್ರೇನಿಂಗಕಾಲೇಜದಲ್ಲಿ ತೆಗೆದುಕೊಳ್ಳಲಾದೀತು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಕ್ಷೀಸು ಒಂದು ಮತ್ತು ೨೦ ರೂಪಾಯಿಯ ಬಕ್ಷೀಸು ಒಂದು ಹೀಗೆ ಎರಡು ಬಕ್ಷೀಸುಗಳಿರುವವು ಪರೀಕ್ಷೆಗೆ ಬರತಕ್ಕ ಉಮೇದವಾರರು ತಮ್ಮ ತಮ್ಮ ಅರ್ಜಿಗಳನ್ನು ಕೆಳಗೆ ಸಹೀ ಮಾಡಿದವರ ಕಡೆಗೆ ಅಗದೀ ತಡ ಮಾಡಿ ಅಂದರೆ ೧೯೦೯ನೇ ಇಸ್ವಿಯ ಫೇಬ್ರುವರಿ ತಿಂಗಳ ೨೦ ನೇ ತಾರೀಖಿಗಾಗಲೀ ಅಥವಾ ಅದರ ಪೂರ್ವದಲ್ಲಾಗಲೀ ತಪ್ಪದೇ ಕಳಿಸಬೇಕು. ಪರೀಕ್ಷೆಗೆ ಪ್ರಾತಃಕಾಲದ ಹನ್ನೊಂದು ಘಂಟೆಗೆ ಪ್ರಾರಂಭವಾಗುವದು.

ಧಾರವಾಡ.	}	R. B. KARANDIKAR
೩೦ I ೬-೧೧-೧೯೦೮.	}	*Edl. Inspector, S. D.*

ನೋಟೀಸು

ಮುಂಬಯಿ ಗವ್ಹರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಬಂದಾದ್ದರಿಂದ ಶಾಲೋಪಯೋಗಿ ಸರಕಾರೀ ನಕಾಶಗಳನ್ನು ಕನ್ನಡ, ಮರಾಠಿ, ಗುಜರಾಥಿ ಉರ್ದು ಭಾಷೆಗಳಲ್ಲಿ ಛಾಪಿಸಿ ಪ್ರಸಿದ್ಧ ಮಾಡುವ ಹಾಗು ಮಾರುವ ಹಕ್ಕು ಸರ

ಕಾರೀ ಹುಕುಮಿನಿಂದ ರಾ. ನರಹರ ನಾರಾಯಣ ದಾತಾರ ಮನೆಯ ನಂಬರ ೬೮, ಬುಧವಾರಪೇಠ, ಪುಣೆ, ಇವರ ಕಡೆಗೆ ಕೊಟ್ಟಿರುತ್ತದೆ. ಕಾರಣ ಇನ್ನು ಮುಂದೆ ಆಯಾ ಭಾಷೆಯ ನಕಾಶಗಳನ್ನು ಬೇಕಾದವರು ಸದರಿಯವರಿಂದ ತರಿಸಿಕೊಳ್ಳಬೇಕು.

ಧಾರವಾಡ.
ತಾ॥ ೨೦-೧೦-೧೯೦೮.

R. B. KARANDIKAR
Edl. Inspector, S. D.

ನೋಟೀಸು

ಮಿ. ಹಾಯರೆಕ್ಟರ ಸಾಹೇಬರು ಹಳ್ಳಿಗಳೊಳಗಿನ ಪ್ರಾಥಮಿಕ ಶಾಲೆಗಳ ಬಗ್ಗೆ ಮಂಜೂರುಮಾಡಿದಂಥ, ಹೋದ ಸಂಚಿಕೆಯಲ್ಲಿ ಮುದ್ರಿಸಿದಂಥ ಶಾರೀರಿಕಶಿಕ್ಷಣಕ್ರಮದ ನಿಯಮಗಳ ಕೆಲವು ಪ್ರತಿಗಳನ್ನು ಬೇರೆ ಪುಸ್ತಕರೂಪವಾಗಿ ಮುದ್ರಿಸಿದ್ದೇವೆ. ಕ್ರಯ ಎರಡು ಆಣೆ. ಅಂಚೇವೆಚ್ಚ ಬೇರೆ ಬೇಕಾದವರು ತರಿಸಿಕೊಳ್ಳಬೇಕು.

ಧಾರವಾಡ
ತಾ॥೨೦-೧೦-೧೯೦೪

ಮ್ಯಾನೇಜರ ಕನ್ನಡ
ಶಾಲಾಪತ್ರಿಕ.

ನೋಟೀಸು.

ಧಾರವಾಡ ಟ್ರೇನಿಂಗಕಾಲೇಜದ ಗಾಯನ ಶಿಕ್ಷಕರು ಸದ್ಯಕ್ಕೆ ಒಂದು ವರ್ಷದ ರಜೆಯನ್ನು ತಕ್ಕೊಂಡಿರುವದರಿಂದ ಅವರ ಸ್ಥಳಕ್ಕೆ ಯೋಗ್ಯ ಇಸಮನ್ನು ನೇಮಿಸತಕ್ಕದ್ದಿರುತ್ತದೆ. ಆದ ಕಾರಣ ಗಾಯನದಲ್ಲಿ ಕೆಳಗೆ ಬರೆದ ಯೋಗ್ಯತೆಯುವರಿದ್ದು ಸದರೀ ಸ್ಥಳವನ್ನು ಅಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೧೯೦೮ ನೇ ಇಸವಿಯ ದಿಶಂಬರ ಅಖೈರದೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಬೇಕು.

೧. ಕರ್ನಾಟಕ ಅಥವಾ ಹಿಂದುಸ್ತಾನಿ ಗಾಯನ ಶಾಸ್ತ್ರದ ಸಂಪೂರ್ಣ ಜ್ಞಾನ, ಮೃದಂಗ, ಮತ್ತು ಘಡಲ ಹಾಗೂ ವೀಣಾ ಇವುಗಳನ್ನು ಬಾರಿಸುವದು ಸಂತ. ಕರ್ನಾಟಕಗಾಯನ ಬಲ್ಲವರ ಅವಶ್ಯಕತೆ ಹೆಚ್ಚು ಇರುವದು.

೨. ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಯಾವತ್ತು ಪದ್ಯಗಳನ್ನು ಸರಿಯಾದ ರಾಗಗಳಿಂದ ಅನ್ನೋಣ.

೩. ತಕ್ಕಮಟ್ಟಿಗೆ ಈ ದೇಶದ ಮತ್ತು ಯುರೋಪದ ಗಾಯನ ಶಾಸ್ತ್ರಗಳ ತಾರತಮ್ಯಜ್ಞಾನ. ಈ ಜ್ಞಾನವು ಇದ್ದರೆ ಒಳ್ಳೇದು; ಇಲ್ಲದಿದ್ದರೂ ಪ್ರತಿಬಂಧಕವಿಲ್ಲ.

ಅವಶ್ಯ ಕಂಡರೆ ಉಮೇದವಾರರ ಪರೀಕ್ಷೆಯನ್ನು ಕಮಿಟಿಯ ಮುಖಾಂತರ ತಕ್ಕೊಳ್ಳಲ್ಪಟ್ಟು ಯೋಗ್ಯರೆಂದು ಕಂಡವರನ್ನು ನೇಮಿಸಲಾಗುವದು. ಪರೀಕ್ಷೆಯ ತಾರೀಖು ಹಿಂದಿನಿಂದ ತಿಳಿಸಲ್ಪಡುವದು. ಸದರೀ ಸ್ಥಳದ ಈಗಿನ ಸಂಬಳವು ತಿಂಗಳಿಗೆ ೩೫ ರೂಪಾಯಿ ಇದ್ದು, ಮುಂದೆ ೫೦ ರೂ. ಆಗುವ ಸಂಭವವಿರುತ್ತದೆ.

ಧಾರವಾಡ.
ತಾ| ೨೭-೯-೦೮

V. B. JOSHI,
ಪ್ರಿನ್ಸಿಪಾಲ ಟ್ರೇ. ಕಾಲೇಜು

ನೋಟೀಸು.

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಕಲಿತು ಶಾಲಾಖಾತೆಯಲ್ಲಿ ಕೆಲಸ ಮಾಡಲಪೇಕ್ಷಿಸುವ ವಿದ್ಯಾರ್ಥಿನಿಯರಿಗೆ ಸದರೀ ಕಾಲೇಜದ ಪ್ರವೇಶ ಪರೀಕ್ಷೆಯ ಅಭ್ಯಾಸದ ಅನುಕೂಲತೆಯಾಗುವ ಬಗ್ಗೆ ಧಾರವಾಡ ಹೆಣ್ಣು ಮಕ್ಕಳ ಕಾಲೇಜದ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ತಿಂಗಳಿಗೆ

೩ರಿಂದ ೭ ರೂಪಾಯಿಗಳ ವರೆಗಿನ ಹತ್ತು ಸ್ಕಾಲರ ಶಿಪ್ಪುಗಳು, ಮತ್ತು ಧಾರವಾಡ, ಬೆಳಗಾಂವ, ವಿಜಾಪುರ, ಕಾರವಾರ ಜಿಲ್ಹೆಗಳೊಳಗಿನ ಶಾಲೆಗಳಲ್ಲಿ ೩ರಿಂದ ೫ ರೂಪಾಯಿಗಳ ವರೆಗಿನ ಜಿಲ್ಹೆಯೊಂದಕ್ಕೆ ಮೂರು ಮೂರಂತೆ ೧೨ ಸ್ಕಾಲರ ಶಿಪ್ಪುಗಳು ಸರಕಾರದಿಂದ ಇಡಲ್ಪಟ್ಟಿರುತ್ತವೆ. ಆಯಾ ಸ್ಥಳದಲ್ಲಿ, ಇದ್ದ ಊರವರಿಗೆ ಕಡಿಮೆ ದರದ ಸ್ಕಾಲರಶಿಪ್ಪುಗಳೂ ಪರಸ್ಥಳದವರಿಗೆ ಅವರವರ ಯೋಗ್ಯತೆಯಂತೆ ಹೆಚ್ಚಿನದರದ ಸ್ಕಾಲರ ಶಿಪ್ಪುಗಳೂ ದೊರೆಯುವವು. ಈ ಸ್ಕಾಲರಶಿಪ್ಪುಗಳನ್ನು ಪಡೆಯಲಪೇಕ್ಷಿಸುವ ಉಮೇದವಾರರು ೧೨ ವರ್ಷ ವಯಸ್ಸು ಮೀರಿದವರೂ ಲಗ್ನವಾದವರೂ ವ್ಯಂಗರಹಿತರೂ ಇರಬೇಕು. ಇಂಥವರು ಆಯಾ ಜಿಲ್ಹೆಯ ಡಿ|| ಎ|| ಇನಸ್ಪೇಕ್ಟರವರ ಮುಖಾಂತರವಾಗಿ ನಮ್ಮ ಕಡೆಗೆ ಅರ್ಜಿಯನ್ನು ಮಾಡಬೇಕು.

ಧಾರವಾಡ } R. B. Karandikar
ತಾ. ೨೭-೧೦-೦೮ } ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾಗ

CORRESPONDENCE.

ಪತ್ರವ್ಯವಹಾರ.

ಸರ ನಾಯಿಕ ಹೆ. ಮಾ. ಅಮರಗೋಳ:-ಸದ್ಯಕ್ಕೆ ಸರಕಾರ ನೌಕರಿಯಲ್ಲಿದ್ದವರ ಸಂಬಂಧದ ಸ್ತುತಿಪರಲೇಖಗಳನ್ನು ಮುದ್ರಿಸುವದು ಸರಿಯಲ್ಲ. ಆದ್ದರಿಂದ ನಿಮ್ಮ ಪತ್ರಕ್ಕೆ ಇಂಬುಕೊಡಲಿಲ್ಲ.

ಶ್ರೀ. ಬಾ. ಹುಕ್ಕೇರಿ:-ಪತ್ರಕಾರ್ಯವು ಮುಗಿದು ಹೋಗಿ ಬಹುಕಾಲವಾದ ಮೇಲೆ ಬಂದಕಾರಣ ಮುದ್ರಿಸುವ ಅಗತ್ಯವಿಲ್ಲ.